


ರಜತ ಮಹೋತ್ಸವ ವಿಶೇಷಾಂಕ

ಕರ್ನಾಟಕ ಲೋಚನ

ಸಂಪುಟ ೨೦ ಜೂನ್ , ಡಿಸೆಂಬರ್ - ೨೦೦೪ ಸಂಚಿಕೆ ೧ , ೨

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

'ಕರ್ನಾಟಕ ಲೋಚನ'

ಲೇಖನಗಳು – ಟಿಪ್ಪಣಿಗಳು


ಸಂಶೋಧನಾತ್ಮಕ, ಪಾಂಡಿತ್ಯ–ವಿದ್ವತ್ಪೂರ್ಣ ಲೇಖನಗಳನ್ನು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಶೋಧಿತ – ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು – ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಾಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ–ಟಿಪ್ಪಣಿಗಳು ಇವುಗಳಿಗೆ 'ಕರ್ನಾಟಕಲೋಚನ' ಮೀಸಲಾಗಿದೆ. ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು; ಅವು ಅವಶ್ಯಕವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡಂತೆ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. ಲೋಚನದ ಗಾತ್ರ ಪರಿಮಿತವಾದ್ದರಿಂದ ಲೇಖನಗಳು ಅಚ್ಚಿನ 6– 7 ಪುಟಗಳಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಕಡೆ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ವಿನಂತಿ.

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.



ಸಿದ್ಧವಾಗಿರುವ ಬಿ.ಎಂ.ಶ್ರೀ ಕಲಾಭವನದ ಪೂರ್ಣ ನೋಟ

ರಜತ ಮಹೋತ್ಸವ ಸಮಾರಂಭ

ಮಾನ್ಯ ಸದಸ್ಯರೇ,

ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ಹೆಸರಿನಲ್ಲಿ ೬-೫-೧೯೭೯ರಲ್ಲಿ ರಾಷ್ಟ್ರಕವಿ ಕುವೆಂಪು ಅವರಿಂದ ಉದ್ಘಾಟನೆಯಾದ ಈ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪ್ರೊ॥ ಎಂ.ವಿ. ಸೀತಾರಾಮಯ್ಯನವರಿಂದ ಸ್ಥಾಪಿತಗೊಂಡಿತು. ಇದು ೨೦೦೪ನೇ ಮೇ ೬ಕ್ಕೆ ೨೫ ವರ್ಷಗಳನ್ನು ಪೂರೈಸಿದ ಶುಭ ಸಂದರ್ಭದಲ್ಲಿ ೨೦೦೩-೨೦೦೪ನೇ ವರ್ಷಪೂರ್ತಿ ರಜತ ಮಹೋತ್ಸವ ವರ್ಷವನ್ನಾಗಿ ಆಚರಿಸಲು ಉದ್ದೇಶಿಸಿ ಹಲವಾರು ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದ್ದೇವೆ. ಯಾವುದೇ ಸಂಸ್ಥೆ ೨೫ ವರ್ಷಗಳಷ್ಟು ದೀರ್ಘಾವಧಿ ಅಸ್ತಿತ್ವದಲ್ಲಿದ್ದು ಕ್ರಿಯಾಶೀಲವಾಗಿರುವುದು ಹೆಮ್ಮೆಯ ಸಂಗತಿ. "ಬಿ.ಎಂ.ಶ್ರೀ ಪ್ರತಿಷ್ಠಾನ ತನ್ನ ಮೂಲ ಉದ್ದೇಶಕ್ಕೆ ಬದ್ಧವಾಗಿ, ಅನೇಕ ಸಂಸ್ಥೆಗಳಂತೆ ದಾರಿತಪ್ಪದೆ, ಉತ್ತಮ ಪರಂಪರೆಯನ್ನು ಹಾಕಿಕೊಟ್ಟಿರುವ ಶ್ರೇಷ್ಠ ವಿದ್ವತ್ ಸಂಸ್ಥೆ" ಎಂದು ವಿದ್ವಾಂಸರಿಂದ ಗುರುತಿಸಿಕೊಂಡಿದೆ. ತಮ್ಮಗಳ ಸಹಕಾರ ಸಹಯೋಗದೊಂದಿಗೆ ಬಿ.ಎಂ. ಶ್ರಿ . ಪ್ರತಿಷ್ಠಾನದ ರಜತಮಹೋತ್ಸವವನ್ನು ಅರ್ಥ ಪೂರ್ಣವಾಗಿ ಐದು ದಿನ ಪರ್ಯಂತ (ಇದೇ ವರ್ಷದ ಸೆಪ್ಟೆಂಬರ್ ೧೦ರಿಂದ ೧೫ ರವರೆಗೆ) ಅದ್ದೂರಿಯಾಗಿ ತನ್ನ ಸ್ವಂತ ಕಟ್ಟಡ ಬಿ.ಎಂ.ಶ್ರೀ. ಕಲಾಭವನದ ಎಂ.ವಿ.ಸೀ. ಸಭಾಂಗಣದಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ವಿದ್ವತ್ತೆಯ ಬೆಳವಣಿಗೆಗೆ ಪೂರಕವಾಗಿ ಶ್ರಮಿಸುತ್ತಿರುವ ಪ್ರತಿಷ್ಠಾನದ ಪ್ರಮುಖ ಸಾಧನೆಯಾದ ಮೂರು ಮಹಡಿಗಳ 'ಬಿಎಂಶ್ರೀ ಕಲಾಭವನ' ವನ್ನು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಎನ್. ಧರ್ಮಸಿಂಗ್ ಲೋಕಾರ್ಪಣ ಮಾಡಿರುತ್ತಾರೆ.

ಬಿ.ಎಂ.ಶ್ರೀ. ಮತ್ತು ಎಂ.ವಿ.ಸೀಯವರ ಲೋಹದ ಪ್ರತಿಮೆಗಳನ್ನು ಬಂಧುಗಳ ನೆರವಿನಿಂದ ಭವನದಲ್ಲಿ ಸ್ಥಾಪಿಸಲಾಗಿದೆ.

ಪ್ರಾಚೀನ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಸಂಪಾದನೆ, ಹಸ್ತಪ್ರತಿಶಾಸ್ತ್ರ ತರಗತಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ; ಸಿರಿಕಂಟ ವೇದಿಕೆ; ಮೌಲಿಕ ಗ್ರಂಥ ಪ್ರಕಟಣೆ; ಕರ್ನಾಟಕ ಲೋಚನ ವಿದ್ವತ್ ಪತ್ರಿಕೆ ಪ್ರಕಟಣೆ; ಬೆಂಗಳೂರಿನಲ್ಲಿ 'ಬಿ.ಎಂ.ಶ್ರೀ. ಕಲಾ ಭವನ' ನಿರ್ಮಾಣ; ಬೆಳ್ಳೂರಿನಲ್ಲಿ 'ಬಿ.ಎಂ.ಶ್ರೀ. ಶತಮಾನೋತ್ಸವ ಭವನ' ನಿರ್ಮಾಣ, ನಿರ್ವಹಣೆ; ಹಂಪೆಯ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಪಿ.ಎಚ್.ಡಿ. ಸಂಶೋಧನ ಕೇಂದ್ರ, ದತ್ತಿ ಉಪನ್ಯಾಸ ಮಾಲೆಗಳು, ಮೊದಲಾದವುಗಳಿಂದ ಸಕ್ರಿಯ ವಾಗಿದ್ದ ಪ್ರತಿಷ್ಠಾನ, ಈ ರಜತ ಮಹೋತ್ಸವ ಸಂದರ್ಭದಲ್ಲಿ ಹಂಪೆಯ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಪಿ.ಎಚ್.ಡಿ.ಸಂಶೋಧನ ಕೇಂದ್ರ, 'ಸಿರಿ ಸಂಗೀತ' ಸಾಂಸ್ಕೃತಿಕ ಕಾರ್ಯಕ್ರಮ ಮಾಲೆ, ಹಸ್ತಪ್ರತಿ ಸೇವಾಕೇಂದ್ರ, ಮನೆಬಾಗಿಲಿಗೆ ಹಸ್ತ ಪ್ರತಿ ಪ್ರದರ್ಶನ', ವಿಚಾರಗೋಷ್ಠಿಗಳ ಸೇರ್ಪಡೆಯಿಂದ ಮತ್ತಷ್ಟು ಕ್ರಿಯಾಶೀಲವಾಗಿದೆ. ಇದೇ ಸಂದರ್ಭದಲ್ಲಿ ಸವಿ ಸಂಚಿಕೆ 'ರಜತಸಿರಿ', ನೆನಪಿನ ಸಂಪುಟ 'ಸಾಹಿತ್ಯೋ ಪಾಸಕರು' ಮತ್ತು ರಜತೋತ್ಸವ ಮಾಲೆಯ ಐದು ಗ್ರಂಥಗಳನ್ನು ಬಿಡುಗಡೆ ಮಾಡಲಾಗಿದೆ. ರಜತೋತ್ಸವ ಮಾಲೆಯ ಇನ್ನೂ ಕೆಲವು ಗ್ರಂಥಗಳನ್ನು ಶೀಘ್ರದಲ್ಲೇ ಹೊರತರಲಾಗುವುದು.

ಈ ಎಲ್ಲಾ ಕಾರ್ಯಕ್ರಮಗಳನ್ನೂ ಯಶಸ್ವಿಯಾಗಿ ಕಾರ್ಯಗತಗೊಳಿಸಲು ತಾವು ಉದಾರವಾಗಿ ಧನಸಹಾಯ ಮಾಡಿ, 'ರಜತಸಿರಿ'ಗೆ ಜಾಹೀರಾತುಗಳನ್ನು ನೀಡಿ ಕಾರ್ಯಕರ್ತರಾಗಿ ವಿವಿಧ ಉಪಸಮಿತಿಗಳಲ್ಲಿ ಇದ್ದು ನೆರವಾಗಿ ಉಪಕರಿಸಿ ರುವುದಕ್ಕೆ ವಂದಿಸುತ್ತಾ ಮುಂದೆಯೂ ಸಹಕರಿಸಬೇಕೆಂದು ವಿನಮ್ರವಾಗಿ ವಿನಂತಿಸಿ ಕೊಳ್ಳುತ್ತೇವೆ. ಕೃತಜ್ಞತೆಯ ವಂದನೆಗಳೊಂದಿಗೆ.

ಜಿ. ನಾರಾಯಣ
ಗೌರವಾಧ್ಯಕ್ಷರು

ಪ್ರೊ || ನಾ. ಗೀತಾಚಾರ್ಯ
ಗೌ. ಕಾರ್ಯದರ್ಶಿ


ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀ
ಅಧ್ಯಕ್ಷರು

ಪ್ರೊ || ಡಿ.ಲಿಂಗಯ್ಯ
ಕೋಶಾಧಿಕಾರಿ

ಎಸ್. ವಿ. ಶ್ರೀನಿವಾಸ ರಾವ್
ಸಂಚಾಲಕರು

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ಅವಕಾಶ

ಬಿ.ಎಂ.ಶ್ರೀ. ಪ್ರತಿಷ್ಠಾನವನ್ನು ವಿಶ್ವವಿದ್ಯಾನಿಲಯದ ಮಾನ್ಯತೇಯ ಸಂಶೋಧನ ಕೇಂದ್ರವನ್ನಾಗಿ ಮಾಡಬೇಕೆಂಬ ಸಂಸ್ಥಾಪಕ ಎಂ.ವಿ.ಸೀತಾರಾಮಯ್ಯ ನವರ ಕನಸು ಇದೀಗ ನನಸಾಗಿದೆ. ಸತತವಾದ ಪರಿಶ್ರಮದಿಂದ ೨೦೦೩ ರಿಂದ ಕನ್ನಡ ವಿಶ್ವವಿದ್ಯಾನಿಲಯವು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು **ಸ್ನಾತಕೋತ್ತರ ಸಂಶೋಧನ ಕೇಂದ್ರವನ್ನಾಗಿ** ಮಾನ್ಯಮಾಡಿದೆ. ಈ ಕೇಂದ್ರದ ಮೂಲಕ ಕನ್ನಡ ವಿಶ್ವಾವಿದ್ಯಾನಿಲಯಕ್ಕಾಗಿ ಪಿಎಚ್.ಡಿ ಅಧ್ಯಯನ ಮಾಡಬಹುದಾಗಿದೆ. ಈವರೆಗೆ ೧೭ ಜನ ಸಂಶೋಧನ ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದಾರೆ.



ನಿಟ್ಟೂರು ಶ್ರೀನಿವಾಸ ರಾವ್ ಇನ್ನಿಲ್ಲ


ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪಕ ಅಧ್ಯಕ್ಷರೂ, ಗೌರವ ಅಧ್ಯಕ್ಷರೂ ಆಗಿದ್ದ ನಾಡಿನ ಹೆಸರಾಂತ ಮುತ್ಸದ್ದಿಗಳಾದ ನಿಟ್ಟೂರು ಶ್ರೀನಿವಾಸರಾಯರು ೧೨.೮.೨೦೦೪.ರಂದು ನಿಧನರಾದರು. ನಿಟ್ಟೂರಿನಲ್ಲಿ ಶಾಮಣ್ಣ ಮತ್ತು ಸೀತಮ್ಮನವರ ಸುಪುತ್ರರಾಗಿ ೨೪.೮.೧೯೦೩ರಂದು ಜನಿಸಿ ೧೦೧ ವರ್ಷಗಳನ್ನು ಕಂಡ ಶತಾಯುಷಿಗಳಾಗಿದ್ದರು. ಕಾನೂನು ಪದವಿಗಳಿಸಿ ವಕೀಲಿವೃತ್ತಿ ಕೈಗೊಂಡರೂ ಹುಟ್ಟಿನಿಂದಲೇ ದೇಶಭಕ್ತಿಯನ್ನು ರೂಢಿಸಿಕೊಂಡಿದ್ದರು. ಇವರು ಅತ್ಯುನ್ನತ ಹುದ್ದೆಯಾದ ಮುಖ್ಯ ನ್ಯಾಯಾಧೀಶ ಪದವಿ ಗಳಿಸಿದರು. ಕೆಲಕಾಲ ರಾಜ್ಯದ ರಾಜ್ಯಪಾಲ ರಾಗಿಯೂ ಆಡಳಿತ ನಡೆಸಿದ ಗೌರವ ಇವರದು. ಸ್ವಾತಂತ್ರ್ಯ ಪ್ರೇಮಿ ಹಾಗೂ ಗಾಂಧಿ ಭಕ್ತರಾಗಿದ್ದ ಇವರು ಉದ್ಯಮದ ನೇಪಥ್ಯದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಇಂಬು ನೀಡಿದರು. ಸತ್ಯಶೋಧನಾ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ಪ್ರಕಾಶನೋದ್ಯಮಕ್ಕೆ ನೆರವು ನೀಡಿದರು. ಲೇಖಕರಾಗಿ ಗಾಂಧೀಜಿಯವರ ಆತ್ಮಕಥೆ 'ಸತ್ಯಶೋಧನ' ಮತ್ತು 'ಅನಾಸಕ್ತಿ ಯೋಗ' ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ ಡಿ.ವಿ.ಜಿ.ಯವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯ ಗಳನ್ನು ಬದುಕಿದ್ದಷ್ಟು ದಿನವೂ ಯಶಸ್ವಿಯಾಗಿ ನಡೆಸಿಕೊಂಡು ಬಂದರು.

ಸುಕೋಮಲ ಮನಸ್ಸಿನ ನಿಟ್ಟೂರರವರು ಅಪ್ರತಿಮ ಪ್ರತಿಭಾವಂತರು. ಜ್ಞಾನ ವೃದ್ಧರು. ಸಹೃದಯರ ಮನಸ್ಸಿನಲ್ಲಿ ಸದಾ ನೆಲಸಿರುವಂಥವರು. ಇವರು ಬೆಳೆಸಿದ ಬಿ.ಎಂ.ಶ್ರೀ ಪ್ರತಿಷ್ಠಾನದ ಬೆಳ್ಳಿ ಹಬ್ಬದ ಸೆಪ್ಟೆಂಬರ್ ೧೦ರಿಂದ ೧೫ರ ಸಂಭ್ರಮವನ್ನು ನೋಡುವ ಮೊದಲೇ ದೈವಾಧೀನರಾದದ್ದು ನಮ್ಮ ದುರ್ದೈವ. ಅವರ ಮಾರ್ಗ ದರ್ಶನದಲ್ಲೇ ವ್ಯವಸ್ಥೆಯಾಗಿದ್ದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿ ಅವರ ದಿವ್ಯ ಆತ್ಮಕ್ಕೆ ಶಾಂತಿಯನ್ನು ತಂದಿದೆ ಎಂದು ಆಶಿಸುತ್ತೇವೆ. ೨೦.೦೮.೦೪ರಂದು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಶ್ರದ್ಧಾಂಜಲೀ ಸಭೆಯನ್ನು ನಡೆಸಿತು.

ನಿಟ್ಟೂರರು ನಿಕಟ ಸಂಪರ್ಕ ಇರಿಸಿಕೊಂಡಿದ್ದ ಸಂಘ ಸಂಸ್ಥೆಗಳು ಅನೇಕ. ಮುಖ್ಯವಾದವುಗಳೆಂದರೆ ಮಿಥಿಕ್ ಸೊಸೈಟಿ, ಕನ್ನಡ ಸಾಹಿತ್ಯ ಪರಿಷತ್ತು, ಗಾಂಧಿ ಸ್ಮಾರಕ ನಿಧಿ; ಗಾಂಧಿ ಶಾಂತಿ ಪ್ರತಿಷ್ಠಾನ, ಲೋಕಶಿಕ್ಷಣ ಟ್ರಸ್ಟ್, ದಕ್ಷಿಣ ಭಾರತ ಹಿಂದಿ ಪ್ರಚಾರ ಸಮಿತಿ, ತಾಳವಾದ್ಯ ಕೇಂದ್ರ ಮುಂತಾದವು.

ಪ್ರತಿಷ್ಠಾನದ ಸ್ಥಾಪಕ ಅಧ್ಯಕ್ಷರಾಗಿ ನಂತರ ಗೌರವಅಧ್ಯಕ್ಷರಾಗಿ ಅದರ ಸರ್ವತೋ ಮುಖ ಬೆಳವಣಿಗೆಯಲ್ಲಿ ಸಹಕರಿಸಿದ್ದ ನಿಟ್ಟೂರು ಅವರ ಹೆಸರೇ ಪ್ರತಿಷ್ಠಾನಕ್ಕೊಂದು ಶಕ್ತಿಯಾಗಿ, ಗೌರವವಾಗಿ ಪ್ರತಿಷ್ಠಾನವನ್ನು ಉನ್ನತಸ್ಥಾನದಲ್ಲಿ ಗುರುತಿಸಲು ಸಾಧ್ಯವಾಗಿದೆ. ಪ್ರತಿಷ್ಠಾನದ ಪ್ರತಿಯೊಂದು ಕಾರ್‍ಯಕ್ರಮಕ್ಕೂ ತಪ್ಪದೆ ಆಗಮಿಸಿ ಅವುಗಳ ಮೌಲ್ಯವನ್ನು ಹೆಚ್ಚಿಸುವ ಮೂಲಕ, ಸೂಕ್ತ ಸಲಹೆ-ಮಾರ್ಗದರ್ಶನ ನೀಡುವ ಮೂಲಕ ಪ್ರತಿಷ್ಠಾನಕ್ಕೊಂದು ಪ್ರತಿಷ್ಠೆಯನ್ನು ತಂದುಕೊಟ್ಟಿದ್ದರು.

ಜೀವಿತ ಕಾಲದಲ್ಲೇ ಶತಮಾನೋತ್ಸವ ಆಚರಿಸಿಕೊಂಡಿದ್ದ ಕನ್ನಡದ ಜೀವಂತ ದಂತಕಥೆ **(Live Legend)** ಯಾಗಿದೆ. ನಿಟ್ಟೂರರು ಕರ್ನಾಟಕಕ್ಕೇ ಕೀರ್ತಿ ತಂದು ಕೊಟ್ಟಿದ್ದರು. ಇವರ ಸೇವೆಯನ್ನು ಪ್ರತಿಷ್ಠಾನ ಕೃತಜ್ಞತೆಯಿಂದ ಸ್ಮರಿಸುತ್ತದೆ. ಅವರಿಗೆ ತುಂಬು ಹೃದಯದಿಂದ ಅಶ್ರುತರ್ಪಣ ಅರ್ಪಿಸುತ್ತದೆ.



ಜಿ. ನಾರಾಯಣ
ನೂತನ ಗೌರವಾಧ್ಯಕ್ಷರು

ನಾಡಿನ ಶ್ರೇಷ್ಠ ಚಿಂತಕರೂ ಹಿರಿಯ ಗಾಂಧೀವಾದಿಗಳೂ ಮಾಜಿ ಮೇಯರ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಯಶಸ್ವೀ ಸಂಘಟಕರೂ ಆಗಿರುವ ಶ್ರೀ ಜಿ. ನಾರಾಯಣ ಅವರನ್ನು ದಿನಾಂಕ: ೮.೧೦.೦೪ ರಂದು ನಡೆದ ಕಾರ್ಯಕಾರಿ ಸಮಿತಿಯು ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಈ ಸರ್ವಾನುಮತದ ತೀರ್ಮಾನವನ್ನು ಶ್ರೀಯುತರು ಮಾನ್ಯ ಮಾಡಿ ಇನ್ನೊಬ್ಬ ಸಮರ್ಥರನ್ನು ಆಯ್ಕೆ ಮಾಡುವವರೆಗೆ ಇರಲು ಸಮ್ಮತಿಸಿದ್ದಾರೆ. ಶ್ರೀಯುತರಿಗೆ ಸಮಸ್ತ ಸದಸ್ಯರ ಪರವಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನ ಅಭಿನಂದನೆಗಳನ್ನು ಸಲ್ಲಿಸುತ್ತದೆ .

ಬಿ.ಎಂ.ಶ್ರೀ. ಪ್ರತಿಷ್ಠಾನದ ಸ್ಥಾಪನೆಯ ಕಾಲದಿಂದಲೂ ಪ್ರತಿಷ್ಠಾನದ ಹಿತೈಷಿಗಳಾಗಿ, ಸಂಸ್ಥಾಪಕರಾದಿಯಾಗಿ ಎಲ್ಲ ಅಧ್ಯಕ್ಷರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಪ್ರತಿಷ್ಠಾನದ ಬೆಳವಣಿಗೆಯನ್ನು ಬಯಸುತ್ತಿದ್ದ ಜಿ. ನಾರಾಯಣರವರು ೧೯೮೪ರಲ್ಲಿ ಬಿ.ಎಂ.ಶ್ರೀ. ಶತಮಾನೋತ್ಸವ ಸಮಿತಿಯಲ್ಲಿ ಮತ್ತು ಬೆಳ್ಳೂರು ಸಮಿತಿಗಳಲ್ಲಿ ಕಾರ್ಯಾಧ್ಯಕ್ಷರಾಗಿ ಬಿ.ಎಂ.ಶ್ರೀ. ಶತಮಾನೋತ್ಸವನ್ನು ನಾಡಿನಾದ್ಯಂತ ಆಚರಿಸಲು ಹಾಗೂ ಬೆಳ್ಳೂರಿನಲ್ಲಿ ಬಿ.ಎಂ.ಶ್ರೀ. ಶತಮಾನೋತ್ಸವ ಭವನವನ್ನು ನಿರ್ಮಿಸಲು ಮುಖ್ಯ ಪ್ರೇರಕರಾಗಿದ್ದರು. ಈಗಿನ ರಜತೋತ್ಸವ ಸಮಿತಿಯಲ್ಲೂ ಗೌರವ ಸಲಹೆಗಾರರಾಗಿ ಸಕ್ರಿಯರಾಗಿದ್ದು ಪ್ರತಿಷ್ಠಾನದ ಬೆಳವಣಿಗೆಯಲ್ಲಿ ಸದಾ ತೊಡಗಿಕೊಂಡಿರುವ ಶ್ರೀ ಜಿ. ನಾರಾಯಣರವರ ಮಾರ್ಗದರ್ಶನದಲ್ಲಿ ಪ್ರತಿಷ್ಠಾನ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಚಟುಚಟಿಕೆಗಳಿಂದ ಮುನ್ನಡೆಯುತ್ತದೆ ಎಂದು ಆಶಿಸುತ್ತೇವೆ.

ಪದಾಧಿಕಾರಿಗಳು, ಸಂಪಾದಕರು.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್‌ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಕಲಾಭವನ

೩ ಮತ್ತು ೪ ನೇ ಮುಖ್ಯ ರಸ್ತೆ, ನರಸಿಂಹರಾಜಕಾಲೋನಿ, ಬೆಂಗಳೂರು - ೫೬೦ ೦೧೯.
ದೂರವಾಣಿ, ೨೬೬೧೫೪೮೭೭, ಇಮೇಲ್ : bmsri/trust@yahoo.com
Website : http://in.members.tripodasia.com/bmsri/

ಸಂಪುಟ ೨೦ | ಜೂನ್ - ಡಿಸೆಂಬರ್ ೨೦೦೪ | ಸಂಚಿಕೆ ೧,೨

ಪ್ರತಿಷ್ಠಾನದ ರಜತಮಹೋತ್ಸವ ವಿಶೇಷಾಂಕ

ಪರಿವಿಡಿ

KARNATAKA LOCHANA

Half-yearly Research Journal, Published by

B.M.Sri. Smaraka Prathisthana

(B.M. Sri Memorial Foundation)

3 & 4th Main Road, N.R.Colony, Bangalore-560 019.

Ph: 26615877, E-mail: bmsri/trust@yahoo.com

Website: http://in.members,tripodosia.com/bmsri/

VOL: 20, June-December 2004 No.1,2

Silver Jubilee Celebrations Special Issue

CONTENTS

ಸಮಸ್ಯಾ ಪೂರಣ

ವಿದ್ವತ್ ಪತ್ರಿಕೆಯಾಗಿರುವ ಕರ್ನಾಟಕ ಲೋಚನದಲ್ಲಿ 1993 ರಿಂದಲೂ ಈ ವಿಶಿಷ್ಟ ಅಂಕಣವನ್ನು ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯನವರ ಸೂಚನೆಯಂತೆ ನಡೆಸಿಕೊಂಡುಬರಲಾಗುತ್ತಿದೆ. ಈ ಅಂಕಣದ 10 ನೇ ವರ್ಷದ ನೆನಪಿಗಾಗಿ ಹಿಂದಿನ ಸಂಚಿಕೆಯಲ್ಲಿ ಸೂಚಕರಿಂದ ಒಂದು ವಿಶೇಷ ಲೇಖನವನ್ನೂ ಪ್ರಕಟಿಸಲಾಗಿತ್ತು. ಈ ಸಂಚಿಕೆಯ ಹೊತ್ತಿಗೆ ಶ್ರೀಯವರು ನಮ್ಮೊಂದಿಗಿಲ್ಲ. ಹತ್ತು ವರ್ಷಗಳವರೆಗೆ ಈ ಅಂಕಣವನ್ನು ವಿಶೇಷ ಆಸಕ್ತಿಯಿಂದ ಬೆಳೆಸಿಕೊಟ್ಟ ಪ್ರೊ॥. ಗರ್ಗೇಶ್ವರಿ ಅವರಿಗೆ ನಮ್ಮ ಶ್ರದ್ಧಾಂಜಲಿಯನ್ನರ್ಪಿಸುತ್ತ ಈ ಅಂಕಣವನ್ನು ಮುಂದುವರೆಸುತ್ತಿದ್ದೇವೆ.

ಇದು ಕನ್ನಡಕ್ಕೆ ಅತಿಶಯ ಲಕ್ಷಣವೆನಿಸುವ ಪ್ರಾಸಪಾದ– ಛಂದೋಬದ್ಧ ಪದ್ಯ ರಚನೆಗೆ ಸಜೀವತೆಯನ್ನು ನೀಡುವ ಉದ್ದೇಶವುಳ್ಳದ್ದು. ಇಂದಿಗೂ ಕನ್ನಡದಲ್ಲಿ ಈ ಬಗೆಯ ಪ್ರಾಚೀನ ಕಾವ್ಯರಚನಾ ಪರಂಪರೆ ಮುಂದುವರಿದಿರುವುದಲ್ಲದೆ ಅನೇಕರು ನವೀನ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇಂಥವರಿಗೊಂದು ವೇದಿಕೆಯನ್ನೊದಗಿಸುವ ಆಶಯ ಈ ಅಂಕಣಗಳದು.

ಪ್ರತಿ ಸಂಚಿಕೆಯಲ್ಲಿಯೂ ಒಂದೊಂದು ಸಮಸ್ಯೆಯನ್ನು ಕೊಡಲಾಗುವುದು. ಇದು ಛಂದೋಬದ್ಧ ಕವಿತೆಯೊಂದರ ಒಂದು ಸಾಲು (ಪಾದ) ಆಗಿರುತ್ತದೆ. ಕಾವ್ಯಾಸಕ್ತರು ಪದ್ಯರಚನಾ ಪರಿಣತರು ತಮಗೆ ತೋರಿದ ಪದ್ಯ ರಚಿಸಿಕೊಟ್ಟಿರುವ ಪಾದಕ್ಕ ಸರಿಹೊಂದಬೇಕು. ಕಂದ, ವೃತ್ತ, ಷಟ್ಪದಿ, ಚೌಪದಿ, ಅಷ್ಟಪದಿ, ತ್ರಿಪದಿ, ರಗಳೆ, ಯಾವುದೇ ಪದ್ಯಜಾತಿಯಾಗಬಹುದು. ಆಧುನಿಕ ಪದ್ಯವೂ ಆಗಬಹುದು. ಕೊಟ್ಟಿರುವ ಸಮಸ್ಯೆಯ ಪಾದದ ಪ್ರಾಸ, ಲಯ ಅರ್ಥಕ್ಕೆ ಅನ್ವಯಿಸಿ ಛಂದೋಬದ್ಧ ಕವಿತೆಯನ್ನಾಗಿಯೇ ರಚಿಸಬೇಕು. ಒಬ್ಬರು ಒಂದು ಪದ್ಯವನ್ನು ಕಳುಹಿಸಬಹುದು.

ಸಂಪಾದಕರು

ಸಮಸ್ಯೆ: ಮಜವಾಗಿರು ನೀನೆನುತ್ತ ಶಪಿಪಂ ಮುನಿಪಂ

1. ಭಜನಗತೇಂದ್ರದ್ಯುಮ್ನಂ
ನಿಜಮನ್ನಣೆಯೀಯಲಿಲ್ಲೆನುತ್ತುರಿದಾ ಕುಂ
ಭಜನವಗಂ ಮದಭರಸಾ
ಮಜವಾಗಿರು ನೀನೆನುತ್ತೆ ಶಪಿಪಂ ಮುನಿಪಂ ॥

(ದೇವತಾಭಜನೆಯಲ್ಲಿ (ಮೈಮರೆತಿದ್ದ) ಇಂದ್ರದ್ಯುಮ್ನನು ತನಗೆ ತಕ್ಕ ಸತ್ಕಾರ ಮಾಡಲಿಲ್ಲವೆಂದು ಕೋಪಗೊಂಡ ಕುಂಭಜ(–ಅಗಸ್ತ್ಯ ಮಹಾಮುನಿಯು) ಅವನನ್ನು ನೀನು ಮದ್ದಾನೆಯಾಗಿ ಹೋಗು ಎಂದು ಶಪಿಸಿದನು)

– ಶತಾವಧಾನಿ ಆರ್. ಗಣೇಶ್ (ಸೂಚಕರು)

2. ಭಜಿಸುತ್ತಿರಲಿಂದ್ರದ್ಯುಮ್ನ ಜನಪಂತವೆಸಾ-
ಹಜದಿಂದ ಸಮಾಧಿಯಲ್ಲಿಹನ ನೋಡುತ ಕುಂ-
ಭಜಕೋಪದಿ ತನ್ನ ಸೇವಿಪದನಂ ಮದ ಸಾ-
ಮಜವಾಗಿರು ನೀನೆನುತ್ತ ಶಪಿಪಂ ಮುನಿಪಂ.

–ಎಂ. ಆರ್. ಅನಂತ ರಾಮಯ್ಯ

3. ಸುಜನರೆನಿಸುವ ಮುನಿಜನರ ಬಾಳಿನ ಬಂಡಿ
ಮಜವಾಗಿರುವುದರತ್ತಲೇ ವಾಲಿದೆ ಬಿಡಿ.
ಭಜನೆಮಾಡುತ್ತಾರೆ ಹೊರಗೆ ಮರುಳಗೇಡಿ
ಯಜನ. ಝಣ ಝಣ ಹಣದ ಕೋಡಿ
ಸುಜಲಧಾರೆಯಾಗಿ ಹರಿದು ಬರುತ್ತಿರೆ,
ಭಜಕರೊಂದಿಗೆ ಬೆರೆತು ಭಂಜಕರೆನಿಸರೆ
ಕುಜನರಪ್ಪರಿಗೆ ಶಪಿಪ ಶಕ್ತಿ ಎತ್ತ? ಅಸ
ಹಜ ಶಾಪಕ್ಕೆ 'ವರ' ಇಂದಿನವರರ್ಥ- ಬ
ಹುಜನರೆಲ್ಲ ಅದಕ್ಕೇ ಕೃತಾರ್ಥ. ಅದರಿಂದ
ಮಜವಾಗಿರು ನೀನೆನುತ್ತ ಶಪಿಪಂ ಮುನಿಪಂ.

ನಾ. ಗೀತಾಚಾರ್ಯ

ಮುಂದಿನ ಸಂಚಿಕೆಗೆ ಸಮಸ್ಯೆ

'ಮಾರಿಗೆ ವಲ್ಲಭನು ರಾಮನೆಂಬುದೆ ಖಚಿತಂ'

– ಎಂ.ಆರ್. ಅನಂತ ರಾಮಯ್ಯ

ನಾನು ಮತ್ತು ಬಿ.ಎಂ.ಶ್ರೀ*

ಪ್ರೊ॥ ಎಸ್. ಆರ್. ಮಳಗಿ

ನಾನು ಪರಮಪೂಜ್ಯ ಬಿ.ಎಂ.ಶ್ರೀಕಂಠಯ್ಯನವರ ಕಾಲದಲ್ಲಿದ್ದ ಹಳೆಯ ತಲೆಮಾರಿನ ಕನ್ನಡ ಸಾಹಿತಿ. ಬಿ.ಎಂ.ಶ್ರೀಯವರ ಬಗ್ಗೆ ನನ್ನಕೆಲವು ನೆನಪುಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲಿಚ್ಛಿಸುತ್ತೇನೆ. ಈ ನೆನಪುಗಳು ನಾನು ಧಾರವಾಡದಲ್ಲಿದ್ದಾಗಿನವು. ನಾನು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ವಿದ್ಯಾರ್ಥಿ ಯಾಗಿದ್ದಾಗಿನಿಂದಲೇ ಅವರನ್ನು ಕಂಡ ನೆನಪುಗಳು ಇನ್ನೂ ಹಸಿರು ಹಸಿರಾಗಿವೆ. 1930–35ರ ಸುಮಾರಿನವು. ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘಕ್ಕೆ ಮತ್ತು ಧಾರವಾಡ ವಿದ್ಯಾವರ್ಧಕ ಸಂಘಕ್ಕೆ ಆಮಂತ್ರಿತರಾಗಿ ಅವರು ಆಗಾಗ ಬರುತ್ತಲೇ ಇದ್ದರು. ಬಹುಶಃ 1911ರಲ್ಲಿ ವಿದ್ಯಾವರ್ಧಕ ಸಂಘದಲ್ಲಿ "ಕನ್ನಡ ಮಾತು ತಲೆಯೆತ್ತುವ ಬಗೆ" ಎಂಬ ವಿಷಯ ಕುರಿತು ಅವರು ಭಾಷಣ ಮಾಡಿದಂದಿನಿಂದ ಬಿ.ಎಂ.ಶ್ರೀಯವರಿಗೆ ಧಾರವಾಡದ ಬಗ್ಗೆ, ಧಾರವಾಡದ ಜನಕ್ಕೆ ಬಿ.ಎಂ.ಶ್ರೀಯವರ ಬಗ್ಗೆ ಒಂದು ಬಗೆಯ ಅನನ್ಯ ಪ್ರೀತಿ, ಆಕರ್ಷಣೆ ಹೆಚ್ಚುತ್ತಲೇ ಬಂದಿತ್ತು. ಉತ್ತರ ಕರ್ನಾಟಕದಲ್ಲಿ ಅವರು ಕನ್ನಡಕ್ಕಾಗಿ ಪ್ರವಾಸ ಕೈಕೊಂಡಾಗಲೆಲ್ಲ ಧಾರವಾಡಕ್ಕೆ ಭೇಟಿ ಕೊಡುವುದನ್ನು ಅವರೆಂದೂ ತಪ್ಪಿಸುತ್ತಿದ್ದಿಲ್ಲ. ಆಗ ಧಾರವಾಡ ವಿದ್ಯಾವರ್ಧಕ ಸಂಘದ ಆಡಳಿತ ನಡೆಸುತ್ತಿದ್ದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು, ಕನ್ನಡದ ಕಟ್ಟಾಳು ಎನಿಸಿದ್ದ ಮುದವೀಡು ಕೃಷ್ಣರಾಯರು ಹಾಗೂ ಕಡಪಾ ರಾಘವೇಂದ್ರರಾಯರು ಬಿ.ಎಂ.ಶ್ರೀ.ಯವರಿಗೆ ಅಷ್ಟೊಂದು ಆತ್ಮೀಯರಾಗಿದ್ದರು! ಬಿ.ಎಂ.ಶ್ರೀಯವರ ಸಭೆ ನಡೆದಲ್ಲೆಲ್ಲ ಕಾಲೇಜು ವಿದ್ಯಾರ್ಥಿಗಳು ಸಹಸ್ರಾರು ಸಂಖ್ಯೆಯಲ್ಲಿ ಮುಗಿ ಬೀಳುತ್ತಿದ್ದರು. ಬೇಂದ್ರೆಯವರ ಗೆಳೆಯರ ಗುಂಪಿನ ನೂರಾರು ಸದಸ್ಯರು ಅಲ್ಲದೆ, ಸಂಶೋಧಕರಾದ ಶಂ.ಬಾ.ಜೋಶಿ, ಸಾ. ಶ್ರೀ. ರಾಜಪುರೋಹಿತರು, ಕವಿಸಾಲಿ ರಾಮಚಂದ್ರರಾಯರು ಮತ್ತು ಹೈಸ್ಕೂಲುಗಳ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕ ವೃಂದಗಳು ಈ ಸಭೆಗಳಲ್ಲಿ ಬಿ.ಎಂ.ಶ್ರೀ.ಯವರಿಗಾಗಿ ಗಂಟೆಗಟ್ಟಲೆ ಕಾಯ್ದು ಕುಳಿತಿರುತ್ತಿದ್ದರು. ಬಿ.ಎಂ.ಶ್ರೀಯವರ ಮಾತಿನ ಮೋಡಿಗೆ ಧಾರವಾಡದ ಜನ ಅಷ್ಟೊಂದು ಮುಗ್ಧರಾಗಿದ್ದರು! ಅವರಲ್ಲಿ ಹದಿಹರೆಯದ ನಾನೂ ಒಬ್ಬನಾಗಿದ್ದೆ.

ಬಿ.ಎಂ.ಶ್ರೀಯವರು ಧಾರವಾಡದ ಜನಕ್ಕೆ ಒಬ್ಬ ಮಹಾವ್ಯಕ್ತಿಯಷ್ಟೇ ಆಗಿರಲಿಲ್ಲ, ಒಂದು ಮಹಾಶಕ್ತಿಯಾಗಿದ್ದರು. ಆಲೂರು ವೆಂಕಟರಾಯರು ಹೇಳುತ್ತಿದ್ದಂತೆ ಬಿ.ಎಂ.ಶ್ರೀ.ಯವರ ಕಂಠಶ್ರೀ ಮತ್ತು ಅವರ ಮಾತಿನ ಹೊಸ ದೃಷ್ಟಿ, ಧೋರಣೆ ಧಾರವಾಡದ ಜನಕ್ಕೆ ಹುಚ್ಚು ಹಿಡಿಸಿತ್ತು! ಇದರ ಗುಟ್ಟು ಬಿ.ಎಂ.ಶ್ರೀ.ಯವರ ಕನ್ನಡದ ಕಳಕಳಿಯಲ್ಲಿತ್ತು. ಕನ್ನಡದ ಹಾಗೂ ಇಪ್ಪತ್ತೆರಡು ತುಂಡು ತುಣುಕುಗಳಲ್ಲಿ ಛಿದ್ರಪಿಚ್ಛಿದ್ರವಾಗಿದ್ದ ಇಡಿಯ ಕರ್ನಾಟಕದ ಏಕೀಕರಣಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದು ತಪಸ್ವಿಗಳಾಗಿದ್ದರೆಂದೇ

* ದಿನಾಂಕ 11.9.04 ರ ರಜತೋತ್ಸವ ಸಮಾರಂಭದಲ್ಲಿ ಮಾಡಿದ ಭಾಷಣ.

ಧಾರವಾಡದ ನಮ್ಮೆಲ್ಲರ ನಂಬುಗೆಯಾಗಿತ್ತು. ಕನ್ನಡದ ಕಣ್ವರು ಎಂದೇ ಅವರನ್ನು ಉತ್ತರ ಕರ್ನಾಟಕದ ಮಹಾಜನಗಳೆಲ್ಲ ಒಪ್ಪಿಕೊಂಡು ಬಿಟ್ಟಿದ್ದರು.

ಬಿ.ಎಂ.ಶ್ರೀ.ಯವರು ಕನ್ನಡದ ನವೋದಯದ ಕಹಳೆಯನ್ನು ಮೊಟ್ಟಮೊದಲು ಮೊಳಗಿಸಿದವರು. ಈ ಕಹಳೆಯ ಮೊಳಗು ಮೈಸೂರು ಸಂಸ್ಥಾನವನ್ನಷ್ಟೇ ಅಲ್ಲ, ಉತ್ತರ ಕರ್ನಾಟಕ, ಹೈದರಾಬಾದಕರ್ನಾಟಕ, ದಕ್ಷಿಣಕರ್ನಾಟಕ ಮುಂತಾದ ಕನ್ನಡ ನುಡಿ ಜೀವಂತವಿದ್ದ ಭಾಗಗಳಲೆಲ್ಲ ದುಮುದುಮಿಸಿತ್ತು! ಅಂದಿನ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ನೂರಾರು ಸಾವಿರಾರು ಕನ್ನಡ ಕವಿ ಕೋಗಿಲೆಗಳ ಮಧುರಸ್ವರ ಹೊರ ಹೊಮ್ಮಿತ್ತು! ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಕ್ರಾಂತಿಯನ್ನೇ ಅವರು ತಂದಿದ್ದರು. ಕರ್ನಾಟಕದ ರಾಜಕೀಯ ಆಂದೋಲನಕ್ಕೆ ಆಲೂರು ವೆಂಕಟರಾಯರು ಮುಂದಾಳಾಗಿ ಹೊಮ್ಮಿದ್ದಂತೆ, ಕನ್ನಡ ಕಾವ್ಯದ ಹೊಸ ಆಂದೋಲನವನ್ನು ಬಿ.ಎಂ.ಶ್ರೀ.ಯವರು ಅದಕ್ಕೆ ಪೂರಕವಾಗುವಂತೆ ನಡೆಸಿಕೊಂಡು ಬಂದರು. ಕನ್ನಡಿಗರಲ್ಲಿ ಜೀವ ತುಂಬಿದ್ದರು.

ಹೊಸ ಕವಿಗಳೊಂದಿಗೆ ಹೊಸಮಹಾಕವಿಗಳು, ಇತಿಹಾಸ ಸಂಶೋಧಕರು, ಸಣ್ಣಕತೆಗಾರರು, ಹರಟೆಗಾರರು, ನಾಟಕಕಾರರು, ಗೀತರೂಪಕಕಾರರು ತಂಡೋಪ ತಂಡವಾಗಿ ಕನ್ನಡತಾಯ ಪರಮಪಾವನ ಒಡಲಿಂದ ಹೊರ ಚಿಮ್ಮಿ ಬಂದರು! ಇದೆಲ್ಲ ತಮಗೆ ಗೊತ್ತು. ಇದನ್ನು ನಾನು ಅದೇ ಹದಿಹರೆಯದಲ್ಲಿದ್ದಾಗಲೇ ಕಂಡಿದ್ದೆ. ಸ್ಫೂರ್ತಿಗೊಂಡಿದ್ದೆ.

ಅನಂತರ, ಬಿ.ಎಂ.ಶ್ರೀ.ಯವರೊಂದಿಗೆ ಮಾಸ್ತಿಯವರು, ಡಿ.ವಿ. ಗುಂಡಪ್ಪನವರು, ಅ.ನ.ಕೃಷ್ಣರಾಯರು, ಎಂ.ಆರ್. ಶ್ರೀನಿವಾಸಮೂರ್ತಿಯವರು, ತೀ.ನಂ.ಶ್ರೀಯವರು, ವಿ.ಸೀತಾರಾಮಯ್ಯನವರು, ಜಿ.ಪಿ.ರಾಜರತ್ನಂ ಅವರು, ನಾ. ಕಸ್ತೂರಿಯವರು, ಪಂಡಿತ ತಾರಾನಾಥರು, ಮುಳಿಯ ತಿಮ್ಮಪ್ಪಯ್ಯನವರು, ಪಂಜೆ ಮಂಗೇಶರಾಯರು, ಟಿ.ಪಿ.ಕೈಲಾಸಂ ಮುಂತಾದ ಕನ್ನಡ ಸಾಹಿತ್ಯ ದಿಗ್ದಂತಿಗಳು, ದಿವ್ಯ ಜ್ಯೋತಿಗಳು ಧಾರವಾಡಕ್ಕೆ ಬರುತ್ತಲೆ ಇದ್ದರು. ಕನ್ನಡ ಚಳವಳಿಗೆ ಶಕ್ತಿ ತುಂಬಿ ಹೋಗುತ್ತಿದ್ದರು. ಆ ಕನ್ನಡ ಸಾಹಿತ್ಯ ಕ್ರಾಂತಿಯ ಆ ಕರ್ನಾಟಕ ರಾಜಕೀಯ ಕ್ರಾಂತಿಯ ಆ ಕನ್ನಡ ಸಾಹಿತ್ಯ ಕ್ರಾಂತಿಯ ದಿನಗಳನ್ನು ನಾನೆಂದಿಗೂ ಮರೆಯಲಾರೆ. ನಿನ್ನೆ ನಡೆದಂತೆ ಈ ನೆನಹುಗಳು ನನ್ನ ಕಣ್ಣ ಮುಂದೆ ಕಟ್ಟಿ ನಿಂತಿವೆ. ಈ ಎಲ್ಲ ಕನ್ನಡ ಸಾಹಿತ್ಯಾಕಾಶದ ನಕ್ಷತ್ರಗಳಲ್ಲಿ ಬಿ.ಎಂ.ಶ್ರೀ ಸೂರ್ಯನಂತೆ ಪ್ರಕಾಶಿಸುತ್ತಿದ್ದರು.

ಬಿ.ಎಂ.ಶ್ರೀ.ಯವರೊಂದಿಗೆ ನನಗೆ ಒದಗಿದ ಮೊಟ್ಟ ಮೊದಲ ಒಂದು ಹರ್ಷದ ಸಂಪರ್ಕವನ್ನು ಕುರಿತು ನೆನಪೊಂದನ್ನು ತಿಳಿಸಿ ಬಿ.ಎಂ.ಶ್ರೀ.ಯವರಿಗೆ ನನ್ನ ನಮನ ಸಲ್ಲಿಸಿ ನನ್ನ ಮಾತನ್ನು ಮುಗಿಸುವೆ.

ನಾನು ಎಂ.ಎ. ಮುಗಿಸಿ ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕನಾಗುವ ಮುನ್ನ ಹುಬ್ಬಳ್ಳಿಯ ನ್ಯೂಇಂಗ್ಲಿಷ್‌ಸ್ಕೂಲಿನಲ್ಲಿ ಕೆಲಕಾಲ ಶಿಕ್ಷಕನಾಗಿದ್ದೆ. ಬಿ.ಎಂ.ಶ್ರೀ.ಯವರು ಧಾರವಾಡಕ್ಕೆ ಬಂದವರು ಹುಬ್ಬಳ್ಳಿಗೂ ಬಂದು ಹೋಗುತ್ತಿದ್ದರು. ಅಲ್ಲಿಯ

ಕನ್ನಡಿಗರು ಅವರನ್ನು ಮೈಸೂರು-ಬೆಂಗಳೂರತ್ತ ಹೋಗಲು ಬಿಡುತ್ತಿರಲಿಲ್ಲ. ಹುಬ್ಬಳ್ಳಿಯ ಭವ್ಯ ಮ್ಯುನಿಸಿಪಲ್ ಹಾಲಿನಲ್ಲಿ ಬಿ.ಎಂ.ಶ್ರೀ.ಯವರ ಅತ್ಯಂತ ಸ್ಫೂರ್ತಿ ದಾಯಕ ಭಾಷಣ ವೊಂದಾದ ಮೇಲೆ ನನಗೆ ಅಭಿನಂದನ ಭಾಷಣ ಮಾಡುವ ಪಾಳಿ ಬಂದಿತ್ತು. ಅವರ ಭಾಷಣ ಕೇಳಿ ಪುಳಕಿತನಾಗಿದ್ದ ನಾನು ಅವರ ಭಾಷಣದ ಪಾಠವನ್ನು ಸಂಗ್ರಹಿಸಿ ಹೇಳುತ್ತ, ಅವರ ಗಂಭೀರ ಕಂಠಶ್ರೀಯನ್ನು ಸಭಿಕರ ಮನಸ್ಸಿನ ಮೇಲೆ ಉಂಟಾಗಿದ್ದ ಅವರ ಉನ್ನತ-ವಿಚಾರಗಳ ಛಾಪನ್ನೂ ವಿವರಿಸಿದ್ದೆ. ಅವರ ಮಾತುಗಳು ಆಗದಿನನಿತ್ಯ ಪ್ರಚಾರದಲ್ಲಿ ಎರಡನೆಯ ಮಹಾಯುದ್ಧದ ಬಾಂಬು ಗಳಂತೆ ಪ್ರಖರವಾಗಿಲ್ಲವೆ?ಎಂದು ಸಭಿಕರನ್ನು ಕೇಳಿ ಅವರಿಂದ ಗಡಚಿಕ್ಕುವ ಚಪ್ಪಾಳೆಯ ನಡುವೆ ಹಾರ-ತುರಾಯಿಗಳನ್ನು ಅವರ ಕೊರಳಿಗೆ ಹಾಕಿ ನನ್ನ ಸ್ಥಳಕ್ಕೆ ಹಿಂದಿರುಗಿದ್ದೆ. ಆಗ ಬಿ.ಎಂ.ಶ್ರೀ. ಯವರು ನನ್ನನ್ನು ಹಿಡಿದು ನಿಲ್ಲಿಸಿ ತಮ್ಮ ಕೊರಳಿಗೆ ಹಾಕಿದ್ದ ಆ ದೊಡ್ಡ ಹೂಮಾಲೆಯನ್ನು ನನ್ನ ಕೊರಳಿಗೆ ಹಾಕಿದರು. ಸಭಿಕರಿಂದ ಮತ್ತೊಂದು ಚಪ್ಪಾಳೆಯ ತುಮುಲತೆ ಎದ್ದಿತು. ಆಗ ರೋಮಹರ್ಷಿತನಾಗಿದ್ದ ನಾನು ಅವರಪಾದಕ್ಕೆ ಬಿದ್ದು, ಅವರ ಶುಭಾ ಶೀರ್ವಾದದ ಹಸ್ತಸ್ಪರ್ಶ ಪಡೆದಿದ್ದೆ! ಇದನ್ನು ನಾನು ಹೆಮ್ಮೆಕೊಚ್ಚಲು ಹೇಳುತ್ತಿಲ್ಲ. ಆ ಮಹಾತ್ಮರ ದಿವ್ಯ ಹಸ್ತಸ್ಪರ್ಶದಿಂದಲೆ ನಾನು ಈವರೆಗೆ ಆರೋಗ್ಯದಿಂದ ಬದುಕಿದ್ದು ಎಂದು ತಿಳಿಸಲು ಮಾತ್ರ. ಅವರೇ ನನಗೆ ಮೊಟ್ಟ ಮೊದಲ ಸಾಹಿತ್ಯ ಗುರು!

ನಾನು ಈ ಮೊದಲೆ ತಿಳಿಸಿದಂತೆ ಬಿ.ಎಂ.ಶ್ರೀ.ಯವರದು ಇಡಿಯ ಕರ್ನಾಟಕದ ತುಂಬ ಹರಡಿದ್ದ ಜಾಜ್ವಲ್ಯಮಾನ ಜ್ಯೋತಿ ಸ್ವರೂಪ. ಅಂತೇ ಧಾರವಾಡ ದಲ್ಲಿ ಹೊಸತಾಗಿ ಸ್ಥಾಪಿಸಿದ್ದ ಜೆ.ಎಸ್.ಎಸ್. ಕಾಲೇಜಿನ ಪ್ರಪ್ರಥಮ ಪ್ರಾಚಾರ್ಯರೆಂದು ನೇಮಿಸಲಾಗಿತ್ತು. ಧಾರವಾಡದ ಮೇಲಿನ ಪ್ರೀತಿಯಿಂದ ಉತ್ತರ ಕರ್ನಾಟಕ ಮಹಾ ಜನಗಳ ಸದಿಚ್ಛೆಯನ್ನು ಮನ್ನಿಸಿ ಬಿ.ಎಂ.ಶ್ರೀ.ಯವರು ಧಾರವಾಡದಲ್ಲಿ ನೆಲಸಲು ಬಂದಿದ್ದರು. ಇದು 1946ರ ಸುಮಾರು. ಆಗ ಆ ಕಾಲೇಜಿಗಷ್ಟೇ ಅಲ್ಲ. ಧಾರವಾಡಕ್ಕೇ ಎಂದಿಲ್ಲದ ಕಳೆ ಕಟ್ಟಿತ್ತು. ಆದರೆ ಮನುಷ್ಯ ನೆನೆಯುವುದೊಂದು, ದೈವ ನೆನೆಯುವುದು ಇನ್ನೊಂದು! ಒಂದು ಒಂದೂವರೆ ವರ್ಷದ ಅವರ ಆಡಳಿತದಲ್ಲೇ ಧಾರವಾಡದ ದುರ್ದೈವದಿಂದ ಆಕಸ್ಮಾತ್ತಾಗಿ ಅವರನ್ನು ಮೃತ್ಯು ಕಬಳಿಸಿತ್ತು. ಧಾರವಾಡವಷ್ಟೇ ಅಲ್ಲ, ಇಡಿಯ ಕರ್ನಾಟಕದ ಜನ ಕಣ್ಣೀರಿಟ್ಟ ಅಂತ್ಯ ಸಂಸ್ಕಾರಕ್ಕೆ ನಾನೂ ಹೋಗಿದ್ದೆ. ಆ ದಾರುಣ ಸಂದರ್ಭದಲ್ಲಿ ಕೆಲವರೊಂದಿಗೆ ನಾನೂ ದುಃಖೋದ್ಗಾರಗಳೊಂದಿಗೆ ನನ್ನ ಕೊನೆಯ ನಮನ ಸಲ್ಲಿಸಿದೆ.

ಹೀಗೆ ಸಕಲ ಕನ್ನಡಿಗರಿಗೆ ಸ್ಫೂರ್ತಿಯಿತ್ತು, ಕರ್ನಾಟಕದ ಸಾಹಿತ್ಯವಾಹಿನಿಗೆ ಹೊಸ ತಿರುವಿತ್ತ ಈ ಮಹಾಚೇತನಕ್ಕೆ ಸಹಸ್ರ ನಮನ ಸಲ್ಲಿಸುವೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಬರಿ ಬೆಂಗಳೂರಿಗೆ ಸೀಮಿತವಾಗದೆ ಇಡಿಯ ಕರ್ನಾಟಕದ ಮಹಾಜನಗಳ ಕನ್ನಡ ಸಾಹಿತ್ಯೋದ್ಧಾರ ಕಾರ್ಯಕ್ಕೆ, ನೈಜ ಕನ್ನಡ ಅಭಿಮಾನ ವೃದ್ಧಿಗೆ, ಕರ್ನಾಟಕದ ಸರ್ವಾಂಗೀಣ ಉನ್ನತಿಗೆ ಆಣಿಯಾಗಲಿ ಎಂದು ಈ ರಜತಮಹೋತ್ಸವ ಸಂದರ್ಭದಲ್ಲಿ ಹಾರೈಸುವೆ. ಸಿರಿಗನ್ನಡಂಗೆಲ್ಗೆ,

ಬೆಳ್ಳಿ ಹಬ್ಬದ ಸಡಗರದಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯ ವಿಶಿಷ್ಟಸಂಸ್ಥೆ - ಬಿ.ಎಂ.ಶ್ರೀ. ಪ್ರತಿಷ್ಠಾನ

ಡಾ॥ ಪಿ. ವಿ. ಕೃಷ್ಣಮೂರ್ತಿ

ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯದ ಕಾಲಘಟ್ಟದಲ್ಲಿ ಪ್ರಾಂಜಲ ಸೇವೆ ಸಲ್ಲಿಸಿದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಪ್ರಾತಃಸ್ಮರಣೀಯರು. ಅವರು ಅಂದು ಕನ್ನಡನಾಡಿನಲ್ಲಿ ಉಂಟುಮಾಡಿದ ಜಾಗೃತಿಯ ಕಾರಣದಿಂದಲೇ ಕನ್ನಡ - ಕರ್ನಾಟಕಗಳು ಇಂದು ರಾಷ್ಟ್ರ ಸಾಹಿತ್ಯ ರಂಗದಲ್ಲಿ ಗಮನಾರ್ಹ ಸ್ಥಾನ ಮಾನಗಳಿಗೆ ಪಾತ್ರವಾಗಿರುವುದು, ಎಂದರೆ ತಪ್ಪಾಗಲಾರದು.

ಆಚಾರ್ಯ ಬಿ.ಎಂ.ಶ್ರೀ ಅವರು ಮೂಲತಃ ಒಬ್ಬ ಇಂಗ್ಲಿಷ್‌ಪ್ರಾಧ್ಯಾಪಕರು . ಕಾಲಾಂತರದಲ್ಲಿ ಕನ್ನಡ ಸಾಹಿತ್ಯದ ಆಳ ವಿಸ್ತಾರಗಳನ್ನು ಗಮನಿಸತೊಡಗಿದ ಅವರು ಆ ಸಾಹಿತ್ಯದಲ್ಲಿ ತಾವು ಪಡೆದುಕೊಂಡ ಪರಿಣತಿ ಮತ್ತು ವಿದ್ವತ್ ಪ್ರತಿಭೆಯ ಕಾರಣದಿಂದ ಮೈಸೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ ಕನ್ನಡ ಪ್ರಾಧ್ಯಾಪಕರೂ ಆದರು. ಅಷ್ಟೇ ಅಲ್ಲ ಮುಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗವು ಒಂದು ಹೆಮ್ಮೆಯ ತಾಣವಾಗುವಂತೆಯೂ ಮಾಡಿದರು. ಅವರ ಮಾರ್ಗದರ್ಶನದಲ್ಲಿ ತರಬೇತಾದ ಕನ್ನಡಾಭಿಮಾನಿ ವಿದ್ವಾಂಸರು ಅನೇಕರು. ಅವರಲ್ಲಿ ಕುವೆಂಪು, ಡಿ.ಎಲ್.ಎನ್, ತೀ.ನಂ.ಶ್ರೀ, ತ.ಸು.ಶಾಮರಾವ್, ಎಚ್.ಎಂ. ಶಂಕರನಾರಾಯಣರಾವ್, ಕೆ. ವೆಂಕಟರಾಮಪ್ಪ, ಪರಮೇಶ್ವರ ಭಟ್ಟ, ಪ್ರೊ। ಎಂ.ವಿ. ಸೀತಾರಾಮಯ್ಯ ಮುಂತಾದವರು ಅಗ್ರಗಣ್ಯರು. ಇವರು ಒಬ್ಬೊಬ್ಬರೂ ತಾವು ಆಯ್ದುಕೊಂಡ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟತೆಯನ್ನು ಪಡೆದು ಮಾನ್ಯರಾಗಿ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಪ್ರಾತಃ ಸ್ಮರಣೀಯರಾಗಿರುವುದು ಸರಿಯಷ್ಟೆ. ಅವರ ಶಿಷ್ಯರಲ್ಲಿ ಒಬ್ಬರಾಗಿದ್ದ ಪ್ರೊ। ಎಂ. ವಿ. ಸೀತಾರಾಮಯ್ಯನವರು ಬಹು ವಿಶಿಷ್ಟ ಪ್ರತಿಭೆಯುಳ್ಳವರಾಗಿದ್ದರು.

ಸಾಹಿತ್ಯವಲಯದಲ್ಲಿ 'ಎಂ.ವಿ.ಸೀ' ಎಂದೇ ಪ್ರಸಿದ್ಧರಾಗಿದ್ದ ಪ್ರೊ॥ ಎಂ.ವಿ. ಸೀತಾರಾಮಯ್ಯನವರು ಕೇವಲ ಸೃಜನಾತ್ಮಕ ಸಾಹಿತ್ಯದ ಕರ್ತೃಗಳು ಮಾತ್ರವಾಗಿರಲಿಲ್ಲ. ಅವರು ಒಬ್ಬ ಉತ್ತಮ ಸಹೃದಯ ಕಲಾವಿದರೂ ಕಲಾಭಿಮಾನಿಗಳೂ ಆಗಿದ್ದರು. ಸಂಗೀತ, ಚಿತ್ರ ಕಲೆಗಳನ್ನು ಅವರು ಕರಗತ ಮಾಡಿಕೊಂಡಿದ್ದರು. ಅಷ್ಟೇ ಅಲ್ಲದೆ ಶಿಸ್ತುಬದ್ಧವಾದ ಸಂಶೋಧನೆಯಲ್ಲೂ ಅವರದು ಎತ್ತಿದಕೈ.

ಸದ್ಯಕ್ಕೆ ಲಭ್ಯವಿರುವ ಕನ್ನಡದ ಪ್ರಥಮ ಸಾಹಿತ್ಯ ಶಾಸ್ತ್ರಕೃತಿ 'ಕವಿರಾಜಮಾರ್ಗ' ಗ್ರಂಥವನ್ನು ಪ್ರೊ। ಎಂ.ವಿ.ಸೀ. ಅವರು ಶಿಸ್ತುಬದ್ಧವಾಗಿ, ವೈಜ್ಞಾನಿಕವಾಗಿ ಮತ್ತು ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಸಂಪಾದಿಸಿ ಪ್ರಕಟಿಸಿ ಕನ್ನಡ ವಿದ್ವತ್‌ಲೋಕಕ್ಕೆ ನೀಡಿ,

ಮಾನ್ಯತೆಯನ್ನು ಪಡೆದವರು . ಕನ್ನಡ ಸಾಹಿತ್ಯದಲ್ಲಿ ಆಗಬೇಕಾದ ಸಂಶೋಧನೆಗಳಿಗಾಗಿ ಕನಸು ಕಂಡು ನನಸು ಮಾಡಿದ ಸಂಸ್ಥೆ 'ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ'

ಕಳೆದ ಶತಮಾನದ 70ರ ದಶಕಕ್ಕಾಗಲೇ ಕನ್ನಡದಲ್ಲಿ ಕುಸಿಯುತ್ತಿದ್ದ ಪಾಂಡಿತ್ಯ, ವಿದ್ವತ್ ಸ್ಥಿತಿಗತಿಗಳನ್ನು ಮನಗಂಡ ಪ್ರೊ| ಎಂ. ವಿ.ಸೀ. ಅವರು, ಅದನ್ನು ಹೇಗಾದರೂ ಮತ್ತೆ ನೆಲೆಗೊಳಿಸಬೇಕು, ಹಿಂದಿನಂತೆ ಮುಂದೆಯೂ ಕನ್ನಡದಲ್ಲಿ ಪಾಂಡಿತ್ಯ. ವಿದ್ವತ್ ಪ್ರತಿಭೆಗಳು ಬೆಳಗಬೇಕು, ಅದಕ್ಕಾಗಿ ಒಂದು ವಿದ್ವತ್ ಸಂಶೋಧನ ಸಂಸ್ಥೆಯನ್ನು ಕಟ್ಟಬೇಕೆಂದು ಕನಸು ಕಂಡರು. ದೈಹಿಕವಾಗಿ ದುರ್ಬಲರಾದರೂ ಮಾನಸಿಕವಾಗಿ ಪ್ರಬಲ ರಾಗಿದ್ದ ಅವರು ತಮ್ಮ ಪೂಜ್ಯ ಗುರುಗಳಾದ ಆಚಾರ್ಯ ಬಿ.ಎಂ.ಶ್ರೀ ಅವರ ಸ್ಮರಣಾರ್ಥವಾಗಿ ಒಂದು ಸಾಹಿತ್ಯ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಿದರು. ಪರಿಣಾಮವಾಗಿ 1979ರ ಮೇ 6 ರಂದು ಪ್ರತಿಷ್ಠಾನವನ್ನು ಸ್ಥಾಪಿಸಲಾಯಿತು. ಮುಂದೆ ದಿನಾಂಕ 10.03.1980 ರಂದು ವಿದ್ಯುಕ್ತವಾಗಿ 'ಬಿ.ಎಂ.ಶ್ರೀ ಸ್ಮಾರಕ ಸಾಹಿತ್ಯ ಸಂಶೋಧನ ಪ್ರತಿಷ್ಠಾನವನ್ನು ರಾಷ್ಟ್ರಕವಿ ಸನ್ಮಾನ್ಯ ಕುವೆಂಪು ಅವರ ಅಮೃತ ಹಸ್ತದಿಂದ ಉದ್ಘಾಟನೆ ಮಾಡಿಸಿಯೇಬಿಟ್ಟರು - ದಿಟ್ಟನಿಲುವಿನ ಪ್ರೊ| ಎಂ.ವಿ.ಸೀ. ಅವರು. ಕುವೆಂಪು ಅವರು ಆ ಬಗ್ಗೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದನ್ನು ಬಿಟ್ಟು ಬಿಟ್ಟಿದ್ದರು. ಆದರೆ ತಮ್ಮ ಪೂಜ್ಯ ಗುರು ಗಳಾದ ಆಚಾರ್ಯ ಬಿ.ಎಂ.ಶ್ರೀ ಅವರ ಹೆಸರಿನಲ್ಲಿ ಆರಂಭ ವಾಗುತ್ತಿರುವ ಸದುದ್ದೇಶದ ಸಂಸ್ಥೆಯ ಹಾಗೂ ಪ್ರೊ| ಎಂ. ವಿ.ಸೀ. ಅವರ ಮೇಲಿನ ಪ್ರೀತಿ ಯಿಂದ ಸಮಾರಂಭಕ್ಕೆ ಆಗಮಿಸಿ ಶುಭಕೋರಿದರು. ಈ ಕಾರ್ಯದಲ್ಲಿ ಅವರ ಬೆಂಗಳೂರಿನ ಅನೇಕ ತರುಣ ಸಾಹಿತ್ಯಾಭಿಮಾನಿಗಳು ಹಾಗೂ, ನಾಡಿನ ಅನೇಕ ವಿದ್ವಾಂಸರು ಬೆನ್ನೆಲುಬಾಗಿ ನಿಂತರು.

ಬಿ.ಎಂ.ಶ್ರೀ .ಪ್ರತಿಷ್ಠಾನದ ಪ್ರಧಾನ ಉದ್ದೇಶ ಸಂಶೋಧನೆಗೆ ಅಗತ್ಯವಾದ ಆಕರ ಸಾಮಗ್ರಿಗಳ ಸಂಗ್ರಹ. ಅಂತೆಯೇ ಆ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದ ಓಲೆಗರಿ - ಹಸ್ತಪ್ರತಿಗಳ ಸಂಗ್ರಹಣ ಕಾರ್ಯಕ್ಕೆ ಒತ್ತು ನೀಡಿದ್ದು; ನಾಡಿನ ಮೂಲೆ ಮೂಲೆಗಳಿಂದ ಈವರೆಗೂ 1500ಕ್ಕೂ ಅಧಿಕ ಓಲೆಗರಿ ಮತ್ತು ಕಾಗದದ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಕೇವಲ ಹಸ್ತಪ್ರತಿಗಳನ್ನು ಸಂಗ್ರಹಿಸುವುದಷ್ಟೇ ಅಲ್ಲ ; ಅವುಗಳನ್ನು ಸಂರಕ್ಷಿಸಿ, ಅವುಗಳಲ್ಲಿ ನಿಕ್ಷಿಪ್ತವಾಗಿರುವ ಜ್ಞಾನವನ್ನು ಹೊರ ತೆಗೆಯುವ ಕಾರ್ಯವೂ ಆಗಬೇಕು. ಅದಕ್ಕಾಗಿ ಅವುಗಳನ್ನು ಓದುವ, ನಕಲುಮಾಡುವ, ಅಧ್ಯಯನ, ಸಂಪಾದನೆ, ವಿಶ್ಲೇಷಣೆ, ಇತ್ಯಾದಿ ತತ್ಸಂಬಂಧಿ ವಿದ್ವತ್ ಕಾರ್ಯಗಳನ್ನು ನಿರ್ವಹಿಸುವ ಒಂದು ದೊಡ್ಡ ಸಾಹಿತ್ಯಾಭಿಮಾನಿ ಬಳಗವೇ ಬೇಕಾಗುತ್ತದೆ. ಈ ನಿಟ್ಟಿನಲ್ಲೂ ಪ್ರತಿಷ್ಠಾನ ಕಾರ್ಯೋನ್ಮುಖವಾಗಿ 1990 ರಿಂದಲೇ ಹಸ್ತಪ್ರತಿ ಶಾಸ್ತ್ರ ತರಗತಿಗಳನ್ನು ಕರ್ನಾಟಕದಲ್ಲೇ ಏಕೈಕ ಪ್ರಯತ್ನವಾಗಿ ಆರಂಭಿಸಲಾಗಿದೆ. (1981ರಲ್ಲಿ ಹಸ್ತಪ್ರತಿ ಶಾಸ್ತ್ರ ವಿಚಾರ ಗೋಷ್ಠಿಯನ್ನು ರಾಷ್ಟ್ರಮಟ್ಟದಲ್ಲಿ ಏರ್ಪಡಿಸಲಾಗಿತ್ತು.) ಪ್ರತಿವರ್ಷ ಗರಿಷ್ಠ 10 ಜನ ವಿದ್ಯಾರ್ಥಿಗಳಿಗೆ ಓಲೆಗರಿ ಕಾಗದ ಹಸ್ತಪ್ರತಿಗಳ ಸಂಗ್ರಹ,

ಸಂರಕ್ಷಣೆ, ಸಂಪ್ರತಿ, ದಾಖಲೀಕರಣ ಮತ್ತು ಗ್ರಂಥ ಸಂಪಾದನಾ ಕೌಶಲದಲ್ಲಿ ಪರಿಣತಿಯನ್ನು ನೀಡಲಾಗುತ್ತಿದೆ. ಈ ತರಗತಿಗಳಲ್ಲಿ ತರಬೇತಿ ಪಡೆದ ಹಲವರು ಈಗಾಗಲೇ ಈ ವಿದ್ವತ್ ಕೈಂಕರ್ಯದಲ್ಲಿ ಸಕ್ರಿಯರಾಗಿರುವುದು ಸಂಸ್ಥೆಗೆ ಹೆಮ್ಮೆಯನ್ನುಂಟು ಮಾಡಿದೆ.

ಪ್ರತಿಷ್ಠಾನದ ಆಕರ ಗ್ರಂಥಾಲಯ ಮತ್ತು ಸಂಶೋಧನ ಕೇಂದ್ರ :

ಹಸ್ತಪ್ರತಿ ಶೋಧನೆ, ಸಂಪಾದನಾ ಕಾರ್ಯಗಳಿಗೆ ಪೂರಕವಾಗಿ ಆಕರ ಗ್ರಂಥಾಲಯವು ಅತ್ಯಗತ್ಯ. ಈ ದಿಸೆಯಲ್ಲಿ ಪ್ರತಿಷ್ಠಾನ ಹಿಂದೆ ಬಿದ್ದಿಲ್ಲ. ಕನ್ನಡ-ಕರ್ನಾಟಕ ಸಂಶೋಧನೆಗೆ ಅಗತ್ಯವಾದ ಆಕರ ಗ್ರಂಥಗಳ ಸಂಗ್ರಹ ಅವಿರತವಾಗಿ ಸಾಗಿದೆ. ಸಂಸ್ಥೆಯ ಗ್ರಂಥ ಭಂಡಾರದಲ್ಲಿ ಈವರೆಗೂ ಹನ್ನೆರಡು ಸಾವಿರಕ್ಕೂ ಹೆಚ್ಚು ಗ್ರಂಥಗಳು ಸಂಗ್ರಹವಾಗಿದೆ. ಅವೆಲ್ಲವೂ ಸಂಶೋಧನೆಗೆ ಅಗತ್ಯವಾದ ಗ್ರಂಥಗಳು ಮಾತ್ರವಾಗಿವೆ ಎಂಬುದು ಗಮನಾರ್ಹ. ಕರ್ನಾಟಕಾಧ್ಯಯನಕ್ಕೆ ಅಗತ್ಯವಾದ ಎಫಿಗ್ರಾಫಿಯ ಕರ್ನಾಟಕ, ಮೈಸೂರು ಆರ್ಕಿಯಲಾಜಿಕಲ್ ವರದಿಗಳು, ವಿವಿಧ ನಿಘಂಟುಗಳು , ಪ್ರಬುದ್ಧ ಕರ್ಣಾಟಕ, ಕನ್ನಡ ನುಡಿ, ಪರಿಷತ್ಪತ್ರಿಕೆ, ಸಾಧನೆ, ಕರ್ನಾಟಕ ಭಾರತಿ ,ಜೀವನ ಮುಂತಾದ ಪತ್ರಿಕೆಗಳ ಸಂಗ್ರವೂ ಬೇರೆ ಬೇರೆ ಸಂಸ್ಥೆಗಳ ಹಸ್ತಪ್ರತಿ ಗ್ರಂಥ ಸೂಚಿಗಳೂ ವ್ಯವಸ್ಥಿತವಾಗಿ ಸಂಗ್ರಹ ವಾಗಿದ್ದು ಸಾಹಿತ್ಯ ಸಂಶೋಧನೆಯ ಆಸಕ್ತರು ಮತ್ತು ಉನ್ನತ ವ್ಯಾಸಂಗದ ವಿದ್ಯಾರ್ಥಿಗಳು ನಿರಂತರವಾಗಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ನಾಡಿನ ಖ್ಯಾತ ವಿದ್ವಾಂಸರಾಗಿದ್ದ ಶ್ರೀ ಎಂ.ವಿ.ಸೀ. ಎಸ್. ಶ್ರೀಕಂಠಯ್ಯ; ಅನಂತರಂಗಾಚಾರ್ಯ ಮೊದಲಾದ ಗಣ್ಯರು ನೀಡಿರುವ ದಾನದ ಪುಸ್ತಕಗಳಿಂದ ಪ್ರತಿಷ್ಠಾನದ ಭಂಡಾರ ಶ್ರೀಮಂತ ಗೊಂಡಿದೆ. ಕರ್ನಾಟಕ – ಕನ್ನಡ ಸಂಶೋಧನೆಗೆ ಅಗತ್ಯವಾದ ಪ್ರಾಚೀನ ಗ್ರಂಥಗಳನ್ನು ಕೊಡುಗೆಯಾಗಿ ಪಡೆಯಲು ಪ್ರತಿಷ್ಠಾನದ ಬಾಗಿಲು ತೆರೆದಿದೆ.

ಗ್ರಂಥಸಂಪಾದನಾ ಕಾರ್ಯ: ಈವರೆಗೂ ಪ್ರಕಟವಾಗದೆ, ಹಸ್ತಪ್ರತಿಯ ಸ್ಥಿತಿಯಲ್ಲೇ ಉಳಿದಿದ್ದ ಅನೇಕ ಕಾವ್ಯಗಳನ್ನು ವಿದ್ವಾಂಸರಿಂದ ಸಂಪಾದಿಸಿ ಪ್ರಕಟಿಸುವ ಕಾರ್ಯವನ್ನು ಬಿ.ಎಂ.ಶ್ರೀ .ಪ್ರತಿಷ್ಠಾನ ಕೈಗೊಂಡಿದೆ. ಹೀಗೆ ಪ್ರಕಟವಾದ ಪ್ರತಿಗಳ ಸಂಖ್ಯೆ ಹದಿನೈದಕ್ಕೂ ಹೆಚ್ಚು . ಅವುಗಳಲ್ಲಿ 'ಸೂತಭಾರತ' 'ಶ್ರೀಕೃಷ್ಣದೇವರಾಯನ ದಿನಚರಿ', 'ಚಂದ್ರಚೂಡಾಮಣಿ ಶತಕ' ಶ್ರೀನಿವಾಸ ಕಲ್ಯಾಣ, ಮರುನ್ನಂದನ ಶತಕ, ಧ್ರುವಚರಿತ್ರೆ, ಪದ್ಮಿನಿ ಕಲ್ಯಾಣ, ಶ್ರೀಕೃಷ್ಣ ಬಾಲಲೀಲೆ, ಕೀರ್ತನ ಕುಸುಮಾಂಜಲಿ, ಬೇಟೆರಾಯ ದೀಕ್ಷಿತರ ದೇವರ ನಾಮಗಳು – ಮುಂತಾದವು ಗಮನಾರ್ಹವಾದುವಾಗಿದ್ದು ಎಂ.ಜಿ. ಹೆಗ್ಗಡೆ, ಸಂಪತ್ಕುಮಾರಾಚಾರ್ಯ, ಎಂ.ವಿ. ಸೀತಾರಾಮಯ್ಯ, ಕೆ.ಎಂ. ಕೃಷ್ಣರಾವ್,ಎನ್.ಎಸ್. ಲಕ್ಷ್ಮಿ ನಾರಾಯಣಭಟ್, ಎಸ್.ಶಿವಣ್ಣ, ಎಸ್.ರಾಮಸ್ವಾಮಿ ಮೊದಲಾದವರು ಸಂಪಾದಿಸಿ ಕೊಟ್ಟಿರುತ್ತಾರೆ. ಈ ಎಲ್ಲ ಗ್ರಂಥಗಳೂ ಗ್ರಂಥ ಸಂಪಾದನಾ ಶಿಸ್ತಿಗೆ ಅನುಗುಣವಾಗಿ ಸಂಪಾದಿಸಲಾಗಿದ್ದು ಪಾಠಾಂತರ ನಿಷ್ಕರ್ಷೆ, ವಿಸ್ತೃತ ಪ್ರಸ್ತಾವನೆ,ಕವಿ ಕಾವ್ಯ ವಿಚಾರ ಮತ್ತು ಸೂಕ್ತ ಅನು

ಬಂಧಗಳೊಂದಿಗೆ ಶಾಸ್ತ್ರೀಯವಾಗಿ ಸಂಪಾದಿಸಲಾಗಿದೆ. ಅಲ್ಲದೆ ಜನಪ್ರಿಯ ಕೃತಿ ಗಳಾದ ಸರ್ವಜ್ಞನ ವಚನಗಳು, ಕುಮಾರವ್ಯಾಸ ಭಾರತ ಇವುಗಳನ್ನು ನೂತನ ಪಾಠಾಂತರ ಗಳೊಂದಿಗೆ ಸಂಪಾದಿಸಿ ಪ್ರಕಟಿಸಲಾಗಿದೆ. ಅಷ್ಟೇ ಅಲ್ಲದೆ ಪ್ರತಿಷ್ಠಾನದ ಸಂಗ್ರಹ ದಲ್ಲಿರುವ ತಿಮ್ಮಪ್ಪದಾಸರ ಕೀರ್ತನೆಗಳು, ವೆಂಕಟದಾಸರ ಕೀರ್ತನೆಗಳು, ಮುಂತಾದವುಗಳ ಶಾಸ್ತ್ರೀಯ ಸಂಪಾದನಾ ಕಾರ್ಯ ಮುಂದುವರೆದಿದೆ. ಪ್ರತಿಷ್ಠಾನದ ತಜ್ಞ ತಂಡ ಇತರರಿಗೂ ಕೆಲವು ಪ್ರಾಚೀನ ಗ್ರಂಥಗಳನ್ನು ಸಂಪ್ರತಿ ಮಾಡುವ ಮತ್ತು ಶಾಸ್ತ್ರೀಯ ವಾಗಿ ಸಂಪಾದಿಸುವ ಕಾರ್ಯ ವನ್ನು ಮಾಡಿಕೊಡುತ್ತದೆ. ಈ ನಿಟ್ಟಿನಲ್ಲಿ ಡಾ॥ ಸಿದ್ಧಯ್ಯ ಪುರಾಣಿಕರಿಗಾಗಿ 'ಮಳೆಯ ರಾಜ ಚರಿತ್ರೆ' ಹಾಗೂ ಬಸವ ಸಮಿತಿಗಾಗಿ 'ನವರತ್ನಮಾಲಿಕೆ' ಪ್ರೊ। ಧ್ರುವನಾರಾಯಣ ಅವರಿ ಗಾಗಿ 'ಕನ್ನಿಕಾಂಬೆಯ ಕಥೆ' ಮುಂತಾದವುಗಳನ್ನು ಸಿದ್ಧಪಡಿಸಿ ಕೊಟ್ಟಿರುವುದು ಮುಖ್ಯವಾದುದಾಗಿದೆ.

ಶಾಸ್ತ್ರಸಂಬಂಧಿ ಲಕ್ಷಣ ಗ್ರಂಥಗಳ ಪ್ರಕಟಣ ಕಾರ್ಯವನ್ನು ಪ್ರತಿಷ್ಠಾನ ಕೈ ಗೊಂಡಿದ್ದು; ಮೊದಲಿಗೆ 'ಹಸ್ತಪ್ರತಿಶಾಸ್ತ್ರ'ಕ್ಕೆ ಸಂಬಂಧಿಸಿದಂತೆ ವಿಚಾರಗೋಷ್ಠಿಗಳನ್ನು ಸಂಘಟಿಸಿ 'ಮಣಿಹ' 'ಹಸ್ತಪ್ರತಿ ಶಾಸ್ತ್ರ' ಮುಂತಾದ ಕೃತಿಗಳನ್ನು ಹೊರತಂದಿರುವುದಲ್ಲದೆ ತತ್ಸಂಬಂಧಿ ವಿಷಯಗಳಾದ ಹಸ್ತಪ್ರತಿಶಾಸ್ತ್ರ ಪರಿಚಯ, ಭಾಷಾಂತರ ಕಲೆ, ಸೃಜನಶೀಲತೆ ಮತ್ತು ಪಾಂಡಿತ್ಯ, ಹೊಸಗನ್ನಡ ವ್ಯಾಕರಣ 'ಕನ್ನಡ ಸಾಹಿತ್ಯದಲ್ಲಿ ಅದ್ವೈತ' ಮುಂತಾದ ಕೃತಿಗಳು ಪ್ರಕಟಗೊಂಡಿವೆ. 1990ರ ದಶಕದಲ್ಲಿ 'ಅಂತರ ಶಿಸ್ತೀಯ ಸಂಶೋಧನೆಯ ಶಿಸ್ತು' ವಿನಃ ಪರಿಕಲ್ಪನೆ ಅನುಗುಣವಾಗಿ 'ಅಂತರ ಶಿಸ್ತೀಯ ಸಂಶೋಧನೆಯ ಸಂಶೋಧನ ವಿಧಿ ವಿಧಾನ' ಎಂಬ ಲಕ್ಷಣ ಗ್ರಂಥವನ್ನು ಪ್ರಕಟಿಸಲಾಗಿದೆ. ಅಲ್ಲದೆ 'ತೌಲನಿಕ ಸಾಹಿತ್ಯ'ವನ್ನು ಕುರಿತ ಒಂದು ಲಕ್ಷಣ ಗ್ರಂಥ ಪ್ರಕಟಣೆಯ ಹಂತದಲ್ಲಿದೆ.

ಸಂಶೋಧನ ವಿದ್ವತ್ ಪತ್ರಿಕೆ 'ಕರ್ನಾಟಕ ಲೋಚನ' : ಕರ್ನಾಟಕ ಸಾಹಿತ್ಯ - ಸಂಸ್ಕೃತಿಯಲ್ಲಿ ನಡೆಯುವ ನೂತನ ಆವಿಷ್ಕಾರಗಳು, ಹೊಸ ಚಿಂತನೆಗಳು, ವಿದ್ವತ್ ಟಿಪ್ಪಣಿಗಳು ಅಪ್ರಕಟಿತ ಕೃತಿಯ ಭಾಗಗಳು, ಸಂಶೋಧನಾ ಚಟುವಟಿಕೆಗಳ ವಿವರಗಳು, ಶಾಸ್ತ್ರಗ್ರಂಥಗಳ ವಿಮರ್ಶೆ ಇತ್ಯಾದಿಗಳನ್ನು ದಾಖಲಿಸಿ ವಿದ್ವತ್ ಪ್ರಪಂಚಕ್ಕೆ ನೆರವಾಗಲು ನಿಂತಿರುವ, ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ಪತ್ರಿಕೆ ಎಂಬ ಹೆಗ್ಗಳಿಕೆಗೆ ಈ ಪತ್ರಿಕೆ ಪಾತ್ರವಾಗಿದೆ. ಛಂದೋಬದ್ಧ ಕವಿತೆಗಳ ರಚನೆಗೆ ಪ್ರೋತ್ಸಾಹ ನೀಡುವ ಸಮಸ್ಯಾಪೂರಣ ಮುಂತಾದ ಸಂಶೋಧನೆ - ಪಾಂಡಿತ್ಯಕ್ಕೆ ಪೂರಕವಾದ ಬರಹಗಳು ಈ ಪತ್ರಿಕೆಯ ವಿಶೇಷ ವಾಗಿದೆ. 1982 ರಿಂದ ಅರ್ಧವಾರ್ಷಿಕ ಪತ್ರಿಕೆಯಾಗಿ ಈಗ 22 ವರ್ಷಗಳನ್ನು ಪೂರೈಸುತ್ತಲಿದೆ. ಈ ಪತ್ರಿಕೆಯ 15 ವರ್ಷಗಳ ಲೇಖನ ಸೂಚಿಯೂ ಪ್ರಕಟವಾಗಿದೆ. ಸಂಶೋಧನಾ ಕೇಂದ್ರಕ್ಕೆ ಇರಲೇಬೇಕಾದ ಪ್ರಕಟಣೆಯಾಗಿ ಈ ಪತ್ರಿಕೆ ಮುಂದುವರೆದಿದೆ.

ಗ್ರಂಥ ಪ್ರಕಟಣೆ, ವಿಚಾರಗೋಷ್ಠಿ, ವಿಶೇಷ ಕಾರ್ಯಕ್ರಮಗಳು :

ಬಿ.ಎಂ. ಶ್ರೀ ಪ್ರತಿಷ್ಠಾನವು ಕಾಲ ಕಾಲಕ್ಕೆ ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ವಿಚಾರ ಗೋಷ್ಠಿಗಳನ್ನು ಏರ್ಪಡಿಸುತ್ತಾ ಬಂದಿದೆ. ಅವುಗಳಲ್ಲಿ ರಾಷ್ಟ್ರಮಟ್ಟದ ಹಸ್ತಪ್ರತಿಶಾಸ್ತ್ರ (1981), ಕನ್ನಡ ನವೋದಯ ಸಾಹಿತ್ಯ (1984) ವಿಜಯನಗರ ಸಾಮ್ರಾಜ್ಯ ಇತಿಹಾಸ ಮತ್ತು ಸಂಸ್ಕೃತಿ (1986), ಕುಮಾರವ್ಯಾಸ ಭಾರತ ಸಮಗ್ರ ಸಮೀಕ್ಷೆ (1987) ಕನ್ನಡ ಸಾಹಿತ್ಯದಲ್ಲಿ ಅದ್ವೈತ (1988) ಎಂಬುವು ಮುಖ್ಯವಾದುವಾಗಿವೆ. ಈ ವಿಚಾರ ಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಕಾರ್ಯವನ್ನೂ ಪ್ರತಿಷ್ಠಾನ ಮಾಡುತ್ತ ಬಂದಿದೆ.

ಪ್ರತಿಷ್ಠಾನವು ಆಗಾಗ್ಗೆ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿ ಸಾಹಿತ್ಯ ಸಂಶೋಧನೆಗೆ ಪೂರಕವಾಗುವಂತೆ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುತ್ತಾ ಬಂದಿದೆ. ಅದಕ್ಕಾಗಿ ಒಂದು ವ್ಯವಸ್ಥಿತ ಅಧ್ಯಯನ ಕೇಂದ್ರವೇ ಕಾರ್ಯಪ್ರವೃತ್ತವಾಗಿದೆ. ಈ ಕೇಂದ್ರದ ಮೂಲಕ ಪ್ರತಿ ತಿಂಗಳು ನಡೆಯುವ ಯುವ ವೇದಿಕೆ 'ಸಹೃದಯಗೋಷ್ಠಿ'ಸಾಹಿತ್ಯ ಸಂಶೋಧನ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ ವಿದ್ವಾಂಸರನ್ನು ಕುರಿತು ಉಪನ್ಯಾಸ ಮಾಲೆ, 'ಸಾಹಿತ್ಯೋಪಾಸಕರು'ಹಾಗೂ ಪ್ರತಿಷ್ಠಾನದ ಉದ್ದೇಶಿತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸ್ಮರಣೀಯರಾಗಿದ್ದ ವಿದ್ವಾಂಸರ ಶತಮಾನೋತ್ಸವಗಳನ್ನು ಪ್ರತಿಷ್ಠಾನ ನಿಷ್ಠೆಯಿಂದ ಆಚರಿಸಿ ಅವರ ಜೀವನ ಸಾಧನೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯಗಳನ್ನು ನಿರಂತರವಾಗಿ ನಡೆಯಿಸಿಕೊಂಡು ಬರುತ್ತಿದೆ. ಈ ದಿಸೆಯಲ್ಲಿ ಹಲವು ಸಂಸ್ಮರಣ ಸಂಪುಟ ಗಳು ಮತ್ತು ಜೀವನ ಚರಿತ್ರೆಗಳು ಪ್ರಕಟವಾಗಿವೆ. ಅವುಗಳಲ್ಲಿ ಮಣಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ), ಶ್ರೀನಿಧಿ (ಬಿ.ಎಂ.ಶ್ರೀ ಸಂಸ್ಮರಣ ಸಂಪುಟ), ಆಚಾರ್ಯ ಬಿ.ಎಂ.ಶ್ರೀ (ಜೀವನ ಚರಿತ್ರೆ} ಟಿ.ಎಸ್. ವೆಂಕಣ್ಣಯ್ಯ (ಜೀವನ ಚರಿತ್ರೆ), ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ) ಬೇಂದ್ರೆ ಸ್ಮೃತಿ, ಎಂ.ವಿ.ಸೀ. ಸಂಸ್ಮರಣೆ, ಮಾಸ್ತಿ ಸ್ಮರಣೆ, ನವ್ಯ ಸ್ಫೂರ್ತಿ, ಗೋಕಾಕ್ ನೆನಪು, ಕಾರಂತ ಕಿರಣ, ಶಂಬಾಸ್ಮೃತಿ ಸಮೀಕ್ಷೆ, ಮಧುರಸ್ಮೃತಿ, ಬಿ. ರಾಮಸ್ವಾಮಿ, (ಸಂಸ್ಮರಣ) ಮುಂತಾದ ಕೃತಿಗಳನ್ನು ಹೆಸರಿಸಬಹುದು.

ಹಳಗನ್ನಡ ಕಾವ್ಯಾಭ್ಯಾಸ ಶಿಬಿರ :

ಪ್ರತಿಷ್ಠಾನ ನಡೆಯಿಸಿಕೊಂಡು ಬರುತ್ತಿರುವ ಚಟುವಟಿಕೆಗಳಲ್ಲಿ ಈ ಹಳಗನ್ನಡ ಕಾವ್ಯಾಭ್ಯಾಸ ಶಿಬಿರಕ್ಕೆ ವಿಶೇಷ ಸ್ಥಾನವಿದೆ. ಪ್ರತಿಷ್ಠಾನದ ಹಸ್ತಪ್ರತಿ ಶಾಸ್ತ್ರದ ವಿದ್ಯಾರ್ಥಿಗಳು ಹಾಗೂ ಇತರ ಆಸಕ್ತರು ಸೇರಿ ರೂಪಿಸಿರುವ 'ಸಿರಿಕಂಟ' ಎಂಬ ಅಧ್ಯಯನ ಗೋಷ್ಠಿಯ ಮೂಲಕ 2001 ರಿಂದ ಪ್ರತಿವರ್ಷ ಹಳಗನ್ನಡ ಕಾವ್ಯಾಭ್ಯಾಸ ಶಿಬಿರವನ್ನು ಏರ್ಪಡಿಸುತ್ತಾ ಬಂದಿದೆ. ಈ ಶಿಬಿರದಲ್ಲಿ ಅಧ್ಯಯನಾಸಕ್ತರಿಗೆ ಪ್ರಾಚೀನ ಸಾಹಿತ್ಯ ಪ್ರಿಯರಿಗೆ, ವಿದ್ಯಾರ್ಥಿಗಳಿಗೆ ಮತ್ತು ಕನ್ನಡ ಅಧ್ಯಾಪಕರಿಗೆ ಹಳಗನ್ನಡ ಕಾವ್ಯಗಳನ್ನು ಓದುವ

ಆಸ್ವಾದಿಸುವ ಹಾಗೂ ಅರ್ಥೈಸುವುದಕ್ಕೆ ಅನುಕೂಲವಾಗುವಂತೆ ಪ್ರಾಯೋಗಿಕವಾಗಿಯೂ ಮಾರ್ಗದರ್ಶನ ನೀಡಲಾಗುತ್ತದೆ. ಈ ಕಾರ್ಯದಲ್ಲಿ ನಾಡಿನ ನುರಿತ ವಿದ್ವಾಂಸರು ಸಂಪನ್ಮೂಲ ವ್ಯಕ್ತಿಗಳಾಗಿ ವಿಶೇಷ ಪ್ರೀತಿಯಿಂದ, ಸ್ವಪ್ರೇರಣೆಯಿಂದಲೇ ಆಗಮಿಸಿ ಭಾಗವಹಿಸಿ ಮುಂದಿನ ಪೀಳಿಗೆಯ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಅಷ್ಟೇ ಅಲ್ಲ, ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಸಂಪ್ರತೀಕರಣ ಸೇವೆಯನ್ನು ನೀಡುವ ಹಸ್ತಪ್ರತಿ ಸೇವಾ ಕೇಂದ್ರವನ್ನು 2001ರಿಂದಲೇ ಆರಂಭಿಸಲಾಗಿದೆ. ಪ್ರಾಚೀನ ಹಸ್ತಪ್ರತಿಗಳನ್ನು ಹೊಂದಿರುವವರು ಅಪೇಕ್ಷಿಸಿದರೆ ಅವುಗಳನ್ನು ಅವರ ಸ್ಥಳದಲ್ಲೇ ಆಗಲೀ ಅಥವಾ ಪ್ರತಿಷ್ಠಾನದಲ್ಲೇ ಆಗಲೀ ವೈಜ್ಞಾನಿಕವಾಗಿ ಸಂರಕ್ಷಿಸಿ ಕೊಡುವ ವ್ಯವಸ್ಥೆಯನ್ನು ಪ್ರತಿಷ್ಠಾನ ಕೈಗೊಂಡಿದೆ. ಹಾಗೇ ಸಂಪ್ರತಿ ಮತ್ತು ಸೂಚಿಗಳನ್ನು ಮಾಡಿಕೊಡಲಾಗುವುದು. ಇದಕ್ಕೆ ಸೂಕ್ತ ಸೇವಾಶುಲ್ಕವನ್ನು ನಿಗದಿಪಡಿಸಲಾಗಿದೆ.

ಸ್ನಾತಕೋತ್ತರ ಸಂಶೋಧನಾ ಕೇಂದ್ರ:

ಇದೀಗ ಬಿ.ಎಂ.ಶ್ರೀ ಪ್ರತಿಷ್ಠಾನಕ್ಕೆ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ದೊರೆತಿದ್ದು ಇದರಿಂದ ಅದರ ಸಂಶೋಧನ ಚಟುವಟಿಕೆಗಳಿಗೆ ಪರಿಪೂರ್ಣತೆ ಬಂದಂತಾಗಿದೆ. ವಿದ್ಯಾರ್ಥಿಗಳು, ವಿದ್ವಾಂಸರು ಈ ಸಂಸ್ಥೆಯ ಮೂಲಕವೂ ಎಂ.ಫಿಲ್., ಪಿ.ಎಚ್.ಡಿ. ಮೊದಲಾದ ಉನ್ನತ ಅಧ್ಯಯನಗಳನ್ನು ಕೈಗೊಳ್ಳಬಹುದಾಗಿದೆ.

ಹೀಗೆ ಹಲವು ಯೋಜನೆಗಳ ಮೂಲಕ ಪ್ರತಿಷ್ಠಾನ ನಿರಂತರವಾದ ಸಾಹಿತ್ಯ ಸಂಶೋಧನ ಚಟುವಟಿಕೆಗಳನ್ನು ನಡೆಯಿಸಿಕೊಂಡು ಬರುತ್ತಿದ್ದು ಸಾಮಾನ್ಯ ಜನರಲ್ಲೂ ಸಂಶೋಧನ ಸಾಹಿತ್ಯದತ್ತ ಆಸಕ್ತಿ ಮೂಡುವಂತೆ ಶ್ರಮಿಸುತ್ತಿದೆ. ಪ್ರತಿಷ್ಠಾನ ಕೈಗೊಳ್ಳುವ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸಲು ತಜ್ಞ ವಿದ್ವಾಂಸರು ಸಂಶೋಧಕರ ಹಾಗೂ ಆಸಕ್ತರ ಸ್ವಯಂ ಸೇವಾ ತಂಡವೇ ಪ್ರತಿಷ್ಠಾನದಲ್ಲಿ ಕಾರ್ಯನಿರತವಾಗಿರುವುದು ಸಂತೋಷದ ಸಂಗತಿ. ಜೊತೆಗೆ ಕಟ್ಟಡ , ಗ್ರಂಥಾಲಯ, ಹಸ್ತಪ್ರತಿ ಭಂಡಾರ, ಸಂಶೋಧನಾ ಕೇಂದ್ರಗಳ ಸೌಲಭ್ಯವೂ ಇದೆ. ಈ ಸೌಕರ್ಯಗಳನ್ನು ಇನ್ನೂ ಉತ್ತಮಪಡಿಸುವ ಅಭಿವೃದ್ಧಿಪಡಿಸುವ ಅಗತ್ಯವಂತೂ ಇದ್ದೇ ಇದೆ. ಅದಕ್ಕಾಗಿ ಸಾಕಷ್ಟು ಆರ್ಥಿಕ ಸಂಪನ್ಮೂಲದ ಕ್ರೋಢೀಕರಣವಾಗಬೇಕಷ್ಟೆ. ಇದೀಗ ಬೆಳ್ಳಿಹಬ್ಬವನ್ನು ಆಚರಿಸುತ್ತಿರುವ ಪ್ರತಿಷ್ಠಾನಕ್ಕೆ ಈ ಸಂಪನ್ಮೂಲಗಳು ಲಭ್ಯವಾಗಲೆಂದು ಹಾರೈಸೋಣ.

ಬೆಂಗಳೂರಿನಲ್ಲಿ ನವಶೋಧಿತ ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳು

ಮುತ್ತುರಾಜು ಬಿ.

ಕರ್ನಾಟಕದ ರಾಜಧಾನಿಯಾಗಿರುವ ಬೆಂಗಳೂರು ವಿಶ್ವವನ್ನೇ ತನ್ನೆಡೆಗೆ ಆಕರ್ಷಿಸುತ್ತಾ ಬೆಳೆಯುತ್ತಿರುವ ಒಂದು ಭಾರತದ ನಗರ. ರಾಜಕೀಯವಾಗಿ ರಾಜ್ಯದ ಕೇಂದ್ರ. ಚಟುವಟಿಕೆಯ ತಾಣವಾಗಿರುವ ಈ ಸ್ಥಳಕ್ಕೆ ಅತ್ಯಂತ ಪುರಾತನವಾದ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸವಿದೆ ಎಂಬುದು ಹಲವು ಮಂದಿಗೆ ತಿಳಿದಿರಲಾರದು . ಪ್ರಾಗೈತಿಹಾಸಿಕ ಕಾಲದ ಹಲವಾರು ಕುರುಹುಗಳು ಬೆಂಗಳೂರು ಮತ್ತು ಅಕ್ಕಪಕ್ಕದ ಸ್ಥಳಗಳಲ್ಲಿ ದೊರೆತಿದ್ದು ಬೆಂಗಳೂರಿನ ಜನವಸತಿಯ ಪ್ರಾಚೀನತೆಯನ್ನು ನಿರ್ಧರಿಸಲು ಸಹಾಯಕ ವಾಗಿದೆ. ಕ್ರಿ.ಶ. ಸುಮಾರು 5ನೇ ಶತಮಾನದ ವರೆವಿಗೂ ನಡೆದಿರುವ ಘಟನೆಗಳ ಯಾವ ಕುರುಹುಗಳೂ ಲಭ್ಯವಿಲ್ಲವಾಗಿದ್ದು , ಇಲ್ಲಿನ ಇತಿಹಾಸದ ಬಗ್ಗೆ ಏನೂ ಹೇಳಲಾಗದು. ಆದರೆ ಗಂಗರಸರ ಕಾಲವಾದ ಕ್ರಿ.ಶ. ಸುಮಾರು 5ನೇ ಶತಮಾನದಿಂದ ಪ್ರಾರಂಭವಾದ ಚರಿತ್ರೆ ನಿರಂತರವಾಗಿ ಮುಂದುವರಿದು ಈಗ ಈ ನಗರವು ಉದ್ಯಾನವನಗಳ ನಗರ ಎಂತಲೇ ಖ್ಯಾತಿಗೊಂಡಿದೆ.

ಈ ಖ್ಯಾತಿಗೆ ಮೂಲಕಾರಣವೆಂದರೆ ಇಲ್ಲಿ ರಾಜ್ಯಭಾರ ನಡೆಸಿದ ಕೆಂಪೇಗೌಡರ ವಂಶಸ್ಥರು, ನಗರವನ್ನು ವಿಸ್ತರಿಸಿ (ಕ್ರಿ.ಶ. ಸುಮಾರು 16ನೇ ಶತಮಾನ) ಕೋಟೆಯನ್ನು ಸುಸ್ಥಿತಿಗೊಳಿಸಿದರು. ಉತ್ತಮವಾದ ನಗರ ಯೋಜನೆ ರಚಿಸಿ ಬೆಳವಣಿಗೆಗೆ ನಾಂದಿಹಾಡಿದರು. ಆದರೂ ಅದಕ್ಕೂ ಮುಂಚೆ ಇಲ್ಲಿ ಆಳಿದ ಗಂಗರು, ನೊಳಂಬರು, ಹೊಯ್ಸಳರು, ರಾಜಕೀಯವಾಗಿ ಬೆಂಗಳೂರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಇದೂ ಸಹ ಬೆಂಗಳೂರಿನ ಅಭಿವೃದ್ಧಿಗೆ ಸಹಾಯಕವಾಯಿತು. ಕ್ರಿ.ಶ. ಸುಮಾರು 850ರ ಬೇಗೂರಿನ ಶಾಸನವು ಈ ಊರನ್ನು ಉಲ್ಲೇಖಿಸುತ್ತಾ 'ಬೆಂಗುಳೂರು' ಎಂದು ಹೇಳುತ್ತದೆ. ಅದೇ ವೇಳೆಯ ಬೇಗೂರಿನ ಮತ್ತೊಂದು ವೀರಗಲ್ಲು ಶಾಸನವು ಬೇಗೂರನ್ನು ''ಬೆಂಪೂರು'' ಎಂದು ಉಲ್ಲೇಖಿಸುವುದರಿಂದ ಇಲ್ಲಿ ''ಪಕಾರ'' ''ಗಕಾರ''ವಾಗಿದೆ. ಅಂತೆಯೇ ಬೆಂಗುಳೂರು ಸಹ ಆ ವೇಳೆಗಾಗಲೇ ''ಪಕಾರ'' ವು ''ಗಕಾರ''ವನ್ನು ಪಡೆದುಕೊಂಡಿದ್ದಲ್ಲಿ ಬೆಂಪುಳ + ಊರು **ಬೆಂಪುಳೂರು > ಬೆಂಗುಳೂರು** ಎಂದಾಗಿರುವ ಸಂಭವವಿದೆ. ಅಂದರೆ ಇದರ ಅರ್ಥ ಜಲಸಂಬಂಧಿ ಸೂಚಕವಾಗಿದ್ದು ಬಿಳಿಯಕೆರೆ ಅಥವಾ ಬಿಳಿಯ ಜಲದ ಊರು ಎಂದಾಗುತ್ತದೆ. ಎಲ್ಲಾ ವಿದ್ವಾಂಸರಿಗೂ ತಿಳಿದಿರುವಂತೆ ಹಳೆಯ ಬೆಂಗಳೂರು ಎಂಬುದು ಇಂದಿನ ಹೆಬ್ಬಾಳದ ಕೆರೆಯ ಬಳಿ ಇದ್ದಿತೆಂದು ಒಪ್ಪುವುದರಿಂದ ಈ ಜಲಸಂಬಂಧಿ ಸ್ಥಳಸೂಚಕವನ್ನು ಪರಿಗಣಿಸಬಹುದು. ಇನ್ನು ಮುಂದೆ ಹೊಸದಾಗಿ ಶಾಸನವೊಂದು ಲಭ್ಯವಾಗಿ ಈ ನಿಷ್ಪತ್ತಿಯನ್ನು ಬೆಂಬಲಿಸಿದರೆ ಬೆಂಗಳೂರಿನ

ಬಗೆಗೆ ಹೆಣೆಯಲ್ಪಟ್ಟಿರುವ ಕಟ್ಟು ಕಥೆಗಳ ಸಮಸ್ಯೆ ಬಗೆ ಹರಿದಂತಾಗುತ್ತದೆ.

ಇಲ್ಲಿನ ಪ್ರಾಚೀನ ಸಾಂಸ್ಕೃತೀಕತೆಯನ್ನು ಸುವಿಸ್ತಾರಗೊಳಿಸಲು ಸಾಕಷ್ಟು ಆಧಾರಗಳು ಲಭ್ಯವಿಲ್ಲವಾದರೂ, ಇಲ್ಲಿನ ಸಾಮಾಜಿಕತೆಯನ್ನು ಹೆಣೆಯಲು ಆಧಾರಗಳಾಗಿ ಹಲವಾರು ಪ್ರಮುಖ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ದೊರೆತಿವೆ.

ಈ ನಗರದ ಬೇಗೂರಿನ ಶಾಸನವು (ಕಾಲ ಕ್ರಿ.ಶ.ಸುಮಾರು 890) ಪ್ರಮುಖವಾಗಿದ್ದು ಇತಿಹಾಸತಜ್ಞರಲ್ಲಿ ಈ ಬಗೆಗೆ ಹತ್ತು ಹಲವು ಚರ್ಚೆಗಳಾಗಿವೆ. ಆದುದರಿಂದ ಈ ವೀರಗಲ್ಲು ಶಾಸನದ ವಿಷಯವನ್ನು ಕೈಬಿಡಲಾಗಿದೆ.

ವೀರಗಲ್ಲುಗಳ ಪ್ರಕಾರಗಳಲ್ಲೇ ವಿಶಿಷ್ಟವಾದ ಒಂದು ವೀರಗಲ್ಲು ಸ್ಮಾರಕವನ್ನು ಈ ನಗರದ ಬನಶಂಕರಿ ಎರಡನೆ ಹಂತದಲ್ಲಿರುವ ನಾಗಲಕ್ಷ್ಮಿ ಕಲ್ಯಾಣ ಮಂಟಪದ ಬಳಿ ಕಾಣಬಹುದಾಗಿದೆ. ಈ ಸ್ಥಳಕ್ಕೆ ಪ್ರಾಚೀನ ನಾಮ ನಾಗಸಂದ್ರ ಎಂದಿದ್ದು, ನಾಗ ಎಂಬ ವ್ಯಕ್ತಿಯ ಹೆಸರಿನಲ್ಲಿ ಕೆರೆ ನಿರ್ಮಾಣವಾಗಿದ್ದನ್ನು ಸೂಚಿಸುತ್ತದೆ. ಇಲ್ಲಿದ್ದ ಕೆರೆ ಇತ್ತೀಚೆಗೆ ಬದಲಾವಣೆಯನ್ನು ಪಡೆದುಕೊಂಡಿದೆ. ಪೂರ್ವಾಭಿಮುಖವಾಗಿ ನಿಲ್ಲಿಸಿರುವ ಈ ಸ್ಮಾರಕ ಶಿಲೆಯು ನಾಲ್ಕು ಅಡಿ ಅಗಲ ನಾಲ್ಕು ಅಡಿ ಉದ್ದವಿದ್ದು ಎರಡು ಹಂತಗಳಲ್ಲಿ ನಿರ್ಮಾಣವಾಗಿದೆ. ವೀರಗಲ್ಲಿನ ಕೆಳಹಂತದಲ್ಲಿ ವೀರನೊಬ್ಬನು ತನ್ನ ಬಲಗೈಯಿಂದ ಬಿಲ್ಲನ್ನು ಹಿಡಿದು ಎಡಗೈಯಿಂದ ಬಾಣವನ್ನು ಬಿಲ್ಲಿಗೆ ಹೂಡಿ ಶಕ್ತಿಯುತವಾಗಿ ಎಳೆಯುತ್ತಾ ಜಿಂಕೆ (ಕಡವೆ?)ಯೊಂದರ ಮೇಲೆ ಪ್ರಯೋಗಿಸುತ್ತಿದ್ದಾನೆ. ಎಡಗಡೆಗೆ ಮುಖಮಾಡಿ ನಿಂತಿರುವ ಈ ಜಿಂಕೆಯ ಕೊಂಬುಗಳಲ್ಲಿ ಕವಲುಗಳಿರುವುದನ್ನು ಗುರುತಿಸಬಹುದಾಗಿದೆ. ವೀರನು ಹೂಡಿರುವ ಬಾಣದ ತುದಿಗೆ ತಾಗಿರುವಂತೆ ಸಣ್ಣ ಪ್ರಮಾಣದಲ್ಲಿ ಜಿಂಕೆಯನ್ನು ಚಿತ್ರದಲ್ಲಿ ಮೂಡಿಸಲಾಗಿದೆ. ಈ ವೀರಗಲ್ಲಿನಲ್ಲಿರುವ ವೀರನು ಬೇಡರು ತೊಡುತ್ತಿದ್ದಂತ ಉಡುಗೆಯನ್ನು ತೊಟ್ಟಿದ್ದು ಶಿರದಲ್ಲಿ ಅಗಲವಾಗಿರುವ ಪೇಟವಿದೆ, ಕಿವಿಯಲ್ಲಿ ಕುಂಡಲ ಗಳಿದ್ದು, ನಡುವಿನಲ್ಲಿ ಉದ್ದನೆಯ ಬಿಚ್ಚುಗತ್ತಿ ಇದೆ, ಕಾಲುಗಳಲ್ಲಿ ಕಡಗಗಳಿವೆ. ಈ ವೀರನು ಒಂದು ಗುಂಪಿನ ನಾಯಕನಾಗಿರುವ ಸಾಧ್ಯತೆಯಿದೆ. ಈತ, ಬೇಟೆಗೆ ಹೋಗಿ ಜಿಂಕೆಯೊಡನೆ ಹೋರಾಡಿ ಮರಣ ಹೊಂದಿದ್ದಾನೆ. ಸೌಮ್ಯ ಸ್ವಭಾವದ ಜಿಂಕೆಯೊಡನೆ ಮಾನವನು ಹೋರಾಡುವುದೆಂದರೇನು? ಎಂಬ ಪ್ರಶ್ನೆ ಎದುರಾಗುವುದು ಸಹಜ. ಆದರೆ ಇದಕ್ಕೆ ಪುಷ್ಠಿ ಕೊಡುವ ಘಟನೆಯೊಂದು ಇತ್ತೀಚೆಗೆ ಚಿತ್ರದುರ್ಗದ ಬಳಿಯಲ್ಲಿ ನಡೆದಿದ್ದು ಇದೂ ಸಹ ಸಹಜ ಘಟನೆಯಾಗಿದೆ. ಈ ವೀರಗಲ್ಲಿನ ಮೇಲು ಭಾಗದಲ್ಲಿ ಮಡಿದಿರುವ ಈ ವೀರನನ್ನು ಅಪ್ಸರೆಯರು ಚಾಮರಧಾರಿಣಿಯರಾಗಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಈ ಒಂದು ಲಕ್ಷಣವು ವೀರಗಲ್ಲುಗಳನ್ನು ಹಾಕಿಸುತ್ತಿದ್ದಂತಹ ಪ್ರಾಚೀನ ಲಕ್ಷಣವನ್ನು ಸೂಚಿಸುವುದರಿಂದ ಈ ವೀರಗಲ್ಲಿನ ಕಾಲಮಾನವನ್ನು ಕ್ರಿ.ಶ. ಸುಮಾರು ಹತ್ತನೆಯ ಶತಮಾನವೆಂದಿರಿಸಿ ಕೊಳ್ಳಬಹುದು. ಇಂದಿನ ಸಾರಕ್ಕಿಯು ಪ್ರಾಚೀನಕಾಲದಲ್ಲಿ ಸಾರಂಗ

ರಾಯ ಪಟ್ಟಣ, ಸಾರಂಗ ಪಟ್ಟಣ, ಸಾರವು ಎಂತೆಲ್ಲಾ ಕರೆಸಿಕೊಳ್ಳುವುದರಿಂದ "ನಾಗಸಂದ್ರ" ಮತ್ತು "ಸಾರಕ್ಕಿ"ಯ ನಡುವಣ ಪ್ರದೇಶದಲ್ಲಿ ಬಿಪುಲವಾಗಿ ಜಿಂಕೆಗಳು ನೆಲಸಿದ್ದವು. ಅಂತೆಯೇ ಬೇಡರ ಪಡೆಗಳು ಸಹ ಇಲ್ಲಿ ನೆಲಸಿದ್ದವು ಎಂದು ನಿರ್ಧರಿಸ ಬಹುದು.

ಕೃಷ್ಣರಾಜಪುರದ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯದ ಎದುರುಗಡೆಯ ಕೆರೆಯ ಅಂಚಿನಲ್ಲಿ ನಿಲ್ಲಿಸಿರುವ ವೀರಗಲ್ಲೊಂದು ಆರು ಅಡಿ ಎತ್ತರ ಆರು ಅಡಿ ಅಗಲವಿದೆ. ಈ ಕಲ್ಲಿನ ಮಧ್ಯ ಭಾಗದಲ್ಲಿ ಕಾಳಗದ ಚಿತ್ರಣವಿದೆ. ಇಬ್ಬರು ವೀರರು ಮಡಿದ ಒಬ್ಬಯೋಧ ಅಲ್ಲದೆ ಕುದುರೆಯೊಂದರ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿ ಇವುಗಳ ಚಿತ್ರಣ ವನ್ನು ಎತ್ತರ ಎತ್ತರಕ್ಕೆ ಎಳೆದು ಬಿಡಿಸಿರುವುದು ವಿಶೇಷವಾಗಿದೆ. ವೀರಗಲ್ಲಿನ ಎಡ ಭಾಗದಲ್ಲಿ ಕುದುರೆಯೊಂದು ಮಡಿದಿರುವ ಯೋಧನೊಬ್ಬನ ಶಿರದ ಮೇಲೆ ತನ್ನ ಮುಂಗಾಲನ್ನು ಎತ್ತಿ ಇಡುತ್ತಿದ್ದರೆ ಇನ್ನೊಂದು ಕಾಲನ್ನು ಮಡಿಸಿ ಮೇಲಕ್ಕೆ ಎತ್ತಿ ಹಿಡಿದಿದೆ. ಹಿಂಭಾಗದ ಎರಡೂ ಕಾಲುಗಳು ವೀರನನ್ನು ತುಳಿಯುತ್ತಿರುವಂತೆ ಚಿತ್ರಣವಿದೆ. ಈ ಚಿತ್ರಣ ದಲ್ಲಿನ ಮತ್ತೊಬ್ಬ ವೀರನು ತಾನು ಹಿಡಿದಿರುವ ಅಗಲವಾದ ಸಣ್ಣಕತ್ತಿಯಿಂದ ಕುದುರೆ ಯನ್ನು ಕೊಲ್ಲಲು ಹವಣಿ ಸುತ್ತಿದ್ದಾನೆ. ಭೂಮಿಯ ಮೇಲೆ ಬಿದ್ದಿರುವ ಯೋಧ ಕುದುರೆಯಿಂದ ಕೆಳಕ್ಕೆ ಬಿದ್ದವ ನಾಗಿದ್ದಾನೆ. ಕುದುರೆಯ ಬೆನ್ನಿನ ಭಾಗದಲ್ಲಿ ಮನುಷ್ಯ ಕುಳಿತು ಕೊಳ್ಳಲು ಚಂದ್ರದಾಕೃತಿಯ ಆಸನವಿದೆ. ಇಲ್ಲಿನ ಮತ್ತೊಬ್ಬ ವೀರನು ಕುದುರೆಯ ಕಡೆಗೆ ಮುಖ ಮಾಡಿ ಮುನ್ನುಗ್ಗುತ್ತಿದ್ದಾನೆ. ಬಲಗೈನಲ್ಲಿ ಕತ್ತಿ ಎಡಗೈನಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ವೀರಗಲ್ಲಿನಲ್ಲಿ ಅಲ್ಲಲ್ಲಿ ಬಾಣದ ರೇಖಾ ಚಿತ್ರಣಗಳಿವೆ. ಈ ವೀರಗಲ್ಲಿನಲ್ಲಿರುವ ವೀರರ ವೇಷ ಭೂಷಣಗಳು ಗಂಗರ ಕಾಲದ ಇನ್ನಿತರ ವೀರಗಲ್ಲುಗಳನ್ನು ಹೋಲುತ್ತವೆ. ಅಲ್ಲದೆ ಗಂಗರ ಕಾಲದ 3 ಸಾಲುಗಳ ಶಾಸನವು ಮೇಲಿನಿಂದ ಪ್ರಾರಂಭವಾಗಿ ಕಲ್ಲಿನ ಎಡಭಾಗದ ಕೆಳ ತುದಿಯವರೆವಿಗೂ ಮುಂದುವರೆದಿದೆ.

ಶಾಸನ

1. ಶ್ರೀಪುರುಷ ಮಹಾರಾಜರರಸುಗೆಯೆ ಕನ್ನರ....ರಡು.......
2. ಪೊರ್ಬಾರ್ಕರುರಾಳಿಪೊಸಲೂರರಲ್ಯೊಯನು ಮಾರೆಯನು ಟಿ
3. ಉರಟಿಶಿ.. ವಿಟಿದು ಬಿಟ್ಟ (E.C.IX BN 55)

ಗಂಗರ ಶ್ರೀ ಪುರುಷ ಮಹಾರಾಜನ ಕಾಲದಲ್ಲಿ ಮಾರೆಯನೆಂಬುವ ವ್ಯಕ್ತಿಯು ಊರನ್ನು ಉಳಿಸಿ ಶತೃಗಳಿಂದ ಹತನಾಗಿ ಬಿದ್ದ ವಿಷಯವನ್ನು ತಿಳಿಸುವ ಈ ಶಾಸನವು ಊರಳಿವಿನ ಪ್ರಕಾರಕ್ಕೆ ಸೇರಿದ್ದಾಗಿದೆ.ಬೆಂಗಳೂರಿನಲಿ ಈಗ ಉಳಿದಿರುವ ಗಂಗರ ಕಾಲದ ಲಿಪಿಯ ಒಂದು ಉತ್ತಮ ಶಾಸನ ಇದಾಗಿದೆ.

ಲಾಲ್ ಬಾಗ್ ನಲ್ಲಿರುವ ಕಾವಲು ಗೋಪುರದ ಬಂಡೆಯ ಬುಡದಲ್ಲಿ ಉತ್ತರ

ದಿಕ್ಕಿಗೆ ಮುಖ ಮಾಡಿರುವಂತೆ ನಿಲ್ಲಿಸಿರುವ ವೀರಗಲ್ಲು ಇದೆ. ನಾಲ್ಕುವರೆ ಅಡಿ ಅಗಲ ಮೂರು ಅಡಿ ಎತ್ತರವಿರುವ ಗ್ರಾನೈಟ್‌ಕಲ್ಲಿನ ಈ ವೀರಗಲ್ಲು ಒಂದೇ ಹಂತದಲ್ಲಿ ನಿರ್ಮಾಣ ವಾಗಿದೆ. ಇದರಲ್ಲಿ ಪುರುಷ ಮತ್ತು ಸ್ತ್ರೀ, ಇವರೀರ್ವರ ಚಿತ್ರಣವಿದೆ. ಪುರುಷನಾದ ವೀರನು ತನ್ನ ಎಡಗಾಲನ್ನು ಮುಂದೆ ಮಾಡಿ ತನ್ನ ಎರಡೂ ಕೈಗಳಲ್ಲಿ ಎದೆಯ ಭಾಗಕ್ಕೆ ಬರುವ ಹಾಗೆ ಉದ್ದನೆಯ ಈಟಿಯನ್ನು ಹಿಡಿದು ಹೋರಾಟ ನಡೆಸುತ್ತಿದ್ದಾನೆ. ವೀರನ ಚಿತ್ರಣದಲ್ಲಿ ಬಲಿಷ್ಟ ವಾದ ದೇಹವಿದ್ದು, ವೇಷ, ಭೂಷಣಗಳಿಂದ ದೇಹ ಅಲಂಕೃತವಾಗಿದೆ. ವೀರನ ಬಲ ಭಾಗ ದಲ್ಲಿ ಸ್ತ್ರೀಯೊಬ್ಬಳ ಚಿತ್ರವಿದೆ. ಈಕೆ ವೀರನ ಸತಿಯಾಗಿದ್ದು ಅಂದಿನ ಪದ್ಧತಿಯಂತೆ ಪತಿ ಮಡಿದ ಮೇಲೆ ತಾನೂ ಸಹ ಚಿತೆ ಏರಿ ಸಹಗಮನ ಪದ್ಧತಿ ಅನುಸರಿಸಿದ್ದಾಳೆ, ಈಕೆಯ ಚಿತ್ರಣವೂ ವೀರನಂತೆಯೆ ಸಮಪ್ರಮಾಣಿತವಾಗಿದ್ದು ತನ್ನ ಕೈಗಳಲ್ಲಿ ನಿಂಬೆಯ ಹಣ್ಣು ಮತ್ತು ಕನ್ನಡಿಯನ್ನು ಹಿಡಿದುಕೊಂಡಿದ್ದಾಳೆ. ಶಿರದಲ್ಲಿ ಹಿರಿದಾದ ತುರುಬಿದ್ದು ಉಡುಗೆಯೂ ಸಹ ಆಕರ್ಷಕವಾಗಿದೆ. ಈ ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಕೆತ್ತನೆಗಳಿದ್ದು ಇಡೀ ವೀರಗಲ್ಲು ಈಗ ರಕ್ಷಣೆಯಿಲ್ಲದೆ ಸೊರಗುತ್ತಿದೆ. ಹೋರಾಟದ ವಿವರಗಳು ಲಿಪಿಯ ಮೂಲಕ ಲಭ್ಯವಿಲ್ಲವಾಗಿದ್ದು ಹೆಚ್ಚಿನ ವಿಷಯ ತಿಳಿಯಲು ಅಡಚಣೆ ಆಗಿದೆ. ಆದರೂ ಇದೊಂದು ರಾಜಕಾರಣದ ವೀರಗಲ್ಲು ಎಂದು ಹೇಳಬಹುದಾಗಿದ್ದು ,ವೀರಗಲ್ಲುಗಳ ಲಕ್ಷಣದ ಆಧಾರದ ಮೇಲೆ ಇದರ ಪ್ರಾಚೀನತೆಯನ್ನು ಕ್ರಿ.ಶ. ಹತ್ತನೆಯ ಶತಮಾನವೆಂದು ಹೇಳಬಹುದಾಗಿದೆ.

ಇದೇ ಲಾಲ್‌ಬಾಗ್ ಗಾಜಿನ ಮನೆಯ ಎದುರಿಗಿರುವ ಬ್ಯಾಂಡ್‌ಸ್ಟ್ಯಾಂಡ್ ಬಳಿಯ ವೃತ್ತಕ್ಕೆ ಹೊಂದಿಸಿ ನಿಲ್ಲಿಸಿರುವ ಮತ್ತೊಂದು ವೀರಗಲ್ಲು ಐದು ಅಡಿ ಎತ್ತರ, ಮೂರು ಅಡಿ ಅಗಲವಿದೆ. ಎರಡು ಹಂತಗಳಲ್ಲಿ ಚಿತ್ರಿಸಿರುವ ಈ ವೀರಗಲ್ಲಿನ ಕಾಲಮಾನ ಸುಮಾರು ಕ್ರಿ.ಶ. 13ನೇ ಶತಮಾನವೆಂದು ಹೇಳಬಹುದಾಗಿದೆ. ಒಬ್ಬವೀರ ಮತ್ತು ಮೂರು ಜನ ಮಹಿಳೆಯರ ಚಿತ್ರ ಇಲ್ಲಿದೆ. ಒರ್ವ ಸ್ತ್ರೀಯೂ ಮಡಿದಿರುವ ವೀರನಿಗೆ ಛತ್ರಿ ಹಿಡಿದಿದ್ದಾಳೆ, ಮತ್ತಿಬ್ಬರು ಚಾಮರ ಬೀಸುತ್ತಿದ್ದಾರೆ. ವೀರನು ಕತ್ತಿ ಮತ್ತು ಗುರಾಣಿ ತನ್ನ ಎರಡು ಕೈಗಳಲ್ಲೂ ಹಿಡಿದಿದ್ದಾನೆ. ಈ ವೀರಗಲ್ಲಿನ ಎರಡನೇ ಹಂತದಲ್ಲಿ ಬಸವ ಮತ್ತು ಶಿವಲಿಂಗಗಳಿವೆ. ಇಲ್ಲಿಯೂ ವೀರನು ಯಾರೊಡನೆ ಹೋರಾಟಮಾಡಿದ ಎಂಬುದರ ಬಗ್ಗೆ ಲಿಪಿಯ ಆಧಾರವಿಲ್ಲ.

ಇಲ್ಲಿನ ಬಸವೇಶ್ವರ ವೃತ್ತದ ಬಳಿಯ ಓಣಿಮುನೇಶ್ವರ ದೇವಾಲಯದ ಹೊರಗೋಡೆಯ ಹಿಂಭಾಗದಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿರುವಂತೆ ಎರಡು ವೀರಗಲ್ಲುಗಳು ಕಂಡು ಬಂದಿವೆ. ಅಶ್ವತ್ಥಕಟ್ಟೆಯ ಮೇಲೆ ಬಲಭಾಗದಲ್ಲಿರುವ ವೀರಗಲ್ಲು ಎರಡೂವರೆ ಅಡಿ ಎತ್ತರ ಮತ್ತು ಎರಡೂವರೆ ಅಡಿ ಅಗಲವಾಗಿದೆ. ಅತ್ಯಂತ ದಪ್ಪನಾದ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿರುವ ಈ ಶಿಲ್ಪದಲ್ಲಿ ಪುರುಷ ಮತ್ತು ಮಹಿಳೆಯ ಚಿತ್ರಣವಿದೆ. ವೀರನು

ತನ್ನ ಬಲಗೈನಲ್ಲಿ ಕತ್ತಿಯನ್ನು ಹಿಡಿದಿದ್ದು ಎಡಗೈನಲ್ಲಿ ಸೊಂಟದಲ್ಲಿರುವ ಬಿಚ್ಚುಗತ್ತಿಯನ್ನು ಹಿಡಿದಿದ್ದಾನೆ. ಶಿರದಲ್ಲಿ ಕಿರೀಟ ಮಾದರಿಯ ವಸ್ತ್ರವಿದೆ. ಕಿವಿಯಲ್ಲಿ ಕುಂಡಲಗಳಿವೆ. ವಿಶೇಷವಾದ ಉಡುಗೆ ತೊಡುಗೆಗಳನ್ನು ಧರಿಸಿರುವ ಈತ ಯಾವುದೋ ಯುದ್ಧದಲ್ಲಿ ಹೋರಾಡಿ ಶತೃಗಳಿಂದ ಮಡಿದಿದ್ದಾನೆ. ಅಂದಿನ ಪದ್ಧತಿಯ ಪ್ರಕಾರ ಈತನ ಸತಿಯು ಚಿತೆ ಏರಿ ಸಹಗಮನ ಮಾಡಿ ಪತಿಯನ್ನು ಸಾವಿನಲ್ಲೂ ಹಿಂಬಾಲಿಸಿದ್ದಾಳೆ. ಈಕೆಯ ಚಿತ್ರಣದಲ್ಲಿ ತನ್ನ ಎರಡೂ ಕೈಗಳನ್ನು ಮೇಲೆ ಎತ್ತಿ ಹಿಡಿದಿದ್ದು ಒಂದು ಕೈನಲ್ಲಿ ಕನ್ನಡಿ ಮತ್ತೊಂದು ಕೈನಲ್ಲಿ ನಿಂಬೆಯ ಹಣ್ಣನ್ನು ಹಿಡಿದಿದ್ದಾಳೆ. ನೃತ್ಯ-ಭಂಗಿಯಲ್ಲಿರುವ ಈ ಸ್ತ್ರೀಯು ಶಿರದಲ್ಲಿ ತುರುಬನ್ನು ಹೊಂದಿದ್ದು ಅಲಂಕಾರಿಕವಾದ ಉಡುಗೆ ತೊಡುಗೆಗಳನ್ನು ಧರಿಸಿದ್ದಾಳೆ. ಸೂರ್ಯ ಚಂದ್ರರನ್ನು ಈ ಶಿಲ್ಪದ ಮೇಲ್ಭಾಗದಲ್ಲಿ ಕೆತ್ತಿದ್ದು ಮಧ್ಯದಲ್ಲಿ ಅಲಂಕಾರವನ್ನು ಬಿಡಿಸಲಾಗಿದೆ.

ಅಶ್ವತ್ಥಕಟ್ಟೆಯ ಎಡಭಾಗದಲ್ಲಿ ಮತ್ತೊಂದು ವೀರಗಲ್ಲು ಇದ್ದು ಇದು ಮೂರು ಅಡಿ ಎತ್ತರ, ಎರಡೂವರೆ ಅಡಿ ಅಗಲವನ್ನು ಹೊಂದಿದೆ. ಈ ಶಿಲ್ಪದಲ್ಲಿಯೂ ಸಹ ವೀರ ಮತ್ತು ಆತನ ಸತಿಯ ಚಿತ್ರಣವಿದೆ. ವೀರನು ತನ್ನ ಬಲಗೈನಲ್ಲಿ ಕತ್ತಿಯನ್ನು ಹಿಡಿದಿದ್ದು ಎಡಗೈನಲ್ಲಿ ಸೊಂಟದಲ್ಲಿರುವ ಬಿಚ್ಚುಗತ್ತಿಯನ್ನು ಹಿಡಿದಿದ್ದಾನೆ. ಶಿರದಲ್ಲಿ ಎತ್ತಿಕಟ್ಟಿದ ತುರುಬನ್ನು ಹೊಂದಿದ್ದು ಉಡುಗೆ ತೊಡುಗೆಯನ್ನು ಧರಿಸಿದ್ದಾನೆ. ಈತನೂ ಸಹ ಯುದ್ಧ ಒಂದರಲ್ಲಿ ಹೋರಾಡಿ ಶತೃಗಳಿಂದ ಮಡಿದಿದ್ದಾನೆ. ಹೋರಾಟದ ಇನ್ನಿತರ ವಿವರಗಳು ಈ ಶಿಲ್ಪದಲ್ಲಿ ಲಭ್ಯವಿಲ್ಲ. ಈತ ಮಡಿದ ಕಾರಣಕ್ಕಾಗಿ ಪರಲೋಕದಲ್ಲಿಯೂ ಹಿಂಬಾಲಿಸಲು ಈತನ ಮಡದಿಯು ಸತಿ ಸಹಗಮನ ಪದ್ಧತಿ ಅನುಸರಿಸಿದ್ದಾಳೆ. ಈಕೆಯ ಚಿತ್ರಣದಲ್ಲಿ ಈಕೆಯು ತನ್ನೆರಡೂ ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದು ನೃತ್ಯದ ಭಂಗಿಯಲ್ಲಿದ್ದಾಳೆ. ತನ್ನ ಬಲದ ಕೈನಲ್ಲಿ ನಿಂಬೆಯಹಣ್ಣನ್ನು ಎಡದ ಕೈನಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಈಕೆಯು ಧರಿಸಿರುವ ಉಡುಗೆಯು ಅಲಂಕಾರಯುತವಾಗಿದೆ. ಈ ಮೇಲಿನ ವೀರಗಲ್ಲುಗಳಲ್ಲಿನ ಸ್ತ್ರೀಯರ ಚಿತ್ರಣವು ವಿಭಿನ್ನವಾಗಿದ್ದು ಅಂದು ಸ್ತ್ರೀಯರು ಚಿತೆ ಏರುವ ಮೊದಲು ಹೊರಡುತ್ತಿದ್ದ ಮೆರವಣಿಗೆಯ ದೃಶ್ಯವಾಗಿದೆ. ಕಾಲಮಾನದ ದೃಷ್ಟಿಯಿಂದ ಈ ಎರಡೂ ವೀರಗಲ್ಲುಗಳ ಕಾಲವನ್ನು ಸುಮಾರು ಕ್ರಿ.ಶ. ಹದಿನೈದನೆಯ ಶತಮಾನವೆಂದು ಹೇಳಬಹುದು.

ರೇಸ್‌ಕೋರ್ಸ್ ರಸ್ತೆಯಲ್ಲಿನ ವೃತ್ತದೊಳಗಿನ ಒಂದು ಮರದ ಕೆಳಗೆ ಮಾಸ್ತಿಕಲ್ಲೊಂದು ಇದ್ದು, ಇದನ್ನು ಕಪ್ಪು ಬಗೆಯ ಗ್ರಾನೈಟ್ ಕಲ್ಲಿನಿಂದ ಮಾಡಲಾಗಿದೆ. ಎರಡು ಕಾಲು ಅಡಿಗಳ ಉದ್ದ ಒಂದುವರೆ ಅಡಿಗಳ ಅಗಲವಿದ್ದು ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಚಿತ್ರಗಳಿವೆ.

ಕಲ್ಲಿನ ಭಾಗದಲ್ಲಿ ಸ್ತ್ರೀ ಚಿತ್ರವನ್ನು ಬಿಡಿಸಲಾಗಿದ್ದು ಈ ಸ್ತ್ರೀಯು ಪಾರ್ಶ್ವಮುಖಿಯ ಭಂಗಿಯುಲ್ಲಿದ್ದಾಳೆ. ಈಕೆಯು ತನ್ನ ಎಡ ಭಾಗದಲ್ಲಿರುವ ಪುರುಷನನ್ನು ನೋಡುತ್ತಿದ್ದಾಳೆ. ಶಿರದಲ್ಲಿ ಹಿರಿದಾದ ತುರುಬು ಮತ್ತು ಅಂದವಾದ ಕಣ್ಣೊಂದನ್ನು ಗುರುತಿಸಬಹುದಾಗಿದೆ.

ಎಡದ ಕೈನಲ್ಲಿ ನಿಂಬೆಯ ಹಣ್ಣನ್ನು ಎತ್ತಿ ಹಿಡಿದಿದ್ದರೆ ಬಲಗೈಯನ್ನು ಇಳಿಬಿಟ್ಟಿರುವಂತೆ ಚಿತ್ರಿಸಲಾಗಿದೆ. ಕಿವಿಯಲ್ಲಿ ಆಭರಣಗಳು, ಕೊರಳಲ್ಲಿ ಒಂದು ಪದಕವಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ, ತೋಳುಗಳಲ್ಲಿ ತೋಳುಬಂದಿ ಇದ್ದು ದೇಹದ ಪ್ರಮಾಣದ ಚಿತ್ರಣ ಸಮಪ್ರಮಾಣವಾಗಿ ಬಂದಿಲ್ಲ. ಆದರೂ ಈಕೆಯು ಧರಿಸಿರುವ ಉಡುಗೆ ಇಂದಿನ ಆಧುನಿಕ ಉಡುಗೆಯೊಂದನ್ನು ನೆನಪಿಗೆ ತರುತ್ತದೆ.

ಈಕೆಯ ಎಡಬದಿಯಲ್ಲಿರುವ ಪುರುಷನ ಚಿತ್ರಣಕ್ಕಿಂತ ಸ್ವಲ್ಪ ದೊಡ್ಡದಾಗಿದೆ. ಪುರುಷನೂ ಸಹ ತನ್ನ ಬಲಗಡೆಯಲ್ಲಿರುವ ಸ್ತ್ರೀಯನ್ನು ಪಾರ್ಶ್ವಮುಖವಾಗಿ ನೋಡುತ್ತಿದ್ದಾನೆ. ಈತನಿಗೂ ಶಿರದಲ್ಲಿ ತುರುಬು ಇದ್ದು, ಮುಖದಲ್ಲಿ ಕಣ್ಣು, ಮೂಗು, ಬಾಯಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈತನು ತನ್ನ ಬಲಗೈನಲ್ಲಿ ದೊಡ್ಡದಾದ ಕತ್ತಿಯನ್ನು ಮೇಲೆ ಎತ್ತಿ ಹಿಡಿದಿದ್ದು, ಎಡದ ಕೈನಲ್ಲಿ ಗುರಾಣಿಯೊಂದನ್ನು ಹಿಡಿದಿದ್ದಾನೆ. ಈತನು ಧರಿಸಿರುವ ವಸ್ತ್ರಗಳನ್ನು ಶಿಲ್ಪದಲ್ಲಿ ಗುರುತಿಸಬಹುದಾಗಿದೆ. ಈತನು ಸಹ ಯುದ್ಧ ವೊಂದರಲ್ಲಿ ಶತ್ರುಗಳೊಡನೆ ಹೋರಾಡಿ ಹತನಾಗಿದ್ದಾನೆ. ಈತನ ಹೆಂಡತಿಯೂ ಸಹ ಚಿತೆ ಏರಿ ಸಹಗಮನ ಗೈದಿದ್ದಾಳೆ.

ಮಾಸ್ತಿಕಲ್ಲುಗಳಲ್ಲಿ ಸತಿಪತಿಯರು ಮುಖಾಮುಖಿ ನೋಡುತ್ತಿರುವ ಶಿಲ್ಪಗಳು ಲಭ್ಯವಾಗುವುದು ಅತಿ ವಿರಳ. ಆದರೆ ಇಲ್ಲಿ ಅಂತಹ ದೃಶ್ಯ ಇರುವುದು ವಿಶೇಷ. ಮಾಸ್ತಿ ಕಲ್ಲುಗಳ ಆಧಾರದ ಲಕ್ಷಣದ ಆಧಾರದ ಮೇಲೆ ಇದರ ಕಾಲಮಾನವನ್ನು ಕ್ರಿ.ಶ. 16ನೇ ಶತಮಾನದ ಆರಂಭವೆಂದು ಹೇಳಬಹುದು.

ಜವಾಹರ್‌ಲಾಲ್ ನೆಹರೂ ತಾರಾಲಯದ ಹೊರಗೋಡೆಯ ಬಳಿಯಲ್ಲಿ ಮಾಸ್ತಿಕಲ್ಲೊಂದು ಪತ್ತೆಯಾಗಿ ಪ್ರಕಟವಾಗಿದೆ.

ಕಲಾಸಿಪಾಳ್ಯಂನಲ್ಲಿನ ಅಯ್ಯಪ್ಪದೇವಾಲಯದ ಬಳಿ ಬೃಂದಾವನದ ವೇದಿಕೆಯ ಮೇಲೆ ಮುನೇಶ್ವರ ದೇವರ ವಿಗ್ರಹದ ಜೊತೆಯಲ್ಲಿ ಇರಿಸಿ ಪೂಜಿಸಲ್ಪಡುತ್ತಿರುವ ಪ್ರಾಚೀನ ವೀರಗಲ್ಲೊಂದು ಎರಡೂವರೆ ಅಡಿಗಳ ಎತ್ತರವಿದ್ದು ಗ್ರಾನೈಟ್‌ಕಲ್ಲಿನಲ್ಲಿ ಮೂಡಿಸಲಾಗಿದೆ. ಇದರಲ್ಲಿ ವೀರನೊಬ್ಬನ ಚಿತ್ರಣವನ್ನು ಮೂಡಿಸಲಾಗಿದೆ. ಇಲ್ಲಿನ ವೀರನ ಮುಖಲಕ್ಷಣವು ಅಂದವಾಗಿದ್ದು ತನ್ನಬಲದ ಕೈನಲ್ಲಿ ಕತ್ತಿಯನ್ನು ಶಿರೋಭಾಗಕ್ಕೆ ಬರುವಂತೆ ಎತ್ತಿ ಹಿಡಿದಿದ್ದಾನೆ. ಎಡದ ಕೈನಲ್ಲಿ ಗುರಾಣಿಯನ್ನು ಬೆನ್ನಿನ ಹಿಂಭಾಗಕ್ಕೆ ಬರುವಂತೆ ಹಿಡಿದಿದ್ದಾನೆ. ನಡುವಿನಲ್ಲಿ ಬಿಚ್ಚುಗತ್ತಿ, ಕಿವಿಯಲ್ಲಿ ಕುಂಡಲಗಳು, ಶಿರದಲ್ಲಿ ಎತ್ತಿ ಕಟ್ಟಿರುವ ತುರುಬು, ಎದೆಯ ಮೇಲೆ ಮಣಿಸರ, ಮುಂಗೈ ಮತ್ತು ತೋಳುಗಳಲ್ಲಿ ಕಡಗಗಳನ್ನು ಧರಿಸಿರುವುದೇ ಅಲ್ಲದೆ, ವೀರಗಚ್ಚೆಯ ಉಡುಪನ್ನು ಧರಿಸಿದ್ದಾನೆ. ಈ ಕಲ್ಲಿನಲ್ಲಿಯೂ ಸಹ ಹೋರಾಟದ ಇತರ ಯಾವ ವಿವರಗಳನ್ನೂ ಮೂಡಿಸಿಲ್ಲವಾಗಿದ್ದು ಮಡಿದ ಇಲ್ಲಿನ ವೀರನು ಕದನವೊಂದರಲ್ಲಿ ಶತ್ರುಗಳೊಡನೆ ಹೋರಾಡಿ ಮಡಿದಿದ್ದಾನೆ. ಈ ವೀರಗಲ್ಲೂ ಸಹ ಸುಮಾರು ಕ್ರಿ.ಶ. 15ನೆಯ

ಶತಮಾನಕ್ಕೆ ಸೇರಿದುದು ಎಂದು ಹೇಳಬಹುದು. ಇದೇ ಬಗೆಯ ಬಿಡಿ ಬಿಡಿ ವೀರಗಲ್ಲುಗಳು ನಾನಾ ಪ್ರಕಾರವಾಗಿ ಇಂದಿನ ಸಂಪಂಗಿರಾಮನಗರದ ಬಳಿಯ ಬೀರೇದೇವರ ದೇವಾಲಯದ ಆವರಣದಲ್ಲೂ, ಬಸವನಗುಡಿಯ ದೊಡ್ಡ ಬಸವೇಶ್ವರ ದೇವಾಲಯದ ಆವರಣದಲ್ಲೂ ಮತ್ತು ಸೂಪರ್‌ಟಾಕೀಸ್ ಬಳಿಯ ಬೀರೇದೇವರಗುಡಿಯ ಬಳಿಯೂ ನೂರಾರು ಕಲ್ಲುಗಳ ಚಿತ್ರಣವನ್ನು ಕಾಣಬಹುದಾಗಿದ್ದು ಇವು ವೀರಗಾರರ ಗುಡಿಗಳು ಎಂತಲೇ ಕರೆಸಿಕೊಂಡಿವೆ. ಆದುದರಿಂದ 'ಈ ಸ್ಥಳಗಳಲ್ಲಿ ಯುದ್ಧಗಳು ನಡೆದು ಮಡಿದ ಯೋಧರ ಸ್ಮಾರಕಗಳಾಗಿ ನಿರ್ಮಿಸಲ್ಪಟ್ಟಿವೆ.'*

ಕೇಂದ್ರ ರೈಲ್ವೆ ನಿಲ್ದಾಣದ ಬಳಿಯ ರೈಲ್ವೆ ನಿವಾಸಗಳ ಬಳಿಯಲ್ಲಿನ ಆಲದ ಮರವೊಂದರ ಬಳಿಯಲ್ಲಿ ತುರುಗಾಳಗದ ವೀರಗಲ್ಲೊಂದು ಇದ್ದು ಒಂದೂವರೆ ಅಡಿ ಎತ್ತರ ಮತ್ತು ಅಷ್ಟೆ ಅಗಲವನ್ನು ಉಳ್ಳದ್ದಾಗಿದೆ. ಈ ವೀರಗಲ್ಲಿನಲ್ಲಿ ತುರುವು ತನ್ನ ಬಲಗಾಲನ್ನು ಮೇಲೆ ಎತ್ತಿ ಹೆಜ್ಜೆ ಇಡಲು ಸಜ್ಜಾಗಿರುವಂತೆ ಚಿತ್ರಣವಿದ್ದು, ಸಮಪ್ರಮಾಣದ ದೇಹ ಚಿತ್ರಣದಿಂದಾಗಿ ಚೆನ್ನಾಗಿ ಮೂಡಿ ಬಂದಿದೆ. ಈ ತುರುವು ಬಲಭಾಗಕ್ಕೆ ಮುಖ ಮಾಡಿರುವುದರಿಂದ ಶತ್ರುಗಳ ಧಾಳಿಯಿಂದ ವೀರನು ಹೋರಾಟದ ಮೂಲಕ ವಿಮುಕ್ತಿಗೊಳಿಸಿದ್ದಾನೆ. ಹಿಂಬದಿಯಲ್ಲಿಯೇ ವೀರನ ಚಿತ್ರಣವಿದ್ದು ತನ್ನ ಎಡದ ಕೈನಿಂದ ನಡುವಿನಲ್ಲಿರುವ ಬಿಚ್ಚುಗತ್ತಿಯನ್ನು ಹಿಡಿದುಕೊಂಡಿದ್ದಾನೆ. ಬಲದ ಕೈನಲ್ಲಿರುವ ಆಯುಧದ ಸ್ವಲ್ಪಭಾಗವು ಒಡೆದುಹೋಗಿದ್ದು, ಅದು ಕತ್ತಿ ಎಂದು ಹೇಳಬಹುದಾಗಿದೆ. ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದು ಕೊರಳಿನಲ್ಲಿ ಮಣಿಸರವಿದೆ. ಶತ್ರುಗಳು ಅಪಹರಿಸಲೆತ್ನಿಸಿದ ಗೋವನ್ನು ಬಿಡಿಸುವಲ್ಲಿ ವೀರನೊಬ್ಬ ಯಶಸ್ವಿಯಾಗಿದ್ದು ತಾನು ಮಾತ್ರ ಹೋರಾಟದಲ್ಲಿ ಮಡಿದಿದ್ದಾನೆ. ಈ ವೀರಗಲ್ಲಿನಲ್ಲಿಯೂ ಹೋರಾಟದ ಇತರ ಚಿತ್ರಣವು ಇಲ್ಲವಾಗಿದ್ದು ಹೆಚ್ಚಿನ ಮಾಹಿತಿ ದೊರಕದ್ದಾಗಿದೆ. ಕ್ರಿ.ಶ. ಸುಮಾರು 14ನೆ ಶತಮಾನದ ಅಂತ್ಯಭಾಗಕ್ಕೆ ಸೇರುವ ವೀರಗಲ್ಲಿನ ಮೇಲುಭಾಗ ಒಡೆದು ಹೋಗಿರಲಾಗಿ ವೀರನ ಶಿರೋಭಾಗ ಇಲ್ಲವಾಗಿದೆ. ಇದೇ ಪರಿಸರದ ಎಂ.ಜಿ. ಕಾಲೋನಿಯ ಆರಳಿಮರದ ಬಳಿ ಮಾಸ್ತಿಕಲ್ಲೊಂದು ಇದ್ದು, ಇದನ್ನು ರೈಲ್ವೆ ಹಳಿಗಳ ಬಳಿಯಿಂದ ಇಲ್ಲಿಗೆ ಸಾಗಿಸಲಾಗಿದೆ. ಮೂರು ಅಡಿಗಳ ಎತ್ತರ ಎರಡೂವರೆ ಅಡಿಗಳ ಅಗಲದ ಗ್ರಾನೈಟ್‌ಕಲ್ಲಿನ ಈ ಶಿಲ್ಪದಲ್ಲಿ ನಾಲ್ವರು ಸ್ತ್ರೀಯರು ಸತಿ ಹೋಗುವ ಘಟನೆಯನ್ನು ನಿರೂಪಿಸಿರುವುದು ಮಹತ್ವಪೂರ್ಣವಾಗಿದೆ. ಎರಡು ಹಂತಗಳಲ್ಲಿ ಮೂಡಿಸಿರುವ ಈ ಶಿಲ್ಪದಲ್ಲಿ ಕೆಳಹಂತದಲ್ಲಿ ಇಬ್ಬರು ಸ್ತ್ರೀಯರು ತಮ್ಮ ಬಲದ ಕೈಗಳನ್ನು ಮೇಲೆ ಎತ್ತಿ ಅಭಯಹಸ್ತದಂತೆ ಹಿಡಿದಿದ್ದಾರೆ. ಮೇಲಿನ ಹಂತದಲ್ಲಿ ಇಬ್ಬರು ಸ್ತ್ರೀಯರು ಸಹ ಇದೇ ರೀತಿಯಲ್ಲಿ ನಿಂತಿದ್ದಾರೆ. ಈ ಹಂತದಲ್ಲಿ

---

*ಬೆಂಗಳೂರಿನ ಒಂದು ಮಾಸ್ತಿ ಶಿಲ್ಪ, ಒಂದು ಟಿಪ್ಪಣಿ. [illegible] (ತ್ರೈಮಾಸಿಕ) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ (ರಿ) ಚಿತ್ರದುರ್ಗ ಸಂಪುಟ 6 ಸಂಚಿಕೆ 3-4 ಪುಟ 59-60

ವಾದ್ಯಗಾರನಾದ ಕುಬ್ಜನ ಚಿತ್ರಣವಿದೆ. ಇವರ ಬಲತುದಿಯಲ್ಲಿ ವ್ಯಕ್ತಿಯೊಬ್ಬನು ಕುಳಿತಿರುವ ಚಿತ್ರಣವಿದೆ. ಈ ಸ್ತ್ರೀಯರ ಪತಿಯು ಪ್ರಮುಖ ವ್ಯಕ್ತಿಯಾಗಿದ್ದು ಹೋರಾಟ ಒಂದರಲ್ಲಿ ಶತ್ರುಗಳೊಡನೆ ಹೋರಾಡಿ ಮಡಿದಿದ್ದಾನೆ. ಈತನ ಸತಿಯರು ಚಿತೆ ಏರಿ ಸಹಗಮನ ಗೈದಿದ್ದಾರೆ, ಸ್ಥಳೀಯ ಜನತೆಯ ಧಾಳಿಯಿಂದಾಗಿ ಹಲವಾರು ಕಡೆ ಒಡೆದು ಹೋಗಿರುವ ಈ ಶಿಲ್ಪವೂ ಸಹ ಕ್ರಿ.ಶ. 15ನೇ ಶತಮಾನಕ್ಕೆ ಸೇರಿದುದಾಗಿದೆ.

ಚಾಮರಾಜಪೇಟೆಯ ಅಪ್ಪುರಾವ್ ರಸ್ತೆಯ ಅರಳಿಮರದ ಕಟ್ಟೆಯ ಬಳಿ ವೀರಗಲ್ಲೊಂದು ಇದ್ದು ಮೂರು ಅಡಿ ಎತ್ತರ, ಎರಡು ಅಡಿ ಅಗಲವಾದ ಗ್ರಾನೈಟ್‌ಕಲ್ಲಿನ ಶಿಲ್ಪವಾಗಿದೆ. ಈ ವೀರಗಲ್ಲಿನಲ್ಲಿ ಓರ್ವ ವೀರ ಮತ್ತು ಆತನ ಇಬ್ಬರು ಸ್ತ್ರೀಯರ ಚಿತ್ರಣವಿದೆ. ವೀರನು ಕಲ್ಲಿನ ಎಡಭಾಗದಲ್ಲಿ ವೀರತನದ ಭಂಗಿಯಲ್ಲಿ ನಿಂತಿದ್ದು ತನ್ನ ಎರಡೂ ಕೈಗಳಿಂದ ಉದ್ದನೆಯ ಈಟಿಯೊಂದನ್ನು ಹಿಡಿದಿದ್ದಾನೆ. ಶಿರದ ಮೇಲೆ ಎತ್ತಿಕಟ್ಟಿರುವ ತುರುಬು, ಕಿವಿಯಲ್ಲಿ ಕುಂಡಲಗಳು, ಕಾಲುಗಳಲ್ಲಿ ಕಡಗಗಳು ತೋಳು ಮತ್ತು ಮುಂಗೈಗಳಲ್ಲಿ ಬಂದಿಗಳನ್ನು ಧರಿಸಿದ್ದು ಕೊರಳಲ್ಲಿ ಮಣಿಸರವಿದೆ. ಈ ವೀರನ ಚಿತ್ರಣವು ಲಾಲ್‌ಬಾಗ್ ನಲ್ಲಿರುವ ಕೆಂಪೇಗೌಡನ ಕಾವಲುಗೋಪುರದ ಬಳಿಯ ವೀರಗಲ್ಲಿನ ವೀರನ ಚಿತ್ರಣವನ್ನು ಹೋಲುತ್ತದೆ.

ವೀರನ ಬಲಬದಿಯಲ್ಲಿ ಇಬ್ಬರು ಸ್ತ್ರೀಯರ ಚಿತ್ರಣವಿದ್ದು ಅವರು ತಮ್ಮ ಬಲ ಬದಿಗೆ ಬರುವಂತೆ ಶಿರದ ತುರುಬುಗಳನ್ನು ಎತ್ತಿಕಟ್ಟಿದ್ದಾರೆ. ಕಿವಿಗಳಲ್ಲಿ ಆಭರಣಗಳು, ತೋಳು ಮತ್ತು ಮುಂಗೈಗಳಲ್ಲಿ ಕಡಗಗಳನ್ನು ಧರಿಸಿದ್ದಾರೆ. ಉಡಿಗೆಯ ಅಲಂಕಾರ ಆಕರ್ಷಕವಾಗಿ ಮೂಡಿ ಬಂದಿದೆ. ಇವರೀರ್ವರೂ ಸಹ ತಮ್ಮ ಬಲದ ಕೈಗಳನ್ನು ಎತ್ತಿ ಹಿಡಿದಿದ್ದು ವಸ್ತುವೊಂದನ್ನು ಕೈಗಳಲ್ಲಿ ಹಿಡಿದಿರುವಂತಿದೆ (ಹೂಮಾಲೆ?) ಎಡದ ಕೈಗಳನ್ನು ಇಳಿಬಿಟ್ಟಿರುವ ಹಾಗೆ ಚಿತ್ರ ಬಿಡಿಸಲಾಗಿದೆ. ವೀರಗಲ್ಲಿನ ಮೇಲುಭಾಗದಲ್ಲಿ ಅಲಂಕಾರವನ್ನು ಮೂಡಿಸಲಾಗಿದ್ದು ಈ ಅಲಂಕಾರವು ಬಸವೇಶ್ವರ ವೃತ್ತದ ಬಳಿಯ ಓಣಿ ಮುನೇಶ್ವರ ದೇವಾಲಯದ ಬಳಿಯಲ್ಲಿರುವ ವೀರಗಲ್ಲುಗಳ ಅಲಂಕಾರವನ್ನು ಹೋಲುತ್ತದೆ.

ಇಲ್ಲಿಯೂ ಸಹ ಇನ್ನೂ ಹೆಚ್ಚಿನ ಚಿತ್ರಣವು ಲಭ್ಯವಿಲ್ಲವಾಗಿದ್ದು ವೀರನು ತನ್ನ ಶತ್ರುಗಳ ಜೊತೆ ಕಾದಾಡಿ ಮಡಿದಿದ್ದಾನೆ. ಈತನ ಇಬ್ಬರು ಸತಿಯರು ಚಿತೆ ಏರಿ ಸಹಗಮನ ಗೈದಿದ್ದಾರೆ. ಪ್ರಾಚೀನತೆಯಿಂದ ಈ ವೀರಗಲ್ಲೂ ಸಹ ಕ್ರಿ.ಶ. ಸುಮಾರು 15ನೆಯ ಶತಮಾನವೆಂದು ಹೇಳಬಹುದಾಗಿದೆ.

ಕೆಂಗೇರಿಯ ಮುಖ್ಯರಸ್ತೆಯಲ್ಲಿನ ವಾಟರ್‌ಟ್ಯಾಂಕ್ ಬಳಿಯಲ್ಲೊಂದು ವೀರಗಲ್ಲು ಇದ್ದು 8 ಅಡಿ ಎತ್ತರ 5 ಅಡಿ ಅಗಲವಾಗಿದೆ. ಒಂದೇಸ್ತರದಲ್ಲಿ ಎರಡು ಚಿತ್ರಣಗಳನ್ನು ಇದರಲ್ಲಿಮೂಡಿಸಲಾಗಿದ್ದು, ಹೋರಾಟದ ಚಿತ್ರಣದಲ್ಲಿ ಇಲ್ಲಿನ ವೀರನು ವೀರಾವೇಶದಿಂದ ತನ್ನ ಕಾಲನ್ನು ಮುಂದು ಮಾಡಿ ಎಡಗೈಯಿಂದ ಶತ್ರುವಿನ ಶಿರೋಮುಡಿಯನ್ನು

ಹಿಡಿದುಕೊಂಡು ಬಲಗೈನಲ್ಲಿ ಹಿಡಿದಿರುವ ಬೃಹತ್ ಖಡ್ಗದಿಂದ ಇರಿಯುತ್ತಿದ್ದಾನೆ. ಈತನ ನಡುವಿನಲ್ಲಿ ಉದ್ದನೆಯ ಖಡ್ಗವೊಂದು ಇದೆ. ವೀರನ ಹಿಡಿತಕ್ಕೆ ಸಿಕ್ಕಿ ನರಳುತ್ತಿರುವ ಶತ್ರುವಿನ ಚಿತ್ರಣವು ಪುಟ್ಟ ಪ್ರಮಾಣದಲ್ಲಿದ್ದು ಈತನು ಯಾವುದೇ ಪ್ರತಿಕ್ರಿಯೆಯನ್ನು ತೋರಿಸದಿರುವಂತೆ ಚಿತ್ರಣವಿರುವುದು ವಿಶೇಷವಾಗಿದೆ. ಆದರೂ ಈ ಹೋರಾಟದಲ್ಲಿ ವೀರನು ಹತನಾಗಿದ್ದಾನೆ. ಈ ಕುರಿತು ವೀರಗಲ್ಲಿನಲ್ಲಿ ಖಚಿತವಾದ ಸೂಚನೆಗಳು ಇಲ್ಲ. ವೀರನು ಹಲವಾರು ಸೈನಿಕರನ್ನು ಕೊಂದು ಶತೃಗಳ ಬಾಣಕ್ಕೆ ತುತ್ತಾಗಿರುವಂತೆ ಕಾಣುತ್ತದೆ. ಈತನ ಹಿಂಭಾಗದಲ್ಲಿ ಬೃಹತ್ತಾದ ಬಾಣದ ಗುರುತೊಂದನ್ನು ಮೂಡಿಸಲಾಗಿದೆ. ಕಲ್ಲಿನ ಮೇಲುಭಾಗದಲ್ಲಿ ಮಡಿದಿರುವ ಈ ವೀರನನ್ನು ಅಪ್ಸರೆಯರಿಬ್ಬರು ಚಾಮರ ಧಾರಿಣಿಯರಾಗಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಕ್ರಿ.ಶ. ಸುಮಾರು 10ನೇ ಶತಮಾನಕ್ಕೆ ಸೇರುವ ಈ ವೀರಗಲ್ಲು ಗಂಗ ಅರಸರ ಆಳ್ವಿಕೆಯ ಕಾಲಮಾನಕ್ಕೆ ಸೇರಿದುದಾಗಿದೆ.

ಸಾರಮು ಎಂದು ಕ್ರಿ.ಶ. ಸುಮಾರು 9ನೇ ಶತಮಾನದ ಬೇಗೂರು ಶಾಸನದಲ್ಲಿ ಉಕ್ತವಾಗಿರುವ ಇಂದಿನ ಸಾರಕ್ಕಿಯ ರಾಜಶೇಖರ ನರ್ಸಿಂಗ್‌ಹೋಂನ ಹಿಂಭಾಗದಲ್ಲಿ ಮಾಸ್ತಿಕಲ್ಲೊಂದು ಉಳಿದುಬಂದಿದ್ದು 120 ಸೆಂ.ಮಿ. ಎತ್ತರ ಮತ್ತು ಅಷ್ಟೆ ಅಗಲವನ್ನು ಹೊಂದಿದೆ. ಎರಡು ಹಂತಗಳಲ್ಲಿ ಚಿತ್ರಣ ಮೂಡಿಸಿರುವ ಈ ಗ್ರಾನೈಟ್‌ಕಲ್ಲಿನ ಶಿಲ್ಪದಲ್ಲಿ ಮೊದಲ ಹಂತದಲ್ಲಿ ರಾಜನು ಯುದ್ಧಕ್ಕಾಗಿ ಹೊರಡುವ ಮುನ್ನಿನ ಕ್ಷಣದ ಚಿತ್ರಣವಿದೆ. ರಾಜನು ತನ್ನ ಒಡ್ಡೋಲಗದ ಮೇಲೆ ಪಾರ್ಶ್ವರೀತಿಯಲ್ಲಿ ಕುಳಿತು ಹಿಂಬದಿಯ ದಿಂಬಿಗೆ ಒರಗಿ ಕಾಲಮೇಲೆ ಕಾಲುಹಾಕಿ ಠೀವಿಯಿಂದ ಕುಳಿತಿದ್ದಾನೆ. ಈತನ ಎದುರಿಗೆ ರಾಣಿಯು ಪಾರ್ಶ್ವರೀತಿಯಲ್ಲಿ ಕುಳಿತು ರಾಜನೊಂದಿಗೆ ಸಂಭಾಷಿಸುತ್ತಿದ್ದಾಳೆ. ಇವರ ಎರಡೂ ಪಾರ್ಶ್ವಗಳಲ್ಲಿ ಚಾಮರಧಾರಿಣಿಯರಾದ ಇರ್ವರು ಚಾಮರ ಬೀಸುತ್ತಿದ್ದಾರೆ. ಇವರ ಮುಂದೆ ನಾಲ್ವರು ಸ್ತ್ರೀಯರ ಚಿತ್ರಣವಿದ್ದು, ಒಬ್ಬಾಕೆಯು ತಮಟೆ ಬಾರಿಸುತ್ತಿದ್ದರೆ , ಮತ್ತೊಬ್ಬಾಕೆಯು ಓಲಗ ಊದುತ್ತಿದ್ದಾಳೆ. ಮಗದೊಬ್ಬಾಕೆಯು ತನ್ನೆರಡೂ ಕೈಗಳಿಂದ ಮೃದಂಗ ಬಾರಿಸುತ್ತಿದ್ದಾಳೆ. ಇವರ ಮುಂದೆ ಇನ್ನೊಬ್ಬಾಕೆಯು ಚಕ್ರಾಸನ ಭಂಗಿಯಲ್ಲಿ ಮಲಗಿ ನರ್ತನ ಮಾಡುತ್ತಿದ್ದಾಳೆ. ಈ ಬಗೆಯ ನರ್ತನದ ಚಿತ್ರಣವು ಕರ್ನಾಟಕದಲ್ಲಿ ಈವರೆಗೆ ದೊರೆತಿರುವ ಮಾಸ್ತಿಕಲ್ಲುಗಳಲ್ಲೇ ಅಪೂರ್ವವಾದುದಾಗಿದೆ.

ಮುಂದಿನ ಹಂತದ ಚಿತ್ರಣದಲ್ಲಿ ಮಡಿದ ರಾಜನು ವೈಕುಂಠದಲ್ಲಿ ವಿಷ್ಣುವಿನ ಮುಂದೆ ಕೈ ಜೋಡಿಸಿ ನಿಂತಿದ್ದಾನೆ. ಈತನನ್ನು ಸಾವಿನಲ್ಲೂ ಹಿಂಬಾಲಿಸುವ ಸಲುವಾಗಿ ಸತಿಪದ್ಧತಿ ಅನುಸರಿಸಿ ತಮ್ಮ ಪ್ರಾಣತ್ಯಾಗ ಮಾಡಿರುವ ಈತನ ಐವರು ರಾಣಿಯರು ಕೈಜೋಡಿಸಿ ನಿಂತಿದ್ದಾರೆ. ಕೆಳಹಂತದಲ್ಲಿನ ನೃತ್ಯದೃಶ್ಯದಲ್ಲಿರುವ ಸ್ತ್ರೀಯರು ಇವರೇ ಅಥವಾ ಇವರು ಬೇರೆಯೆ ಎಂಬುದು ಇಲ್ಲಿ ಸಂಶಯಾಸ್ಪದವಾಗಿದೆ. ಈ ಶಿಲ್ಪದಲ್ಲಿಯ ವೈಕುಂಠದ ಕಲ್ಪನೆ ಬೆಂಗಳೂರಿನಲ್ಲಿ ಈ ವರೆವಿಗೆ ದೊರೆತಿರುವ ವೀರಮಾಸ್ತಿಕಲ್ಲುಗಳಲ್ಲಿ

ಪ್ರಥಮವಾಗಿದೆ. ಇಲ್ಲಿ ಮಡಿದ ರಾಜ ಪರಿವಾರದವರು ವೈಷ್ಣವಪಂಥಕ್ಕೆ ಸೇರಿದವರಾಗಿದ್ದರೆಂದು ಹೇಳ ಬಹುದಾಗಿದೆ.

ಯುದ್ಧವೊಂದರಲ್ಲಿ ರಾಜನು (ಸಾರಂಗರಾಯ?) ತನ್ನ ಶತೃಗಳೊಡನೆ ಹೋರಾಡಿ ಮಡಿಯಲಾಗಿ ಈ ಸ್ಮಾರಕ ನಿರ್ಮಾಣವಾಗಿದೆ. ಹೋರಾಟದ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಈ ಮಾಸ್ತಿಕಲ್ಲೂ ಸಹ 10 -12ನೇ ಶತಮಾನದ ಕಾಲಕ್ಕೆ ಒಳಪಟ್ಟಿದ್ದು ಸಾರಕ್ಕಿಯಲ್ಲಿನ ಪ್ರಾಚೀನತೆಗೆ ಸಾಕ್ಷಿಯಾಗಿದೆ.

ಇದೇ ಸಾರಕ್ಕಿಯಲ್ಲಿನ ಜೆ.ಪಿ. ನಗರ 1ನೇ ಹಂತದ ರಸ್ತೆಯ ಮಧ್ಯದಲ್ಲಿ ವೀರ ಗಲ್ಲೊಂದು ಭೂಮಿಯಲ್ಲಿ ಮುಕ್ಕಾಲು ಭಾಗ ಮುಚ್ಚಿಹೋಗಿದ್ದು ಕೇವಲ ಎರಡೂವರೆ ಅಡಿ ಎತ್ತರ ಮತ್ತು ಅಷ್ಟೆ ಅಗಲವನ್ನು ಭೂಮಿಯ ಮೇಲೆ ಕಾಣಬಹುದಾಗಿದೆ. ಇದರಲ್ಲಿ ಬೇಡನಂತೆ ವೇಷಭೂಷಣ ಧರಿಸಿರುವ ವೀರ ಮತ್ತು ಆತನ ಸತಿಯೋರ್ವಳ ಚಿತ್ರಣವಿದೆ. ಇಲ್ಲಿನ ಯೋಧನು ಕದನದಲ್ಲಿ ಮಡಿಯಲಾಗಿ ಪತ್ನಿಯೂ ಸಹ ಸಹಗಮನ ಗೈದು ಮರಣಅಪ್ಪಿದ್ದಾಳೆ. ಈ ವೀರಗಲ್ಲು ದೊಡ್ಡನಕ್ಕುಂದಿಯ ರೈಲ್ವೆಹಳಿ ಬಳಿಯ ವೀರ ಗಲ್ಲಿನ ಚಿತ್ರಣ ದಂತಿದ್ದು ಸಾರಕ್ಕಿಯ ಪ್ರಾಚೀನ ಜನಜೀವನದ ಮೇಲೆ ಹೊಸ ಬೆಳಕು ಚೆಲ್ಲುತ್ತಿದೆ.

ಬಳೆಪೇಟೆಯ ರಸ್ತೆಯಲ್ಲಿನ ಕಟ್ಟಡ ಒಂದಕ್ಕೆ ಒರಗಿಸಿ ನಿಲ್ಲಿಸಿ ಪೂಜಿಸುತ್ತಿರುವ ಮಾಸ್ತಿಕಲ್ಲೊಂದು ಕೇವಲ ಎರಡು ಅಡಿ ಎತ್ತರ ಒಂದೂವರೆ ಅಡಿ ಅಗಲವಾಗಿದ್ದು ಇದರಲ್ಲಿ ಸತ್ತಿ ಹೋಗಿರುವ ಮಹಿಳೆಯೊಬ್ಬಳ ಚಿತ್ರಣಮಾತ್ರವಿದೆ. ಸ್ತ್ರೀಯು ತನ್ನ ಬಲಕೈನಲ್ಲಿ ಕಠಾರಿಯೊಂದನ್ನು ಎತ್ತಿ ಹಿಡಿದಿದ್ದಾಳೆ. ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಕಠಾರಿ ಹಿಡಿದಿರುವ ಮಾಸ್ತಿಕಲ್ಲು ಬೆಂಗಳೂರಿನಲ್ಲಿ ಸಿಕ್ಕ ಮೊದಲ ಮಾಸ್ತಿಕಲ್ಲು ಇದಾಗಿದೆ.

ದೊಡ್ಡನಕ್ಕುಂದಿಯಲ್ಲಿ 5 ವೀರ-ಮಾಸ್ತಿಕಲ್ಲುಗಳು ದೊರೆತಿದ್ದು ವಿಭಿನ್ನವಾಗಿವೆ. ಕೋದಂಡರಾಮ ದೇವಾಲಯದ ರಸ್ತೆಯ ಮಣ್ಣಿನಲ್ಲಿ ಎರಡು ಅಡಿ ಆಳದಲ್ಲಿ ಹೂತು ಹೋಗಿದ್ದ ಬೃಹತ್ ವೀರಗಲ್ಲೊಂದನ್ನು ಅಗೆದು ಹೊರತೆಗೆಯಲಾಗಿ ಇದು ಆರೂವರೆ ಅಡಿ ಎತ್ತರ ನಾಲ್ಕುವರೆ ಅಡಿ ಅಗಲವಾಗಿದ್ದು ಅರ್ಧ ಅಡಿ ದಪ್ಪವಾದ ಕಲ್ಲು ಆಗಿದೆ. ಯುದ್ಧದಲ್ಲಿ ಭಾಗವಹಿಸಿದ ಅಶ್ವದ ಚಿತ್ರಣ ಯುದ್ಧದಲ್ಲಿ ಮಡಿದ ವೀರನ ಸತಿಯು ಚಿತೆ ಏರುತ್ತಿರುವ ಸ್ಪಷ್ಟ ಚಿತ್ರಣವು ಇಲ್ಲಿದ್ದು, ವಾದ್ಯಗಾರರಾದ ಮೂರು ವ್ಯಕ್ತಿಗಳ ಚಿತ್ರಣವಿದೆ.

ಈ ವೀರಗಲ್ಲಿನಲ್ಲಿ ಪ್ರಮುಖವಾದ ಎರಡನೇ ಹಂತದಲ್ಲಿ ಕಳಸ ಕರಡಿಗೆ ಅಲ್ಲದೆ ಗಂಟೆಯ ಚಿತ್ರಣವಿದ್ದು ಎರಡೂವರೆ ಅಡಿ ಎತ್ತರದ ಸತಿಹೋದ ಸ್ತ್ರೀಯ ಚಿತ್ರಣವಿದೆ. ಸತಿಯು ಎಲ್ಲಾ ಮಾಸ್ತಿಕಲ್ಲುಗಳಲ್ಲಿ ನಿಲ್ಲುವಂತೆ ಸಮಭಂಗಿಯಲ್ಲಿ ನಿಲ್ಲದೆ, ತನ್ನ ಎಡ ಕೈಯನ್ನು ತನ್ನ ಎಡಗಾಲಿನ ಮಂಡಿಯ ಮೇಲೆ ಬರುವಂತೆ ಬಳಸಿ ಹಿಡಿದಿದ್ದು ಬಲದ ಕೈನಲ್ಲಿ ದುಂಡನೆಯ ವಸ್ತು (ಆಯುಧ ಇಲ್ಲವೇ ಕನ್ನಡಿ?) ಹಿಡಿದಿದ್ದಾಳೆ. ಇಲ್ಲಿ ಈಕೆಯೂ

ಪತಿಯೊಡನೆ ಕೂಡಿ ಶತೃಗಳೊಡನೆ ಕಾದಾಡಿದಳೆ ಎಂಬ ಸಂಶಯ ಮೂಡುತ್ತದೆ. ಈಕೆಯ ಮುಂದೆ ವೀರನು ಧ್ಯಾನಾರೂಢನಾಗಿ ಕುಳಿತಿರುವ ಚಿತ್ರಣವಿದೆ. ಇತರ ವೀರಗಲ್ಲುಗಳಲ್ಲಿ ವೀರನು ಶತ್ರುಗಳೊಡನೆ ಹೋರಾಡುತ್ತಿರುವಂತೆಯೋ ಅಥವಾ ಆಯುಧವನ್ನು ಹಿಡಿದಿರುವಂತೆಯೋ ಚಿತ್ರಣವಿರುವುದು ಸಾಮಾನ್ಯ. ಆದರೆ ಇಲ್ಲಿನ ವೀರನು ಸಿದ್ಧಾಸನದಲ್ಲಿ ಕುಳಿತು ಎರಡೂ ಕೈಗಳನ್ನು ಜೋಡಿಸಿ ಮುಗಿಯುತ್ತಿರುವಂತೆ ಚಿತ್ರಣವಿರುವುದು ವಿಶೇಷವಾಗಿದೆ. ವೀರಗಲ್ಲಿನ ಮೇಲ್ಭಾಗದ ಎರಡೂ ತುದಿಗಳಲ್ಲೂ ಮಡಿದ ವೀರನನ್ನು ಮತ್ತು ಮಡಿದ ವೀರನ ಜೊತೆ ಸಾವಿನಲ್ಲೂ ಹಿಂಬಾಲಿಸಿದ ಸತಿಯನ್ನು ಅಪ್ಸರೆಯರು ದೇವಲೋಕಕ್ಕೆ ಕೊಂಡೊಯ್ಯುವ ಪುಟ್ಟ ಪ್ರಮಾಣದ ಚಿತ್ರಣವಿದೆ.

ಇಲ್ಲಿಯೇ ವೃತ್ತರಸ್ತೆಯ ರೈಲ್ವೆ ಹಳಿಯ ಬಳಿ ನಾಲ್ಕು ವೀರಗಲ್ಲುಗಳು ದೊರೆತಿದ್ದು ಎರಡು ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಭಿನ್ನ ಭಂಗಿಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದಾರೆ. ಮತ್ತೆರಡು ಕಲ್ಲುಗಳು ವೀರತನವನ್ನೂ-ಮಾಸ್ತಿತನವನ್ನೂ ಸೂಚಿಸುವ ವೀರಗಲ್ಲುಗಳಾಗಿವೆ. ನಾಲ್ಕು ಅಡಿ ಎತ್ತರ ನಾಲ್ಕು ಅಡಿ ಅಗಲದ ಕಲ್ಲಿನ ಬಲಭಾಗದಲ್ಲಿ ಸತ್ತಿ ಹೋಗಿರುವ ಸ್ತ್ರೀಯ ಚಿತ್ರಣವಿದ್ದು ಈಕೆ ತನ್ನ ಕೈಗಳನ್ನು ಮೇಲೆ ಎತ್ತಿ ಹಿಡಿದಿದ್ದು ಕ್ರಮವಾಗಿ ಕನ್ನಡಿ ಮತ್ತು ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಬದಿಯಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನ ಚಿತ್ರಣವಿದೆ. ಈತನು ತನ್ನ ಕೈಯಲ್ಲಿ ಕತ್ತಿ ಗುರಾಣಿ ಹಿಡಿದಿದ್ದಾನೆ. ಇದರ ಬಳಿಯಲ್ಲಿಯೇ ಇರುವ ಮತ್ತೊಂದು ವಿಭಿನ್ನ ಬಗೆಯ ವೀರಗಲ್ಲಿನಲ್ಲಿ ಬೇಡನಂತೆ ವೇಷ ಭೂಷಣ ಧರಿಸಿರುವ ವ್ಯಕ್ತಿಯ ಚಿತ್ರಣವಿದ್ದು ಈತ ತನ್ನ ಕೈಗಳಲ್ಲಿ ವೀರತನದಿಂದ ಆಯುಧಗಳನ್ನು ಹಿಡಿದಿದ್ದಾನೆ. ಈತನ ಬಲಬದಿಯಲ್ಲಿ ಇಬ್ಬರು ಸತಿಯರ ಚಿತ್ರಣವಿದ್ದು ಒಬ್ಬಾಕೆಯು ತನ್ನ ಕೈಯಲ್ಲಿ ಕಮಂಡಲ, ಕನ್ನಡಿ ಹಿಡಿದಿದ್ದರೆ, ಮತ್ತೊಬ್ಬ ಸ್ತ್ರೀಯು ಕನ್ನಡಿ ಮತ್ತು ನಿಂಬೆಹಣ್ಣನ್ನು ಹಿಡಿದಿದ್ದಾಳೆ. ದೊಡ್ಡನಕ್ಕುಂದಿಯ ಎಲ್ಲಾ ವೀರಗಲ್ಲುಗಳೂ ರಾಜ ಕಾರಣಕ್ಕಾಗಿ ನಡೆದ ಕದನದ ಸ್ಮಾರಕವಾಗಿ ನಿರ್ಮಾಣವಾಗಿದ್ದು ಕ್ರಿ.ಶ. ಸುಮಾರು 11ನೇ ಶತಮಾನದಿಂದ ಹದಿನೈದನೆಯ ಶತಮಾನಕ್ಕೆ ಸೇರಿದವುಗಳಾಗಿವೆ.

ಕರ್ನಾಟಕದ ಇತರ ಸ್ಥಳಗಳಂತೆ ರಾಜಧಾನಿಯಾದ ಬೆಂಗಳೂರು ನಗರವೂ ಸಹ ಕ್ರಿ.ಶ. 9ನೇ ಶತಮಾನಕ್ಕಿಂತಲೂ ಮೊದಲಿನಿಂದಲೇ ವೀರ ಮತ್ತು ತ್ಯಾಗ ಬಲಿದಾನಗಳ ಕ್ಷೇತ್ರವಾಗಿದ್ದು ಸಾಮಾಜಿಕ ಮತ್ತು ಧಾರ್ಮಿಕವಾಗಿ ತನ್ನದೇ ಆದ ಒಂದು ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಮೇಲೆ ಅಧ್ಯಯನಕ್ಕೆ ಒಳಪಡಿಸಿರುವ ವೀರ-ಮಾಸ್ತಿ ಕಲ್ಲುಗಳ ಘಟನೆಗಳು ಬೆಂಗಳೂರಿನ ಅಂತೆಯೇ ಕರ್ನಾಟಕದ ಸೂಕ್ಷ್ಮ ಇತಿಹಾಸವನ್ನು ರಚಿಸುವಲ್ಲಿ ಸಹಾಯಕವಾಗಿವೆ. ಅಪಾರ ವೇಗದಿಂದ ಬೆಳೆಯುತ್ತಿರುವ ಈ ನಗರದಲ್ಲಿ ಇನ್ನೂ ಹತ್ತು ಹಲವು ಈ ರೀತಿಯ ಪ್ರಾಚೀನ ಸ್ಮಾರಕಗಳು ಬೆಳಕಿಗೆ ಬರಬೇಕಾಗಿದೆ.

ಸಂಬೋಧನ ವಿಭಕ್ತಿ ಯ ವ್ಯಾಪ್ತಿ

- ವಿದ್ವಾನ್ ಉಮಾಕಾಂತ ಭಟ್ಟ

ಮನುಷ್ಯ ಆಲಸ್ಯ, ಅನವಧಾನ, ಪ್ರಮಾದ ಮೊದಲಾದ ಹಲವು ನಿಮಿತ್ತಗಳಿಂದ ಮೈಮರೆತಿರುವಾಗ ಅವನನ್ನು ಎಚ್ಚರಿಸುವುದು ಅನಿವಾರ್ಯವಾಗುತ್ತದೆ. ಅವನು ಎಚ್ಚೆತ್ತುಕೊಳ್ಳದೆ ನಮ್ಮ ಸಂಕೇತವನ್ನು ಗ್ರಹಿಸಲಾರ. ಸಂದೇಶವನ್ನು ಅರಿಯಲಾರ. ಅವನನ್ನು ಉದ್ದೇಶಿಸಿ ಮಾಡುವ ಶಬ್ದಪ್ರಯೋಗ ವಿಫಲವಾಗುತ್ತದೆ. ಇಂಥ ವಿಮುಖನನ್ನು ಅಭಿಮುಖನನ್ನಾಗಿ ಮಾಡಲು ಅನೇಕ ದಾರಿಗಳಿವೆ. ಅವನನ್ನು ಸದ್ದು ಮಾಡಿ ಎಚ್ಚರಿಸ ಬಹುದು. ಅಭಿನಯದಿಂದ ಪ್ರಬೋಧಗೊಳಿಸಬಹುದು. ಸಂಕೇತದಿಂದ - ಶಾರೀರಿಕ ಚೇಷ್ಟೆಗಳಿಂದ ಜಾಗ್ರತನನ್ನಾಗಿ ಮಾಡಬಹುದು. ಒಂದು ದೃಷ್ಟಿಯಿಂದ ಯೋಚಿಸಿದರೆ, ಸಮಗ್ರ ಶಾಸ್ತ್ರಗಳೂ ಪ್ರಮತ್ತರಾದ ಜೀವಿಗಳ ಸಂಬೋಧನೆಗಾಗಿಯೆ ಪ್ರವೃತ್ತವಾಗಿವೆ. ಆದುದರಿಂದ ಸಾಧಾರಣವಾಗಿ ಶಾಸ್ತ್ರಗಳೂ ವಿಧಿ-ನಿಷೇಧಾತ್ಮಕವಾಗಿದ್ದು ಅಧಿಕಾರವುಳ್ಳ ವರನ್ನು ಎಚ್ಚರಿಸುವ ಸಂಬೋಧಕಪದಗಳಿಂದ ಕೂಡಿರುವುದನ್ನು ಗಮನಿಸುತ್ತೇವೆ.

ಸಂಬೋಧನ ಎಂದರೆ ಎಚ್ಚರಿಸಿ ಸೂಚಿಸುವುದು. ಸಮ್ಯಕ್ ಬೋಧನಂ - ಸಂಬೋಧನಂ ಎಂಬುದು ಈ ಪದದ ವ್ಯುತ್ಪತ್ತಿ. ಸಂ‌ಉಪಸರ್ಗವು ಸಂಮುಖೀಭಾವ ಅಥವಾ ಅಭಿಮುಖತ್ವ ಎಂಬ ಅರ್ಥವನ್ನು ತಿಳಿಸುತ್ತದೆ. ಬೋಧನಂ ಎಂದರೆ ಜ್ಞಾಪಿಸುವುದು; ತಿಳಿಸುವುದು ಎಂದರ್ಥ. ಹೀಗೆ ಸಂಬೋಧನ ವ್ಯಾಪಾರದಲ್ಲಿ ಅಭಿಮುಖೀಕರಣ ಮತ್ತು ಜ್ಞಾಪನ ಎಂಬ ಎರಡು ಘಟಕಗಳು ಇರುವುದನ್ನು ನಾವು ನಿಶ್ಚಯಿಸಿ ಕೊಳ್ಳಬಹುದು. ಇದನ್ನೆ ಅಭಿಯುಕ್ತರು ಈ ರೀತಿಯಿಂದ ನಿರ್ವಚನ ವಿಧಾನದಲ್ಲಿ ವಿವರಿಸುತ್ತಾರೆ, ಅಭಿಮುಖೀಕೃತ್ಯ ಜ್ಞಾಪನಂ ಸಂಬೋಧನಂ. ಅಭಿಮುಖೀಕರಣವು ವಿಮುಖನಾದ ವ್ಯಕ್ತಿಯನ್ನು ಅಭಿಮುಖನನ್ನಾಗಿ ಮಾಡುವ ವಿಶಿಷ್ಟಕ್ರಿಯೆ. ವ್ಯಕ್ತಿಯ ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಳ್ಳುವುದು-ಎಂದು ಅರ್ಥ. ಅಭಿಮುಖನಾಗಿಯೇ ಇದ್ದವನ ಅಭಿಮುಖ್ಯಕ್ಕೆ ಯಾರೂ ಪ್ರಯತ್ನಿಸುವುದಿಲ್ಲ. ಹಾಗೆ ಯತ್ನಿಸುವವನನ್ನು ವಿವೇಕಿಯೆಂದು ಕರೆಯುವುದಾದರೂ ಹೇಗೆ? ಅಂಥವನ ಪ್ರಯತ್ನವಂತೂ ವ್ಯರ್ಥ. ನಿದ್ದೆಹೋದವನನ್ನು ಎಬ್ಬಿಸಬೇಕಷ್ಟೆ! ಈ ಅಭಿಮುಖೀಕರಣಕ್ರಿಯೆಯಲ್ಲಿ ಮೂರು ಅಂಶಗಳು ಅತ್ಯಂತ ಅನಿವಾರ್ಯವಾಗಿವೆ; ಆದುದರಿಂದ ಪ್ರಧಾನವಾಗಿವೆ. ಅವು ಸಂಬೋಧಕ, ಸಂಬೋಧ್ಯ ಮತ್ತು ಸಂಬೋಧನ. ಸಂಬೋಧಕನೆಂದರೆ ಸಂಬೋಧನಕರ್ತಾ; ಅಭಿಮುಖನನ್ನಾಗಿ ಮಾಡುವವನು. ಇವನಿಲ್ಲದೆ ಸಂಬೋಧನಕ್ರಿಯೆ ಉಂಟಾಗಲಾರದು; ಸಂಬೋಧನೆ ಇಲ್ಲದೆ ಸಂಬೋಧ್ಯನೂ ಸಿದ್ಧಿಸಲಾರನು. ಸಂಬೋಧ್ಯ ಸಂಬೋಧನಕ್ರಿಯೆಯ ಕರ್ಮ. ಸಂಬೋಧನ ಕ್ರಿಯೆಯಿಂದ ಆದ ಫಲಕ್ಕೆ ಆಶ್ರಯ.

ಸಂಮುಖತ್ವ ಇವನಲ್ಲಿ ತಾನೆ ಹುಟ್ಟುತ್ತದೆ. ಆದುದರಿಂದ ಇವನಿಲ್ಲದೆ ಸಂಬೋಧನಕ್ಕೆ ಅರ್ಥವಿಲ್ಲ; ಸಂಬೋಧನದ ಸ್ವರೂಪವೆ ಸಿದ್ಧಿಸಲಾರದು. ಮೂರನೆಯದು ಸಂಬೋಧನ ಕ್ರಿಯೆ. ಇದೇ ಇಲ್ಲದಿದ್ದರೆ ಸಂಬೋಧ್ಯ-ಸಂಬೋಧಕರ ಪ್ರಸಿದ್ಧಿ ಹೇಗೆ? ಕ್ರಿಯೆಯೆ ಇಲ್ಲವಾದರೆ ಕಾರಕಗಳ ಪ್ರಸಕ್ತಿಯಾದರೂ ಎಲ್ಲಿ? ಆದ್ದರಿಂದ ಈ ಮೂರೂ ಅಂಶಗಳು ಅತ್ಯಂತ ಅಪರಿಹಾರ್ಯವಾಗಿದ್ದು ಒಂದನ್ನೊಂದು ಅಗಲಿ ಇರಲಾರದವಾಗಿವೆ. ಹಲವು ಮಕ್ಕಳು ಹರಟೆಯಲ್ಲಿ ತೊಡಗಿರುವಾಗ ಕೊಠಡಿಯ ಒಳಹೊಕ್ಕ ಉಪಾಧ್ಯಾಯರು ಮಕ್ಕಳೆ ಎಂದು ಧ್ವನಿಯೆತ್ತಿದೊಡನೆ ನಿಶ್ಶಬ್ದವುಂಟಾಗುತ್ತದೆ. ಮೈಮರೆತು ಅಸ್ತವ್ಯಸ್ತರಾಗಿದ್ದ ವಿದ್ಯಾರ್ಥಿಗಳು ಎಚ್ಚೆತ್ತುಕೊಳ್ಳುತ್ತಾರೆ. ಗುರುಗಳ ಮಾತಿನ ಕಡೆ ನಿಗವಿಡುತ್ತಾರೆ. ಈ ಘಟನೆಯಲ್ಲಿ ಗುರುಗಳು ಕೊಠಡಿಯಲ್ಲಿ ಒಳಕ್ಕೆ ಬಂದುದೂ; ಮಕ್ಕಳೆ ಎಂದು ಶಬ್ದವನ್ನು ಉಚ್ಚರಿಸಿರುವುದೂ ಸಂಬೋಧನಕ್ರಿಯೆಯಲ್ಲಿ ಅಡಕವಾಗಿರುವ ವ್ಯಾಪಾರಗಳು. ಉಪಾಧ್ಯಾಯರು ಸಂಬೋಧಕರಾಗಿರುವವರು. ಮಕ್ಕಳೆಲ್ಲ ಸಂಬೋಧ್ಯರು. ಈ ತ್ರಿಕೂಟ ದಲ್ಲಿ ಯಾವದನ್ನು ಮರೆತರೂ, ಮರೆಮಾಚಿದರೂ ಸಂಬೋಧನವನ್ನು ನಿರೂಪಿಸಲಾಗದು.

ಭಾಷೆಯಲ್ಲಿ ಸಂಬೋಧನವನ್ನು ತಿಳಿಸಲು ಇರುವ ಪರಿಕರಗಳು ಎರಡು ವಿಧವಾಗಿವೆ. ಹೇ, ಎಲೈ, ಅಯ್ಯಾ ಮೊದಲಾದ ಅವ್ಯಯಗಳು ಮೊದಲ ಪರಿಯಲ್ಲಿ ಸೇರಿಕೊಳ್ಳುತ್ತವೆ. ಎರಡನೆಯ ಬಗೆ ಸಂಬೋಧನವಿಭಕ್ತಿ. ಇದು ಪ್ರಥಮಾವಿಭಕ್ತಿಯ ಒಂದು ಪ್ರಭೇದವಷ್ಟೆ! ಸಂಬೋಧನೇ ಚ ಎಂಬ ಪಾಣಿನೀಯ ಸೂತ್ರದ ಪ್ರಕಾರ ಸಂಬೋಧನವೆಂಬ ಅರ್ಥವನ್ನು ತಿಳಿಸಲು ಸಂಬೋಧ್ಯವಾಚಕ ಶಬ್ದಕ್ಕೆ ಪ್ರಥಮಾ ವಿಭಕ್ತಿಯು ಬರುತ್ತದೆ. ರಾಮ! ನನ್ನನ್ನು ರಕ್ಷಿಸು ಎಂಬ ಉದಾಹರಣ ವಾಕ್ಯದಲ್ಲಿ ರಾಮಎಂದು ಸಂಬೋಧನ ವಿಭಕ್ತ್ಯಂತವಾದ ಪದ. ನನ್ನ ರಕ್ಷಣೆಯನ್ನು ರಾಮನಿಗೆ ಒಪ್ಪಿಸಬೇಕಾಗಿರುವು ದರಿಂದ ಅವನನ್ನು ಸಂಬೋಧಿಸಲಾಗಿದೆ. ಹೀಗಾಗಿ ರಾಮಶಬ್ದವು ಸಂಬೋಧ್ಯವಾಚಕ. ಅದರ ಮೇಲಿಟ್ಟ ಪ್ರತ್ಯಯ ಸಂಬೋಧನ ಪ್ರಥಮಾ. ಈ ಪ್ರತ್ಯಯಕ್ಕೆ ಲೋಪವುಂಟಾದರೂ ಅದು ತನ್ನ ಅರ್ಥವನ್ನು ತಿಳಿಸದೆ ಇರಲಾರದು. ಹಲವು ಸಲ ಸಂಬೋಧನಪ್ರತ್ಯಯವನ್ನು ಲೋಪ ಮಾಡದೆ ರಾಮನೆ; ಹರಿಯೆ; ಮಗುವೆ; ಮುಂತಾದ ಪ್ರಯೋಗಗಳನ್ನು ಮಾಡುವ ರೂಢಿಯೂ ಇದೆ. ಕನ್ನಡಭಾಷೆಯಲ್ಲಿ ಸಂಬೋಧನವಿಭಕ್ತಿಯ ಬಳಕೆಗೆ ಸಂಬಂಧಿಸಿದಂತೆ ಸೂಕ್ಷ್ಮವಾದ ಅಂಶವೊಂದಿದೆ. ರಾಮನೆ ಎಂದರೆ ರಾಮಶಬ್ದದ ಸಂಬೋಧನವಿಭಕ್ತಿಯ ರೂಪವೂ ಆಗಬಹುದು. ನಿಶ್ಚಯವನ್ನು ತಿಳಿಸುವ, ಸಾವಧಾರಣಪ್ರಯೋಗವೂ ಆಗಬಹುದು. ರಾಮನೆ, ಒಳಗೆ ಬಾ ಎಂಬುದು ಸಂಬೋಧನ. ರಾಮನೇ ಬರಲಿ ಎಂಬುದು ಸಾವಧಾರಣ ಪ್ರಯೋಗ. ಈ ವಾಕ್ಯವು ಬರಬೇಕಾದವನು ರಾಮ ಎಂಬ ಅರ್ಥವನ್ನು ತಿಳಿಸುವಂತೆ. ರಾಮನಲ್ಲದವನು ಬರದಿರಲಿ ಎಂಬ ಅನ್ಯನಿವೃತ್ತಿಯನ್ನೂ ಕೇಳುಗರ ಅರಿವಿಗೆ ತರುತ್ತದೆ. ಈ ಪರನಿವೃತ್ತಿಗೆ ಅವಧಾರಣ ಎಂಬ ಪರಿಭಾಷೆಯಿದೆ. ಆದುದರಿಂದ ಏ ಎಂಬ

ಪ್ರತ್ಯಯವಿರುವ ಕಾರಣ ಒಂದು ಪ್ರಯೋಗವನ್ನು ಸಂಬೋಧನವೆಂದಾಗಲಿ, ಸಾವಧಾರಣವೆಂದಾಗಲಿ ನಿಶ್ಚಯಿಸುವಂತಿಲ್ಲ. ವಾಕ್ಯದ ಸ್ವರೂಪವನ್ನೂ ಅದರ ಅರ್ಥವನ್ನೂ ಗಮನಿಸಿ ಯಾವುದು ಸಂಬೋಧನ ಯಾವುದು ಅವಧಾರಣವೆಂದು ಗುರುತಿಸಬೇಕಾಗುತ್ತದೆ.

ವಿಚಾರಕ್ಕೆ ತೊಡಗಿದಾಗ ಇಲ್ಲೊಂದು ಪ್ರಶ್ನೆ ಎದುರಾಗುತ್ತದೆ, ಪಕ್ಕದಲ್ಲಿ ಇರುವ ಮಗುವಿಗೆ ನೀನು ಊಟ ಮಾಡು ಎಂದು ತಾಯಿ ಹೇಳುತ್ತಾಳೆ. ಮಗೂ! ಎಂಬ ಸಂಬೋಧನ ವಿಭಕ್ತ್ಯಂತವಾದ ಶಬ್ದವನ್ನು ಅವಳು ಬಳಸಿಲ್ಲ. ಆದರೂ ಮಗುವಿಗೆ ಮಾತು ಅಭಿಪ್ರಾಯವನ್ನು ಕೊಟ್ಟಿದೆ. ತಾನು ಊಟಮಾಡುವುದನ್ನು ತಾಯಿ ಜ್ಞಾಪಿಸಿದ್ದಾಳೆ ಎಂದು ಅರಿತ ಅದು ಊಟಕ್ಕೆ ತೊಡಗುತ್ತದೆ. ಹೀಗಿರುವಾಗ ಭಾಷೆಯಲ್ಲಿ ಸಂಬೋಧನವಿಭಕ್ತಿಯ ಅಗತ್ಯವೇನಿದೆ? ಇದಕ್ಕೆ ಉತ್ತರವಿಷ್ಟೆ! ಮಗು ಪಕ್ಕದಲ್ಲಿ ಇತ್ತು. ಆದಕ್ಕೆ ತಾಯಿಯಾಡಿದ ಮಾತು ತನಗಾಗಿ ಎನ್ನುವುದೂ ಗೊತ್ತಾಗಿತ್ತು. ಆದ್ದರಿಂದ ಸಂಬೋಧನಪದದ ಅವಶ್ಯಕತೆ ತೋರದಿರಬಹುದು. ಆದರೆ ಹಲವರು ಕೇಳುಗರಾಗಿದ್ದಾಗ ಈ ಮಾತು ಯಾರಿಗಾಗಿ ಎಂಬ ಸೂಚನೆಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಈ ವಾಕ್ಯ ಯಾರಿಗೂ ಬೋಧವನ್ನು ಕೊಡದೆ ಇರಬಹುದು. ನೀನು ಊಟಮಾಡು ಎಂಬ ವಾಕ್ಯದಲ್ಲಿರುವ ನೀನು ಎಂಬ ಪದ ಮಧ್ಯಮ ಪುರುಷದಲ್ಲಿರುವಂಥಹದು. ಇದರ ಅರ್ಥ ಸಂಬೋಧ್ಯವ್ಯಕ್ತಿ. ಸಂಬೋಧ್ಯನೆಂದರೆ ಸಂಬೋಧನೆಗೆ ಒಳಪಟ್ಟವನಷ್ಟೆ! ಮುಖವನ್ನು ತಿರುಗಿಸಿಯೊ, ಕಣ್ಣಿನಿಂದ ಸೂಚಿಸಿಯೊ, ಬೆರಳಿನಿಂದ ತೋರಿಸಿಯೊ ಈ ಮಾತನ್ನು ಹೇಳಿದರೆ ಸಂಬೋಧ್ಯನು ಯಾರು ಎಂಬ ಅಂಶವು ಶಾರೀರಿಕ ಮುದ್ರೆಯಿಂದ ತಿಳಿದು ಬರುತ್ತದೆಯಾದ್ದರಿಂದ ಸಂಬೋಧನಪದದ ಅವಶ್ಯಕತೆ ಇಲ್ಲಿ ಕಾಣದಿರಬಹುದು. ಆದರೆ ಇಂಥಹ ಬಾಹ್ಯಪರಿಕರಗಳು ಇಲ್ಲದಿದ್ದಾಗ ಸಂಬೋಧನಪದ ಅತ್ಯಂತ ಅಗತ್ಯವಾಗುತ್ತದೆ. ಆಗ ಮಗೂ! ಎಂಬ ಪದವನ್ನು ಪ್ರಯೋಗಿಸಿದರೆ ಮಗುವಿಗೆ ತಾನು ಸಂಬೋಧ್ಯನೆಂದು ತಿಳಿದುಬಂದು ವಾಕ್ಯಾರ್ಥ ಜ್ಞಾನವುಂಟಾಗುತ್ತದೆ. ಇದರಿಂದ ಮಗುವಿಗೆ ಊಟಮಾಡುವ ಇಷ್ಟವಾದ ಸಂದರ್ಭ ಒದಗುತ್ತದೆ. ಹೀಗೆ ನೀನು ಎಂಬ ಶಬ್ದದ ನಿಯತವಾದ ಅರ್ಥ(ಶಕ್ಯಾರ್ಥ) ದಲ್ಲಿ ಘಟಕವಾದ ಸಂಬೋಧ್ಯತ್ವವನ್ನು ಖಚಿತಪಡಿಸುವ ಸಲುವಾಗಿ ಸಂಬೋಧನಪದವು ಅವಶ್ಯಕವೆಂದು ಅದರ ಸಾರ್ಥಕ್ಯವನ್ನು ವಿವರಿಸಿದಂತಾಯಿತು. ಆದರೆ ಕೆಲವೊಮ್ಮೆ ಕಿಶೋರ, ಪುಸ್ತಕವು ಇಲ್ಲಿದೆ ಮೊದಲಾದ ಹಲವು ವಾಕ್ಯಗಳಲ್ಲಿ ಮಧ್ಯಮಪುರುಷದ (ನೀನು -ನೀವು) ಪ್ರಯೋಗವೆ ಇರುವುದಿಲ್ಲ. ಇಂಥ ವಾಕ್ಯಗಳಲ್ಲಿ ಸಂಬೋಧನವು ವ್ಯರ್ಥವೆಂದೆ ಒಪ್ಪಿಕೊಳ್ಳುವಂತಾಯಿತಲ್ಲವೆ? ಹಾಗಿಲ್ಲ. ಪುಸ್ತಕವು ಇಲ್ಲಿದೆ ಎಂಬ ವಾಕ್ಯದ ಶಾಬ್ದಬೋಧವು (ವಾಕ್ಯಾರ್ಥ ಜ್ಞಾನವು) ನನ್ನಲ್ಲಿ ಉಂಟಾಗಬೇಕು; ಅದಕ್ಕಾಗಿ ಇವರು (ಗುರುಗಳು) ಈ ವಾಕ್ಯವನ್ನು ಉಚ್ಚರಿಸಿದ್ದಾರೆ - ಎಂಬ ಅಭಿಪ್ರಾಯವು (ವಕ್ತೃತಾತ್ಪರ್ಯವು) ಕಿಶೋರನಲ್ಲಿಯೇ ಹುಟ್ಟ

ಬೇಕಾದರೆ ಕಿಶೋರ ಎಂಬ ಸಂಬೋಧನವನ್ನು ಪ್ರಯೋಗಿಸಿರಲೇ ಬೇಕು. ಇಲ್ಲದಿದ್ದರೆ ಇದು ತನಗಲ್ಲ ಎಂದು ಉದಾಸೀನನಾಗಿ ಇರುವ ಸಾಧ್ಯತೆಯಿದ್ದುದರಿಂದ ಅವನಲ್ಲಿ ವಾಕ್ಯಾರ್ಥಜ್ಞಾನವೇ ಉಂಟಾಗದಿರಬಹುದು. ಆದ್ದರಿಂದ ಈ ಉದಾಹರಣವಾಕ್ಯದಲ್ಲಿ ಕಿಶೋರ ಪದವನ್ನು ಕೈಬಿಡುವಂತಿಲ್ಲ. ಈ ರೀತಿ ಸಂಬೋಧನ ವಿಭಕ್ತಿಯು ಯುಷ್ಮತ್(ನೀನು) ಶಬ್ದದ ಶಕ್ಯಾರ್ಥನಿರ್ಣಯದಲ್ಲಿಯೂ,ವಕ್ತೃ ತಾತ್ಪರ್ಯನಿರ್ಣಯದಲ್ಲಿಯೂ ಅಪೇಕ್ಷಣೀಯವಾಗಿದ್ದು ಭಾಷಿಕ ಪರಿಕರಗಳಲ್ಲಿ ಇದನ್ನು ಅನಗತ್ಯವೆಂದು ಯಾರೂ ವಾದಿಸುವಂತಿಲ್ಲ.

ಒಂದು ವಾಕ್ಯದಲ್ಲಿ ಸಂಬೋಧನ ವಿಭಕ್ತಿಯನ್ನು ಎಲ್ಲಿ ಪ್ರಯೋಗಿಸಬೇಕು ಎಂಬ ವಿಷಯದಲ್ಲಿಯೂ ನಿಯಮವಿದೆ. ವಾಕ್ಯವೆಂದ ಮೇಲೆ ಉದ್ದೇಶ್ಯವಾಚಕ ಮತ್ತು ವಿಧೇಯವಾಚಕ ಪದಗಳು ಇದ್ದೇ ಇರುತ್ತವೆ. ಇವುಗಳಲ್ಲಿ ಉದ್ದೇಶ್ಯವಾಚಕ ಪದದ ಮೇಲೆ ಸಂಬೋಧನಪ್ರತ್ಯಯವನ್ನು ಇಡಬೇಕೆ ಹೊರತು ವಿಧೇಯ ವಾಚಕದ ಮೇಲಲ್ಲ. ರಾಜ! ಸಾರ್ವಭೌಮನಾಗು (ಸಾರ್ವಭೌಮನು+ ಆಗು) ಎಂಬ ವಾಕ್ಯದಲ್ಲಿ ರಾಜ ಎಂಬುದು ಸಂಬೋಧನ ಪ್ರಥಮಾಂತವಾದ ಪದ. ಸಾರ್ವಭೌಮನು ಎಂಬುದು ಕೇವಲ ಪ್ರಥಮಾವಿಭಕ್ತಿಯನ್ನು ಪಡೆದ ಪದ. ಈ ವಾಕ್ಯದಿಂದ ರಾಜತ್ವದ ಮೂಲಕ ಪರಿಚಿತನಾದ ಪುರುಷನಲ್ಲಿ ಸಂಭಾವಿತ (ಮುಂದಾಗಲಿರುವ) ಸಾರ್ವಭೌಮತ್ವವನ್ನು ತಿಳಿಸುತ್ತಿರುವುದರಿಂದ ರಾಜನು ಉದ್ದೇಶ್ಯ; ಸಾರ್ವಭೌಮತ್ವ ವಿಧೇಯ (ಜ್ಞಾಪನೀಯ). ಆದುದರಿಂದ ರಾಜಪದ ಉದ್ದೇಶ್ಯವಾಚಕವಾಗಿದ್ದು ಸಂಬೋಧನ ವಿಭಕ್ತಿಯನ್ನು ಪಡೆದು ಕೊಂಡಿದೆ. ಆದರೆ ರಾಜ, ಸಾರ್ವಭೌಮನಾಗು ಎಂಬ ವಾಕ್ಯದಲ್ಲಿ ಅರ್ಥದ ದೃಷ್ಟಿಯಿಂದ ಗಮನಿಸಬಹುದಾದ ವಿಶೇಷವೊಂದಿದೆ. ರಾಜ ಎಂಬ ಪದದಿಂದ ಸಂಬೋಧಿಸುತ್ತಿರುವಾಗ ಆ ವ್ಯಕ್ತಿಯಲ್ಲಿ ರಾಜತ್ವ (ಅರಸುತನ) ಸಿದ್ಧವಾಗಿದೆ; ಎಲ್ಲರಿಗೂ ತಿಳಿದಿದೆ. ಸಾರ್ವಭೌಮತ್ವ ಇನ್ನೂ ಸಿದ್ಧವಾಗಿಲ್ಲ. ಹಾಗಾಗಿ ಅದನ್ನು ಹಾರೈಸುತ್ತಿದ್ದಾರೆ. ಹಾರೈಕೆಯ ಕುರುಹೆ ಈ ವಾಕ್ಯ. ಪರಿಚಿತವಾದ ಅಂಶವನ್ನು ಮುಂದಿಟ್ಟುಕೊಂಡು ಸಂಬೋಧನೆ ಮಾಡುವುದು ಸಹಜವಷ್ಟೆ! ಅಸಿದ್ಧವಾದ ಧರ್ಮವನ್ನು ಪುರಸ್ಕರಿಸಿ ಸಂಬೋಧನೆಗೆ ತೊಡಗಿದರೆ, ಸಂಬೋಧ್ಯವ್ಯಕ್ತಿ ಸಂಮುಖದಲ್ಲಿದ್ದರೂ ಆ ಅಂಶವು ತನ್ನಲ್ಲಿಲ್ಲದಿರುವುದರಿಂದ ಸಂಬೋಧನವು ತನಗಲ್ಲ ಎಂದೇ ಭಾವಿಸುತ್ತಾನೆ. ಆಗ ವಕ್ತೃವಿನ ಪ್ರಯತ್ನವು ವಿಫಲವಾಗುತ್ತದೆ. ವಿಶೇಷ ಸಂದರ್ಭಗಳಲ್ಲಿ, ಪ್ರಭೋ! ಭಕ್ತವತ್ಸಲ! ದೀನಬಂಧೊ! ಇತ್ಯಾದಿ ನಾನಾ ಸಂಬೋಧನಪದಗಳನ್ನು ಸಂಬೋಧನಾಶಯವನ್ನು ಸೂಚಿಸಲು ಪ್ರಯೋಗಿಸು ವುದುಂಟು. ಆದರೆ ಅಲ್ಲಿ ಅವೆಲ್ಲ ಉದ್ದೇಶ್ಯವಾಚಕ ಪದಗಳೇ ಆಗಿರುತ್ತವೆ. ನನ್ನ ರಕ್ಷಕನಾಗು ಎಂಬಲ್ಲಿ ವಿಧೇಯವಾಚಕಕ್ಕೆ (ರಕ್ಷಕಪದಕ್ಕೆ) ಸಂಬೋಧನವಿಭಕ್ತಿ ಬರಬಾರದು. ಈ ವಿಚಾರವನ್ನು ಮಹಾವೈಯಾಕರಣನೂ, ಶಬ್ದಸ್ವಭಾವಮರ್ಮಜ್ಞನೂ ಆದ ಭರ್ತೃಹರಿಯು ಹೀಗೆ ವಿವರಿಸಿದ್ದಾನೆ:

ಸಿದ್ಧಸ್ಯಾಭಿಮುಖೀಭಾವಮಾತ್ರಂ ಸಂಬೋಧನ ವಿದಃ ॥
ಪ್ರಾಪ್ತಾಭಿಮುಖ್ಯೋ ಹ್ಯರ್ಥಾತ್ಮಾಕ್ರಿಯಾಸು ವಿನಿಯುಜ್ಯತೇ॥

ಸಂಬೋಧನ ವಿಭಕ್ತಿಯು ಅನೇಕ ಶಬ್ದಗಳಿಗೆ ಬರಲಾರದು. ಅರ್ಥಪ್ರಸಿದ್ಧಿಯಿಲ್ಲದೆ ಪ್ರಯೋಗವು ಬರಲಾರದು; ಪ್ರಯೋಗವಿಲ್ಲದೆ ಶಾಸ್ತ್ರವು ಪ್ರತ್ಯಯವನ್ನು ವಿಧಿಸಲಾರದು. ಇದನ್ನು ಭಟ್ಟೋಜೀದೀಕ್ಷಿತರು ತ್ಯದಾದೇಃ ಸಂಬೋಧನಂ ನಾಸ್ತೀತ್ಯುಸರ್ಗಃ ಎಂದು ಸ್ಪಷ್ಟಪಡಿಸಿದ್ದಾರೆ. ತ್ಯದಾದಿಗಣಗಳಲ್ಲಿ ಪಾಠಮಾಡಲಾದ ಸರ್ವನಾಮಗಳಿಗೆ ಸಂಬೋಧನ ವಿಭಕ್ತಿಯಿಲ್ಲ ಎಂಬುದು ಸಾಧಾರಣ (ಸಾಪವಾದ) ನಿಯಮವೆಂದು ಅವರ ಅಭಿಪ್ರಾಯ. ತ್ಯದಾದಿಗಣದಲ್ಲಿ ಈ ಕೆಳಗಿನ ಸರ್ವನಾಮಗಳನ್ನು ಪಾಠಮಾಡಲಾಗಿದೆ- ತ್ಯದ್, ತದ್, ಯದ್, ಏತದ್, ಇದಮ್, ಅದಸ್, ಏಕ, ದ್ವಿ, ಯುಷ್ಮದ್, ಅಸ್ಮದ್, ಭವತು , ಕಿಮ್, ಈ ಪದಗಳಿಗೆ ಸಂಬೋಧನಪ್ರತ್ಯಯವು ಬರದಿರಲು ಪ್ರಯೋಗವಿಲ್ಲದಿರುವುದು ಕಾರಣ. ಆದರೆ ಇದೇ ಗಣದಲ್ಲಿ ಸೇರಿದ ಇದಮ್, ತದ್ ಶಬ್ದಗಳಿಗೆ ಸಂಬೋಧನಪ್ರತ್ಯಯವು ಬಂದು ಹೇ ಅಸೌ(ಎ!ಇವನೆ) ಹೇ ಸಃ (ಎ! ಅವನೆ) ಮೊದಲಾದ ಪ್ರಯೋಗಗಳು ತೀರ ಅಪರೂಪವಾಗಿ ಕಂಡುಬರುವುದನ್ನು ಮಹಾಭಾಷ್ಯಕಾರರಾದ ಪತಂಜಲಿಗಳು ಗುರುತಿಸಿ ಈ ನಿಯಮದ ಅಪವಾದವನ್ನು ತೋರಿಸಿ ಕೊಟ್ಟಿದ್ದಾರೆ. ಈ ಗಣದಲ್ಲಿ ಸೇರಿರುವ ಅನೇಕ ಪದಗಳಿಗೆ ಸಂಬೋಧನ ವಿಭಕ್ತಿಯು ಬರದಿರಲು ಕಾರಣವನ್ನು ಸ್ವಲ್ಪ ಆಲೋಚಿಸೋಣ.

ವ್ಯಾಕರಣವು ಅನುಶಾಸನರೂಪವಾದ ಶಾಸ್ತ್ರ ಪ್ರಯೋಗದಲ್ಲಿ ಬಂದಿರುವ ಶಬ್ದರೂಪಗಳಲ್ಲಿ ಯಾವುದು ಸರಿ, ಯಾವುದು ತಪ್ಪು; ಯಾವುದು ಸಾಧು, ಯಾವುದು ಅಸಾಧು; ಎಂದು ನಿರ್ಣಯಿಸುವುದಷ್ಟೇ ಈ ಶಾಸ್ತ್ರದ ಕಾರ್ಯ. ಇದು ಪ್ರಯೋಗಯೋಗ್ಯ ವಾದ ಪದಗಳನ್ನು ಸೃಷ್ಟಿ ಮಾಡುವ ಸಾಧನವಲ್ಲ. ಆದರೆ ಪ್ರಯುಕ್ತವಾದ ಪದಗಳ ಸಾಮಂಜಸ್ಯವನ್ನು ಆಂಜಸವಾಗಿ ಸಾರುವ ಮಾನದಂಡ. ಹೀಗಾಗಿ ಇದು ಕೆಲವು ಶಬ್ದಗಳಿಗೆ ಸಂಬೋಧನ ವಿಭಕ್ತಿಯ ಸಂಸ್ಕಾರವನ್ನು ಸಾರದಿರುವುದಕ್ಕೆ ಪ್ರಚುರ ಪ್ರಯೋಗವು ಇಲ್ಲದಿರುವುದೆ ಕಾರಣ. ಕಿಮ್ ಶಬ್ದದ ಅಥವಾ ಅಸ್ಮದ್ ಶಬ್ದದ (ಹೀಗೆ ತ್ಯದಾದಿಯಲ್ಲಿ ಸೇರಿಸಲಾದ ಹಲವು ಶಬ್ದಗಳ) ಸಂಬೋಧನಪ್ರತ್ಯಯಾಂತವಾದ ಪ್ರಯೋಗವು ವ್ಯವಹಾರದಲ್ಲಿಕಂಡುಬರುತ್ತಿಲ್ಲ. ಆದುದರಿಂದ ಶಾಸ್ತ್ರದಲ್ಲಿ ಅಂಥಹ ಪ್ರತ್ಯಯವಿಧಾನವು ಇರುವುದಿಲ್ಲ.

ಯುಷ್ಮದ್ , ಅಸ್ಮದ್ ಮೊದಲಾದ ಶಬ್ದಗಳ ಸಂಬೋಧನರೂಪವು ವ್ಯವಹಾರದಲ್ಲಿ ಪ್ರಯುಕ್ತವಾಗದಿರಲು ಏನುಕಾರಣ? ಅರ್ಥಪ್ರಸಿದ್ಧಿ ಇಲ್ಲದಿರುವುದು. ಅರ್ಥವನ್ನು ಅರಿತು, ತಾನು ತಿಳಿದ ಅರ್ಥವನ್ನು ಇತರರಿಗೆ ತಿಳಿಸುವುದಕ್ಕಾಗಿ ಮಾನವನು ಶಬ್ದಪ್ರಯೋಗವನ್ನು ಮಾಡುತ್ತಾನೆ. ಅರ್ಥವು ಪ್ರಸಿದ್ಧವಾಗದೆ ಶಬ್ದದ ಪ್ರವೃತ್ತಿಯಾದರೂ ಹೇಗೆ ಉಂಟಾಗುತ್ತದೆ?

ಅರ್ಥಪ್ರಸಿದ್ಧಿಯು ಇಲ್ಲದಿರಲು ಹಲವಾರು ಕಾರಣಗಳಿವೆ. ಅರ್ಥವು ಇಲ್ಲದಿರುವುದರಿಂದ ಅದರ ಪ್ರಸಿದ್ಧಿ ಯಾನ - ತೋರಿಕೆ ಇಲ್ಲದಿರಬಹುದು. ಇದಕ್ಕೆ ಉದಾಹರಣೆ ಗಗನಕುಸುಮ. ಅದು ಇಲ್ಲದಿರುವುದರಿಂದ ಯಾರಿಗೂ ಗೊತ್ತಿಲ್ಲ. ಯಾರಿಗೂ ತೋರುವುದಿಲ್ಲ. ಕೆಲವೊಮ್ಮೆ ಯಾವಾಗಲೊ, ಎಲ್ಲಿಯೊ , ಇರುವ ಅರ್ಥವು ಇನ್ನೊಂದು ಪ್ರದೇಶದಲ್ಲಿ , ಇನ್ನೊಂದು ಸಮಯದಲ್ಲಿ ಇಲ್ಲವಾಗುವುದರಿಂದ ಸಾಮಯಿಕವಾಗಿ ತೋರಿಬರದೆ ಅಪ್ರಸಿದ್ಧವಾಗುತ್ತದೆ. ಛಳಿಗಾಲದ ಛಳಿ ಬೇಸಿಗೆಯಲ್ಲಿ ಅಪ್ರಸಿದ್ಧ; ಮಳೆಗಾಲದ ಝುಡಿಮಳೆ ಛಳಿಗಾಲದಲ್ಲಿ ಅಪ್ರಸಿದ್ಧ. ಅಂಗಡಿಯಲ್ಲಿ ಇರುವ ಪಾತ್ರೆ ಮನೆಯಲ್ಲಿ ಇಲ್ಲ; ಮನೆಯಲ್ಲಿ ಇರುವ ಬಟ್ಟೆ ಅಂಗಡಿಯಲ್ಲಿ ಇಲ್ಲ. ಅಲ್ಲದೆ , ಅನ್ವಯವು ಅಪ್ರಸಿದ್ಧವಾಗಿ ಆ ಸಂಬಂಧದಿಂದ ಅರ್ಥವೆ ಅಪ್ರಸಿದ್ಧವಾಗುವ ಸಂಧರ್ಭಗಳು ಇವೆ. ಕಣ್ಣುಗಳಿಂದ ಕುಡಿಯುತ್ತಾನೆ ಎಂದು ಶಬ್ದಪ್ರಯೋಗವನ್ನು ಮಾಡಿದರೂ ಅದರ ನಿಯತವಾದ ಅರ್ಥವು ಪ್ರಸಿದ್ಧವಾಗಲಾರದು. ಕಣ್ಣುಗಳು ನೋಡುವುದಕ್ಕೆ ಸಾಧನವೆ ಹೊರತು ಕುಡಿಯುವುದಕ್ಕಲ್ಲ. ಕುಡಿಯುವ ಕ್ರಿಯೆಯಲ್ಲಿ ಸಾಧನವಾಗಿ ಕಣ್ಣುಗಳ ಅನ್ವಯವಿಲ್ಲ. ಆದುದರಿಂದ ಆ ಸಂಬಂಧದಿಂದ ಕಣ್ಣುಗಳು ಅಪ್ರಸಿದ್ಧವೇ ಆಗುತ್ತವೆ. ಕಿಸೆಯಲ್ಲಿ ಹಣವಿದೆ. ಯಾರೊ ಒಬ್ಬ ಕೇಳಿದಾಗ ಹಣವಿಲ್ಲ ಎಂದು ಉತ್ತರಿಸುತ್ತೇವೆ. ಕಿಸೆಯಲ್ಲಿ ಹಣವಿದೆಯಲ್ಲಾ; ಕಾಣುತ್ತಿದೆಯಲ್ಲಾ ಎಂದು ಆ ವ್ಯಕ್ತಿ ಹಟಹಿಡಿದರೆ ಅದು ನಿನಗೆ ಕೊಡುವುದಕ್ಕಲ್ಲಾ; ನಿನಗೆ ಕೊಡುವ ಹಣವಿಲ್ಲಾ ಎನ್ನುತ್ತೇವಲ್ಲವೆ? ಹಣವಿದ್ದಾಗಲೂ ಇಲ್ಲವೆನ್ನುವುದು ಹೇಗೆ ಸರಿ? ಕೊಡುವ ಕ್ರಿಯೆಯಲ್ಲಿ ಅನ್ವಯಿಸುವ ಹಣವು ಇಲ್ಲ ಎಂಬ ಮಾತಿಗೆ ನಿನಗೆ ಹಣವನ್ನು ಕೊಡುವುದಿಲ್ಲ ಎಂದೆ ಅರ್ಥ. ಆದ್ದರಿಂದ ಸಂಬಂಧ ಅಪ್ರಸಿದ್ಧಿಯಿಂದ ಸಂಬಂಧಿ ಅರ್ಥದ ಅಪ್ರಸಿದ್ಧಿಯು ಸಹಜವಾಗಿದೆ.

ಪ್ರಕೃತ , ತ್ಯದಾದಿಗಣದಲ್ಲಿ ಸೇರಿರುವ ಅನೇಕಪದಗಳ ನಿಯತವಾದ ಅರ್ಥಗಳ ಸಂಗಡ ಸಂಬೋಧನ ಪದಾರ್ಥದ ಅನ್ವಯವು ಸಂಘಟಿಸುತ್ತಿಲ್ಲವಾದುದರಿಂದ ಅರ್ಥಪ್ರಸಿದ್ಧಿಯಿಲ್ಲ. ಆದುದರಿಂದಲೆ ವಾಚಕಪ್ರತ್ಯಯದ ಸಂಯೋಜನೆಯಾಗಲಿ. ಪ್ರಯೋಗವಾಗಲಿ ಏರ್ಪಟ್ಟಿಲ್ಲ.

ಅಸ್ಮತ್ ಎಂಬಶಬ್ದಕ್ಕೆ - ನಾನು ಎಂದರ್ಥ. ಅಂದರೆ ಶಬ್ದಪ್ರಯೋಗವನ್ನು ಮಾಡುತ್ತಿರುವ ವ್ಯಕ್ತಿ ಎಂದು ಅಭಿಪ್ರಾಯ. ಅಸ್ಮದ್- ಅರ್ಥದಲ್ಲಿ ಸಂಬೋಧನವು ಅನ್ವಯಿಸುವುದಿಲ್ಲ. ಯಾರು ಸಂಬೋಧನವನ್ನು ಮಾಡುತ್ತಾರೊ ಅವನು ಮೈಮರೆತಿರುವಂತಿಲ್ಲ. ಎಚ್ಚೆತ್ತೆ ಇದ್ದ ಮೇಲೆ ಸಂಬೋಧನದ ಅವಶ್ಯಕತೆಯಿಲ್ಲ. ಸಂಬೋಧನಕ್ಕೆ ಒಳಗಾಗುವಂತಿದ್ದರೆ ಅವನು ಸಂಬೋಧ್ಯನೇ ಆಗುತ್ತಾನೆ. ಆಗ ಅವನೆ ಸಂಬೋಧಕನಾಗುವಂತಿಲ್ಲ. ಸಂಬೋಧ್ಯ ಬೇರೆ , ಸಂಬೋಧಕ ಬೇರೆ. ನನಗೆ ನಾನೆ ಸಂಬೋಧಕನಾಗುವುದಾದರೂ ಹೇಗೆ? ಆದುದರಿಂದ ಅಸ್ಮತ್ - ನಾನು ಸರ್ವನಾಮದ ಸಂಬೋಧನ ಪಥಮಾಂತ ಪ್ರಯೋಗವು ಭಾಷೆಯಲ್ಲಿ ಹುಟ್ಟಿಕೊಳ್ಳಲಿಲ್ಲ.

ಯುಷ್ಮತ್ ಸರ್ವನಾಮವು ನೀನು, ನೀವು ಎಂಬ ಅರ್ಥವನ್ನು ಬೋಧಿಸುತ್ತದೆ. ನೀನು ಎಂದರೆ ಸಂಬೋಧ್ಯನಾದ ವ್ಯಕ್ತಿ. ಯಾರು ನಮ್ಮಕಡೆಗೆ ತಿರುಗಿ, ನಮ್ಮ ಮಾತುಗಳನ್ನು ಕೇಳಲು ಸಿದ್ಧರಾಗಿರುತ್ತಾರೊ ಅವರನ್ನು ತಾನೆ ನೀನು -ನೀವು ಎಂದು ನಿರ್ದೇಶಿಸುತ್ತೇವೆ. ಆ ವ್ಯಕ್ತಿ ಸಂಬೋಧನಸಾರೋ ಹಿ ಯುಷ್ಮಚ್ಛಬ್ದ: ಎಂದು ಯುಷ್ಮತ್ ಶಬ್ದದ ಸ್ವಭಾವವನ್ನು ಗುರುತಿಸಿದ್ದಾರೆ. ಯಾರನ್ನು ನೀನು ಎಂದು ವ್ಯವಹರಿಸುತ್ತೇವೊ ಅಂಥಹ ಸಂಬುದ್ಧನಲ್ಲಿ ಸಂಬೋಧನದ ಸಂಬಂಧವಾದರೂ ಹೇಗೆ ಘಟಿಸುತ್ತದೆ? ತೂಕಡಿಸುವವನನ್ನು ಎಬ್ಬಿಸುವುದು ಹೇಗೆ? ಸಂಬೋಧನವೆಂದರೆ ಅನಭಿಮುಖನಾಗಿದ್ದವನನ್ನು ಅಭಿಮುಖನನ್ನಾಗಿ ಮಾಡುವುದಷ್ಟೆ. ಅನಭಿಮುಖತ್ವವೆ ಇಲ್ಲದಿದ್ದಾಗ- ಘಟಕ ಪದಾರ್ಥವು ಅಪ್ರಸಿದ್ಧವಾದಾಗ ಘಟಿತವಾದ ಸಂಬೋಧನವು ಸುತರಾಂ ಅಪ್ರಸಿದ್ಧವಾಗುತ್ತದೆಯಲ್ಲವೆ! ಆದ್ದರಿಂದ ಯಾವ ಭಾಷೆಯಲ್ಲಿಯೂ ಯುಷ್ಮತ್-ನೀನು ಎಂಬ ಅರ್ಥವನ್ನು ತಿಳಿಸುವ ಶಬ್ದಕ್ಕೆ ಸಂಬೋಧನ ಪ್ರತ್ಯಯವು ಬರಲು ಸಾಧ್ಯವಿಲ್ಲ.

ಕಿಮ್ ಶಬ್ದ ಯಾರು (ಯಾವನು, ಯಾವಳು) ಮತ್ತು ಏನು ಎಂಬ ಪ್ರಶ್ನಾರ್ಥಕವಾದ ಸರ್ವನಾಮ. ಪ್ರಶ್ನವೆಂದರೆ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿನ ಬಗ್ಗೆ ಅರಿಯುವ ನಮ್ಮ ಕುತೂಹಲವನ್ನು-ಜಿಜ್ಞಾಸೆಯನ್ನು ತಿಳಿಸುವ ಶಬ್ದವಷ್ಟೆ! ಯಾವುದೇ ಪ್ರಕಾರದ ಅರಿವು ಹುಟ್ಟದಿರುವಾಗ ಅಂಥ ವ್ಯಕ್ತಿಯನ್ನು ಸಂಬೋಧಿಸಲು ಸಾಧ್ಯವೆ ಇಲ್ಲ. ಯಾರ ಬಗ್ಗೆ ನಿಮಗೆ ಏನೂ ತಿಳಿದಿಲ್ಲವೊ ಅವರನ್ನು ಸ್ವಲ್ಪ ಕೂಗಿ ಎಂದರೆ ಯಾವ ದಿಗಿಲು ಉಂಟಾಗುತ್ತದೊ ಅದೇ ಸ್ಥಿತಿ, ಈಗಲೂ. ಜಿಜ್ಞಾಸಿತವಾದ ವ್ಯಕ್ತಿ ಅಭಿಮುಖವಾಗಿಯೇ ಇರಬಹುದು. ಆದರೆ ಯಾವ ವಿಶೇಷವನ್ನು ಮುಂದಿಟ್ಟುಕೊಂಡು ಅಭಿಮುಖನನ್ನಾಗಿ ಮಾಡುವುದು ಎಂಬುದೇ ಇಲ್ಲಿನ ಸಮಸ್ಯೆ. ಯಾವುದೊ ಒಂದು ವಿಶೇಷವು ತಿಳಿದುಬಂದರೆ ಅದರಬಗ್ಗೆ ಜಿಜ್ಞಾಸೆಯೆ ಹುಟ್ಟದಿರುವುದರಿಂದ ಆ ಸಲುವಾಗಿ ಕಿಮ್ ಶಬ್ದವನ್ನು ಪ್ರಯೋಗ ಮಾಡಲಾಗದು. ಹುಡುಗ ನಿನ್ನ ಹೆಸರೇನು? ಎಂದು ಪ್ರಶ್ನಿಸುವಾಗ ಎದುರುಗಡೆ ಇರುವ ವ್ಯಕ್ತಿ ಹುಡುಗ ಎಂದು ಗೊತ್ತು; ಆದರೆ ಅವನ ಹೆಸರು ತಿಳಿದಿಲ್ಲ. ಆದುದರಿಂದ ಹೆಸರನ್ನು ಮಾತ್ರ ಪ್ರಶ್ನಿಸಲಾಗಿದೆ. ಆ ವ್ಯಕ್ತಿ ಹುಡುಗನೆಂಬುದೆ ತಿಳಿಯದಿದ್ದರೆ ಈ ಪ್ರಶ್ನೆಯನ್ನು ಮಾಡಲು ಸಾಧ್ಯವೆ? ಹುಡುಗನೆಂದು ಸಂಬೋಧಿಸಲು ಶಕ್ಯವಿತ್ತೆ? ಆದುದರಿಂದ ಕಿಮ್-ಈ ಸರ್ವನಾಮಕ್ಕೂ, ಇದರ ಸಮಾನಾರ್ಥಕವಾದ ಭಾಷಾಂತರದ ಶಬ್ದಗಳಿಗೂ ಸಂಬೋಧನ ವಿಭಕ್ತಿಯು ಬರುವಂತಿಲ್ಲ.

ಹಾಗಾದರೆ ತ್ಯದಾದಿಗಣದಲ್ಲಿಯೆ ಸೇರಿರುವ ಅದಸ್ ಮತ್ತು ತದ್ ಸರ್ವನಾಮಗಳಿಗೆ ಅಪರೂಪವಾಗಿ ಆದರೂ ಸಂಬೋಧನಪ್ರತ್ಯಯವು ಬಂದು ಹೇ ಅಸೌ (ಏ-ಇವನೆ) ಹೇ ಸಃ (ಏ-ಅವನೆ) ಎಂಬ ಪ್ರಯೋಗಗಳು ಹುಟ್ಟಿಕೊಳ್ಳಲು ಏನು ಕಾರಣ?

ಇವನು-ಕಣ್ಣಿಗೆ ಕಾಣುವವನು, ಹತ್ತಿರವಿದ್ದವನು, ಅವನು ಕಣ್ಣಿಗೆ ಕಾಣುತ್ತಲೂ

ಇರಬಹುದು, ಕಾಣದೆಯೂ ಇರಬಹುದು; ಆದರೆ ಸ್ವಲ್ಪದೂರವಿದ್ದವನು. (ಈ ದೂರವು ಕಾಲಿಕವೂ, ದೈಶಿಕವೂ ಆಗಿರಬಹುದು). ಅಂಥವನನ್ನು ನಾವು ಏ-ಇವನೆ ಇಲ್ಲಿ ಬಾ ಎಂದು ಕೂಗಿ, ಬರಲು ಆಜ್ಞಾಪಿಸಬಹುದು. ಅಂದರೆ ಸಂಬೋಧನಕ್ಕೆ ಪಕ್ಕಾಗುವ ಅರ್ಹತೆ ಇವನಲ್ಲಿ ಇದೆ. ಇವನು ಎಂದು ಕರೆಸಿಕೊಳ್ಳುವ ವ್ಯಕ್ತಿಯಲ್ಲಿ ಪ್ರತ್ಯಕ್ಷತ್ವ - ನಿಕಟತೆಗಳು ನಮ್ಮ ಅರಿವಿಗೆ ಬಂದಿವೆ. ಅವು ಅವನಿಗೂ ತಿಳಿಯುವಂತೆ ಇವೆ. ಏಕೆಂದರೆ ಏ-ಇವನೆ ಎಂದು ನಾವು ಸಂಬೋಧಿಸುವಾಗ ಈ ಸಂಬೋಧನೆ ತನಗೆ ಸಂಬಂಧಿಸಿದೆ ಎಂದು ಅವನು ಅರ್ಥಮಾಡಿಕೊಳ್ಳುತ್ತಾನೆ. ಆದುದರಿಂದ ಏಕ, ದ್ವಿ, ಮೊದಲಾದ ಶಬ್ದಗಳಂತೆ ಇದಮ್ ಅದಸ್ ಮತ್ತು ತದ್ ಎಂಬ ಸರ್ವನಾಮಗಳಿಗೆ ಸಂಬೋಧನಪ್ರತ್ಯಯವು ಬರುವ ಅಪರೂಪದ ಸಂದರ್ಭಗಳಿವೆ.

1. ಎಲ್. ಗುಂಡಪ್ಪ (1903 – 1986)

ಪ್ರೊ. ನಾ. ಗೀತಾಚಾರ್ಯ

ಕನ್ನಡ ಸಾಹಿತ್ಯದ ಹಿರಿಯತಲೆಮಾರಿನ ಶ್ರೇಷ್ಠವಿದ್ವಾಂಸರ ಸಾಲಿನಲ್ಲಿ ಗುರುತಿಸಲ್ಪಡುವ ಎಲ್. ಗುಂಡಪ್ಪ ಅವರು ವಿದ್ವತ್ತನ್ನೆ ವಿನಯವಾಗಿಸಿಕೊಂಡಿದ್ದ ಶ್ರೇಷ್ಠ ಸಾಹಿತಿಗಳು. ಭಾಷೆ – ಸಾಹಿತ್ಯ – ಸಂಸ್ಕೃತಿಗಳಲ್ಲಿನ ಬೇರುಗಳನ್ನು ಹುಡುಕುವ ಆಳವಾದ ಪಾಂಡಿತ್ಯ, ವಿಸ್ತಾರವಾದ ಅಧ್ಯಯನಗಳ ಸಂಗಮವಾಗಿದ್ದ ಗುಂಡಪ್ಪನವರು ಕನ್ನಡ, ತಮಿಳು, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರೌಢತೆಯನ್ನು ಗಳಿಸಿದ್ದ ಅಪರೂಪದ ವಿದ್ವಾಂಸರು. 'ತಿರುಕ್ಕುರಳ್'ನ ಅನುವಾದ, 'ಆದಿಪುರಾಣಸಂಗ್ರಹ'ದ ಸಂಪಾದನೆ, 'ಭಾಸನ ನಾಟಕಗಳು' ಪುಸ್ತಕಗಳ ಮೂಲಕ ಕನ್ನಡ ಸಾಹಿತ್ಯಲೋಕದಲ್ಲಿ ವಿದ್ವಾಂಸರಾಗಿ ಎಲ್. ಗುಂಡಪ್ಪನವರು ಶಾಶ್ವತಸ್ಥಾನವನ್ನು ಪಡೆದಿದ್ದಾರೆ. ವಿಶೇಷವಾಗಿ ತಮಿಳಿನ ಪ್ರಾಚೀನ ಸಾಹಿತ್ಯವನ್ನು ಕನ್ನಡಕ್ಕೆ ಪರಿಚಯಿಸಿಕೊಡುವಲ್ಲಿ ಇವರ ಹೆಸರು ಪ್ರಸಿದ್ಧಿಯನ್ನು ಪಡೆದಿದೆ.

ಎಲ್. ಗುಂಡಪ್ಪನವರು ಜನವರಿ 8, 1903ರಲ್ಲಿ ಹಾಸನ ಜಿಲ್ಲೆಯ ಹಳೆಬೀಡಿನ ಸಮೀಪದ ಮತಿಘಟ್ಟದಲ್ಲಿ 'ದಾನದಮನೆ' ಎಂದೇ ಹೆಸರಾಗಿದ್ದ ಪ್ರಸಿದ್ಧ ವೈದಿಕ ಮನೆತನದಲ್ಲಿ ಲಿಂಗಣ್ಣಯ್ಯ ಮತ್ತು ಚೆನ್ನಮ್ಮ ಸಾತ್ವಿಕ ದಂಪತಿಗಳಿಗೆ ಮೊದಲನೇ ಮಗನಾಗಿ ಜನಿಸಿದರು. ತುಂಬು ಕುಟುಂಬದಲ್ಲಿ ಬೆಳೆದ ಗುಂಡಪ್ಪನವರು ಮನೆಯ ಧಾರ್ಮಿಕ ವಾತಾವರಣದಲ್ಲಿ ಶುದ್ಧ ವೈದಿಕನಿಷ್ಠೆಯಲ್ಲಿ ಬಾಲ್ಯವನ್ನು ಕಳೆದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಬೆಳವಾಡಿ ಮತ್ತು ಕಳಸಾಪುರಗಳಲ್ಲಿ 1912 ರಿಂದ 14ರಲ್ಲೂ, ಮಾಧ್ಯಮಿಕ ವಿದ್ಯಾಭ್ಯಾಸವನ್ನು ಆಗಿನ ಎ.ವಿ.ಸ್ಕೂಲ್‌ನಲ್ಲಿ ಬೇಲೂರಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲೂ 1915 ರಿಂದ 19ರಲ್ಲೂ ಮಾಡಿದರು. (ಈ ಶಿಕ್ಷಣವನ್ನು ಆಗ ಎಲ್.ಎಸ್. ಎಂದು ಕರೆಯುತ್ತಿದ್ದರು.)

ಗುಂಡಪ್ಪನವರು ಆಧುನಿಕ ಶಿಕ್ಷಣದೊಂದಿಗೆ ಮನೆತನದಿಂದ ಬಂದಿದ್ದ ವೇದಾಧ್ಯಯನವನ್ನೂ, ಸಂಸ್ಕೃತವನ್ನೂ ಮನೆಯಿಂದಲೇ ಆರಂಭ ಮಾಡಿ ಸ್ಥಳೀಯ ಪಂಡಿತರಿಂದ ಕ್ರಮಬದ್ಧವಾಗಿ ಕಲಿಯುತ್ತಿದ್ದರು. ತಂದೆ ಲಿಂಗಣ್ಣಯ್ಯನವರಿಗೆ ಇಬ್ಬರು ಸೋದರರು, ಒಬ್ಬ ಸೋದರಿ ಇದ್ದು ಈ ದೊಡ್ಡಪ್ಪ-ದೊಡ್ಡಮ್ಮ, ಚಿಕ್ಕಪ್ಪ-ಚಿಕ್ಕಮ್ಮ, ಅತ್ತೆ-ಮಾವಂದಿರು ಮತ್ತು ಅವರ ಮಕ್ಕಳುಗಳು ಹಾಗೂ ಗುಂಡಪ್ಪನವರ ಸೋದರ ಸೋದರಿಯರು ಹೀಗೆ ಮನೆ ತುಂಬ ಜನವಿದ್ದ ತುಂಬು ಕುಟುಂಬದ ಸದಸ್ಯರಾಗಿದ್ದರು. ತಂದೆಯವರು ವೇದಾಧ್ಯಯನದಷ್ಟೇ ಪ್ರಮುಖವಾಗಿ ತೋಟಗಾರಿಕೆ ಮತ್ತು ವ್ಯವಸಾಯದ ಕೃಷಿ ಚಟುವಟಿಕೆಯನ್ನು ರೂಢಿಸಿಕೊಂಡಿದ್ದ ಗೌರವಾನ್ವಿತ ಜಮೀನ್ದಾರ ಮನೆತನದ ಸದಸ್ಯರಾಗಿದ್ದರೂ ಗುಂಡಪ್ಪನವರ ವಿದ್ಯಾಭ್ಯಾಸಕ್ಕೆ ಕುಂದುಂಟಾಗಲಿಲ್ಲ. ಎ.ವಿ. ಸ್ಕೂಲಿನಲ್ಲಿ ಓದುತ್ತಿದ್ದಾಗಲೂ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವೇದಾಧ್ಯಯನವನ್ನು

ಮುಂದುವರಿಸಿ ಸಂಸ್ಕೃತ ಸಾಹಿತ್ಯಾಧ್ಯಯನವನ್ನು ಮಾಡಿದ್ದರು.

ಚಿಕ್ಕಮಂಗಳೂರಿನಲ್ಲಿ ಪ್ರೌಢಶಾಲಾ ವ್ಯಾಸಂಗದಲ್ಲಿದ್ದಾಗ (1925) ಸಂಸ್ಕೃತ ಅಧ್ಯಯನದಲ್ಲಿದ್ದ ಗುಂಡಪ್ಪನವರಿಗೆ ತಮ್ಮ ಪ್ರತಿಭೆಯನ್ನು ಪ್ರಕಾಶಿಸುವ ಒಂದು ಸಂದರ್ಭ ಒದಗಿ ಬಂತು. ಶೃಂಗೇರಿ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳು ಚಿಕ್ಕಮಗಳೂರಿಗೆ ಆಗಮಿಸಿದ್ದಾಗ ಗುಂಡಪ್ಪನವರು ಸ್ವರಚಿತ ಸಂಸ್ಕೃತ ಸ್ವಾಗತಗೀತೆಯನ್ನು ಸ್ವಾಮಿಗಳ ಮುಂದೆ ಹಾಡಿದರು. ಸ್ವಾಮಿಗಳು ಗುಂಡಪ್ಪನವರ ಪ್ರತಿಭೆಯನ್ನು ಮೆಚ್ಚಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಶ್ರೀಮಠದಿಂದ ಪ್ರೋತ್ಸಾಹಧನವನ್ನು ನೀಡಿದರು. ಐದು ವರ್ಷಗಳವರೆಗೆ ಶ್ರೀಮಠದ ವೇತನ ಪಡೆದು ಮೈಸೂರಿನಲ್ಲಿ ಗುಂಡಪ್ಪನವರು ಉನ್ನತ ವ್ಯಾಸಂಗ ಮಾಡಿ 1928ರಲ್ಲಿ ಬಿ.ಎ. ಪದವಿಯನ್ನು 1930ರಲ್ಲಿ ಕನ್ನಡ ಎಂ.ಎ ಪದವಿಯನ್ನು ಪಡೆದರು.

ಆಗ ಮೈಸೂರು ಮಹಾರಾಜಕಾಲೇಜು ಕನ್ನಡ ಸಾಹಿತ್ಯದ ಪುನರುಜ್ಜೀವನದ ಕೇಂದ್ರವಾಗಿತ್ತು. ಆಚಾರ್ಯ ಬಿ.ಎಂ.ಶ್ರೀ.ಯವರ ನೇತೃತ್ವದಲ್ಲಿ ಕನ್ನಡಸಾಹಿತ್ಯಚಟುವಟಿಕೆಗಳು ಚಿಗುರೊಡೆಯುತ್ತಿದ್ದವು. ಗುಂಡಪ್ಪನವರು ಕನ್ನಡ ಎಂ.ಎ.ತರಗತಿಯ 2ನೇ ತಂಡದ ವಿದ್ಯಾರ್ಥಿ. ಮೊದಲ ತಂಡದಲ್ಲಿ ಕುವೆಂಪು ಇದ್ದರು. ಗುಂಡಪ್ಪನವರಿಗೆ ಈ ಸಾಹಿತ್ಯ ವಾತಾವರಣ ಅನುಕೂಲವಾಯಿತು. ತಮ್ಮಲ್ಲಿದ್ದ ಪ್ರತಿಭೆ ಹೊರಬರಲು ರಾಜಮಾರ್ಗ ದೊರಕಿತು. ಪುಳಕಿತರಾಗಿ ಕವಿತೆಗಳನ್ನು ರಚಿಸತೊಡಗಿದರು. ಸ್ನೇಹಿತರು-ಗುರುಗಳಿಂದ ಮೆಚ್ಚಿಗೆ ಪಡೆದರು. ಬಿ.ಎಂ.ಶ್ರೀಕಂಠಯ್ಯನವರಿಗೆ ಆಗಿನ ಉತ್ಸಾಹಿ ವಿದ್ಯಾರ್ಥಿಗಳು ಅರ್ಪಿಸಿದ 'ಕಿರಿಯ ಕಾಣಿಕೆ'ಯ ಆಧುನಿಕ ಕನ್ನಡ ಕವಿ ಬಳಗದಲ್ಲಿ ಗುಂಡಪ್ಪನವರೂ ಒಬ್ಬರಾದರು. ಮೊದಲಿಗೆ ಕವಿಯಾಗಿ ಕಾಣಿಸಿಕೊಂಡರೂ ಮುಂದೆ ವಿದ್ವಾಂಸರಾದರು. ಬಿ.ಎಂ.ಶ್ರೀ, ತೀ.ನಂ.ಶ್ರೀ, ಎ.ಆರ್.ಕೃ, ಟಿ.ಎಸ್. ವೆಂಕಣ್ಣಯ್ಯನವರಂಥ ಘನವಿದ್ವಾಂಸ ಗುರುಗಳ ಗರಡಿಯಲ್ಲಿ ಪಳಗಿದ ಶಿಷ್ಯ ಗುಂಡಪ್ಪನವರು ತಮ್ಮ ವಿದ್ವತ್ತಿನ ಸಾಧನೆಯಿಂದ ಅವರ ಮಾರ್ಗದಲ್ಲೇ ಮುನ್ನಡೆದು ತಾವೂ ಆ ಗುರುವರ್ಯರ ಸ್ಥಾನದಲ್ಲಿ ನಿಲ್ಲುವ ಅರ್ಹತೆಯನ್ನು ಗಳಿಸಿಕೊಂಡ ಶ್ರೇಷ್ಠ ವಿದ್ವಾಂಸರಾಗಿದ್ದಾರೆ.

ಕೆಲವು ಕಾಲ ಮೈಸೂರಿನ ವ್ಯವಸಾಯ ಶೋಧಕ ಸಂಘದ 'ವ್ಯವಸಾಯ ಪತ್ರಿಕೆ'ಯಲ್ಲಿ ಸಂಪಾದಕರಾಗಿ ಕೆಲಸಮಾಡಿ 1933ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೇವೆಗೆ ನಿಯೋಜಿತರಾದ ಗುಂಡಪ್ಪನವರು 1942ರ ವರೆಗೆ ಇಂಗ್ಲಿಷ್-ಕನ್ನಡ ನಿಘಂಟು ಇಲಾಖೆಯಲ್ಲಿ ಸೇವೆ ಸಲ್ಲಿಸಿ ಮ್ಯಾನೇಜರ್ ಮತ್ತು ಪ್ರಥಮ ಸಹಾಯಕರಾಗಿದ್ದರು. ನಂತರ ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕವಾದರು. 1957ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಕಚೇರಿಗೆ ಎರವಲುಸೇವೆಗಾಗಿ ಬಂದು 1958ರಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದರೂ. ನಿಘಂಟು ಇಲಾಖೆಯಲ್ಲಿ 1963ರವರೆಗೂ ಸಂಪಾದಕರಾಗಿ ಸೇವೆ ಸಲ್ಲಿಸಿದರು. ನಂತರ 1966ರವರೆಗೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿ ಪತ್ರಿಕಾ ನಿಘಂಟನ್ನು

ಸಂಪಾದಿಸಿದ್ದಾರೆ. ನಂತರ 1972ರ ವರೆಗೆ ಬಿ.ಎಂ.ಎಸ್.ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ ಗಾಂಧಿ ಶತಮಾನೋತ್ಸವ ಸ್ಮರಣ ಸಂಚಿಕೆಯ ಸಂಪಾದಕರಾಗಿ, 'ಕರ್ನಾಟಕಪರಂಪರೆ' (Karnataka through the agesನ ಅನುವಾದ) ಭಾಷಾಂತರ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರಲ್ಲದೆ, ಈ ಸಂಪುಟದ ಹಲವಾರು ಲೇಖನಗಳನ್ನು ಭಾಷಾಂತರ ಮಾಡಿದ್ದಾರೆ.

ಎಂ.ಎ. ವ್ಯಾಸಂಗದ ತರುಣದಲ್ಲಿ ಅಕ್ಕಿಹೆಬ್ಬಾಳಿನ ಶಾರದಮ್ಮ ಅವರನ್ನು ವಿವಾಹವಾಗಿ ಸಂಸಾರವಂದಿಗರಾದ ಗುಂಡಪ್ಪನವರು ದೊಡ್ಡ ಕುಟುಂಬದ ಹೊಣೆಗಾರರಾದರೂ, ಇಬ್ಬರೂ ಗಂಡು ಮಕ್ಕಳು ಮತ್ತು ಐದು ಜನ ಹೆಣ್ಣು ಮಕ್ಕಳ ತಂದೆಯಾಗಿ, ಮನೆತುಂಬ ಮಕ್ಕಳಿದ್ದರೂ ಸೋದರರ ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಆಸರೆಯಾಗಿದ್ದರು. ತಂದೆಯಂತೆಯೇ ಮಕ್ಕಳೂ ಉನ್ನತ ವ್ಯಾಸಂಗಗಳನ್ನು ಮಾಡಿ ವಿದೇಶಗಳಿಗೂ ಹೋಗಿ ಉತ್ತಮ ಹುದ್ದೆಗಳನ್ನು ಪಡೆದು ಜೀವನದಲ್ಲಿ ಸುಭದ್ರನೆಲೆಗಳನ್ನು ಪಡೆಯುವಂತೆ ಮಾಡುವಲ್ಲಿ ಗುಂಡಪ್ಪನವರು ಜವಾಬ್ದಾರಿಯುತ ತಂದೆಯಾಗಿದ್ದಾರೆ. ಮಕ್ಕಳುಗಳೆಲ್ಲ ಸಾಹಿತ್ಯ – ವಿಜ್ಞಾನ ಕ್ಷೇತ್ರಗಳಲ್ಲಿ ಎಂ.ಎ. ಪಿ.ಎಚ್‌ಡಿ. ಪದವೀಧರರಾಗಿದ್ದರೂ ಸಂಗೀತದಲ್ಲಿ ತರಬೇತಿ ಪಡೆದು ಕರ್ನಾಟಕ ಸಂಗೀತ, ಭಾವಗೀತೆಗಳು ತಂದೆಯವರ ಜಾನಪದ ಹಾಡುಗಳ ಸಂಗ್ರಹಗಳನ್ನು ಹಾಡುವ 'ಎಲ್.ಜಿ.ಸಿಸ್ಟರ್ಸ್' ಹೆಸರಿನ ಸಂಗೀತ ಕಲಾವಿದರಾಗಿಯೂ ಹೆಸರು ಮಾಡಿದ್ದರು. ಮಕ್ಕಳ ಮೂಲಕ ವಿದೇಶ ಪ್ರವಾಸವನ್ನು ಮಾಡಿರುವ ಗುಂಡಪ್ಪನವರು ಪ್ರಗತಿಪರ ಚಿಂತಕರಾಗಿ ಭಾರತೀಯ ಸಾಹಿತ್ಯ – ಸಂಸ್ಕೃತಿಯ ಬಗ್ಗೆ ವಿದೇಶೀಯರಿಗೆ ಉಪನ್ಯಾಸ ನೀಡಿದ್ದಾರೆ. 83 ವರ್ಷಗಳ ತುಂಬುಜೀವನ ನಡೆಸಿದ ಗುಂಡಪ್ಪನವರು ನವೆಂಬರ್ 1986ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಗುಂಡಪ್ಪನವರು ಬಹುಭಾಷಾ ವಿದ್ವಾಂಸರು. ಬಾಲ್ಯದಲ್ಲೇ ಕಲಿತು ರೂಢಿಸಿಕೊಂಡಿದ್ದ ಸಂಸ್ಕೃತದ ಜೊತೆಗೆ ಇಂಗ್ಲಿಷ್ ಮತ್ತು ತಮಿಳು ಭಾಷೆ–ಸಾಹಿತ್ಯವನ್ನು ಕರಗತ ಮಾಡಿಕೊಂಡಿದ್ದರು. ಈ ಮೂಲಕ ಭಾಷೆಗಳನ್ನು ಅರ್ಥಪೂರ್ಣವಾಗಿ ಕನ್ನಡಕ್ಕೆ ದುಡಿಸಿಕೊಳ್ಳುವ ಶ್ರೇಷ್ಠ ಅನುವಾದಕರಾಗಿ ಗುರುತಿಸಿಕೊಂಡಿದ್ದಾರೆ. ಈ ಮೂರು ಭಾಷೆಗಳ ಶ್ರೇಷ್ಠಕೃತಿಗಳನ್ನು ಕನ್ನಡಕ್ಕೆ ಕೊಟ್ಟು ಕನ್ನಡ ಸಾಹಿತ್ಯದಲ್ಲಿ ಶಾಶ್ವತಸ್ಥಾನವನ್ನು ಪಡೆದಿದ್ದಾರೆ.

ತಮಿಳಿನ ಪ್ರಾಚೀನ ಶ್ರೇಷ್ಠಕೃತಿ ತಿರುಕ್ಕುರಳ್ (1955) ಅನ್ನು ಮೂಲ ಕುರಳ್ ಛಂದಸ್ಸಿನಲ್ಲಿ ಮತ್ತು ಹಳಗನ್ನಡದಲ್ಲಿ ಕನ್ನಡಕ್ಕೆ ಅನುವಾದಿಸಿ ಕನ್ನಡ–ತಮಿಳುಗಳ ಭಾಷಾ ಬಾಂಧವ್ಯವನ್ನು ದಾಖಲಿಸಿದ್ದಾರೆ. ಹಳಗನ್ನಡಕ್ಕೂ ಕುರಳನ್ ತಮಿಳಿಗೂ ಇರುವ ಹತ್ತಿರದ ಸಂಬಂಧವನ್ನು ಈ ಕೃತಿಯಲ್ಲಿ ನೀಡಿರುವ ಪದಕೋಶದ ಮೂಲಕ ತೋರಿಸಿದ್ದಾರೆ. ಕೆಲವು ಹೊಸ ಪದಗಳನ್ನು ಸೃಷ್ಟಿಸಿರುವ ಗುಂಡಪ್ಪನವರು ಮೂಲಕನ್ನಡದ ಸೊಗಸನ್ನೂ ಪರಿಚಯಿಸಿದ್ದಾರೆ. ತಮಿಳು ಶ್ರೇಷ್ಠ ಕೃತಿಗಳಾದ ತಿರುವಾಚಕಂ,

ಪೆರಿಯಪುರಾಣ, ನಾಲ್ಮಣಿ ಕಡುಕು (ನೀತಿಶತಕ – 1939), ಉದಯನ ಚರಿತ್ರ ಸಂಗ್ರಹ (ಪೆರಗತ್ಯೆ – 1948) ಮುಂತಾದ ಕೃತಿಗಳಲ್ಲಾ ಕನ್ನಡಕ್ಕೆ ಪರಿಚಯಿಸಿದ್ದಾರೆ. ಸಿ.ರಾಜಗೋಪಾಲಾಚಾರಿ (ರಾಜಾಜಿ)ಯವರ ಬರಹಗಳುಳ್ಳ ವ್ಯಾಸರಜಾತಕ (1951– ವಾಸಿರ್‌ವಿರುಂದು) ಸುಬ್ರಹ್ಮಣ್ಯಭಾರತಿಯುವರ ಕವನಗಳಂತಹ ಆಧುನಿಕ ಅನುವಾದಗಳಲ್ಲಾ ಮಾಡಿರುವ ಗುಂಡಪ್ಪನವರು ತಮಿಳು–ಕನ್ನಡ ಬಾಂಧವ್ಯವೃದ್ಧಿಯಲ್ಲಿ ಗಣನೀಯ ಕೊಡುಗೆ ಸಲ್ಲಿಸಿದ್ದಾರೆ.

ಎಲ್.ಗುಂಡಪ್ಪನವರು ಸಂಸ್ಕೃತ ಸಾಹಿತ್ಯದ ಮೂಲಕ ಕನ್ನಡಕ್ಕೆ ಕೊಟ್ಟಿರುವ ಕೃತಿಗಳಲ್ಲಿ ಮುಖ್ಯವಾದುದು ಭಾಸನ ಏಕಾಂತನಾಟಕಗಳ ಅನುವಾದ.(1937) ತಿರುವಾಂಕೂರಿನ ಟಿ. ಗಣಪತಿಶಾಸ್ತ್ರಿಗಳ ಮೂಲಕ ನೂತನವಾಗಿ ಭಾರತೀಯ ಸಾಹಿತ್ಯಕ್ಕೆ ಪರಿಚಯವಾಗಿ ಚರ್ಚೆಯಲ್ಲಿದ್ದ ಭಾಸಮಹಾಕವಿಯ 13 ನಾಟಕಗಳನ್ನು ಎಲ್. ಗುಂಡಪ್ಪನವರು ತರುಣದಲ್ಲೇ ಕನ್ನಡಕ್ಕೆ ಪರಿಚಯಿಸುವ ಮೂಲಕ –'ಭಾಸನ ಕೃತಿಗಳ ಬಗೆಗೆ ಮೌಲಿಕ ಚರ್ಚೆ ನಡೆಯಲು ದಾರಿಯಾಯಿತು ಎಂದು ಪ್ರೊ|| ಎಂ.ಹಿರಿಯಣ್ಣ, ಶ್ರೀರಂಗ ಮುಂತಾದ ಪ್ರಮುಖರಿಂದ ಪ್ರಶಂಸೆಗೊಳಗಾದ ಈ ಕೃತಿಯ ಪ್ರಕಟಣೆಯ ನಂತರವೇ ಪ್ರೊ|| ಎ.ಆರ್. ಕೃಷ್ಣಶಾಸ್ತ್ರೀಗಳಿಂದ ಸಂಸ್ಕೃತ ನಾಟಕಗಳು ಎಂಬ ಅಧ್ಯಯನ ಗ್ರಂಥ ಬರಲು ಸಾಧ್ಯವಾದದ್ದು. ಕನ್ನಡ ಭಾಷೆ–ಸಾಹಿತ್ಯದ ಅಧ್ಯಯನಕ್ಕೆ ಅಗತ್ಯವಾದ ಮೂಲ ಆಕರಸಾಮಾಗ್ರಿಗಳನ್ನು ಅನ್ಯಭಾಷೆಗಳಿಂದ ಒದಗಿಸಿದ ಕೀರ್ತಿ ಎಲ್. ಗುಂಡಪ್ಪನವರದ್ದಾಗಿದೆ.

ಪ್ರತಿಜ್ಞಾ ಯೌಗಂಧರಾಯಣ (1937) ಚಾರುದತ್ತ (1939) ಪಂಚರಾತ್ರ (1946) ಸ್ವಪ್ನವಾಸವದತ್ತ(1947) ಎಂಬೀ ಬಿಡಿಬಿಡಿಯಾದ ಪ್ರತ್ಯೇಕ ಕೃತಿಗಳನ್ನೆಲ್ಲಾ 'ಶ್ರೀ ಚಾಮುಂಡಿಕಾಲ ನಿಘಂಟು (1955) ಎಂಬ ಮುಮ್ಮಡಿ ಕೃಷ್ಣರಾಜ ಒಡೆಯರ ಸಂಸ್ಕೃತ ನಿಘಂಟಿನ ಅನುವಾದವನ್ನೆಲ್ಲಾ ಕೊಟ್ಟಿದ್ದಾರೆ.

ಅನೇಕ ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೆ ತಂದಿರುವ ಗುಂಡಪ್ಪನವರು ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುತ್ತಿದ್ದ ನವೋದಯ ಕಾಲದಲ್ಲಿ ಅದಕ್ಕೆ ಪೂರಕವಾದ ಇಂಗ್ಲಿಷ್ ಸಾಹಿತ್ಯದ ಪರಿಚಯವನ್ನು ಸಮರ್ಥವಾಗಿ ಮಾಡಿಕೊಂಡಿದ್ದಾರೆ. ಟಾಲ್‌ಸ್ಟಾಯ್‌ಯವರ ಕಥೆಗಳು (1934) ಗುಂಡಪ್ಪನವರ ಇಂಗ್ಲಿಷ್ ಭಾಷಾ ಪ್ರೌಢಿಮೆಗೆ ಮತ್ತು ಪ್ರತಿಭೆಗೆ ದ್ಯೋತಕವಾಗಿದ್ದು, ಈವರೆಗೆ ಮೂರು ಮುದ್ರಣಗಳನ್ನು ಪಡೆದಿದೆ. ಸೊಹ್ರಾಬ್ ಮತ್ತು ರೂಸ್ತುಮ್ (1947) ಮ್ಯಾಥ್ಯೂ ಅರ್ನಾಲ್ಡ್‌ನ ಈ ಪದ್ಯದ ಅನುವಾದಕ್ಕೆ 1930ರಲ್ಲೇ ಬಿ.ಎಂ.ಶ್ರೀ. ಚಿನ್ನದ ಪದಕ ಲಭಿಸಿದೆ. ಕುಟುಂಬ ಸೌಖ್ಯ (1951–ಫ್ಯಾಮಿಲಿ ಹ್ಯಾಪಿನೆಸ್) 'ಕ್ರೈಟ್ಸರ್ ಸೊನಾಟ', 'ನರಕದ ನಾಶ ಮತ್ತು ಪುನರುದ್ಧಾರ' ಎಂಬ ಕೆಲವು ಟಾಲ್‌ಸ್ಟಾಯ್‌ರ ಕಥೆಗಳ ಅನುವಾದ ಇನ್ನೂ ಹಸ್ತಪ್ರತಿ ರೂಪದಲ್ಲೇ ಇವೆ. ಆರ್.ಎಲ್. ಸ್ಟೀವನ್‌ಸನ್‌ನ ಡಾ|| ಜೆಕಲ್ ಅಂಡ್ ಮಿಸ್ಟರ್‌ಹೈಡ್ ಕಾದಂಬರಿಯ ಅನುವಾದ 'ನರರಾಕ್ಷಸ' ಕರ್ಮವೀರ ದಲ್ಲಿ ಪ್ರಕಟವಾಗಿದೆ ಎಂದು ಅವರ ಮಗಳು ಡಾ|| ಎಲ್. ಜಿ. ಸುಮಿತ್ರ ಅವರು ಹೇಳುತ್ತಾರೆ.

ಕೇವಲ ಅನುವಾದ ಸಾಹಿತ್ಯಕ್ಕಷ್ಟೇ ತಮ್ಮ ವಿದ್ವತ್ತನ್ನು ಸೀಮಿತಗೊಳಿಸದೆ 'ಆದಿಪುರಾಣ ಸಂಗ್ರಹ' (1955)ವನ್ನು ಸಂಪಾದಿಸುವ ಮೂಲಕ ಎಲ್. ಗುಂಡಪ್ಪನವರು ಶ್ರೇಷ್ಠ ಮಟ್ಟದ ವಿದ್ವಾಂಸರಾಗಿ ಗುರುತಿಸಿಕೊಂಡಿದ್ದಾರೆ. ಜೈನ ಕೃತಿಯೊಂದನ್ನು ಸಂಪಾದಿಸುವಾಗ ಎದುರಾಗುವ ಜೈನಧರ್ಮದ ತಿರುಳು, ಪಾರಿಭಾಷಿಕ ಪದಗಳ ತಿಳುವಳಿಕೆಗಳನ್ನು ಸಮರ್ಪಕವಾಗಿ ಗ್ರಹಿಸಿ ಸಮರ್ಥವಾಗಿ ಪರಿಚಯಿಸುವಲ್ಲಿ ಗುಂಡಪ್ಪನವರ ಮುನ್ನುಡಿ ಮೈಸೂರು ವಿಶ್ವವಿದ್ಯಾಲಯ ಹಳಗನ್ನಡ ಕಾವ್ಯಸಂಗ್ರಹಗಳ ಮಾಲೆಯಲ್ಲಿ ವಿಶಿಷ್ಟ ಸ್ಥಾನಗಳಿಸಿದೆ. ಕುಮಾರವ್ಯಾಸನ 'ಭಾರತ ಕಥಾ ಮಂಜರಿ' ಸರಳಾನುವಾದವೂ ತುಂಬ ಮುಖ್ಯವಾದುದಾಗಿದೆ. ಗದ್ಯದ ಶೈಲಿ ಮತ್ತು ಸರಳತೆಯಿಂದ ಈ ಕೃತಿ ಜನಪ್ರಿಯವಾಗಿ ಹಲವು ಮುದ್ರಣಗಳನ್ನು ಪಡೆದಿದೆ. 'ತೊರವೆ ರಾಮಾಯಣ ಸಂಗ್ರಹ' ಗುಂಡಪ್ಪನವರ ಇನ್ನೊಂದು ಸಂಪಾದಿತ ಕೃತಿ. 'ನಾಡಪದಗಳು' (1947) ಜಾನಪದ ಸಾಹಿತ್ಯಕ್ಕೆ ಗುಂಡಪ್ಪನವರ ಮುಖ್ಯ ಕೊಡುಗೆ. ಮತಿಘಟ್ಟಕೃಷ್ಣಮೂರ್ತಿ ಅವರು ಸಂಗ್ರಹಿಸಿರುವ ಈ ಹಾಡುಗಳಿಗೆ ಗುಂಡಪ್ಪನವರು ವಿವರವಾದ ಪೀಠಿಕೆಯನ್ನು ಬರೆದು ಅತ್ಯುತ್ತಮವಾಗಿ ಸಂಪಾದಿಸಿದ್ದಾರೆ.

ನಿಘಂಟು ಕ್ಷೇತ್ರದಲ್ಲಿಯೂ ಕೆಲಸ ಮಾಡಿರುವ ಗುಂಡಪ್ಪನವರು ಕನ್ನಡಕ್ಕೆ ಎರಡು ಮೌಲಿಕ ನಿಘಂಟುಗಳನ್ನು ಪರಿಚಯಿಸಿದ್ದಾರೆ. ಪತ್ರಿಕಾ ನಿಘಂಟು (1965) ಗುಂಡಪ್ಪನವರ ಸ್ವತಂತ್ರ ಸಿದ್ಧತೆಯಾದರೆ 'ಶ್ರೀ ಚಾಮುಂಡಿಕಾ ಲಘು ನಿಘಂಟು(1955) ಸಂಸ್ಕೃತದ ಅನುವಾದ. ಇದರೊಂದಿಗೆ ಪರಿಷತ್ತಿನ 'ಕನ್ನಡ ಕನ್ನಡ ನಿಘಂಟು'ವಿನ ಮೊದಲ ಸಂಪುಟದ ಸಿದ್ಧತೆಯಲ್ಲೂ ಗುಂಡಪ್ಪನವರ ಪರಿಣತಿ-ಸೇವೆ ವಿನಿಯೋಗವಾಗಿದೆ.

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ಗುಂಡಪ್ಪನವರ ಹೆಸರು ದಾಖಲಾಗುವಂತಹ ಹಲವು ಕೃತಿಗಳಿವೆ. ಚಟಾಕಿ(1947) ಮಕ್ಕಳ ಕವನ ಸಂಕಲನ. ಕನ್ನಡ ಸಾಹಿತ್ಯ ಚಿತ್ರಗಳು 1 (1945), (1949). ಎಂಬ ಮೂರು ಸಾಹಿತ್ಯದ ಪರಿಚಯಾತ್ಮಕ ಪುಸ್ತಕಗಳನ್ನು ರಚಿಸಿದ್ದಾರೆ. ಮೊದಲನೇ ಪುಸ್ತಕದಲ್ಲಿ ಕನ್ನಡದ ಪ್ರಾಚೀನ ಪ್ರಮುಖ ಕಾವ್ಯಗಳ ಪರಿಚಯವಿದ್ದರೆ ಎರಡನೇ ಪುಸ್ತಕದಲ್ಲಿ ಪಂಚತಂತ್ರದ ಕಥೆ ಮತ್ತು ದಶಕುಮಾರ ಚರಿತೆಯ ಕಥೆಗಳಿವೆ. ಪಂಚತಂತ್ರ ಕಥೆಗಳ್ (1951) ಎಂದು ಇದನ್ನು ತಮಿಳಿನಲ್ಲೂ ರಚಿಸಿದ್ದಾರೆ. ಹಸ್ತಪ್ರತಿರೂಪದಲ್ಲಿರುವ ಈ ಮಾಲೆಯ ಮೂರನೇ ಪುಸ್ತಕದಲ್ಲಿ ಮಹಾಭಾರತದ ಕಥೆಗಳಿವೆ. ಇದಲ್ಲದೆ, 'ಪಂಪಪರಿಚಯ',(ಪದ್ಯ ಸಂಕಲನ - 1951) 'ಪಂಪನ ಹಿತವಚನಗಳು' (ಪಂಪ ಕವಿ ಮತ್ತು ಕಾವ್ಯ ಪರಿಚಯ ಹಾಗೂ ಸೂಕ್ತಿಗಳ ಸಂಗ್ರಹ), 'ಥಾಮಸ್ ಆಲ್ವ ಎಡಿಸನ್' (ಜೀವನ ಚರಿತ್ರೆ 1943) 'ಸೋಹ್ರಾಬ್ ರುಸ್ತುಂ' (ಕಥಾಸಂಗ್ರಹ 1943) ಮುಂತಾದ ಕೃತಿಗಳನ್ನು ಮಕ್ಕಳು, ನವಸಾಕ್ಷರರು ಹಾಗೂ ಸಾಮಾನ್ಯ ಓದುಗರಿಗಾಗಿ ರಚಿಸಿದ್ದಾರೆ. ಇವುಗಳಲ್ಲಿನ ಸರಳಗದ್ಯ ಸುಲಭವಾದ ಮತ್ತು ಆಕರ್ಷಣೀಯವಾದ ಶೈಲಿ, ಸುಂದರ ನಿರೂಪಣೆ ಗಮನ ಸೆಳೆಯುವಂತಿದೆ.

ಎಲ್. ಗುಂಡಪ್ಪನವರದ್ದು ಬಹುಮುಖ್ಯವಾಗಿ ವಿದ್ವತ್ತಿನ, ಪಾಂಡಿತ್ಯದ

ಕ್ಷೇತ್ರವಾಗಿದ್ದು ಅವರ ಪ್ರತಿಭೆ ಹರಳುಗಟ್ಟಿರುವುದು ಈ ಕ್ಷೇತ್ರದಲ್ಲೇ ಆದರೂ ಈ ಕ್ಷೇತ್ರಕ್ಕೆ ಗುಂಡಪ್ಪನವರನ್ನು ತಂದು ನಿಲ್ಲಿಸಿದ್ದು ಕವಿತನದ ಸೃಜನಶೀಲ ಮನೋಭಾವ. ಆ ಕಾಲದ ನವೋದಯ ಸಾಹಿತ್ಯದ ಪ್ರಚಾರದ ಅಲೆಯಲ್ಲಿ ತೇಲಿಬಂದ ಗುಂಡಪ್ಪನವರು ಮೊದಲು ಬರೆದದ್ದು ಕವಿತೆಗಳನ್ನೇ – ಅಕ್ಕ, ತಾಯಿ, ವಿಧವೆ, ಚಟಾಕಿ ಮುಂತಾದ ಕವಿತೆಗಳು ಕಿರಿಯರ ಕಾಣಿಕೆಯಲ್ಲಿ ಸ್ಥಾನ ಪಡೆದಿವೆ. ಗುಂಡಪ್ಪನವರು ಹಲವಾರು ಬಿಡಿ ಕವಿತೆಗಳನ್ನು ರಚಿಸಿದ್ದಾರಲ್ಲದೆ ಮಕ್ಕಳಿಗೆ ಹಾಗೂ ನವಸಾಕ್ಷರರಿಗೆ ಶಿಶುಸಾಹಿತ್ಯವನ್ನೂ ರಚಿಸಿದ್ದಾರೆ. ಹೀಗೆ ಗುಂಡಪ್ಪನವರು ಸೃಜನಶೀಲತೆಯ ಮೂಲಕ ಪಾಂಡಿತ್ಯದತ್ತ ಒಲಿದು ವಿದ್ವತ್ ಕ್ಷೇತ್ರದಲ್ಲಿ ಗಟ್ಟಿಯಾಗಿ ತಳ ಊರಿರುವ ತಮ್ಮ ಪ್ರತಿಭೆಯ ಛಾಪನ್ನು ಮೂಡಿಸಿರುವ ಪ್ರಮುಖ ಸಾಹಿತಿಗಳಾಗಿ ಕಂಡುಬರುತ್ತಾರೆ. ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನದಲ್ಲಿ ಗುಂಡಪ್ಪನವರ ಅನುವಾದ ಸಾಹಿತ್ಯ ಹಾಗೂ ಸಂಪಾದಿತ ಕೃತಿಗಳು ಪ್ರಮುಖ ಸ್ಥಾನವನ್ನು ಪಡೆಯುತ್ತವೆ.

ಎಲ್. ಗುಂಡಪ್ಪನವರ ಸಾಹಿತ್ಯ ಕೃತಿಗಳು ಹಲವಾರು ಪ್ರಶಸ್ತಿ – ಬಹುಮಾನಗಳನ್ನು ಪಡೆದಿವೆ. ಪಠ್ಯಪುಸ್ತಕಗಳಾಗಿವೆ. ದೇವರಾಜ ಬಹದ್ದೂರ್ ಪ್ರಶಸ್ತಿ (1939, 1947, 1955) ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ತಮಿಳು ಲೇಖಕರ ಸಮ್ಮೇಳನ ಗೌರವ (1958) ಗಾಂಧಿ ಶತಮಾನೋತ್ಸವ ಗೌರವ, ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನ ಗೌರವ, ಮುಂತಾದ ಹಲವು ಮನ್ನಣೆಗಳು ಸಂದಿವೆ. ವಿಶೇಷವಾಗಿ ಕನ್ನಡ – ತಮಿಳು ಸಾಹಿತ್ಯ ಬಾಂಧವ್ಯಕ್ಕಾಗಿ ಹತ್ತಾರು ಪ್ರಶಸ್ತಿಗಳು ತಮಿಳು ಸಂಘಗಳಿಂದ ಸಂದಿದ್ದರೂ ಕನ್ನಡ ಗದ್ಯ ಪ್ರಶಸ್ತಿಗಳು ಗುಂಡಪ್ಪನವರಂಥ ವಿದ್ವಾಂಸರನ್ನು ಗುರುತಿಸಲಿಲ್ಲ ಎಂಬುದು ಇತಿಹಾಸದಲ್ಲಿ ದಾಖಲಾಗುವ ಮೂಲಕ ಆ ಪ್ರಶಸ್ತಿಗಳಿಗೆ ಮುಕ್ಕಾಗಿದೆಯೇ ವಿನಾ ಗುಂಡಪ್ಪನವರಿಗಲ್ಲ. ಅವರ ಶತಮಾನೋತ್ಸವ ಸಂದರ್ಭದಲ್ಲೂ ಈ ಅಂಶ ದಾಖಲಾಗಿದೆ.

ಎಲ್.ಗುಂಡಪ್ಪನವರದು ವಿನಯಶೀಲ ವ್ಯಕ್ತಿತ್ವ. ತಮ್ಮ ಪಾಡಿಗೆ ತಾವು ಸಾಹಿತ್ಯಸೇವೆಯನ್ನು ಮಾಡಿದ ಸದ್ದಿಲ್ಲದ ಪ್ರತಿಭೆ. ಅತ್ಯಂತ ಆಳವಾದ ಪಾಂಡಿತ್ಯವನ್ನು ಸಂಪಾದಿಸಿದ್ದ ಗುಂಡಪ್ಪನವರು ಪ್ರಾಚೀನ ಭಾಷೆ–ಸಾಹಿತ್ಯಗಳ ಅಧಿಕೃತ ಪ್ರತಿನಿಧಿಗಳಾಗಿದ್ದ ಅಪರೂಪದ ವಿದ್ವಾಂಸರಾಗಿದ್ದರು. ನಾನು ಅವರನ್ನು ಕಂಡದ್ದು, ಅವರ ಕೊನೆಯ ದಿನಗಳಲ್ಲಿ ಮಾತ್ರ. ಜಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದಲ್ಲಿ. ಎಂ.ವಿ.ಸೀತಾರಾಮಯ್ಯನವರ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ. ಆಗಾಗ್ಗೆ ಸೀತಾರಾಮಯ್ಯನವರನ್ನು ನೋಡಲು ಬರುತ್ತಿದ್ದ ಗುಂಡಪ್ಪನವರು ಸದಾ ಖಾದಿಧಾರಿಗಳಾಗಿರುತ್ತಿದ್ದರು. ಕಚ್ಚೆ ಪಂಚೆಯ ಮೇಲೆ ಖಾದಿಜುಬ್ಬ, ಮೇಲೊಂದು ಶಲ್ಯ ಅವರ ಸರಳ ಉಡುಗೆಯಾಗಿತ್ತು. ಎಂ.ವಿ.ಸೀ.ಯವರಿಗಿಂತ ಸ್ವಲ್ಪ ಎತ್ತರದ. ತೆಳ್ಳನೆಯ ದೇಹದಲ್ಲೂ ವಿದ್ವತ್ತಿನ ಶಿಖರವಾಗಿದ್ದ ಗುಂಡಪ್ಪನವರು ಕೊಳ್ಳಬಹುದಿದ್ದರು ಬಹಳ ಎತ್ತರದ ವ್ಯಕ್ತಿತ್ವದವರಾಗಿದ್ದರು. ಮೃದು ಮೆಲುಮಾತಿನ ಹಿಂದೆ ನಿಖರ, ನಿಶ್ಚಿತ, ಖಚಿತ ಧ್ವನಿಯಿತ್ತು. ತಮಗೆ ಅನಿಸಿದ್ದನ್ನು

ನೇರವಾಗಿ ಹೇಳುವ, ನೇರ ನಡೆ – ನುಡಿಯ ಗಾಂಧಿವಾದಿಗಳಾಗಿದ್ದರು. ಸೀತಾರಾಮ್ಯನವರು ಗೋವಿಂದರಾಜು ಅವರೊಂದಿಗೆ ತಿರುಕ್ಕುರಳ್ ಅನುವಾದವನ್ನು ಪರಿಷ್ಕರಿಸುತ್ತಿರುವ ವಿಚಾರ ತಿಳಿದು ಈಗಾಗಲೆ ಒಂದೆರಡು ಅನುವಾದಗಳು ಬಂದಿರುವಾಗ ಮತ್ತೊಂದು ಏಕೆ ಬೇಕು ಎಂದು ದೃಢವಾಗಿ ಹೇಳಿದ್ದರು. ಸೀತಾರಾಮಯ್ಯನವರೊಂದಿಗೆ ಗುಂಡಪ್ಪನವರು ನಡೆಸಿದ್ದ ಹಲವು ಮೌಲಿಕ ವಿಚಾರಗಳ ಚರ್ಚೆಯಲ್ಲಿ ಭಾಗವಹಿಸಿದ್ದ ಸುಯೋಗ ನನ್ನ ಬದುಕಿನಲ್ಲಿದೆ.

ಇಂಥ ಘನವಿದ್ವಾಂಸರಿಗೆ ಸಲ್ಲಬೇಕಾದ ಪ್ರಶಸ್ತಿ – ಗೌರವಗಳು ಸಲ್ಲಬೇಕಾದ ಪ್ರಮಾಣದಲ್ಲಿ ಸಲ್ಲಲಿಲ್ಲ. ಇದು ಇವರ ಶತಮಾನೋತ್ಸವ ವರ್ಷ. ಈ ಸಂದರ್ಭದಲ್ಲಾದರೂ ಸರಿಯಾದ ರೀತಿಯಲ್ಲಿ ಸ್ಮರಿಸುವಂತಾಗಲಿ ಅವರ ಆಪ್ತಕವಿತ ಸಾಹಿತ್ಯ ಪ್ರಕಟವಾಗಲಿ ಅವರಿಗೊಂದು ಮೌಲಿಕ ಸಂಸ್ಮರಣ ಗ್ರಂಥ ಹೊರಬರುವಂತಾಗಲಿ.

ಸಿದ್ದವನಹಳ್ಳಿ ಕೃಷ್ಣಶರ್ಮ

–ನೀಲತ್ತಳ್ಳಿ ಕಸ್ತೂರಿ

ದಿಟ್ಟವಿಚಾರವಂತ, ಬಿರುಸಿನ ಬರೆಹಗಾರ, ಸ್ವಾತಂತ್ರ್ಯ ಹೋರಾಟಗಾರ, ಸವಿಮೂರ್ತಿ ಭಾಷಣಕಾರ, ಪ್ರತಿಭಾವಂತ ಪತ್ರಕರ್ತ, ನಿಷ್ಠ ಸಮಾಜಸೇವಕ, ಗಾಂಧೀ ವಿಚಾರದ ಹರಿಕಾರ, ರಾಷ್ಟ್ರಪ್ರೇಮಿ, ಜನಸಂಘಟನಾ ಚತುರ, ಯುವಜನರ ಸ್ಫೂರ್ತಿಚೇತನ, ಧವಳ ಚರಿತ್ರ, ಸಾಮರಸ್ಯದ ಸಾಧಕ, ಸರಳತೆಯ ಸಾಕಾರರೂಪ ಸಿದ್ದವನಹಳ್ಳಿ ಕೃಷ್ಣಶರ್ಮರು ಇಂದು ಬದುಕಿದ್ದರೆ ನೂರು ವರ್ಷ ತುಂಬಿರುತ್ತಿತ್ತು.

ಶರ್ಮರು ಹುಟ್ಟಿದ್ದು 1904 ರ ಜುಲೈ 4 ರಂದು. ಚಿತ್ರದುರ್ಗದ ಬಳಿಯ ದೊಡ್ಡ ಸಿದ್ದವನಹಳ್ಳಿಯಲ್ಲಿ. ತಂದೆ ರಂಗಾಚಾರ್, ತಾಯಿ ಶೇಷಮ್ಮ. ಸಂಪ್ರದಾಯ ಶೀಲ ಆಚಾರವಂತ ಮನೆತನ. ಸುತ್ತೇಳು ಪ್ರದೇಶಕ್ಕೆಲ್ಲ ಗುರುಮನೆ. ಅವರ ಹಿಂದಿನ ವಂಶಸ್ಥರೊಬ್ಬರು ಮೈಸೂರಿನ ರಾಜಗುರುಪೀಠವಾದ ಶ್ರೀ ಪರಕಾಲಮಠದಲ್ಲಿ ಸ್ವಾಮಿಗಳಾಗಿದ್ದರು.

ಶರ್ಮಾಜಿಯ ಪ್ರಾಥಮಿಕ ಶಿಕ್ಷಣ ಹಳ್ಳಿಯಲ್ಲಿ, ಅನಂತರ ಚಿತ್ರದುರ್ಗದಲ್ಲಿ. ಶರ್ಮಾ ತುಂಬ ಬುದ್ಧಿವಂತ ಹುಡುಗ. ನಿನಗೆ ಎಲ್ಲ ಗೊತ್ತು, ನಾವೇನು ಹೇಳಿ ಕೊಡುವುದು ಎಂದು ಉಪಾಧ್ಯಾಯರೇ ಹೇಳಿದ್ದು ಉಂಟು. ವಕೀಲಿ ಓದಿ ಮುಂದೆ ಬರಲಿ ಎಂದು ತಂದೆಯವರ ಆಸೆ. ಅದಕ್ಕಾಗಿ ಅವರು ಮೈಸೂರಿನಲ್ಲಿ ಮನೆ ಮಾಡಿ, ಕಾಲೇಜು ವ್ಯಾಸಂಗಕ್ಕೆ ಏರ್ಪಡಿಸಿದರು. ಆದರೆ ಆಗ ಬೀಸಿ ಬಂದ ರಾಷ್ಟ್ರೀಯತೆಯ ಬಿರುಗಾಳಿ ಯುವಕ ಶರ್ಮರವರನ್ನು ಸೆಳೆದೊಯ್ದಿತು. ಶಿಕ್ಷಣ ನಿಂತಿತು. ಗಾಂಧೀಜಿಯ ವಿಶಿಷ್ಟ ವ್ಯಕ್ತಿತ್ವದ ಪ್ರಭಾವ ಶರ್ಮರವರನ್ನು ಪೂರಾ ಆವರಿಸಿತು. ಗಾಂಧೀ ದರ್ಶನ ಆದ ಮೇಲಂತೂ ಗಾಂಧೀ ದೀಕ್ಷೆಯೇ ಬಾಳ ಸತ್ವ ಆಯಿತು.

ಎಳೆತನದಿಂದಲೂ ಶರ್ಮಾಜಿಗೆ ಸಾಹಿತ್ಯದ ಒಲವು. ಕುಮಾರವ್ಯಾಸನ ವಾಕ್ ಪ್ರವಾಹ, ಲಕ್ಷ್ಮೀಶ ಕವಿಯ ಪದಸೌರಭ, ಸರ್ವಜ್ಞನ ಸೂತ್ರಪ್ರಾಯಶೈಲಿ ಶರ್ಮಾರಲ್ಲಿ ಮೇಳೈಸಿದವು. ಆಂಧ್ರದ 'ವದರ ಪೋತು' ಪತ್ರಿಕೆಯ ಹರಟೆಗಳ ಮೊನಚು, ಎಂಕೆಪಾಠಲು ಪದ್ಯಗಳ ಚುಟುಕು ಅವರ ಮನ ತುಂಬಿದವು. ಅವರ ಲೇಖನ ಪ್ರತಿಭೆ ಅರಳತೊಡಗಿ ಹಲವಾರು ಸಾಹಿತಿಗಳ ಸಂಪರ್ಕಕ್ಕೆ ಒಯ್ದಿತು.

ಮುಖ್ಯವಾಗಿ ಧಾರವಾಡದ ಗೆಳೆಯರ ಗುಂಪು ಶರ್ಮಾರನ್ನು ಸೆಳೆದು ಕೊಂಡಿತು. ಬೇಂದ್ರೆ, ಸಾಲಿ, ಶಂಬಾ, ಮಧುರಚೆನ್ನ, ವಿನೀತರಾಮಚಂದ್ರ, ಮುಗಳಿ, ಗೋಕಾಕ್ ಮುಂತಾದ ಹಿರಿಯ ಚಿಂತನಶೀಲರ ಸಂಗ ಉಂಟಾಯಿತು. ಶರ್ಮಾಜಿ 'ಗುಂಪಿನ ಗೆಳೆಯ' ಆದರು. ಅದರ ಮೂಲಕ ಸಾಹಿತ್ಯ ರಚಿಸಿ 'ಜಯಕರ್ನಾಟಕಪತ್ರಿಕೆ' ಕನ್ನಡ ಪ್ರಚಾರ ಮುಂತಾದ ಕಾರ್ಯಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು.

ನಾಟಕದ ಗೀಳು ಶರ್ಮಾಜಿಯನ್ನು ಪ್ರಸಿದ್ಧ ನಟ ಬಳ್ಳಾರಿರಾಘವರ ಬಳಿಗೂ ಅವರ ಮೂಲಕ ಪಂಡಿತ ತಾರಾನಾಥರ ಬಳಿಗೂ ಕೊಂಡೊಯ್ದಿತು. ತಾರಾನಾಥರು

ಅದ್ಭುತ ವ್ಯಕ್ತಿತ್ವ, ರಾಷ್ಟ್ರಭಕ್ತಿ, ಆಧ್ಯಾತ್ಮ ಚಿಂತನೆ, ಯೋಗ, ಸಾಹಿತ್ಯ, ಆಯುರ್ವೇದ ಇತ್ಯಾದಿ ಹಲವು ರಂಗಗಳಲ್ಲಿ ತಾರಾನಾಥರ ವ್ಯಕ್ತಿತ್ವ ವಿಜೃಂಭಿಸಿತ್ತು. ಆ ವ್ಯಕ್ತಿತ್ವ ಸೂಜಿಗಲ್ಲಾಗಿ ಶರ್ಮಾಜಿಯನ್ನು ರಾಯರ ಪ್ರೇಮಾಯತನ ಆಶ್ರಮಕ್ಕೆ (ತುಂಗಭದ್ರೆಯ ದಕ್ಷಿಣತೀರದಲ್ಲಿ) ಕೊಂಡೊಯ್ದಿತು. ಅಲ್ಲಿ ಶರ್ಮಾಜಿಯ ಚಿಂತನಶೀಲತೆ, ರಾಷ್ಟ್ರಪ್ರೇಮ, ಆದರ್ಶದ ಹಂಬಲ ಪುಟಗೊಂಡವು. ಸಂನ್ಯಾಸಿಯೆ ಆಗಿಬಿಡುವರೋ ಎಂದು ತಂದೆ ತಾಯಿಯರಲ್ಲಿ ಆತಂಕವೂ ಉಂಟಾಯಿತು. ಆದರೆ ಮನೆಯ ಕರೆಯನ್ನು ಮನ್ನಿಸಿದ ಶರ್ಮಾಜಿ ಆಶ್ರಮದಿಂದ ಹಿಂದಿರುಗಿ ಬಂದರು. 1925ರಲ್ಲಿ ಹೈದರಾಬಾದು ಪೊಲೀಸ್ ಅಧಿಕಾರಿ ಕಸ್ತೂರಿರಂಗಾಚಾರ್ಯರ ಮಗಳು ಪ್ರಮಿಳಾ ಜೊತೆ ವಿವಾಹ ವಾಯಿತು. ಆಕೆ ಶರ್ಮಾಜಿಯ ಬಾಳಿನ ಉಬ್ಬರದಲ್ಲೂ ಇಳಿತದಲ್ಲೂ ಬಾಳಸಂಗಾತಿ ಆದರು.

1928ರ ಸುಮಾರಿಗೆ ಶರ್ಮಾಜಿ ಹೈದರಾಬಾದಿಗೆ ಹೋದರು. ಅಲ್ಲಿ ಶಾಲಾ ಮಾಸ್ತರಿಕೆ ಹಿಡಿದು ಸಂಸಾರ ಹೂಡಿದರು. ಹೈದರಾಬಾದಿನ ಗೊಂಡಾರಣ್ಯದಂಥ ವಾತಾವರಣದಲ್ಲಿ ಜನಜಾಗೃತಿಯನ್ನು ಮೂಡಿಸಲು ತಮ್ಮನ್ನು ತಾವು ತೊಡಗಿಸಿ ಕೊಂಡರು. ಆಗ ಅಲ್ಲಿ ಸೃಷ್ಟಿಯಾದ ಉಜ್ವಲ ರಾಷ್ಟ್ರೀಯತೆಯ ವಾತಾವರಣ, ನಿಜಾಮರ ಧರ್ಮಾಂಧ ದರಬಾರಿಗೆ ಪಥ್ಯವಾಗಲಿಲ್ಲ. ಶರ್ಮಾಜಿಯ ಕೆಲಸಕ್ಕೆ ಊನ ಬಂತು. ವಿಮಾಏಜೆನ್ಸಿ, ಗೆಳೆಯರ ನೆರವು ಶರ್ಮಾಜಿಯ ಬಾಳ ಕಡಲಿಗೆ ಹಾಯಿದೋಣಿ ಆದವು. ಆದರೆ ಅವರ ಸಾರ್ವಜನಿಕ ಚಟುವಟಿಕೆ ನಿಲ್ಲಲಿಲ್ಲ. ಹೈದರಾಬಾದು ಕಾಂಗ್ರೆಸ್ ಸ್ಥಾಪನೆಯಲ್ಲಿ ಶರ್ಮಾಜಿ ಪ್ರಮುಖ ಪಾತ್ರವಹಿಸಿದರು. ತಾಳ್ಮೆಗೆಟ್ಟ ಸರ್ಕಾರ 1938ರಲ್ಲಿ ಶರ್ಮಾಜಿಯನ್ನು ಹೈದರಾಬಾದು ಸಂಸ್ಥಾನದಿಂದ ಆಚೆಗೆ ಗಡೀಪಾರು ಮಾಡಿತು. ಮುಂದೆ ಆರು ವರ್ಷ ಶರ್ಮಾಜಿ ಹೊರಗೇ ಇರಬೇಕಾಯಿತು.

ಹೈದರಾಬಾದಿನಲ್ಲಿ ರಾಜಕೀಯ ಕಾರ್ಯದ ಜೊತೆಗೇ ಸಾಹಿತ್ಯ, ಸಮಾಜಸೇವಾ ಕಾರ್ಯಗಳೂ ಬೆಳೆದಿದ್ದವು. ಕರ್ನಾಟಕ ಸಾಹಿತ್ಯಮಂದಿರ, ನೃಪತುಂಗ ಕನ್ನಡಶಾಲೆ, ಹರಿಜನಸೇವೆ, ಖಾದಿ, ದಿಕ್ಕೆಟ್ಟ ಹೆಣ್ಣುಮಕ್ಕಳ ಕ್ಷೇಮಚಿಂತನೆ - ಇತ್ಯಾದಿ ಹಲವು ರಂಗಗಳಲ್ಲಿ ಶರ್ಮಾಜಿಯ ಸೇವೆ ನಡೆಯಿತು.

ಆಮೇಲೆ ಚಿತ್ರದುರ್ಗದಲ್ಲಿ ಸ್ವಲ್ಪಕಾಲ ಇದ್ದರು. ಆಗ ಅಲ್ಲಿನ ಕರ್ನಾಟಕ ಸಂಘಕ್ಕೆ ಪುನರ್ಜನ್ಮ ನೀಡಿದರು, ಚುರುಕುಗೊಳಿಸಿದರು. ಸಾಹಿತ್ಯ - ಸಾಂಸ್ಕೃತಿಕ ವಾತಾವರಣವನ್ನು ಮೂಡಿಸಿದರು. 1941ರ ಸುಮಾರಿನಲ್ಲಿ, ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ಕಾರ್ಯದರ್ಶಿಯಾಗಿ ಪಂಡಿತ ನೆಹರು ಅವರ ಜೊತೆಯಲ್ಲಿ ಕೆಲಸ ಮಾಡಿದರು. ಹೈದರಾಬಾದು ಸಮಸ್ಯೆಯನ್ನು ಮಾಹಾತ್ಮ ಗಾಂಧಿ ಹಾಗೂ ಕಾಂಗ್ರೆಸ್ ನಾಯಕರಿಗೆ ಮನವರಿಕೆ ಮಾಡಿಕೊಡಲು ಶ್ರಮಿಸಿ ಸಫಲರಾದರು.

ಅದೇ ಸುಮಾರಿಗೆ ಬೆಂಗಳೂರಿನ ಉಜ್ವಲ ರಾಷ್ಟ್ರೀಯ ಪತ್ರಿಕೆ 'ವಿಶ್ವ ಕರ್ನಾಟಕ'ದ ಸಂಪಾದಕ ತಿ.ತಾ.ಶರ್ಮರಿಗೆ ನೆರವಾಗಲು ಕರೆ ಬಂತು. ಕೃಷ್ಣಶರ್ಮರು ಬಂದು ಕೂಡಿಕೊಂಡರು. ಆ ಇಬ್ಬರು ಶರ್ಮರ ಕೈಯಲ್ಲಿ 'ವಿಶ್ವ ಕರ್ನಾಟಕ' ಅದ್ಭುತ ಚೈತನ್ಯದಾಯಕ ಪತ್ರಿಕೆ ಆಯಿತು. ಕೆಲವು ಕಾಲ ಕೃಷ್ಣಶರ್ಮರೇ ಸಂಪಾದಕರೂ

ಆಗಿದ್ದರು. ಪತ್ರಿಕೆ ಇತಿಹಾಸವನ್ನೇ ಸೃಷ್ಟಿಸಿತು. ಅದರ ಬಿರುಸಿನ ಬರೆಹಗಳು ಸಾವಿರಾರು ಮಂದಿಗೆ ಸ್ಫೂರ್ತಿ ನೀಡಿ ನಾಡಸೇವೆಗೆ ಸಜ್ಜುಗೊಳಿಸಿದವು.

ಶರ್ಮಾಜಿಯವರ ಹರಿತವಾದ ಬರಹಗಳು ಸರ್ಕಾರದ ನಿದ್ದೆ ಕೆಡಿಸಿದವು. ಪತ್ರಿಕೆಗೆ ನಿರ್ಬಂಧಗಳನ್ನು ಹೇರಲಾಯಿತು. 'ಕ್ವಿಟ್ ಇಂಡಿಯಾ' ಚಳುವಳಿ ಕಾಲದಲ್ಲಿ ಪತ್ರಿಕೆ ದೊಡ್ಡ ಸಾಹಸವನ್ನು ಮೆರೆಯಿತು. ಶರ್ಮಾಜಿಗೆ ಎರಡು ಮೂರು ಬಾರಿ ಸೆರೆವಾಸ ಆಯಿತು. 1942ರಲ್ಲಿ ಅವರು ಗಾಂಧೀಜಿಯವರ 'ಹರಿಜನ' ಪತ್ರಿಕೆಯನ್ನು ಕನ್ನಡದಲ್ಲಿ ನಡೆಸಿದರು. ಅದು ಕೆಲವು ವಾರವಷ್ಟೆ. ಬ್ರಿಟಿಷ್ ಪ್ರಭುತ್ವ ಮೂಲ ಪತ್ರಿಕೆಗೇ ದಿಗ್ಬಂಧನ ಹಾಕಿತು. ಮುಂದೆ 'ಭೂದಾನ', 'ಸರ್ವೋದಯ' ಮುಂತಾದ ಪತ್ರಿಕೆಗಳನ್ನು ಶರ್ಮಾಜಿ ನಡೆಸಿದರು. ಅವರ ಮೂರ್ತಿಮಂಟಪ ಅಂಕಣ ಬರೆಹಗಳು ನಾಡಲ್ಲೆಲ್ಲಾ ಮನೆ ಮಾತಾದವು.

ಶರ್ಮಾಜಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿ ಸೆರೆವಾಸ ಅನುಭವಿಸಿದ ಕೆಲವೇ ಮಂದಿ ಸಾಹಿತಿಗಳಲ್ಲಿ ಒಬ್ಬರು, ಪ್ರಮುಖರು. ಆದರೆ ಅದಕ್ಕಾಗಿ ಅವರು ಯಾವುದೇ ಪ್ರತಿಫಲವನ್ನೂ ಆಶಿಸಲಿಲ್ಲ. ಯಾವ ಅಧಿಕಾರ ಸ್ಥಾನದ ಬಳಿಗೂ ಸುಳಿಯಲಿಲ್ಲ. ಅತ್ಯಂತ ಸರಳ ಸೇವಾಮಯ ಜೀವನ ನಡೆಸಿದರು.

ಕನ್ನಡ ಚಳುವಳಿ ಇಂದಿನದಲ್ಲ. ಅಂದೂ ನಡೆಯುತ್ತಿತ್ತು. ಅಂದಿನ ಚಳುವಳಿ ಬೀದಿ ಜಗಳ ಆಗಿರಲಿಲ್ಲ. ಬೌದ್ಧಿಕ ಹಿನ್ನೆಲೆಯ ನೆಲೆಗಟ್ಟು ಪಡೆದಿತ್ತು. ಕನ್ನಡಕ್ಕೆ ಸೂಕ್ತ ಸ್ಥಾನ ಸಿಗಬೇಕು, ಕನ್ನಡರಾಜ್ಯ ಒಂದಾಗಬೇಕು, ಕನ್ನಡ ರಾಜ್ಯಭಾಷೆ ಆಗಿರಬೇಕು, ಸಾರ್ವಭೌಮ ಆಗಬೇಕು. ಈ ಆಶಯಕ್ಕಾಗಿ ಶರ್ಮಾಜಿ ತಮ್ಮ ಸಾಮರ್ಥ್ಯವನ್ನೆಲ್ಲಾ ಮುಡುಪಿಟ್ಟು ದುಡಿದರು. ಅವರ ಮನೆಮಾತು ತೆಲುಗು ಹಿಂದಿ, ಉರ್ದು, ಮರಾಠಿ, ತಮಿಳು ಎಲ್ಲವನ್ನೂ ಬಲ್ಲವರಾಗಿದ್ದರು. ಆದರೆ ಅವರ ಕನ್ನಡದ ಕಾಳಜಿ ಅದ್ಭುತವಾಗಿತ್ತು. ಎಲ್ಲ ವ್ಯವಹಾರವನ್ನು ಕನ್ನಡದಲ್ಲಿ ನಡೆಸಿದರು. ಶ್ರೀರಾಮ ಸಹಕಾರ ಬ್ಯಾಂಕ್‌ನ ಲೆಕ್ಕಾ ಕನ್ನಡದಲ್ಲೆ ಇರುತ್ತಿತ್ತು. ಅವರು ಸ್ಥಾಪಿಸಿದ ಗಾಂಧಿ ಸಾಹಿತ್ಯ ಸಂಘದಲ್ಲಿ ಇಂದಿಗೂ ಎಲ್ಲ ಕನ್ನಡ ಪ್ರಧಾನವೇ. ಕನ್ನಡ ಸಮಸ್ಯೆ ಕುರಿತು ಅವರು ಬರೆದ ಲೇಖನ ಮಾಲೆ "ಕನ್ನಡ ಸಮಸ್ಯೆ" ಎಂಬ ಪುಸ್ತಕವಾಗಿ ಪ್ರಕಟವಾಯಿತು. ಅಲ್ಲಿನ ವಿಚಾರಗಳು ಇಂದಿಗೂ ಪ್ರಸ್ತುತವೇ. ಏಕೆಂದರೆ ಕನ್ನಡ ಇವೊತ್ತೂ ಸಮಸ್ಯೆಯ ಸಿಕ್ಕಿನಲ್ಲೇ ಇದೆ.

ಶರ್ಮಾಜಿ ಸೇವೆ ಮಾಡಿದ ಸಾಮಾಜಿಕ – ಸಾಹಿತ್ಯಕ ಸಂಘ ಸಂಸ್ಥೆಗಳು ಅನೇಕ. ಗಾಂಧೀ ಸ್ಮಾರಕ ನಿಧಿ, ಕಸ್ತೂರಿ ಬಾ ನಿಧಿ, ಸತ್ಯ ಮಿತ್ರರ ಸಂಘ, ಯುದ್ಧ ವಿರೋಧಿ ಸಂಘಟನೆ, ಬಹಾವುಲ್ಲಾ ತತ್ವ ಪ್ರಚಾರ, ಗೋಸೇವಾ ಸಂಘ, ಶ್ರೀರಾಮ ಸಹಕಾರ ಬ್ಯಾಂಕ್, ಶ್ರೀ ಆಂಜನೇಯ ಸಹಕಾರ ಬ್ಯಾಂಕ್, ವಿದ್ಯೋದಯ ಸಭಾ, ಶ್ರೀನಿವಾಸ ಮಂದಿರ, ಪುಸ್ತಕ ಭಂಡಾರ ಸಮಿತಿ, ಚಿತ್ರಕಲಾ ಪರಿಷತ್ತು, ವರದಾಚಾರ್ ಸ್ಮಾರಕ ಕಲಾಸಂಘ, ಪುಸ್ತಕ ಪ್ರಕಾಶಕರ ಮತ್ತು ಮಾರಾಟಗಾರರ ಸಂಘ, ಭಾರತ

ಸೇವಾದಳ, ಬೆಂಗಳೂರು ಎಜ್ಯುಕೇಷನ್ ಸೊಸೈಟಿ, ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ಪ್ರಭಾತ ಸಾಹಿತ್ಯ, ದಕ್ಷಿಣ ಭಾರತ ಪುಸ್ತಕ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು, ನಿಜಾಂ ಕನ್ನಡ ಸಾಹಿತ್ಯ ಪರಿಷತ್ತು, ಚಿತ್ರದುರ್ಗ ಕರ್ನಾಟಕ ಸಂಘ - ಮುಂತಾದ ಅನೇಕ ಸಂಘ ಸಂಸ್ಥೆಗಳು ಶರ್ಮಾಜಿಯ ಸೇವೆ, ಮಾರ್ಗದರ್ಶನಗಳ ಲಾಭ ಪಡೆದವು. 1942ರಲ್ಲಿ ಆರಂಭವಾದ ಗಾಂಧೀ ಸಾಹಿತ್ಯ ಸಂಘವಂತೂ ಯುವ ಜನರ ಸ್ಫೂರ್ತಿ ಕೇಂದ್ರವೇ ಆಗಿತ್ತು. ಶರ್ಮಾಜಿ ಅನೇಕ ಸಹಕಾರ್ಯಕರ್ತರನ್ನು ಸಮಾಜ ಸೇವೆಗೆ ಸಜ್ಜುಗೊಳಿಸಿದರು. ಲೇಖನ ಕಲೆಯ ಒಲವು ಇದ್ದವರನ್ನು ಸಾಹಿತಿಗಳಾಗಿ ರೂಪಿಸಿದರು. ಅವರ ಶಿಷ್ಯರಾಗಿ ಬೆಳೆದು ಅರಳಿದ ಪತ್ರಕರ್ತರ ಸಂಖ್ಯೆ ಭಾರಿ ದೊಡ್ಡದು. ಅನೇಕರ ಬಾಳಿಗೆ ಬೆಳಕು ನೀಡಿದರು ಶರ್ಮಾಜಿ.

1973ರ ಜುಲೈನಲ್ಲಿ ಬೆಂಗಳೂರಿನ ಹಂಸಧ್ವನಿ ಪ್ರಕಾಶನದವರು ಶರ್ಮಾಜಿಗೆ "ಸಿದ್ಧಹಸ್ತ" ಎಂಬ ಗೌರವ ಗ್ರಂಥವನ್ನು ಅರ್ಪಿಸಿ ಗೌರವಿಸಿದರು. ಅದಾಗಿ ಮೂರೇ ತಿಂಗಳಿಗೆ 14.10.73ರಂದು ಶರ್ಮಾಜಿ ದೇಹವನ್ನು ಬಿಟ್ಟರು. ನಿರಂತರ ದುಡಿಮೆ, ಪಾದರಸದಂತಹ ಓಡಾಟ, ಬರೆಹ, ಚಿಂತನಗಳ ಅವರ ಅದ್ಭುತ ಜೀವನ ಕೊನೆಗೊಂಡಿತು.

ಸಿದ್ದವನಹಳ್ಳಿ ಕೃಷ್ಣಶರ್ಮರನ್ನು ಅಜರಾಮರರನ್ನಾಗಿಸಿರುವುದು, ಅವರ ಅಸ್ಖಲಿತ ಸೇವಾಮಯ, ಆದರ್ಶಯುತ, ಜೀವನ ಹೇಗೊ ಹಾಗೆಯೆ ಅವರ ಭವ್ಯ ದಿವ್ಯ ಸಾಹಿತ್ಯ ಕೂಡ. ಅವರು ಬರೆದ ಲೇಖನಗಳು ಸಾವಿರಾರು. ಪುಸ್ತಕಗಳ ಸಂಖ್ಯೆ ನೂರನಲವತ್ತಕ್ಕೂ ಮೀರಿದ್ದು. ಮೂಲ, ಅನುವಾದಗಳು. ಕನ್ನಡದ ಗಾಂಧೀ - ವಿನೋಬಾ ಸಾಹಿತ್ಯದ ಸಿಂಹಪಾಲು ಅವರದೇ. ಆ ಪ್ರಕಾರಕ್ಕೆ ಒಂದು ಪ್ರಮುಖ ಸ್ಥಾನ ದೊರಕಿಸಿದ್ದೇ ಕೃಷ್ಣಶರ್ಮರು. ಮೂಲದಲ್ಲಿ ಹೇಗೆ ಗಾಂಧೀಜಿ ಸರಳವಾಗಿ ಅಷ್ಟೇ ಪರಿಣಾಮಕಾರಿಯಾಗಿ ಬರೆದರೊ, ಕನ್ನಡದಲ್ಲಿ ಶರ್ಮಾಜಿ ಹಾಗೆಯೆ. ಅವರ ಗದ್ಯದ ವೈಶಿಷ್ಟ್ಯವೆಂದರೆ ಅದರ ಸಂಕ್ಷಿಪ್ತತೆ, ಸ್ಪಷ್ಟತೆ, ನಿಖರತೆ, ಸರಳತೆ ಮತ್ತು ಮಾರ್ದವತೆ. ಅದರಲ್ಲಿ ಉದ್ವೇಗ ಉದ್ರೇಕ ಇಲ್ಲ. ಆದರೆ ಹರಿತ, ನೇರತೆ ಉಂಟು. ಅದು ಕತ್ತಿಯ ಅಲಗಿನಂತೆ, ಬಿಲ್ಲಿನ ಬಾಣದಂತೆ. ಶರ್ಮಾಜಿ ಗದ್ಯದಲ್ಲಿ ಕಾವ್ಯದ ಮೆರುಗು ಮೂಡಿಸಿದವರು. ಅವರ ಪುಟ್ಟಪುಟ್ಟ ವಾಕ್ಯಗಳೂ ಅಂಬಿನಂತೆ ಗುರಿ ಮುಟ್ಟುತ್ತವೆ. ಹೃದಯವನ್ನು ತಾಗುತ್ತವೆ. 1927ರಲ್ಲಿ 'ಯತಿರಾಜ ರಾಮಾನುಜ' ಕೃತಿಯಿಂದ ಆರಂಭಗೊಂಡ ಅವರ ಸಾಹಿತ್ಯಕೃಷಿ 1966ರಲ್ಲಿ ಹೊರಬಂದ ಬೃಹತ್‌ಕೃತಿ 'ರಾಮಾವತಾರ' ದವರೆಗೂ ಸಾಗಿತು. 'ಬಾಲರಾಮಾಯಣ' ಅನಂತರ ಬೆಳಕು ಕಂಡಿತು.

ಶರ್ಮಾಜಿಯವರ ಕೃತಿಗಳಲ್ಲಿ ವ್ಯಕ್ತಿಚಿತ್ರ ಇವೆ. ಜೀವನಚರಿತ್ರೆ ಇವೆ. ಅರ್ಥ ವಿಜ್ಞಾನ ಗ್ರಂಥ ಇವೆ. ಸಮಾಜ ವಿಶ್ಲೇಷಣೆ ಇದೆ. ಪತ್ರಿಕಾ ಲೇಖನಗಳಿವೆ. ಆಧ್ಯಾತ್ಮ ಚಿಂತನೆ ಇದೆ. ಗಾಂಧೀ - ವಿನೋಬಾ ವಿಚಾರಧಾರೆಯಂತೂ ದಟ್ಟವಾಗಿ ತುಂಬಿದೆ. ರಾಮಾಯಣದ ಕತೆ ಇದೆ.

ಅವರ ಕೃತಿಶ್ರೇಣಿಯಲ್ಲಿ ಶಿಖರಪ್ರಾಯವಾದವು 'ಪರ್ಣಕುಟಿ' "ವರ್ಧಾಯಾತ್ರೆ". ಅವು ಹಲವು ಮುದ್ರಣ ಕಂಡಿವೆ. 'ಪರ್ಣಕುಟಿ' ಸೇವಾಗ್ರಾಮದ ಸಂತನ (ಗಾಂಧೀಜಿ) ಬಾಳಿನ ಹಲವು ಮುಖಗಳಿಗೆ ಹಿಡಿದ ಕನ್ನಡಿ, ರನ್ನಗನ್ನಡಿ, ಕುಸುರಿ ಕೆಲಸದ ಕನ್ನಡಿ. ಅದೊಂದು ವಿಚಿತ್ರಪಾಕ. ಅದರ ಶಿಲ್ಪ ಕನ್ನಡಕ್ಕೆ ಹೊಸದು. ಅನನ್ಯ. ಇಂದಿಗೂ ಅಷ್ಟೆ. ಪ್ರಾಚೀನ ಕಾಲದಿಂದ ಇಂದಿನವರೆಗಿನ ಕಾಲದೇಶಗಳ ಮಾನದಲ್ಲಿ ಗಾಂಧೀಜಿಯನ್ನು ಅಡಕಗೊಳಿಸಿ ಚಿತ್ರಿಸುವ ಅಚ್ಚರಿಯ ಕಲೆ, ಗಾಂಧೀಜಿಯ ಅಪಸ್ವರವಿಲ್ಲದ ಅಖಂಡವಾದ, ಪೂರ್ಣವಾದ, ಲೌಕಿಕ - ಆಧ್ಯಾತ್ಮ ಸಮ್ಮಿಲನವಾದ ವ್ಯಕ್ತಿತ್ವದ ಚಿತ್ರಣ, ಆ ಚಿತ್ರಣದ ಕುಸುರಿ ಕೆಲಸ ಅನುಪಮ, ಸರಳ ಸಹಜ ಹಾಗೂ ಸುಂದರ. ಅಷ್ಟೇ ಧ್ವನಿಪೂರ್ಣ. "ಗಾಂಧೀಜಿಯನ್ನು ಚಿತ್ರಿಸಿದರೆ ಹೀಗೆ ಚಿತ್ರಿಸಿಯೇನು" ಎಂದು ಮಾಸ್ತಿಯವರು ಹೇಳಿದ ಮಾತೇ ಸಾಕು 'ಪರ್ಣಕುಟಿ'ಯ ಪರಿಚಯಕ್ಕೆ. "ಪರ್ಣಕುಟಿ ಇವರ ಸಾಹಿತ್ಯ ಮೀಮಾಂಸೆಗೆ ಅನುಗುಣವಾದ ಕೃತಿ. ಈ ಯುಗದ ಶ್ರೇಷ್ಠ ಕೃತಿ. ಅದರ ತಿರುಳು ಸ್ವದೇಶಿ ಎಂಬುದು ಅದರ ಶ್ರೇಷ್ಠತೆಗೆ ಕಾರಣವಲ್ಲ. ಅದರ ಭಾಷೆಯಲ್ಲಿ ಕನ್ನಡ ಕಾವ್ಯದ ಸ್ವರ ಮಿಡಿಯುತ್ತಿದೆ ಎಂಬುದೇ ಕಾರಣ" ಎಂದು ಕೀರ್ತಿನಾಥ ಕುರ್ತುಕೋಟಿ ಹೇಳಿರುವುದು ಎಷ್ಟು ಸತ್ಯ! ಗಾಂಧೀಜಿ ಕುರಿತು ಇಂಥ ಕೃತಿ ಇನ್ನೊಂದಿಲ್ಲ. ಕನ್ನಡದಲ್ಲಂತೂ ಸರಿ. ಬೇರೆ ಭಾಷೆಗಳಲ್ಲೂ ಇಲ್ಲ ಎನ್ನುವುದು ವಿದ್ವಾಂಸರ ಮಾತು.

'ವರ್ಧಾಯಾತ್ರೆ' ಹೆಸರಿಗೆ ಪ್ರವಾಸಕಥನ. ದಿಟಕ್ಕೂ ಅದು ಶರ್ಮಾಜಿಯವರ ಸೇವಾಗ್ರಾಮ ಯಾತ್ರೆಯಲ್ಲಿ ತಮಗೆ ಆದ ದರ್ಶನ ಕಾಣ್ಕೆ - ಅಲ್ಲಿನ ಜೀವನ ಕ್ರಮ, ಸೇವಾಪರಾಮರ್ಶಿಕ, ವಾತಾವರಣ, ಹಾಸ್ಯಮಯ ಸನ್ನಿವೇಶಗಳು, ವ್ಯಕ್ತಿಗಳು, ಅಲ್ಲಿ ಪರಿಚಿತರಾದ ಮಹಾಸತ್ವರ ಅಂತರಂಗ ದರ್ಶನ, ನೆನಪಿನ ಕ್ಷಣಗಳು - ಎಲ್ಲ ಸೇರಿ ಸರಸ ಮಧುರ ಚಿಂತನಾಕೃತಿ ಆಗಿದೆ.

"ಯತಿರಾಜ ರಾಮಾನುಜ" ಭಗವದ್ರಾಮಾನುಜರ ಜೀವನ ಚಿತ್ರಣ, ಅರ್ಥಕ್ಕೆ ನಿಂತ ಚಿಕ್ಕ ಕೃತಿ. "ಸರದಾರ ವಲ್ಲಭಭಾಯಿ", "ವಿನೋಬಾ" ಇನ್ನೆರಡು ಜೀವನ ಚರಿತ್ರೆಗಳು. "ವ್ಯಕ್ತಿಚಿತ್ರ" ಎಂದು ಗುರುತಿಸಲಾಗಿರುವ ಸಾಹಿತ್ಯಪ್ರಕಾರಕ್ಕೆ ಕೃಷ್ಣಶರ್ಮರೇ ಆದ್ಯರು ಎಂದರೆ ತಪ್ಪಲ್ಲ. 1934ರಲ್ಲಿ ಪ್ರಕಟಗೊಂಡ 'ಕನ್ನಡದ ಕಿಡಿಗಳು' ಆ ಪ್ರಕಾರಕ್ಕೆ ನಾಂದಿ ಹಾಡಿತು, ಅದು ರೇಖಾಚಿತ್ರಣ ಕಲೆ. ವ್ಯಕ್ತಿಯ ಜೀವಾಳದ ಚಿತ್ರಣ. ಬೇಲೂರಿನ ಶಿಲ್ಪದಂತೆ. ಪ್ರತಿಮೆ ಪುಟ್ಟವು. ಆದರೆ ಹೃದಯವನ್ನು ಮುಟ್ಟುವಂಥವು. ಜೀವ ಚೈತನ್ಯವನ್ನು ಒಸರುವಂಥವು. 'ದೀಪಮಾಲೆ', "ಕುಲದೀಪಕರು" ಇನ್ನೆರಡು ಇಂಥವೇ ವ್ಯಕ್ತಿಚಿತ್ರ ಸಂಕಲನಗಳು, ರಾಷ್ಟ್ರನಾಯಕರ ಮೂರ್ತಿಶಿಲ್ಪಗಳು. ಒಂದೊಂದೇ ಪದ, ಒಂದೊಂದೇ ವಾಕ್ಯದಲ್ಲೆ ಶರ್ಮಾಜಿ ಇಡೀ ವ್ಯಕ್ತಿತ್ವವನ್ನೇ ಹಿಡಿದಿಟ್ಟುಬಿಡುತ್ತಾರೆ. ಅದೇ ಅವರ ವೈಶಿಷ್ಟ್ಯ.

"ಸರೋಜಿನಿ ಭಾರತ ಕಾವ್ಯಾಂಬರದ ಬೆಳುದಿಂಗಳು."

"ರಾಧಾಕೃಷ್ಣನ್ ಆಳು ಎತ್ತರ. ಆದರೆ ಎಲ್ಲೂ ಬಾಗಿದವರಲ್ಲ. ಬಾಗಿಲನ್ನು

ಹಿಗ್ಗಿಸಿಯೆ ಒಳಹೋಗುವವರು. ಅವರು ಮಾತನಾಡಲು ನಿಂತರೆ ಸರಸ್ವತಿಯೆ ನಡೆಮುಡಿ ಹಾಸುತ್ತಾಳೆ"

"ಗಾಂಧೀಜಿ ವಿರೋಧಗಳ ಕೊಡಲಿ"; 'ಗಾಂಧೀಜಿ ಒಂದು ವ್ಯಕ್ತಿಯಲ್ಲ. ಒಂದು ಪಂಥ.'

ಇಂಥ ಅನೇಕ ಉದಾಹರಣೆಗಳನ್ನು ಕಾಣಬಹುದು. ಈ ವ್ಯಕ್ತಿ ಚಿತ್ರಣ ಕಲೆ ಎಮಿಲ್ ಲಡ್‌ವಿಗ್, ಎ.ಜಿ. ಗಾರ್ಡನರ್, ಜಾನ್‌ಗಂಥರ್ ಮೊದಲಾದ ಆಂಗ್ಲ ಲೇಖಕರನ್ನು ನೆನಪಿಗೆ ತರುವಂಥವು ಎಂಬುದು ರಂಗನಾಥ ದಿವಾಕರರ ಉದ್ಗಾರ.

"ನಿರ್ಭಾಗ್ಯ ಬೋರೇಗೌಡ", "ಕಾಮಧೇನು" ಅರ್ಥಗರ್ಭಿತ ಗ್ರಂಥಗಳು, – "ಮೂರ್ತಿಮಂಟಪ" ಶರ್ಮಾಜಿಯ ಇನ್ನೊಂದು ವಿಶಿಷ್ಟ ಕೊಡುಗೆ. ತತ್ಕಾಲದವು ಎನಿಸಿಕೊಂಡ ಪತ್ರಿಕಾ ಲೇಖನಗಳಲ್ಲಿ ಸಾರ್ವಕಾಲಿಕ ಮಹತ್ವವನ್ನು ತುಂಬಿಕೊಡುವ ಕಲೆ. ಬಸವ ಯುಗದ ಅನುಭವ ಮಂಟಪವನ್ನು ನೆನಪಿಸುವುದು 'ಮೂರ್ತಿಮಂಟಪ'. ಇಲ್ಲಿ ಮನಸ್ಸನ್ನು ಅರಳಿಸುವ ಪ್ರಯತ್ನವಿದೆ. ಜಿಜ್ಞಾಸೆಯಿದೆ, ಚಿಂತನ ಇದೆ. ಸಮಾಜದ ಓರೆಕೋರೆ ಬಗ್ಗೆ ಟೀಕೆ ಇದೆ. ಅನ್ಯಾಯದ ವಿರುದ್ಧ ಆಗ್ರಹವಿದೆ. ಎಲ್ಲೂ ಉದ್ವೇಗವಿಲ್ಲ. ಇದು ಸತ್ಯಾಗ್ರಹಿಯ ದೃಷ್ಟಿ.

ಕೃಷ್ಣಶರ್ಮಾಜಿಯ ಅನುವಾದ ಸಾಹಿತ್ಯ ಅಪಾರ. ಗಾಂಧೀಜಿ, ವಿನೋಬಾ, ನೆಹರು, ರಾಜೇಂದ್ರಪ್ರಸಾದ್, ಬಿ.ಆರ್. ನಂದಾ, ಕೆ.ಎಂ. ಮುನಷಿ, ದಾದಾ ಧರ್ಮಾಧಿ ಕಾರಿ, ಮಿನೂ ಮಸಾನಿ, ರೊಮೇ ರೋಲಾ, ಮನುಗಾಂಧೀ, ಮೊದಲಾದ ಅನೇಕರ ಕೃತಿಗಳನ್ನು ಕನ್ನಡಿಸಿದರು. ಅವು ಮೂಲಸೃಷ್ಟಿಯೆ ಎನ್ನುವಷ್ಟು ಸಹಜಸುಂದರ ಅನು ವಾದಗಳು. ಇಂಗ್ಲಿಷ್ ಹಿಂದಿ, ಮರಾಠಿ, ತೆಲುಗು, ಉರ್ದು ಎಲ್ಲಾ ಭಾಷೆ ಗಳಿಂದಲೂ ಅನುವಾದ ಮಾಡಿದರು. ವಿನೋಬಾಜಿಯ 'ಗೀತಾಪ್ರವಚನ' ಲಕ್ಷಗಟ್ಟಲೆ ಮಾರಾಟ ವಾಗಿದೆ. ಅನುವಾದದಲ್ಲಿ ಮೂಲವನ್ನೇ ಮೀರಿಸಿದ ಆಕರ್ಷಣೆ ಅದರದು. ಹಾಗೆಯೆ ಮುನಷಿಯವರ ಕೃಷ್ಣಾವತಾರ ಅತ್ಯಂತ ಜನಪ್ರಿಯ ಮೋಹಕ ಅನುವಾದ ಕೃತಿ.

ತಮ್ಮ ಜೀವಿತದ ಇಳಿಗಾಲದಲ್ಲಿ ಶರ್ಮಾಜಿ ರಚಿಸಿದ್ದು 'ರಾಮಾವತಾರ' ಮೂರು ಬೃಹತ್ ಸಂಪುಟಗಳಲ್ಲಿ ವಾಲ್ಮೀಕಿ ರಾಮಾಯಣದ ಸರಳ ಗದ್ಯಾನುವಾದ.

ಕೊನೆಕೊನೆಗೆ ಸಂಪಾದಿಸಿಕೊಟ್ಟ ದೊಡ್ಡ ಕೃತಿ 'ಗಾಂಧಿ ಮತ್ತು ಕರ್ನಾಟಕ', ಗಾಂಧೀ ಶತಮಾನೋತ್ಸವಕ್ಕೆ ಮಾಡಿದ್ದು.

ಕೃಷ್ಣಶರ್ಮಾಜಿಯ ಸಾಹಿತ್ಯ ಮನೋರಂಜನೆಯದಲ್ಲ, ಮನೋವಿಕಾಸದ್ದು. ಸಮಾಜದ ಒಳಿತನ್ನು ಆಶಿಸುವುದು. ಅವರದು ಶುಭದೃಷ್ಟಿ. ಸತ್ಯದೃಷ್ಟಿ, ಗಾಂಧೀಜಿ, ಟಾಲ್‌ಸ್ಟಾಯ್, ರಸ್ಕಿನ್ ಅವರಂತೆ. ಬರೆಹ ಅವರಿಗೆ ಒಂದು ಸೇವಾ ಕರ್ಮ.

ಕನ್ನಡ ನಾಡಿಗೆ ಕೃಷ್ಣಶರ್ಮಾಜಿಯ ಕೊಡುಗೆ ಹಲವು ಬಗೆಯದು. ಸಾಹಿತ್ಯ, ಸ್ವಾತಂತ್ರ್ಯಹೋರಾಟ, ಪತ್ರಿಕೆ, ಸಹಕಾರ, ಜನಸಂಗ್ರಹ ಇತ್ಯಾದಿ. ಸಾಹಿತ್ಯಕ್ಕೂ ಅವರ ಕೊಡುಗೆ ವ್ಯಾಪಕ ಮತ್ತು ವಿವಿಧ. – "ಪರ್ಣಕುಟಿ" "ವರ್ಧಾಯಾತ್ರೆ' ಗಳಂಥ

ಸ್ಮರಣೀಯ ಕೃತಿಗಳ ರಚನೆ, ಪತ್ರಿಕೆಗೆ ಸೂಕ್ತವಾದ ಗದ್ಯ ಶೈಲಿ, ಕಾವ್ಯದ ಮೆರುಗು ಉಳ್ಳ ಗದ್ಯ, ಪತ್ರಿಕಾ ಬರೆಹಕ್ಕೂ ಸಾಹಿತ್ಯದ ರಂಗು, ಅನೇಕ ಬರೆಹಗಾರರಿಗೆ ನೀಡಿದ ಸ್ಫೂರ್ತಿ ಇತ್ಯಾದಿ. ಅವರ ಕೈಯಲ್ಲಿ ಪರಾಕಾಷ್ಠೆಗೆ ತಲುಪಿದ ಎರಡು ಪ್ರಕಾರಗಳು ವ್ಯಕ್ತಿಚಿತ್ರಣ ಹಾಗೂ ಅಂಕಣ ಬರೆವಣಿಗೆ. ಈ ಎರಡೂ ಮುಂದೆ ಸಾಹಿತ್ಯಲೋಕದ ಪುರಸ್ಕಾರ ಪಡೆದದ್ದೂ ಗಮನಾರ್ಹ. ವ್ಯಕ್ತಿಚಿತ್ರಣಕ್ಕೆ ಎಚ್ಚೆಸ್ಕೆ ಅವರಿಗೆ, ಅಂಕಣ ಬರೆವಣಿಗೆಗೆ ಡಾ। ಹಾ.ಮಾ. ನಾಯಕ ಅವರಿಗೆ ಪ್ರಶಸ್ತಿ ಬಂದವು.

ಕೃಷ್ಣಶರ್ಮಾಜಿಯವರ ಶತಮಾನೋತ್ಸವನ್ನು ಅದಕ್ಕಾಗಿಯೆ ರಚಿತವಾದ ಸಮಿತಿ ಈ ವರ್ಷ (2004) ನಡೆಸುತ್ತಿದೆ. ಜೂನ್ 28 ರಂದು ಅವರ ಹುಟ್ಟೂರಿನಲ್ಲಿ ಸಾಂಕೇತಿಕ ಆರಂಭ ಆಯಿತು. 4–7–2004 ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮಾನ್ಯಶ್ರೀ ಧರಂಸಿಂಗ್ ಅವರು ಸಮಾರಂಭದ ಸಾಂಪ್ರದಾಯಿಕ ಉದ್ಘಾಟನೆಯನ್ನು ನಡೆಸಿಕೊಟ್ಟರು. ಉತ್ಸವಕ್ಕೆ ಸರ್ಕಾರದ ಧನಸಹಾಯವನ್ನು ಪ್ರಕಟಿಸಿದರು. ಖ್ಯಾತ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸಂಪಾದಿಸಿರುವ ಶರ್ಮಾಜಿಯವರ ಸಮಗ್ರ ಮೂಲಕೃತಿಗಳ ಮೂರು ಸಂಪುಟಗಳನ್ನು ಬಿಡುಗಡೆ ಮಾಡಿದರು. ಸರ್ವಾಂಗ ಸುಂದರವಾಗಿ ಹೊರಬಂದಿರುವ ಈ ಸಂಪುಟ ಶ್ರೇಣಿ ಕೃಷ್ಣಶರ್ಮಾರ ಮೂಲ ಕೃತಿಗಳನ್ನೆಲ್ಲ ಒಳಗೊಂಡು, ಶರ್ಮಾಜಿಯವರ ಅಖಂಡ ವ್ಯಕ್ತಿತ್ವವನ್ನು, ಚಿಂತನವನ್ನು ತೆರೆದಿಡುತ್ತದೆ.

ಸಿದ್ಧವನಹಳ್ಳಿ ಕೃಷ್ಣಶರ್ಮಾಜಿ ಹೊಸಗನ್ನಡ ಕಂಡ ಅಪರೂಪದ ವಿಶಿಷ್ಟ ರೀತಿಯ ವ್ಯಕ್ತಿ, ಶಕ್ತಿ. ಜೀವನಾದರ್ಶಗಳ ಪ್ರತಿಪಾದಕರಾಗಿ, ಪ್ರಚಾರಕರಾಗಿ, ಪ್ರವರ್ತಕರಾಗಿ, ಪರಿಪಾಲಕರಾಗಿ, ಪ್ರಚೋದಕರಾಗಿ ಶರ್ಮಾಜಿ ಚಿರಸ್ಮರಣೀಯರು, ಪೂಜನೀಯರು.

ಹೆಚ್.ಎಲ್.ಎನ್.ಸಿಂಹ (1904 – 1972)

ಪ್ರೊ॥ ಡಿ. ಲಿಂಗಯ್ಯ

ಕನ್ನಡ ವೃತ್ತಿ ರಂಗಭೂಮಿ, ಕನ್ನಡ ಚಲನಚಿತ್ರ ಕ್ಷೇತ್ರಗಳಲ್ಲಿ ನಟ, ನಿರ್ದೇಶಕರಾಗಿ ಅನುಪಮ ಸೇವೆಸಲ್ಲಿಸಿ ಅನುಕರಣೀಯ ಹೆಜ್ಜೆ ಗುರುತುಗಳನ್ನು ಮೂಡಿಸಿದ ಧೀಮಂತ ಕಲಾವಿದ ಹೆಚ್.ಎಲ್.ಎನ್.ಸಿಂಹ ಅವರು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಮಾರೇಹಳ್ಳಿಯಲ್ಲಿ ಜನಿಸಿದರು.(25.7.1904). ಹುಟ್ಟಿದ್ದು ಶತಭಿಷ ನಕ್ಷತ್ರ.. ಕುಂಭರಾಶಿ. ಮಾಧ್ವ ಬ್ರಾಹ್ಮಣ ಜನಾಂಗಕ್ಕೆ ಸೇರಿದವರು. ಅವರ ತಂದೆಯ ಹೆಸರು ಹೆಚ್.ನರಸಿಂಹಯ್ಯ, ತಾಯಿಯ ಹೆಸರು ಲಕ್ಷ್ಮಮ್ಮ. ನಂಜನಗೂಡಿನವರಾದ ನರಸಿಂಹಯ್ಯನವರು ಮಳವಳ್ಳಿ ಪ್ರದೇಶಕ್ಕೆ ಶೇಕದಾರರಾಗಿದ್ದರು. ಸಿಂಹ ಅವರ ಬಾಲ್ಯದ ಕೆಲವು ಕಾಲ ಮಾರೇಹಳ್ಳಿಯಲ್ಲೇ ಕಳೆಯಿತು. ಲಕ್ಷ್ಮೀ ನರಸಿಂಹ ಎಂಬ ಹುಟ್ಟು ಹೆಸರು ಮುಂದೆ ಹೆಚ್.ಎಲ್.ಎನ್.ಸಿಂಹ ಆಯಿತು. ಹೆಸರಿನ ಆದ್ಯಕ್ಷರ 'ಹೆಚ್' ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಹನಗೋಡು ಗ್ರಾಮದ ಸಂಕೇತ. ನರಸಿಂಹಯ್ಯನವರ ಪೂರ್ವಿಕರು ಅಲ್ಲಿಯವರಂತೆ. ನಂಜನಗೂಡಿಗೆ ಬರುವ ಮೊದಲು ಹನಗೋಡು ಹಳ್ಳಿಯಲ್ಲಿ ವಾಸವಾಗಿದ್ದರಂತೆ. ಪೂರ್ವಿಕರು ನೆಲೆಸಿದ್ದ ಊರಿನ ಜ್ಞಾಪಕಾರ್ಥವಾಗಿ ಅವರ ಮನೆತನದವರು 'ಹೆಚ್' ಆದ್ಯಕ್ಷರವನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುವುದು ರೂಢಿಯಾಗಿದೆ.

ಸಿಂಹ ಅವರ ಬಾಲ್ಯ ತಂದೆಯ ಹುಟ್ಟೂರಾದ ನಂಜನಗೂಡಿನಲ್ಲಿ ಕಳೆಯಿತು. ನಂಜನಗೂಡಿನ ನಂಜುಂಡೇಶ್ವರ, ಪಾರ್ವತಿಯಮ್ಮನ ಸನ್ನಿಧಿ, ಕಪಿಲಾ ನದಿಯ ತೀರ ಆಡುಂಬೊಲವಾಯಿತು. ಅಲ್ಲಿಯ ಪರಿಸರ, ನೆರೆಹೊರೆ, ಬದುಕು ಬವಣೆ ಸ್ಫೂರ್ತಿಯ ಸೆಲೆಯಾಯಿತು. ಸಂಪ್ರದಾಯಸ್ಥ ಮನೆತನದ ಆಚಾರ ವಿಚಾರ ಕಟ್ಟುಪಾಡುಗಳು ಪ್ರಭಾವಬೀರಿದವು. ಸಂಪ್ರದಾಯಸ್ಥರೂ ಸರ್ಕಾರಿ ನೌಕರರೂ ಆದ ನರಸಿಂಹಯ್ಯನವರು ಶಿಸ್ತುಬದ್ಧರಾಗಿ ಬೆಳೆದು, ಶಿಕ್ಷಣ ಪಡೆದು, ಸರ್ಕಾರಿ ನೌಕರಿ ಹಿಡಿದು, ಬದುಕು ಮಾಡ ಬೇಕೆಂದು ಬಯಸುತ್ತಿದ್ದರು. ನರಸಿಂಹಯ್ಯನವರ ಎಂಟು ಮಕ್ಕಳಲ್ಲಿ ಲಕ್ಷ್ಮೀನರಸಿಂಹ ಐದನೆಯವರು. ದೊಡ್ಡ ಕುಟುಂಬದಲ್ಲಿ ಒಬ್ಬರಾಗಿ ಸಿಂಹ ಬೆಳೆದರು.

ಸಿಂಹ ಅವರ ಪ್ರಾಥಮಿಕ ಶಿಕ್ಷಣ ನಂಜನಗೂಡಿನ ಸರಕಾರಿ ಶಾಲೆಯಲ್ಲಿ ನಡೆಯಿತು. ಅನಂತರ ಪ್ರೌಢ ಶಿಕ್ಷಣಕ್ಕಾಗಿ ಮೈಸೂರಿನ ಮೆಥಾಡಿಸ್ಟ್ ವೆಸ್ಲಿಯನ್ ಮಿಷನ್ ಸ್ಕೂಲಿಗೆ ಸೇರಿದರು. ಪ್ರೌಢಶಾಲೆಯಲ್ಲಿ ಕನ್ನಡ ಭಾಷೆಯ ಜೊತೆಗೆ, ಇಂಗ್ಲಿಷ್ ಭಾಷೆಯ ಕಲಿಕೆಗೆ ಹೆಚ್ಚು ಗಮನಕೊಟ್ಟರು. ಮೈಸೂರಿನಲ್ಲಿ ಮೊಕ್ಕಾಂ ಮಾಡಿದ್ದ ವೃತ್ತಿ ನಾಟಕ ಕಂಪನಿಯಲ್ಲಿ ನಾಟಕ ನೋಡಿ, ತಂದೆಯಿಂದ ಬೈಸಿಕೊಂಡರು. ಸಂಪ್ರದಾಯಸ್ಥ ಬ್ರಾಹ್ಮಣರು ಕಂಪನಿ ನಾಟಕಗಳನ್ನು, ನಾಟಕದವರನ್ನು ಕೀಳಾಗಿ ಕಾಣುತ್ತಿದ್ದ ಕಾಲ ಅದು. ನಾಟಕಗಳನ್ನು ನೋಡಿದರೆ ಮಕ್ಕಳು ಪೋಲಿಯಾಗುತ್ತಾರೆ ಎಂಬುದು ಅವರ ಬಲವಾದ ನಂಬಿಕೆ. ಆದರೆ ಸಿಂಹ ಅವರಿಗೆ ನಾಟಕದ ಗೀಳು ಹೆಚ್ಚು. ಒಮ್ಮೆ ಅವರು

ಶಾಲೆಯಲ್ಲಿ 'ಡೆಸ್ಟಿನಿ ರೂಲ್ಸ್ ಹ್ಯುಮ್ಯಾನಿಟಿ' ಎಂಬ ಇಂಗ್ಲಿಷ್ ನಾಟಕ ಬರೆದು, ಆಡಿ, ಪ್ರಿನ್ಸಿಪಾಲರ ಮೆಚ್ಚುಗೆ ಗಳಿಸಿದರು. ಪ್ರೌಢಶಾಲೆಯಲ್ಲಿ ಮಹಮದ್ ಪೀರ್, ಕೆ.ವಿ.ಪುಟ್ಟಪ್ಪ, ಟಿ.ದ್ವಾರಕಾನಾಥ್, ಎ.ಸಿ.ನರಸಿಂಹಮೂರ್ತಿ ಮೊದಲಾದವರು ಸಿಂಹ ಅವರ ಸಹಪಾಠಿಗಳಾಗಿದ್ದರು.

ಪ್ರೌಢಶಾಲೆಯ ಶಿಕ್ಷಣ ಮುಗಿದ ಮೇಲೆ ಸಿಂಹ ಅವರ ವಿದ್ಯಾಭ್ಯಾಸ ಮುಂದುವರಿಯಲಿಲ್ಲ. ಹಣಗಳಿಕೆಗಾಗಿ ನೌಕರಿಯನ್ನು ಹುಡುಕಿಕೊಂಡು ಕೋಲ್ಕತ್ತಾಕ್ಕೆ ಹೋದರು. ಆದರೆ ಅಲ್ಲಿ ಯಾವುದೇ ವೃತ್ತಿ ಸಿಗಲಿಲ್ಲ. ಐದಾರು ತಿಂಗಳು ಅಲೆದು, ಬರಿಗೈಯಲ್ಲಿ ಹಿಂದಿರುಗಿದರು. ಮನೆಯವರ, ಮುಖ್ಯವಾಗಿ ತಂದೆಯವರ ನಿಷ್ಠುರಕ್ಕೆ ಒಳಗಾದರು. ವೃತ್ತಿ ಗಳಿಕೆಯ ಹಿನ್ನೆಲೆಯಲ್ಲಿ, ಸಿಂಹ ಅವರಲ್ಲಿ ಸುಪ್ತವಾಗಿದ್ದ ನಾಟಕದ ಆಕರ್ಷಣೆ ಜಾಗೃತವಾಯಿತು. ವೃತ್ತಿ ರಂಗಭೂಮಿಯತ್ತ ಹೆಜ್ಜೆಯಿಟ್ಟರು.

ಮೈಸೂರಿನಲ್ಲಿ ನಾಟಕ ಪ್ರದರ್ಶಿಸುತ್ತಿದ್ದ ನಾಟಕ ಶಿರೋಮಣಿ ವರದಾಚಾರ್ಯರ ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾಗೆ ಹೋಗಿ, ಕಾಡಿಬೇಡಿ, ನಾಟಕ ಕಂಪನಿಗೆ ಸೇರಿದರು. ಅಲ್ಲಿ ಭಕ್ತ ಮಾರ್ಕಂಡೇಯ ಪಾತ್ರಕ್ಕೆ ಬಣ್ಣ ಹಚ್ಚಿಕೊಂಡು, ಅಭಿನಯಿಸಿ, ಶಹಬಾಸ್‌ಗಿರಿ ಪಡೆದರು. ಅಂದಿನಿಂದ ಸಿಂಹ ಅವರಿಗೆ ಬಣ್ಣದ ಬದುಕು ಗಟ್ಟಿಯಾಯಿತು. ಕಾರಣಾಂತರದಿಂದ ಆ ಕಂಪನಿ ಬಿಟ್ಟು ಸಿ.ಬಿ.ಮಲ್ಲಪ್ಪ, ಗುರುಮೂರ್ತಪ್ಪ, ಪೈಲ್ವಾನ ಅಣ್ಣಯ್ಯಪ್ಪನವರ ಕಂಪನಿಗೆ ಪ್ರವೇಶಿಸಿ, ವಿವಿಧ ರೀತಿಯ ಪಾತ್ರಗಳ ವೇಷ ಧರಿಸಿದರು. ಅನಂತರ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘಕ್ಕೆ ಸೇರಿದರು.

ಸಿಂಹ ಅವರಲ್ಲಿ ಅಂತರ್ಗತವಾಗಿದ್ದ ನಿರ್ದೇಶನ ಪ್ರತಿಭೆಯನ್ನು ಗುರುತಿಸಿದ ಗುಬ್ಬಿ ವೀರಣ್ಣನವರು ಚಲನಚಿತ್ರ ನಿರ್ದೇಶನದ ತರಬೇತಿಗಾಗಿ ಸಿಂಹರನ್ನು ಮುಂಬಯಿಗೆ ಕಳಿಸಿದರು. ಅಲ್ಲಿ ಸಿಂಹ ಸುಮಾರು ಆರು ತಿಂಗಳು ತರಬೇತಿ ಪಡೆದರು. ಬೆಂಗಳೂರಿನಲ್ಲಿ ಗುಬ್ಬಿ ವೀರಣ್ಣನವರು ತಯಾರಿಸಿದ ಮೂಕ ಚಲನಚಿತ್ರಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಕೆಲಸಮಾಡಿದರು. ಸಾಂಗ್ ಆಫ್ ಲೈಫ್ ಮತ್ತು ಹಿಸ್ ಲವ್ ಅಫೇರ್ಸ್ ಮೂಕ ಚಿತ್ರಗಳಲ್ಲಿ ಅಭಿನಯಿಸಿದರು, ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದರು.

ಅನಂತರ ಸಿಂಹ ಅವರು ಮಹಮದ್ ಪೀರ್ ಅವರ ಶ್ರೀ ಚಂದ್ರಕಲಾ ಕರ್ನಾಟಕ ನಾಟಕ ಮಂಡಳಿಗೆ ಸೇರಿದರು. ಅಲ್ಲಿದ್ದಾಗ ಅವರು ಮಾಡಿದ ರಂಗಭೂಮಿಯ ಸೇವೆ ಅನನ್ಯವಾದದ್ದು. ಅಲ್ಲಿದ್ದಾಗಲೇ ಸಂಸಾರ ನೌಕ ಎಂಬ ಸಾಮಾಜಿಕ ನಾಟಕವನ್ನು ಬರೆದು, ದೀರ್ಘಕಾಲ ರಂಗ ತಾಲೀಮು ಮಾಡಿಸಿ, ರಂಗಭೂಮಿಯ ಮೇಲೆ ಪ್ರಯೋಗಿಸಿ, ಯಶಸ್ಸು ಕಂಡರು. ಮಹಮದ್ ಪೀರ್ ಕಂಪನಿಯಲ್ಲಿ ಸಿಂಹ ಅವರು ಅಭಿನಯಿಸಿದ ಷಾಜಹಾನ್ ನಾಟಕದ ಷಾಜಹಾನ್, ಸಂಸಾರನೌಕ ನಾಟಕದ ಮಾಧು, ಗೌತಮ ಬುದ್ಧ ನಾಟಕದ ಚೆನ್ನನ ಪಾತ್ರ ಅಪಾರ ಜನಮನ್ನಣೆ ಗಳಿಸಿದವು.

ಸಿಂಹ ಅವರು "ಸಿಂಹಾಸ್ ಸೆಲೆಕ್ಟೆಡ್ ಆರ್ಟಿಸ್ಟ್" ಎಂಬ ಸ್ವಂತ ನಾಟಕ

ಕಂಪನಿಯನ್ನು ಪ್ರಾರಂಭಿಸಿ ತಾವೇ ಬರೆದು ನಿರ್ದೇಶಿಸಿದ ಸಂಸಾರ ನೌಕ, ಅಬ್ಬಾ ಆ ಹುಡುಗಿ, ಗಂಡ್ ಹರಾಜ್, ಬಂಗಾಳದ ಬರ ಮೊದಲಾದ ಸಾಮಾಜಿಕ ನಾಟಕಗಳನ್ನೂ ಪೌರಾಣಿಕ ಜಾನಪದ ನಾಟಕಗಳನ್ನೂ ಪ್ರದರ್ಶಿಸಿದರು. ಆರ್ಥಿಕ ಮುಗ್ಗಟ್ಟಿನಿಂದ ಕಂಪನಿ ನಿಂತು ಹೋಯಿತು.

ಹೆಚ್.ಎಲ್.ಎನ್. ಸಿಂಹ ಅವರು ವೃತ್ತಿ ರಂಗಭೂಮಿಯ ಜೊತೆಗೆ ಕನ್ನಡ ಚಲನಚಿತ್ರ ರಂಗದಲ್ಲೂ ಚರಿತ್ರಾರ್ಹವಾದ ಸೇವೆಸಲ್ಲಿಸಿದರು. ಕನ್ನಡ ವೃತ್ತಿ ರಂಗಭೂಮಿಯಲ್ಲಿ ಮೊದಲ ಸಾಮಾಜಿಕ ನಾಟಕವಾಗಿ ಜಯಭೇರಿ ಹೊಡೆದ ಸಂಸಾರ ನೌಕ ನಾಟಕವನ್ನು, ಚೆನ್ನೈನ ದೇವಿ ಫಿಲಂಸ್ ಸಂಸ್ಥೆಗೆ, ಚಲನಚಿತ್ರವಾಗಿ ಪರಿವರ್ತಿಸಿ, ನಿರ್ದೇಶಿಸಿದರು. ಅದು ದಕ್ಷಿಣ ಭಾರತದ ಪ್ರಥಮ ಸಾಮಾಜಿಕ ಚಲನಚಿತ್ರವಾಯಿತು. ಬೇಡರ ಕಣ್ಣಪ್ಪ, ತೇಜಸ್ವಿನಿ, ಅನುಗ್ರಹ, ತಮ್ಮದೇ ನಾಟಕದ ಆಧಾರದಿಂದ ತಯಾರಿಸಿದ ಅಬ್ಬಾ ಆ ಹುಡುಗಿ ಚಲನಚಿತ್ರಗಳನ್ನು ನಿರ್ದೇಶಿಸಿದರು. ಅನೇಕ ನಟ ನಟಿಯರನ್ನು ಚಲನಚಿತ್ರ ಕ್ಷೇತ್ರಕ್ಕೆ ಪರಿಚಯಿಸಿದರು. ಡಾ.ರಾಜಕುಮಾರ್, ಜಿ.ವಿ.ಅಯ್ಯರ್, ನರಸಿಂಹರಾಜು, ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ಪಂಡರಿಬಾಯಿ, ರಾಜಾಶಂಕರ್, ಮೈನಾವತಿ, ಹುಣಸೂರು ಕೃಷ್ಣಮೂರ್ತಿ, ರಾಜಸುಲೋಚನ, ಆದವಾನಿ ಲಕ್ಷ್ಮೀದೇವಿ ಮೊದಲಾದವರನ್ನು ಚಲನಚಿತ್ರಕ್ಕೆ ಪರಿಚಯಿಸಿದ ಕೀರ್ತಿ ಸಿಂಹ ಅವರಿಗೆ ಸಲ್ಲುತ್ತದೆ. ಸಿಂಹ ಅವರು ಕನ್ನಡ ತೆಲುಗು, ಹಿಂದಿ, ತಮಿಳು ಚಲನಚಿತ್ರಗಳಿಗೆ ಕೆಲಸ ಮಾಡಿದರು. ಕೆಲವು ಚಿತ್ರಗಳಿಗೆ ಚಿತ್ರಕಥೆ, ಸಂಭಾಷಣೆ ಬರೆದರು.

ಸಿಂಹ ಅವರು ತಮ್ಮ ಇಪ್ಪತ್ತೆಂಟನೇ ವಯಸ್ಸಿನಲ್ಲಿ ಸಂಸಾರಿಯಾದರು. ಹೆಂಡತಿಯ ಹೆಸರು ಇಂದಿರಮ್ಮ. ಒಬ್ಬನೇ ಮಗ ಹೆಚ್.ಎಲ್.ಶೇಷಚಂದ್ರ, ಸೊಸೆ ವಿಜಯಲಕ್ಷ್ಮೀ. ಶೇಷಚಂದ್ರ ಮಾಂಡೋಲಿನ್ ವಾದಕ, ಗಾಯಕ, ಸಂಗೀತ ಸಂಯೋಜಕ. ಮೈಸೂರು ವಿಶ್ವ ವಿದ್ಯಾಲಯದ ಸಂಖ್ಯಾಶಾಸ್ತ್ರ ಪದವೀಧರರಾದ ಇವರು ಗೀತಕಾರರೂ ಹೌದು. ವಿಜಯಲಕ್ಷ್ಮೀಯವರು ವೀಣಾವಾದಕಿ. ಸಿಂಹ ಅವರಲ್ಲಿ ಪ್ರಖರವಾಗಿದ್ದ ವಿಭಿನ್ನ ಕಲೆ ಮಗನಲ್ಲಿ ಆಂಶಿಕವಾಗಿ ಮುಂದುವರಿದಿದೆ.

ಸಿಂಹ ಅವರು ಸಂಸಾರಿಯಾದರೂ ಸಂಸಾರದೊಟ್ಟಿಗಿದ್ದುದು ಕಡಮೆ. ಮೈಸೂರಿನ ಬಾಡಿಗೆ ಮನೆಯಲ್ಲಿ ಸಂಸಾರ ಬಿಟ್ಟರು. ರಂಗಭೂಮಿಯ ಸಮಪರ್ಕವಿದ್ದಾಗ ಕಂಪನಿಯ ಕಲಾವಿದರೊಡನಿದ್ದರು. ಚಲನಚಿತ್ರ ತಯಾರಿಕೆ ಸಂದರ್ಭದಲ್ಲಿ ಸಹಾಯಕರೊಡನೆ ಚೆನ್ನೈನಲ್ಲಿದ್ದರು. ಬದುಕಿನಲ್ಲಿ ಏಳುಬೀಳು ಕಂಡರು; ಬಡತನದ ಬವಣೆ ಉಂಡರು. ಕಲಾಸೇವೆಗೆ ಜೀವನವನ್ನು ಮುಡುಪಿಟ್ಟರು. ಹಣ ಸಂಪಾದನೆಗೆ ಗಮನ ಕೊಡಲಿಲ್ಲ. ಹಣವಿದ್ದಾಗ ಉದಾರವಾಗಿ ನಡೆದುಕೊಂಡರು. ಇಲ್ಲದಿದ್ದಾಗ ಮೌನವಾದರು. ಜೀವನದುದ್ದಕ್ಕೂ ಬಾಡಿಗೆ ಮನೆಯಲ್ಲಿದ್ದರು; ಸ್ವಂತ ಮನೆ ಮಾಡಲಿಲ್ಲ. ಸಂಸಾರಕ್ಕೆ ಅಷ್ಟಾಗಿ ಗಮನ ಕೊಡಲಿಲ್ಲ. ಕನ್ನಡ ರಂಗಭೂಮಿ ಹಾಗೂ ಕನ್ನಡ ಚಲನಚಿತ್ರದ ಏಳಿಗೆಗಾಗಿ ಬಿಡುವಿಲ್ಲದೆ ದುಡಿದ ಸಿಂಹ ಅವರು ಬೆಂಗಳೂರಿನಲ್ಲಿ ನಿಧನರಾದರು(3.7.1972).

ಕನ್ನಡ ವೃತ್ತಿ ರಂಗಭೂಮಿ ಹಾಗೂ ಚಲನಚಿತ್ರ ರಂಗದಲ್ಲಿ ಅನಭಿಷಿಕ್ತ ದೊರೆಯಾಗಿ ಮೆರೆದ ಹೆಚ್.ಎಲ್.ಎನ್.ಸಿಂಹ ಜೀವಿತದ ಕೊನೆಯಲ್ಲಿ ಹೆಚ್ಚು ಕಡಮೆ ಜನಮನದಿಂದ ಮರೆಯಾದರು. ಅನಂತರವೂ ಅಷ್ಟೆ. ಬಣ್ಣದ ಬದುಕಿನ ಏರುಪೇರು ಜೀವನದಲ್ಲಿ ಇದೆಲ್ಲಾ ಸಾಮಾನ್ಯ ಎನ್ನುವಂತಾಯಿತು. 2004ರಲ್ಲಿ ಅವರ ಜನ್ಮ ಶತಮಾನೋತ್ಸವ ನಡೆದದ್ದು ಸಮಾಧಾನದ ವಿಷಯ.

ಸಿಂಹ ಅವರು ಆರೇಳು ನಾಟಕಗಳನ್ನು ಬರೆದರು. ಆದರೆ ಅವುಗಳಲ್ಲಿ ಎರಡು ನಾಟಕಗಳು ಮಾತ್ರ ಸದ್ಯಕ್ಕೆ ಸಿಕ್ಕಿವೆ. ಅವು ಸಂಸಾರ ನೌಕ ಮತ್ತು ಅಬ್ಬಾ ಆ ಹುಡುಗಿ. ಎರಡೂ ಸಾಮಾಜಿಕ ನಾಟಕಗಳು; ರಂಗಭೂಮಿಯ ಮೇಲೆ ಪ್ರಯೋಗ ವಾದುದರ ಜೊತೆಗೆ ಚಲನಚಿತ್ರವಾಗಿಯೂ ಬೆಳಕುಕಂಡಂಥವು. ಸಂಸಾರ ನೌಕ ನಾಟಕದಲ್ಲಿ ನಮ್ಮ ಸಮಾಜದಲ್ಲಿ ಜ್ವಲಂತವಾಗಿ ಕಾಡುವ ನಿರುದ್ಯೋಗ, ಬಡತನ, ಆತ್ಮೀಯರ ಮೋಸ, ವಿಧವಾ ವಿವಾಹ, ಅತ್ತೆಯ ಕ್ರೌರ್ಯ, ಕುತಂತ್ರಿಗಳ ಕಾಟ,ಸ್ವಾರ್ಥ, ದಬ್ಬಾಳಿಕೆ, ಅಮರ ಪ್ರೇಮ, ಸ್ತ್ರೀ ಶೋಷಣೆ ಮೊದಲಾದ ಸಮಸ್ಯೆಗಳು ಪ್ರಧಾನವಾಗಿವೆ. ವೈಚಾರಿಕ ಆಲೋಚನೆಗಳಿವೆ. ಮನನೀಯ ಮಾತುಗಳಿವೆ. ನಾಟಕದುದ್ದಕ್ಕೂ ನಾಟಕೀಯತೆ ದಟ್ಟವಾಗಿದೆ.

ಬಹುಮುಖ ಪ್ರತಿಭೆಯ ಸಿಂಹ ಅವರಲ್ಲಿ ಅಭಿನಯ, ನಿರ್ದೇಶನದ ಜೊತೆಗೆ ಸಾಹಿತ್ಯ ರಚನೆಯೂ ರಕ್ತಗತವಾಗಿತ್ತು. ನಾಟಕ ರಚನೆ ಹಾಗೂ ಚಲನಚಿತ್ರ ಸಾಹಿತ್ಯ ಸೃಷ್ಟಿಯಲ್ಲಿ ಅವರ ಸಾಹಿತ್ಯ ಪ್ರತಿಭೆ ಪ್ರಕಟಗೊಂಡಿದೆ. ಅವರ ಕೃತಿಗಳಲ್ಲಿ ಸಾಮಾಜಿಕ ಜನಜೀವನದ ಹಿನ್ನೆಲೆಯ ನವೀನ ಕಲ್ಪನೆ, ಲವಲವಿಕೆಯ ನಾಟಕೀಯತೆ ಮಡುಗಟ್ಟಿದೆ. ಕಲಾರಂಗದ ಹಲವು ಸಾಧ್ಯತೆಗಳನ್ನು ಅವರ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.

ಕನ್ನಡ ವೃತ್ತಿ ರಂಗಭೂಮಿಯ ಅಭಿಜಾತ ಕಲಾವಿದ ಮಹಮದ್ ಪೀರ್‌ರ ಉತ್ತೇಜನದಿಂದ, ಹೆಚ್.ಎಲ್.ಎನ್.ಸಿಂಹ 1931ರಲ್ಲಿ 'ಸಂಸಾರ ನೌಕ' ಸಾಮಾಜಿಕ ನಾಟಕವನ್ನು ಬರೆದರು. ಎರಡು ವರ್ಷ ರಂಗ ತರಬೇತಿ ಪಡೆದ ಆ ನಾಟಕ 1933ರಲ್ಲಿ ವೃತ್ತಿ ರಂಗಭೂಮಿಯ ಮೇಲೆ ಪ್ರದರ್ಶನಗೊಂಡಿತು. ಕನ್ನಡ ವೃತ್ತಿ ರಂಗಭೂಮಿಯ ಇತಿಹಾಸದಲ್ಲೇ ಹೊಸ ಆಯಾಮಕ್ಕೆ ಕಾರಣವಾದ ಆ ನಾಟಕ ರಾಜ್ಯದಲ್ಲಿ ಜಯಭೇರಿ ಬಾರಿಸಿತು. 1936ರಲ್ಲಿ ಆ ನಾಟಕ ಚಲನಚಿತ್ರವಾಗಿಯೂ ನಿರ್ಮಾಣಗೊಂಡು ಹೆಸರು ಮಾಡಿತು.

'ಸಂಸಾರ ನೌಕ' ನಾಟಕದ ಕಥಾ ಸಾರಾಂಶ ಹೀಗಿದೆ:

ರಾಘವೇಂದ್ರರಾಯ ಶ್ರೀಮಂತ ಜಮೀನ್ದಾರ. ಅವನಿಗೆ ಇಬ್ಬರು ಸಾಕು ಮಕ್ಕಳು: ಸುಂದರ ಮತ್ತು ಮಾಧು. ಅಣ್ಣ ಸುಂದರ ವಿದ್ಯಾವಂತ, ಸುಸಂಸ್ಕೃತ, ವಿಚಾರ ವಂತ. ಅವನ ಸೋದರ ಮಾಧು ಚಂಚಲಚಿತ್ತ, ಮಹತ್ವಾಕಾಂಕ್ಷಿ, ಪರಾವಲಂಬಿ. ಅವನು ಒಮ್ಮೊಮ್ಮೆ ಪೆದ್ದನಂತೆ, ಇನ್ನೊಮ್ಮೆ ಬುದ್ಧಿವಂತನಂತೆ ನಡೆದು ಕೊಳ್ಳುವನು. ಮಾಧು ದುಷ್ಟ ಗೆಳೆಯ ಡಿಕ್ಕಿಯಿಂದ ಅರೆಹುಚ್ಚನಾದ, ಅವಿವೇಕಿಯಾದ, ಕೊಲೆಗಡುಕನಾದ.

ಆದರ್ಶ ಸ್ವಭಾವದ ಸುಂದರ ಬ್ಯಾರಿಸ್ಟರ್ ಪುರುಷೋತ್ತಮ ರಾಯನ ಮಗಳು ಸರಳೆಯನ್ನು ಪ್ರೀತಿಸಿ, ರಾಘವೇಂದ್ರರಾಯನ ಇಷ್ಟಕ್ಕೆ ವಿರುದ್ಧವಾಗಿ ಮದುವೆಯಾಗಿ, ಸಾಕು ತಂದೆಯ ತಿರಸ್ಕಾರಕ್ಕೆ ಪಾತ್ರನಾದ. ಶ್ರೀಮಂತ ಮಾವನ ಅವಹೇಳನಕ್ಕೂ ಗುರಿಯಾದ. ಅವನದು ಆದರ್ಶ ಪ್ರೇಮ. ಆದರೆ ಬಡತನಕ್ಕೆ ಸಿಕ್ಕಿದ. ಸಂಸಾರ ತೊಂದರೆಗೆ ಈಡಾಯಿತು.

ಸುಂದರನಿಂದ ಸಹಾಯ ಪಡೆದ ಸ್ನೇಹಿತರು, ಕಷ್ಟಕಾಲದಲ್ಲಿ ಸಹಾಯ ಮಾಡಲಿಲ್ಲ. ನಿರ್ಗತಿಕನಾದ ಸುಂದರ ಎಲ್ಲರ ಅವಕೃಪೆಗೆ ಪಾತ್ರನಾದ. ಸ್ವಂತ ಮಗುವಿನ ಕಾಯಿಲೆಗೂ ಹಣ ಹೊಂಚಲು ಸಾಧ್ಯವಾಗಲಿಲ್ಲ. ಸರಳ ಒಳ್ಳೆಯ ಹೆಂಡತಿ. ಆದರೆ ಅವಳು ಅಸಹಾಯಕಳು. ಸುಂದರನ ಮನೆಗೆ ಬಂದ ಹತ್ತಿರದ ಸಂಬಂಧಿ ದೊಡ್ಡಮ್ಮ ಗುಂಡೂಬಾಯಿ ಹಳೆಯ ಕಾಲದ ಅತ್ತೆಯಂತೆ ಒರಟಾಗಿ ವರ್ತಿಸಿ, ಸರಳಳಿಗೆ ನಾನಾ ರೀತಿಯ ತೊಂದರೆ ಕೊಡುವಳು.

ಬ್ಯಾರಿಸ್ಟರ್ ಪುರುಷೋತ್ತಮರಾಯ ಬಲವಂತವಾಗಿ ಸರಳಳನ್ನು ಗಂಡನಿಂದ ದೂರ ಮಾಡಿ, ತನ್ನ ಮನೆಯಲ್ಲಿ ಇಟ್ಟುಕೊಳ್ಳುತ್ತಾನೆ. ಸುಂದರನ ಕಷ್ಟಪರಂಪರೆ ಮುಂದುವರಿಯುತ್ತದೆ.

ಬುದ್ಧಿಹೀನನಾದ ಮಾಧು ಕುಯುಕ್ತಿಯ ಡಿಕ್ಕಿಯಿಂದ ಶೋಷಿತನಾಗುತ್ತಾನೆ. ರಾಘವೇಂದ್ರರಾಯನ ಅಪೇಕ್ಷೆಯಂತೆ ಮಾಧು ಮನೆಯ ಪೂಜಾರಿ ಶುಕದೇವನ ಮಗಳು ಸುಶೀಲೆಯನ್ನು ಮದುವೆಯಾದರೂ ಆಕೆಯನ್ನು ಸರಿಯಾಗಿ ಬಾಳಿಸುವುದಿಲ್ಲ. ಜಮೀನ್ದಾರ ಸಾಕಿಕೊಂಡಿರುವ ಬಾಲವಿಧವೆ ಗಿರಿಜೆಯೊಡನೆ ಶುಕದೇವ, ಡಿಕ್ಕಿ ಹಾಗೂ ಮಾಧು ಅಸಭ್ಯವಾಗಿ ನಡೆದುಕೊಳ್ಳುತ್ತಾರೆ. ಬಾಲವಿಧವೆಯ ಶೋಷಣೆಯಾಗುತ್ತದೆ. ರಾಘವೇಂದ್ರ ರಾಯನ ಆಸ್ತಿಯನ್ನು ಲಪಟಾಯಿಸಲು ಸಂಚುನಡೆಯುತ್ತದೆ. ಇದೆಲ್ಲಾ ತಡವಾಗಿ ಜಮೀನ್ದಾರನ ಗಮನಕ್ಕೆ ಬರುತ್ತದೆ.

ಮಾಧು ಸಾಕುತಂದೆಯ ದುಡ್ಡು, ಹೆಂಡತಿಯ ಒಡವೆಯನ್ನು ಡಿಕ್ಕಿಗೆ ಕೊಡುತ್ತಾ ತಾನು ಬರಿಗೈಯಲ್ಲಿ ಕಾಲ ಕಳೆಯುತ್ತಾನೆ. ರಾಘವೇಂದ್ರರಾಯನ ಹತ್ತಿರದ ಸಂಬಂಧಿ ಗುಂಡೂಬಾಯಿ ಸುಂದರನ ಮನೆಯಲ್ಲಿ ಇರದೆ ಮತ್ತೆ ರಾಘವೇಂದ್ರರಾಯನ ಮನೆಗೆ ಬರುತ್ತಾಳೆ. ಆಕೆ ತಾನೂ ನೆಮ್ಮದಿಯಿಂದ ಬದುಕದೆ, ಇತರರ ನೆಮ್ಮದಿಯನ್ನೂ ಹಾಳುಮಾಡುವ ಸ್ವಭಾವದವಳು.

ಸುಶೀಲೆಯ ಇಚ್ಛೆಗೆ ವಿರುದ್ಧವಾಗಿ ಮಾಧುವಿನೊಡನೆ ಮದುವೆ ಮಾಡಿದುದಕ್ಕೆ ಸುಂದರನ ಸಜ್ಜನಿಕೆಯನ್ನು ಅರಿಯದುದಕ್ಕೆ ರಾಘವೇಂದ್ರರಾಯನಿಗೆ ಪಶ್ಚಾತ್ತಾಪವಾಗುತ್ತದೆ. ಸುಂದರನಿಗಾದ ತೊಂದರೆಗೆ ಮರುಗುತ್ತಾನೆ. ತನ್ನ ಎಪ್ಪತ್ತು ಲಕ್ಷ ರೂಪಾಯಿ ಆಸ್ತಿಯನ್ನು ಸುಂದರ ಮತ್ತು ಸುಶೀಲೆಗೆ ಸಮನಾಗಿ ಹಂಚಿ ಉಯಿಲು ಬರೆಸುತ್ತಾನೆ.

ಇದನ್ನು ತಿಳಿದ ಕುತಂತ್ರಿ ಡಿಕ್ಕಿ ದುರಾಲೋಚನೆಗೆ ತೊಡಗುವನು. ಮಾಧುವಿನ ಮೂಲಕ ಜಮೀನ್ದಾರನ ಸಾವಿಗೆ ಕಾರಣನಾಗುವನು. ಸುಶೀಲೆಯ ಬಳಿಯಿರುವ ಉಯಿಲನ್ನು ಅಪಹರಿಸಲು ಸೂಚಿಸಿ, ಉಯಿಲು ಕೊಡದಿದ್ದರೆ ಪಿಸ್ತೂಲಿನಿಂದ ಸುಶೀಲೆ

ಯನ್ನು ಕೊಲೆಮಾಡುವಂತೆ ಹೇಳುತ್ತಾನೆ. ಮಾಧು ಎಷ್ಟೇ ಪ್ರಯತ್ನಿಸಿದರೂ ಉಯಿಲು ಪ್ರತಿ ಪಡೆಯಲಾಗದೆ ಸುಶೀಲಳನ್ನು ಕೊಲೆಮಾಡುತ್ತಾನೆ. ಅಷ್ಟು ಹೊತ್ತಿಗೆ ಅಲ್ಲಿಗೆ

ಬಂದ ಸುಂದರನ ಮೇಲೆ ಅಪರಾಧ ಹೊರಿಸಿ ಅವನನ್ನು ಜೈಲಿಗೆ ಕಳುಹಿಸುತ್ತಾನೆ.

ಸುಂದರನ ಮಾವ ಪುರುಷೋತ್ತಮರಾಯ ಅಳಿಯನ ಪರವಾಗಿ ವಾದಿಸುತ್ತಾನೆ. ನ್ಯಾಯಾಧೀಶರ ಮುಂದೆ ವಿಧವೆ ಗಿರಿಜೆ ಮನೆಯಲ್ಲಿ ನಡೆದ ವಿದ್ಯಮಾನಗಳನ್ನು ವಿವರಿಸಿ, ಕೊಲೆಯ ರಹಸ್ಯವನ್ನು ಹೊರಗೆಡಹುತ್ತಾಳೆ. ಡಿಕ್ಕಿಯ ಸೂಚನೆಯಂತೆ ಮಾಧು ನ್ಯಾಯಾಲದಲ್ಲೇ ಗಿರಿಜೆಗೆ ಗುಂಡಿಕ್ಕಿ ಕೊಲ್ಲುತ್ತಾನೆ. ಡಿಕ್ಕಿಯ ಕುತಂತ್ರ ಬಯಲಾಗುತ್ತದೆ. ವಿಚಾರಣೆ ನಡೆದು ಮಾಧುವಿಗೂ ಡಿಕ್ಕಿಗೂ ಶಿಕ್ಷೆಯಾಗುತ್ತದೆ. ಸುಂದರನಿಗೆ ಬಿಡುಗಡೆಯಾಗುತ್ತದೆ. ಸಾಕುತಂದೆಯ ಆಸ್ತಿಯೆಲ್ಲ ಅವನಿಗೆ ದಕ್ಕುತ್ತದೆ. ಸರಳ ಗಂಡನನ್ನು ಸೇರುತ್ತಾಳೆ. ಮನೆಯಿಂದ ಹೊರಟುಹೋಗಿದ್ದ ನಂಬಿಕೆಯ ಆಳು ಸಿದ್ಧನೂ ಹಿಂದಿರುಗಿ ಬರುತ್ತಾನೆ. ನಾನಾ ರೀತಿಯ ಅಡ್ಡಿ ಆತಂಕಗಳಿಗೆ ಸಿಕ್ಕಿದ್ದ ಸುಂದರ ಸರಳೆಯರ 'ಸಂಸಾರ ನೌಕ' ಸರಾಗವಾಗಿ ಚಲಿಸುವಂತಾಗುತ್ತದೆ.

ಸಿಂಹ ಅವರು ಅಬ್ಬಾ ಆ ಹುಡುಗಿ ನಾಟಕವನ್ನು 1937 – 38ರಲ್ಲಿ ಬರೆದರು. ಅದು ಅವರೇ ಪ್ರಾರಂಭಿಸಿದ ನಾಟಕ ಕಂಪನಿಯಿಂದ ಹಲವು ಕಡೆ ಪ್ರಯೋಗವಾಯಿತು. 1959ರಲ್ಲಿ ಅದೇ ಹೆಸರಿನಲ್ಲಿ ಚಲನಚಿತ್ರವಾಯಿತು. ಈ ಕಥೆಗೆ ವಿಶ್ವ ವಿಖ್ಯಾತ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್‌ನ "ಟೇಮಿಂಗ್ ಆಫ್ ದಿ ಷ್ರೂ" ನಾಟಕ ಆಧಾರವೆಂದು ಹೇಳಲಾಗಿದೆ. ನಾಟಕದ ಕಥಾ ಸಾರಾಂಶ ಹೀಗಿದೆ:

ಶಾಂತೇಶ್ ಜಮೀನ್ದಾರ, ಶ್ರೀಮಂತ. ಅವನಿಗೆ ಇಬ್ಬರು ಹೆಣ್ಣು ಮಕ್ಕಳು: ಶರ್ಮಿಷ್ಠ ಮತ್ತು ಸರಸ. ಇಬ್ಬರೂ ಸುಶಿಕ್ಷಿತರು. ಶರ್ಮಿಷ್ಠ ಪುರುಷದ್ವೇಷಿ. ಪ್ರಾಚೀನ ಕಾಲದಿಂದಲೂ ಪುರುಷಪ್ರಧಾನ ಸ್ಥಾನದಲ್ಲಿ ನಿಂತು, ಹೆಂಗಸಿಗೆ ಸರಿಸಮಾನವಾದ ಸ್ಥಾನಮಾನ ಕೊಡದೆ, ತನ್ನ ಮಹಾಸ್ವಾರ್ಥದಿಂದ ಪ್ರಪಂಚವನ್ನೇ ಹಾಳುಮಾಡುತ್ತಿದ್ದಾನೆ ಎಂಬುದು ಅವಳ ನಂಬಿಕೆ. ಅವಳು 'ಕನ್ಯಾ ವಿವಾಹ ವಿರೋಧ ಸಮಾಜ'ವನ್ನು ಸ್ಥಾಪಿಸಿ, ಅದನ್ನು ವಿಶ್ವವ್ಯಾಪಿಯಾಗಿಸಿ, ಅದರ ಮೂಲಕ ಪುರುಷನ ವಿನಾಶಕಾರಿ ಚಟುವಟಿಕೆಯನ್ನು ಕೊನೆಗಾಣಿಸಿ, ಅವನ ಸ್ಥಾನವನ್ನು ಸ್ತ್ರೀ ಆಕ್ರಮಿಸಿ ನೂತನ ವಿಶ್ವವನ್ನು ನಿರ್ಮಿಸಬೇಕೆಂಬ ಮಹತ್ವಕಾಂಕ್ಷೆ ಉಳ್ಳವಳು. ಶರ್ಮಿಷ್ಠೆ ಹಟಮಾರಿ ಹೆಣ್ಣು. ಯಾರನ್ನೂ ಲೆಕ್ಕಕ್ಕಿಟ್ಟುಕೊಳ್ಳದ ಸ್ವಭಾವ. ಶರ್ಮಿಷ್ಠೆಯನ್ನು ಮದುವೆಯಾಗಲು ಬಯಸಿ ಬಂದ ಡಾ.ಕೆನೆತ್‌ನನ್ನು ಹಂಗಿಸಿ ಓಡಿಸುವಳು. ತಂಗಿ ಸರಸಳನ್ನು ಮದುವೆಯಾಗಲು ಬಂದ ದಾಮೋದರನಿಗೆ ಅವಮಾನ ಪ್ರಾಪ್ತಿ. ಸರಸಳಿಗೆ ಮದುವೆಯಾಗಿ ಸುಖಸಂಸಾರ ನಡೆಸಬೇಕೆಂಬ ಆಸೆ. ಅದರೆ ಅಕ್ಕನ ಮದುವೆಯಾಗದೆ ಅವಳಿಗೆ ಮದುವೆಯಿಲ್ಲ. ಸರಸಳನ್ನು ಪ್ರೀತಿಸುವ ಸುರೇಶನಿಗೂ ಕೀಟಲೆ ತಪ್ಪಲಿಲ್ಲ. ಅವಳ ಜೊತೆಗಾತಿ ರತ್ನಳ ಪ್ರೇಮಿ ಸೋಮನೂ ಅಪಹಾಸ್ಯಕ್ಕೆ ಒಳಗಾಗುವನು.

ಸುಶಿಕ್ಷಿತನಾದ ಸರ್ವೋತ್ತಮನು ಶರ್ಮಿಷ್ಠಳಲ್ಲಿ ಅನುರಕ್ತನಾಗಿ ಅವಳನ್ನು ಮದುವೆಯಾಗಲು ಇಷ್ಟಪಡುವನು. ಶಾಂತೇಶನ ಆಶೀರ್ವಾದ ಪಡೆದು, ಶರ್ಮಿಷ್ಠಳ ಕೀಟಲೆಯನ್ನು ಸಹಿಸಿಕೊಂಡು, ಅವಳ ಸ್ವಭಾವವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ, ಮದುವೆಯಾಗಲು ಮುಂದಾಗುವನು. ಅನೇಕ ಸನ್ನಿವೇಶಗಳನ್ನು ಸೃಷ್ಟಿಸುವನು. ನಿಧಾನವಾಗಿ ಶರ್ಮಿಷ್ಠಳ ಮನಸ್ಸನ್ನು ಪರಿವರ್ತಿಸಿ, ಅವಳ ಪುರುಷದ್ವೇಷ ಕಡಮೆಯಾಗುವಂತೆ ಮಾಡುವನು. ನಾನಾ ರೀತಿಯಲ್ಲಿ ಸೋತರೂ ಪ್ರಯತ್ನವನ್ನು ಮುಂದುವರಿಸುವನು. ಒಂದು ವಿಚಿತ್ರ ಸನ್ನಿವೇಶದಲ್ಲಿ ಶರ್ಮಿಷ್ಠಳು ಸರ್ವೋತ್ತಮನನ್ನು ಮದುವೆಯಾಗಲು ಒಪ್ಪಬೇಕಾಯಿತು. ಶರ್ಮಿಷ್ಠೆ ಗೆದ್ದು ಸೋತಳು; ಸರ್ವೋತ್ತಮ ಸೋತು ಗೆದ್ದನು. ಮದುವೆಯಾಗಬಾರದೆಂದಿದ್ದವಳು ಮದುವೆಯಾಗುವ ಸ್ಥಿತಿಗೆ ಬಂದಾಗ ನಾಟಕ ಸುಖಾಂತವಾಗುವುದು.

'ಸಂಸಾರ ನೌಕ' ನಾಟಕ ಬರೆದ 33 ವರ್ಷಗಳ ಮೇಲೆ ಪ್ರಕಟವಾಯಿತು. 'ಅಬ್ಬಾ! ಆ ಹುಡುಗಿ.' ನಾಟಕ ಬರೆದ 67 ವರ್ಷದ ಮೇಲೆ ಅಂದರೆ ಸಿಂಹ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಬೆಳಕು ಕಂಡಿತು. ಈ ಎರಡೂ ನಾಟಕಗಳು ಸಿಂಹ ಅವರು ಸಾಹಿತ್ಯ ಕ್ಷೇತ್ರದಲ್ಲಿ ನೆಲೆನಿಲ್ಲುವಂತೆ ಮಾಡಿದವು.

ಹೆಚ್.ಎಲ್.ಎನ್.ಸಿಂಹ ಅವರ ಬದುಕು ಹಾಗೂ ಸಾಧನೆ ಕಲಾಲೋಕದ ಸಾಧಕರಿಗೆ ಸದಾ ಸ್ಫೂರ್ತಿದಾಯಕವಾಗಿರುತ್ತದೆ.

'ಗೊರೂರುತನ' ಒಂದು ಮಂತ್ರ ಶಕ್ತಿ (1904-1991)

ಎಸ್.ವಿ.ಶ್ರೀನಿವಾಸರಾವ್

'ಗೊರೂರುತನ' ಒಂದು ಮಂತ್ರಶಕ್ತಿ. ಇದರ ಜನಕರು ಗೊರೂರು ರಾಮಸ್ವಾಮಿ ಅಯ್ಯಂಗಾರ್. ಈ ಮಂತ್ರಶಕ್ತಿಯು ಪ್ರಭಾವಕ್ಕೆ ಒಳಗಾಗಿರುವ ಕನ್ನಡದ ಹಾಸ್ಯಸಾಹಿತ್ಯಕ್ಷೇತ್ರದಲ್ಲಿ ಒಂದು ವಿಶಿಷ್ಟ ಪ್ರಕಾರವೇ ಏರ್ಪಟ್ಟಿದೆ. ಈ ಪ್ರಭಾವ ವಲಯದ ಸೆಳೆತಕ್ಕೆ ಸಿಕ್ಕಿದವರಲ್ಲಿ ನಾನೂ ಒಬ್ಬ ಎಂದು ಹೇಳಿಕೊಳ್ಳಲು ಸಂತೋಷವಾಗುತ್ತಿದೆ.

ನಮ್ಮ ಹಿರಿಯರು ಶಾನುಭೋಗರು. ತುಮಕೂರು ಜಿಲ್ಲೆಯ ಗೂಳೂರಿನ ಬಳಿಯಲ್ಲಿ ನಮ್ಮಹಳ್ಳಿ ಚಿಕ್ಕ-ಸಾರಂಗಿ ಇವೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಶಾನುಭೋಗರ ಮನೆಯಲ್ಲೇ ಹಳ್ಳಿ ಗ್ರಂಥಾಲಯ ಇರುತ್ತಿದ್ದುದು ವಾಡಿಕೆ. ನಮ್ಮ ತಂದೆಯವರ ಮನೆಯಲ್ಲೂ ಒಂದು ಇಂಥಹ ಲೈಬ್ರರಿಯೆಂದರೆ ಒಂದು ಜಾಕಾಯಿ ಪೆಟ್ಟಿಗೆ. ಅದರ ತುಂಬಾ ಪುಸ್ತಕಗಳು. ಈ ಪುಸ್ತಕಗಳಲ್ಲಿ ನನ್ನ ಗಮನ ಸೆಳೆದಿದ್ದವುಗಳೆಂದರೆ ಕಾರಂತರ ಬಾಲಪ್ರಪಂಚ, ಬಿ.ವೆಂಕಟಾಚಾರ್, ಎಂ.ಎಸ್.ಪುಟ್ಟಣ್ಣ, ಗಳಗನಾಥರ ಕಾದಂಬರಿಗಳು ಹಾಗೂ ಗೊರೂರುರಾಮಸ್ವಾಮಿ ಅಯ್ಯಂಗಾರ್ ರವರ ಮೆರವಣಿಗೆ, ಹೇಮಾವತಿ, ಹಳ್ಳಿಯಚಿತ್ರಗಳು, ನಮ್ಮೂರಿನರಸಿಕರು ಮುಂತಾದ ಪುಸ್ತಕಗಳು. ತುಮಕೂರಿನಲ್ಲಿ ಓದುತ್ತಿದ್ದ ನಾನು ಶನಿವಾರ, ಭಾನುವಾರ ಹಾಗೂ ರಜಾದಿನಗಳಲ್ಲಿ, ಹಳ್ಳಿಯಲ್ಲಿ ಇದ್ದಾಗಲೆಲ್ಲಾ ಲೈಬ್ರರಿ ಪೆಟ್ಟಿಗೆಯಿಂದ ಪುಸ್ತಕಗಳನ್ನು ತೆಗೆದು ಓದುತ್ತಿದ್ದೆ. ಮೇಲ್ಕಂಡ ಸಾಹಿತಿಗಳೇ ನನ್ನಲ್ಲಿ ಓದುವ ಹುಚ್ಚನ್ನು ಹಿಡಿಸಿದವರು ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತಿದೆ.

ಗೊರೂರುರವರು ನನ್ನ ಸಾಹಿತ್ಯ ಜೀವನಕ್ಕೆ ಹೆಚ್ಚು ಹತ್ತಿರವಾಗಲು ತುಮಕೂರಿನಲ್ಲಿ ನಡೆದ ಒಂದು ಪ್ರಸಂಗ ಕಾರಣವಾಯಿತು. 1946-47ರಲ್ಲಿ ನಾನು ಮಿಡ್ಲ್ ಸ್ಕೂಲಿನಲ್ಲಿ ಓದುತ್ತಿದ್ದೆ. ಸ್ವಾತಂತ್ರ್ಯ ಚಳವಳಿ ಆಗ ಬಹಳ ಭರ ನಡೆಯುತ್ತಿತ್ತು. ಪ್ರಭಾತ್‌ಭೇರಿ ದಿನವೂ ಅಗ್ರಹಾರದ ಗಾಂಧಿ ಮೈದಾನದಿಂದ ಹೊರಟು ಊರಲ್ಲೆಲ್ಲ ಜಯಕಾರ ಮಾಡಿಕೊಂಡು ಓಡಾಡುತ್ತಿದ್ದೆವು. 'ಚಲೋ ಪ್ಯಾಲೆಸ್' ಚಳವಳಿಯ ಅಂಗವಾಗಿ (1947 - 48) ಒಂದುದಿನ ಬೆಳಗ್ಗೆ ಚರ್ಚ್ ಸರ್ಕಲ್ಲಿಗೆ ಚಳವಳಿಗಾರರ ಗುಂಪು ಬಂದಾಗ ಗೋಲಿಬಾರ್ ಆಯಿತು. ಆಗ ಸತ್ತವರಲ್ಲಿ ಗೊರೂರು ಮಗ ರಾಮಚಂದ್ರನೂ ಇದ್ದನು. ಹೀಗಾಗಿ ಗೊರೂರರು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನೆಲೆಸಿದರು. ಅನಂತರ ಹಲವು ವರ್ಷಗಳ ನಂತರ ಪ್ರಜಾಮತದ ಸಂಪಾದಕರಾಗಿದ್ದ ಆತ್ಮೀಯ ಹ.ವೆಂ.ನಾಗರಾಜರಾವ್‌ರವರ ಜೊತೆಯಲ್ಲಿ ರಾಜಾಜಿನಗರದಲ್ಲಿದ್ದ ಅವರ ಮನೆಗೆ ಹೋಗಿದ್ದೆ. ಆಗ ಅವರು ಕಾಯಿಲೆ ಮಲಗಿದ್ದರು. ಬಹಳ ದುರ್ಬಲರಾಗಿದ್ದರು. ಮಾತಾನಾಡಲೂ ಶಕ್ತಿ ಇರಲಿಲ್ಲ. ಕೈಮುಗಿದು, ಕೈಸನ್ನೆಯಿಂದಲೇ ಅವರಿಗೆ ಬೇಗ ಕಾಯಿಲೆ ವಾಸಿಯಾಗಲಿ ಎಂದು ಆಶಿಸಿ ಬಂದಿದ್ದೆವು. ಅದೇ ಭೇಟಿ ನನ್ನ ಅವರ ಮೊದಲಿನ ಹಾಗೂ ಕೊನೆಯ ಭೇಟಿಯಾಗಿತ್ತು. ಆದರೆ ಅವರ ಸಾಹಿತ್ಯದ ಸೌರಭ,

ಕಲ್ಪನೆಯ ಸೊಗಸು, ನನ್ನ ಮನಸ್ಸನ್ನು ಶಾಶ್ವತ ನೆಲೆಸಿ ನನ್ನ ಬರಹಕ್ಕೆ ಸದಾ ಉತ್ತೇಜನ ನೀಡುತ್ತಲೇ ಇದೆ.

ಮರೆಯಲಾರದ, ಮರೆಯಬಾರದ ಈ ಸಾಹಿತ್ಯಗೊಮ್ಮಟ, ಹಾಸ್ಯಯೋಗಿ ಗೊರೂರರು ಕಥೆಗಾರರಾಗಿ, ಕಾದಂಬರಿಕಾರರಾಗಿ, ಪ್ರಬಂಧಪ್ರಕಾರದ ವಿಶಿಷ್ಟ ಲೇಖಕರಾಗಿ, ಜೀವನಚರಿತ್ರೆ ಹಾಗೂ ವಿಚಾರ ಸಾಹಿತ್ಯದ ಪ್ರವರ್ತಕರಾಗಿ, ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರಾಗಿ, ಗಾಂಧಿತತ್ವ ಆರಾಧಕರಾಗಿ ಇವರು ಕನ್ನಡ ಸಾಹಿತ್ಯಕ್ಕೆ ಅನುಪಮ ಕೊಡುಗೆಗಳನ್ನು ನೀಡಿ ಸಾಹಿತ್ಯ ಕ್ಷಿತಿಜದಲ್ಲಿ ದಿವ್ಯತಾರೆಯಾಗಿ ಪ್ರಕಾಶಿಸುತ್ತಿದ್ದಾರೆ.

ಗೊರೂರುರಾಮಸ್ವಾಮಿ ಅಯ್ಯಂಗಾರ್ ಜನಿಸಿದ್ದು. ಜುಲೈ 4, 1904 ಹಾಸನ ಜಿಲ್ಲೆಯ ಹೇಮಾವತಿ ತೀರದ ಗೊರೂರಿನಲ್ಲಿ. ತಂದೆ ವೈದಿಕ ಮನೆತನದ ಸಂಸ್ಕೃತ ವಿದ್ವಾಂಸ ಶ್ರೀನಿವಾಸಅಯ್ಯಂಗಾರ್. ತಾಯಿ ಸುಸಂಸ್ಕೃತ ಕುಟುಂಬದ ಲಕ್ಷಮ್ಮ. ಪ್ರಾಥಮಿಕ ವಿದ್ಯಾಭ್ಯಾಸ ಇವರಿಗೆ ತಂದೆಯಿಂದಲೇ ಮನೆಯಲ್ಲೇ ನಡೆಯಿತು. ಸಾಂಪ್ರದಾಯಿಕ ಪೂಜೆ ಪುರಸ್ಕಾರ, ರಾಮಾಯಣ, ಮಹಾಭಾರತ, ಉಪನಿಷತ್ತುಗಳ ಧಾರ್ಮಿಕ ಹಿನ್ನೆಲೆಯಲ್ಲೆ ಕನ್ನಡ ಲೋಯರ್ ಸೆಕೆಂಡರಿ ಪಾಸು ಮಾಡಿಕೊಂಡು ಅನಂತರ ಎರಡು ವರ್ಷ ಓದಿ ಇಂಗ್ಲಿಷ್ ಲೋಯರ್ ಸೆಕೆಂಡರಿ ಪಾಸು ಮಾಡಿಕೊಂಡರು. ಬಾಲಗಂಗಾಧರ ತಿಲಕರ ರಾಷ್ಟ್ರಪ್ರೇಮ, ಗಾಂಧೀಜಿಯ ಅನುಕರಣೀಯ ಆದರ್ಶ, ಹಳ್ಳಿಗಾಡಿನ ನಿಷ್ಕಲ್ಮಷ ವಾತಾವರಣ ಸರಳಸುಂದರ ಹಳ್ಳಿಗರ ಸಾದಾ ಜೀವನ ಇವರ ಪ್ರಬಂಧಗಳಲ್ಲಿ ಕಾದಂಬರಿಗಳಲ್ಲಿ ವೈಶಿಷ್ಟ್ಯ ಪೂರ್ಣ ರೀತಿಯಲ್ಲಿ ಪಡಿಮೂಡಿವೆ. ಅನುಭವದ ಮೂಸೆಯಲ್ಲಿ ಕಾಯಿಸಿ ಹೊರ ಬಂದಿರುವ ವ್ಯಕ್ತಿ ಚಿತ್ರಗಳು ಅಮೋಘವಾಗಿ ಚಿತ್ರಿತಗೊಂಡಿದ್ದು ಸಮಾಜದ ಓರೆ ಕೋರೆಗಳ ಮೇಲೆ ಬೆಳಕು ಚೆಲ್ಲುತ್ತಿವೆ.

'ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ, ವಿಸ್ತಾರಗಳನ್ನು, ವೈವಿಧ್ಯ – ವೈಶಿಷ್ಟ್ಯಗಳನ್ನು ತಂದುಕೊಟ್ಟ ಕೆಲವೇ ಗಣ್ಯ ಲೇಖಕರಲ್ಲಿ ಗೊರೂರರು ಒಬ್ಬರು. ನಮ್ಮ ಸಾಹಿತ್ಯಕ್ಕೆ ಅವರು ಸೇರಿಸಿರುವ ಪ್ರಾದೇಶಿಕ ದನಿ, ಬಣ್ಣಗಳೂ ಸಾಹಿತ್ಯ ಚರಿತ್ರೆಯಲ್ಲಿ ಪ್ರತ್ಯೇಕಉಲ್ಲೇಖಕ್ಕೆ ಅರ್ಹವಾಗಿವೆ. ಒಂದು ಪ್ರಾದೇಶಿಕ ಜೀವನದ ಸುಖದುಃಖಗಳನ್ನು ವಾಚಕ ಕೋಟಿಯ ಅನುಭವವನ್ನಾಗಿಸುವ ನಿಪುಣ ಕಲಾವಿದರು ಗೊರೂರು. ಹಳ್ಳಿಯ ಜೀವನವನ್ನು ಮೊದಲ ಬಾರಿಗೆ ನಮ್ಮ ಸಾಹಿತ್ಯಕ್ಕೆ ತಂದು ಹೊಸ ಪ್ರಕಾರವೊಂದನ್ನು ಸೃಷ್ಟಿಸಿದ ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಆಕರ್ಷಕವಾದ ಹಾಸ್ಯ ಮುಖವನ್ನು ಜೋಡಿಸಿದ್ದು ಗೊರೂರರ ಒಂದು ಅದ್ಭುತ ಸಾಧನೆ.' ಡಾ.ಹಾ.ಮಾ.ನಾಯಕರ ಈ ಮಾತುಗಳುಬಹುಮುಖ ಪ್ರತಿಭೆಯ ಸಾಹಿತಿ, ನಿಷ್ಠಾವಂತ ಗಾಂಧಿತತ್ವಪ್ರತಿಪಾದಕ, ಹಾಸ್ಯಯೋಗಿ, ಗೊರೂರರ ವಿಕಸಿತ ಜೀವನಕ್ಕೆ ಕನ್ನಡಿ ಹಿಡಿದಿದೆ.

1919, 20, 21 ರಾಷ್ಟ್ರೀಯ ಚಳವಳಿ ರಾಷ್ಟ್ರಾದ್ಯಂತ ನಡೆಯುತ್ತಿದ್ದು, ಬಹಳಷ್ಟು ವಿದ್ಯಾರ್ಥಿಗಳು ಶಾಲೆ, ಕಾಲೇಜು ಬಿಟ್ಟು ಈ ಚಳವಳಿಯಲ್ಲಿ ಧುಮುಕಿದ್ದರು. ಬಾಲಗಂಗಾಧರ ತಿಲಕ್ ಮತ್ತು ಗಾಂಧೀಜಿಯವರಿಂದ ಬಹು ಪ್ರಭಾವಿತರಾಗಿದ್ದ

ಗೊರೂರರು ಇವರನ್ನು ಪೋಲಿಸರು ಬಂಧಿಸುವ ಸಂದರ್ಭವಿದ್ದುದರಿಂದ ಇವರ ಮಿತ್ರರು ಗೊರೂರರನ್ನು ಬೊಂಬಾಯಿಗೆ ಕಳುಹಿಸಿಬಿಟ್ಟರು. ಅಲ್ಲಿ ಕೆಲದಿನವಿದ್ದು ಅಹಮದಾಬಾದಿಗೆ ಬಂದು ಗಾಂಧೀಜಿಯ ಆಶ್ರಮ ಸೇರಿದರು. ಅಲ್ಲಿ ಗಾಂಧೀಜಿಯ ಭೇಟಿ ಆಯಿತು. (1921) ನವಜೀವನ, ಯಂಗ್ ಇಂಡಿಯಾ, ಸಾಧ್ವಿ, ಜಯ ಕರ್ನಾಟಕ ಪತ್ರಿಕೆಗಳಿಗೆ ರಾಷ್ಟ್ರೀಯ ಭಾವನೆಗಳನ್ನು ಉದ್ರೇಕಿಸುವ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಕೆಲವರ್ಷಗಳ ನಂತರ ಅಲ್ಲಿಂದ ಬಂದು ಕೆಂಗೇರಿಯ 'ಗುರುಕುಲಾಶ್ರಮ' ಸೇರಿದರು. ಗ್ರಾಮ ಪುನರುಜ್ಜೀವನ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆಗಲೇ 'ಹಳ್ಳಿಯ ಚಿತ್ರಗಳು' (1930) ಕೃತಿ ರೂಪುಗೊಂಡದ್ದು. ಈ ಕೃತಿಯನ್ನು ಮೆಚ್ಚಿ ಮಾಸ್ತಿಯವರು ಮುನ್ನುಡಿ ಬರೆದು ಶುಭ ಹಾರೈಸಿದ್ದು ಇವರ ಮುಂದಿನ ಬರವಣಿಗೆಗೆ ಪ್ರೋತ್ಸಾಹ ನೀಡಿತು. ಕೆಂಗೇರಿಯಲ್ಲಿದ್ದಾಗಲೇ ಇವರ ಇನ್ನೊಂದು ಕೃತಿ 'ನಮ್ಮ ಊರಿನ ರಸಿಕರು' (1932) ಪ್ರಕಟಗೊಂಡಿತು. ಇದಕ್ಕೆ ಡಿ.ವಿ.ಜಿ ಮುನ್ನುಡಿ ಬರೆದು ಆಶೀರ್ವದಿಸಿದ್ದಾರೆ. ಬಿ.ಎಂ.ಶ್ರೀ, ಪು.ತಿ.ನ ಮುಕ್ತಕಂಠದಿಂದ ಪ್ರಶಂಸಿದ್ದಾರೆ.

ಕೆಂಗೇರಿಯ ಆಶ್ರಮದಿಂದ ಬೆಂಗಳೂರಿಗೆ ಬಂದ ಶ್ರೀಯುತರು ಅಖಿಲ ಭಾರತಚರಕಸಂಘದ ಖಾದಿ ವಸ್ತ್ರಾಲಯದ ಜವಾಬ್ದಾರಿಯನ್ನು ವಹಿಸಿಕೊಂಡರು. 8 – 10 ವರ್ಷ ಇಲ್ಲಿದ್ದು ಕುಟುಂಬದ ಬೇಡಿಕೆ ಹೆಚ್ಚಿ ಗೊರೂರಿಗೆ ಹಿಂತಿರುಗಿದರು (1938). ಅಲ್ಲಿ ಮೈಸೂರು ಗ್ರಾಮಸೇವಾಸಂಸ್ಥೆ ಸ್ಥಾಪಿಸಿ ಗಾಂಧೀಜಿಯ ರಚನಾತ್ಮಕ ಕಾರ್ಯಗಳಾದ ಖಾದಿ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಮುಂತಾದವತ್ತ ಗಮನ ಹರಿಸ ತೊಡಗಿದರು. 1940ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ 'ವಿದ್ವಾನ್' ಡಿಗ್ರಿ ಪಡೆದರು. 1941ರಲ್ಲಿ ವಾರ್ಧಾದಲ್ಲಿ ನಡೆದ ಎ.ಐ.ಸಿ.ಸಿ ಸಭೆಗೆ ಹೋಗಿದ್ದಾಗ ಇವರಿಗೆ ಹಲವು ರಾಷ್ಟ್ರೀಯ ನಾಯಕರುಗಳ ಪರಿಚಯವಾಯಿತು.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಜಿಲ್ಲಾ ಬೋರ್ಡ್ ಮತ್ತು ಲೋಕಲ್ ವಿದ್ಯಾ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. 'ಹಳ್ಳಿಯಬಾಳು' ಕೃತಿಯನ್ನು ಜೈಲಿನಲ್ಲೆ ಸಿದ್ಧಪಡಿಸಿದರು. 'ಸ್ವಾತಂತ್ರ್ಯವೇ ಧರ್ಮ' ಸೆರೆಮನೆಯಲ್ಲೇ ಸಿದ್ಧವಾದ ಇನ್ನೊಂದು ಕೃತಿ. ಸೆರೆಮನೆಯಿಂದ ಹೊರಗೆ ಬಂದ ಮೇಲೆ 'ರಾಷ್ಟ್ರೀಯ ಸಾಹಿತ್ಯ ಸಮಿತಿ' ಸ್ಥಾಪಿಸಿದರು. ಗಾಂಧೀಜಿ ಮದರಾಸಿಗೆ ಬಂದಿದ್ದಾಗ ರಚನಾತ್ಮಕ ಕಾರ್ಯಕರ್ತರ ಸಭೆಯನ್ನು ಗಾಂಧೀಜಿಯವರ ಅಧ್ಯಕ್ಷತೆಯಲ್ಲೇ ಏರ್ಪಡಿಸಿದ್ದರು. ಅಲ್ಲಿ ಗೊರೂರರು ತಮ್ಮ ಅನುಭವಗಳನ್ನು ಕನ್ನಡದಲ್ಲೇ ಚಿತ್ರಿಸಿ ಭಾಷಾಭಿಮಾನ ವ್ಯಕ್ತಪಡಿಸಿದರು.

ಗೊರೂರರು ಸಕ್ರಿಯವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುತ್ತಿದ್ದುದರಿಂದ ಹಲವು ಬಾರಿ ಸೆರೆಮನೆ ಸೇರಿದರು. ಹಾಸನ, ಶಿವಮೊಗ್ಗ, ಸಾಗರ, ಬೆಂಗಳೂರಿನ ಜೈಲಿನಲ್ಲಿದ್ದಾಗ, ಕೆ.ಟಿ.ಭಾಷ್ಯಂ, ಚಂಗಲರಾಯರೆಡ್ಡಿ, ಸಿದ್ದಯ್ಯ, ಸುಬ್ರಹ್ಮಣ್ಯಂ,

ಮಾಲಿಮರಿಯಪ್ಪ, ನಾಗಿರೆಡ್ಡಿ, ತಗಡೂರುರಾಮಚಂದ್ರರಾವ್ ಮುಂತಾದ ಪ್ರಮುಖರ ಪರಿಚಯವಾಯಿತು.

ಇವರು ಅಲಂಕರಿಸಿದ, ನಿರ್ವಹಿಸಿದ ಗೌರವ ಹುದ್ದೆಗಳಲ್ಲಿ ಮುಖ್ಯವಾದವುಗಳು– ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯತ್ವ ಕವಿ ಕುವೆಂಪುರವರಿಗೆ ಗೌರವ ಡಾಕ್ಟರೇಟ್ ಲಭಿಸಿದ್ದು ಇವರ ಸಲಹೆ/ಸೂಚನೆಯ ಮೇರೆಗೆ ಎಂಬುದು ಉಲ್ಲೇಖನೀಯ. ಸೆನೆಟ್ ಸದಸ್ಯರಾಗಿದ್ದಾಗ ಇವರು ಮಾಡಿದ ಮುಖ್ಯ ಕಾರ್ಯಗಳೆಂದರೆ ಕನ್ನಡ ನಿಘಂಟು, ಕನ್ನಡ ವಿಶ್ವಕೋಶ ಇವುಗಳ ರಚನೆಗಾಗಿ ಮಸೂದೆ ಮಂಡಿಸಿ ಅವನ್ನು ಮಂಜೂರು ಮಾಡಿಸಿದ್ದು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಇವರು ವಿಧಾನಪರಿಷತ್ತಿಗೆ ನಾಮಕರಣ ಗೊಂಡಿದ್ದರು. ಕೆಲಕಾಲ ಇವರು ಕಾಂಗ್ರೆಸ್ ಶಾಸನ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು.

ಬಹುಮುಖ ಪ್ರತಿಭೆಯ ಶ್ರೀಯುತರು ಕನ್ನಡ ಸಾಹಿತ್ಯಕ್ಕೆ ವೈವಿಧ್ಯ ಪೂರ್ಣ ಬಹು ಸಂಖ್ಯೆಯ ಅಮೂಲ್ಯ ಗ್ರಂಥಗಳನ್ನು ನೀಡಿರುತ್ತಾರೆ. ಕಥೆ, ಕಾದಂಬರಿ, ಪ್ರಬಂಧ, ಜೀವನ ಚಿತ್ರಗಳು, ಪ್ರವಾಸ ಸಾಹಿತ್ಯ, ಹಾಸ್ಯ ಲೇಖನಗಳು, ಮುಂತಾದ ಕ್ಷೇತ್ರಗಳನ್ನು ಸಂಪನ್ನಗೊಳಿಸಿರುವುದಲ್ಲದೆ 'ಅನುವಾದ' ವಿಭಾಗಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿರುತ್ತಾರೆ. ಪ್ರಮುಖ ಕೃತಿಗಳು:

ಕಥಾಸಂಕಲನಗಳು : ಉಸುಬು, ಕನ್ಯಾಕುಮಾರಿ ಇತರ ಕಥೆಗಳು; ಕಮ್ಮಾರ ವೀರಭದ್ರಾಚಾರಿ, ಗೋಪುರದ ಬಾಗಿಲು, ಬೆಸ್ತರ ಕರಿಯ ಮತ್ತು ಪಾಶ್ಚಾತ್ಯರ ಪುರಾತನ ಕಥೆಗಳು; ಕಾದಂಬರಿಗಳು: ಊರ್ವಶಿ, ಕ್ರೌಂಚವಧೆ, ಪುನರ್ಜನ್ಮ, ಮೆರವಣಿಗೆ, ಹೇಮಾವತಿ (ಇದು ಚಲನಚಿತ್ರವಾಗಿ ಅಪಾರ ಮೆಚ್ಚುಗೆ ಗಳಿಸಿದೆ.) ಮಲೆನಾಡವರು;

ಪ್ರಬಂಧಗಳು : ಗರುಡಗಂಬದ ದಾಸಯ್ಯ, ಹಳ್ಳಿಯ ಚಿತ್ರಗಳು, ನಮ್ಮೂರಿನ ರಸಿಕರು, ಬೈಲಹಳ್ಳಿಸರ್ವೆ, ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು;

ಜೀವನಚಿತ್ರ : ಜಗತ್ತಿನ ಮಹದ್ವ್ಯಕ್ತಿಗಳು, ಹಳ್ಳಿಯ ಹಾಡುಗಳು, ಸಾಹಿತ್ಯ ರಶ್ಮಿ, ಹಳ್ಳಿಯ ಬಾಳು (ಇತರೆ) ಗಾಂಧೀಯವರ ಬಹಳಷ್ಟು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅನುವಾದಿತ ಕೃತಿಗಳ ಸಂಖ್ಯೆ ಸುಮಾರು 300. ಮುಖ್ಯವಾದವುಗಳು ಆತ್ಮಕಥೆ ಅಥವಾ ಸತ್ಯಾನ್ವೇಷಣೆ; ಜಗದ್ಗುರುಗಳ ದಿವ್ಯಬೋಧೆ; ಭಾಷಣಗಳು ಮತ್ತು ಹೇಳಿಕೆಗಳು; ಮಹಾದೇವ ದೇಸಾಯಿಯರ ಕೃತಿಗಳು; ಸತ್ಯ ಅಹಿಂಸೆ; ಸಾಹಿತ್ಯದ ಜೀವಾಳ; ಸ್ವಾತಂತ್ರ್ಯವೇ ಧರ್ಮ, ಮಕ್ಕಳ ಪೋಷಣೆ, ಪೂರ್ಣ ಸ್ವದೇಶಿ, ಭಕ್ತಿ ಯೋಗ ಮುಂತಾದವು.

ಇವರಿಗೆ ಲಭಿಸಿರುವ ಪ್ರಶಸ್ತಿ/ಪುರಸ್ಕಾರ/ಬಹುಮಾನಗಳು: "ನಮ್ಮ ಊರಿನ ರಸಿಕರು" ಗ್ರಂಥಕ್ಕೆ ದೇವರಾಜ ಬಹಾದ್ದೂರ್ ಬಹುಮಾನ; ಸಾಹಿತ್ಯರಶ್ಮಿ ಮತ್ತು ಕಮ್ಮಾರ ವೀರಭದ್ರಾಚಾರ್ ಗ್ರಂಥಗಳಿಗೆ ಮೈಸೂರು ಸರ್ಕಾರದ ಪುರಸ್ಕಾರ ಹಾಗೂ ಸಾಹಿತ್ಯ ಅಕಾಡೆಮಿ ಬಹುಮಾನ; ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿರುವ

ಅಮೂಲ್ಯ ಕೊಡುಗೆಗಳನ್ನು ಪುರಸ್ಕರಿಸಿ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷಗಿರಿ, 1973ರಲ್ಲಿ ಇವರ ಅಭಿಮಾನಿಗಳಿಂದ 'ಗೊರೂರು' ಗೌರವಗ್ರಂಥ ಸಮರ್ಪಣೆ, 1982ರಲ್ಲಿ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ. ಇವರು ರಚಿಸಿರುವ ಕಥೆ 'ಭೂತಯ್ಯನ ಮಗ ಅಯ್ಯು' ಅತ್ಯಂತ ಯಶಸ್ವಿಯಾದ ಚಲನಚಿತ್ರವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಿಂದ 1974ರಲ್ಲಿ ಗೌರವ ಡಾಕ್ಟರೇಟ್. 'ಅಮೆರಿಕಾದಲ್ಲಿ ಗೊರೂರು' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದವುಗಳು ಲಭಿಸಿವೆ.

ಸ್ವಚ್ಛ ನಿರ್ಮಲ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಮೂಡಿ ಬರುವ ಲಘು ಹಾಸ್ಯದ ಸೊಗಡು ಲಹರಿ ಎಂಥವರ ಕಲುಷಿತ ಹೃದಯವನ್ನೂ ಕಲಕಿ ಶುದ್ಧಗೊಳಿಸಿ ಆಹ್ಲಾದವನ್ನು ನೀಡುವಲ್ಲಿ ಯಶಸ್ವಿಯಾಗಿದ್ದ ಸಮರ್ಥ ಸಾಹಿತಿ, ನಿಷ್ಕಲ್ಮಷ ಚಿತ್ತದಿಂದ ನಿಸ್ವಾರ್ಥ ಸೇವೆಯನ್ನು ರಾಜಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಈ ಅಜಾತ ಶತ್ರು, ಮರಣಿಸಿದ್ದು 28.9.1991. ಜೀವನದುದ್ದಕ್ಕೂ ಹಾಸ್ಯವನ್ನೇ ಉಂಡು, ತೇಗಿ, ನಲಿದು, ಇತರರನ್ನು ನಗಿಸಿ ನಲಿಯುತ್ತಿದ್ದ ಗೊರೂರರು ತಮ್ಮ ಕೊನೆಯ ದಿನಗಳಲ್ಲಿ ಬಹುಕಾಲ ಮೌನವಾಗಿ ಅಸುನೀಗಿದ್ದು ಅವರ ಯಶಸ್ವಿ ಬಾಳಿನ ಘೋರದುರಂತ ಹಾಗೂ ವಿಷಾದನೀಯ ಸಂಗತಿ. ಆದರೆ ಅವರ ಅಪ್ರತಿಮ ಪ್ರತಿಭೆ, ಅನುಕರಣೀಯ ಆದರ್ಶ ವ್ಯಕ್ತಿತ್ವದಿಂದಾಗಿ ಕನ್ನಡ ಜನಮನದಲ್ಲಿ ಅಮರವಾಗುಳಿದಿದ್ದಾರೆ.

ಟೀಕೆ-ಟಿಪ್ಪಣಿಗಳು

೧. ಶಾಂತಸಿದ್ಧೇಶ್ವರ ಅಂಕಿತದ ಪ್ರಕಟಿತ ಸ್ವರವಚನ

(ಸಂ) ಎಸ್. ಶಿವಣ್ಣ

॥ ಶೃಂಗಾರ ರಸ ॥

ಕಾಂತೆಯರಗಲಿರಲಾರೆನೆನುತ ಬಲು
ಸಂತಸದಿಂ ಶೈಲೇಂದ್ರ ತನಯಳನು
ಸಂತತಲೆಡದೊಡೆಯಲಿ ಕುಳ್ಳಿರಿಸಿ ಮೊಗನೋಡಲು ಮತ್ತೇ
ಎಂತದೊ ಹೆಂಗಣ ಮೇಲಣ ಪ್ರೀತಿ ನಿ -
ರಂತರವೊರ್ವಳ ತಲೆಯೊಳಗಡಗಿಸಿ
ಕಾಂತಾರದೊಳು ಯಕ್ಷ ಕನ್ನೆಯರನು ಮೋಹಿಪ ಶಿವ ಪೊರೆಗೆಮ್ಮಂ- ॥ ೧ ॥

॥ ಹಾಸ್ಯ ರಸ ॥

ಆರೋಗಣೆಯನು ಮಾಡುವ ಗಣಪ ಕು
ಮಾರರಿಗುಣಿಸುತ ಶಿವನೈಗರದಿಂ
ಗೌರಿಯದೊಂದು ಕರದಿ ತುತ್ತಿಡಲಾಮೊಗ ಬಾಯ್ದೆರೆವುತಿರೆ
ಆರುಃಕರಂಗಳ ಸುಂಡಿಲಿ ನಿಂದಾ
ಹೇರಂಬನು ಸೆಳೆದುಣ್ಣಲು ಷಣ್ಮುಖ
ನೀರಿಷಕೆ ನಗುತುಣಿಸೆ ತೃಪ್ತಿಬಡುವೀರ್ವರು ಪೊರೆಗೆಮ್ಮಂ - ॥ ೨ ॥

॥ ಕರುಣ ರಸ ॥

ಸ್ಮರನನುರುಪಲಾ ರತಿದೇವಿಯುಬಂ-
ದೆರಗುತ ಕಂಬನಿಯಿಂ ಕಾಲ್ತೊಳೆಯಲು
ಮರುಗುತ ಪಶ್ಚಾತ್ತಾಪದೊಳವಳಿಂಗಭಯ
ಕರವನಿತ್ತು ಮರಳಿ ಮದನನುದ್ಭವಿಪನೆನುತ್ತಲಿ
ವರವನು ಕೊಟ್ಟಾಕೆಯ ದುಃಖವ ಪರಿ
ಹರಿಸುತ ಮಗುಳೆದೆತನವನಿತ್ತಾ ಶಿವ ಸಲಹುಗೆ ನಮ್ಮಂ - ॥ ೩ ॥

॥ರೌದ್ರರಸ॥
ಧಗಧಗಿಸುವ ನೇತ್ರಾನಲ ನಾಸ್ಯದಿ-
ಪೊಗೆಯೊಗುತಿರೆ ಶ್ವಾಸಾನಲನೊಡನೆಯು
ಭುಗಭುಗಿಸುತ ರೋಷಾನಲ ಕಿಡಿಗಳನುಗುಳುತ ವೈರಿಯನೂ
ಅಗಿ ಬೆನ್ನೊಳು ಕರುಳುಗಿ ಬಸಿರನು ತೆಗಿ
ಬಿಗಿಮಾಡೆಂದು ಜಡೆಯ ಕೀಳುತ ನೆಲ -
ಕೊಗೆದು ಶರಭರೂಪಿನ ಮಗನ ಪಡೆದಭವ ಪಾಲಿಪುದೆಮ್ಮಂ - ॥ ೪ ॥

॥ವೀರರಸ॥
ಧಾರುಣಿಯೇ ರಥ ವಾರುವ ವೇದಗ-
ಳಾ।ರವಿ ಶಶಿ ಚಕ್ರಗಳೇ ಬ್ರಹ್ಮನು
ಸಾರಥಿ ಮೇರುವೆ ಧನುವದು ನಾರಿಯುರಗಪತಿ ಹರಿ ಶವವೂ
ವೀರನು ತಾನಾಗೀ ರೀತಿಯ ರಥ
ವೇರುತ ಮೀರಿದ ತ್ರಿಪುರ(ರ) ಗರ್ವವ
ತೂರಿ ಸುರರಿಗಾನಂದವನಿತ್ತಾ ಶಿವ ಸಲಹಲಿ।ನಮ್ಮಂ - ॥ ೫ ॥

॥ ಭಯಂಕರ ರಸ॥
ಕಡು ಭೀಕರ ಗರಳವು ಬ್ರಹ್ಮಾಂಡಗ-
ಳಡಕಿಲುಗಳ ಸುಡುತಿರೆ ದೇವಾಸುರ
ಗಡಣವು ಕಂಗೆಡಲದರೊಳು ಹಿರಿಯತನವ ಬಿಡಲಾರದಕೆ
ಕುಡಿಯಲುದರದೊಳನೇಕವಜಾಂಡವು
ನಡುಗುತ್ತಿರೆ ಭಯಗೊಂಡಾ ವಿಷವನು
ಕೊಡಲಿವುತ ಗ್ರೀವದ ಮಧ್ಯದೊಳಿರಿಸಿದ ಶಿವ ಸಲಹಲಿ ನಮ್ಮಂ - ॥ ೬ ॥

॥ಭೀಭತ್ಸರಸ॥
ತಲೆಯೋಡಿನೊಳುಣ್ಣಲು ಪುಲಿದೊವಲನು
ಹೊಲಸೆನ್ನದೆ ಹೇಸದೆ ಬಿಡಮುಡಲು
ಜ್ವಲಿಸಿದ ಕುಣಪದ ಬೂದಿಯ ಮೈಯ್ಯೊಳು ಸಂತತ ಲೇಪಿಸಲು
ಎಂಲು ಮಾಲೆಯ (ತಾ) ಕೊರಳೊಳು ಧರಿಸಲು
ಬಲು ಮೃಗಚರ ಸಂಗವಿರಲು (ಸುತ) ।ಮಂ-
ಗಲ ಚಾರಿತ್ರ ಸುಮಂಗಲನೆನಿಸುವ ಶಿವ ಸಲಹಲಿ ನಮ್ಮಂ - ॥ ೭॥

॥ಅದ್ಭುತ ರಸ॥

ಬಂಗಾರದ ಬಿಲ್ಲಿರೆ ಪಿಡಿಯದೆ ಖ-
ಟ್ವಾಂಗವಿಡಿದಾ ರಜತಾದ್ರಿ ಮಂದಿರ
ಸಿಂಗರವಿರೆ ಕಾಡೊಳಗಿಹ ನಿಜಸ್ತ್ರೀಯ ನೆನವುತ ತಾನು
ಇಂಗಿತವರಿದುಣಿಸುವಳಿರೆ ಭಿಕ್ಷದ

ತಂಗಳನುಂಬನು ತನಗಿಲ್ಲದಲಿರೆ
ಪಿಂಗದೆ ಲೋಕತ್ರಯವನು ಸಲಹುವ ಶಿವ ಸಲಹಲಿ (ನಿಮ್ಮಂ) ॥ ೮॥

॥ಶಾಂತರಸ॥

ಆಸನವೆಂಬುದ ಸಿದ್ಧಗೊಳಿಸಿ ಹೊರ-
ಸೂಸುವ ಮರುತನ ತುಂಬಿ ನಿಲಿಸಿ ತುದಿ
ನಾಸಿಕದ ಗ್ರದಿ ದೃಷ್ಟಿಯನಿಟ್ಟುರೆ ಚಿತ್ತದ ಛಲಗೆಲಿದು
ಈ ಸಂಸಾರದ ಗೊಡವೆಯ ಮರದು ವಿ -
ಲಾಸದೆ ತನ್ನೊಳ್ತಾನೆ ರಮಿಸುತಿ-
ರ್ಪ।ಸಚ್ಚಿತ್ಸುಖಸಾರ। ಸು। ಶಾಂತ ಸಿದ್ದೇಶ್ವರ।ತಾ।ಪಾಲಿಪುದೂ -9

೨ - ಬ್ಯಾಂಗಲೂರ್ ಅಲ್ಲ - ಬೆಂಗಳೂರು

- ತಿರುಮಲೆ ಶ್ರೀರಂಗಾಚಾರ್ಯ

ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿ. ಈಗ ಹೊಸ ಸಹಸ್ರಮಾನದಲ್ಲಿ ಅದು ವಿಶ್ವವಿಖ್ಯಾತಿಯನ್ನು ಪಡೆದುಕೊಂಡಿದೆ. ಬೆಂಗಳೂರು ಬ್ಯಾಂಗಲೂರ್ ಆಗಿಬಿಟ್ಟಿದೆ! ಇದೇನು ರೂಪವಿಕಾರ ಎಂದು ಯಾರಿಗೂ ತೋಚಿದಂತಿಲ್ಲ. ಬ್ಯಾಂಗಲ್+ ಊರು ಎಂದೇ,ಬ್ಯಾಂಗ್ +ಊರು ಎಂದೇ ಈ ಉಚ್ಚಾರಕ್ಕೆವಿಶ್ಲೇಷಣೆ? ಊರು ಬೆಳೆದು ಖ್ಯಾತಿ ಪಡೆದಂತೆ ಅದರ ಪ್ರಾಚೀನತೆಗೂ ಗೌರವ, ಘನತೆ ಉಳಿಯಬೇಕು. ಇತಿಹಾಸ ಕುರಿತಂತೆ ಎಲ್ಲಿಲ್ಲದ ಕಾಳಜಿಯ ಕೂಗು ಕೇಳಿಸುತ್ತಿದೆ. 'ಬ್ಯಾಂಗಲೂರ್' ಮಾತ್ರ ಬಾಯಿ ಮುಚ್ಚಿಕೊಂಡಿದೆ; ಇದೇನು ಅಸಡ್ಡೆಯೋ, ಆಧುನಿಕತೆಯ ಅಮಲಿನ ಪರಿಣಾಮವೋ?! ಬೊಂಬಾಯಿ "ಮುಂಬೈ" ಆಯಿತು; ಮಡ್ರಾಸ್ ಚೆನ್ನೈ ಆಯಿತು; ಕಲ್ಕಟಾ- ಕೊಲ್ಕೊತಾ ಆಗಿಬಿಟ್ಟಿತು.

ಈ ವಿಚಾರ ಮನಸ್ಸನ್ನು ಕಲಕಿ ಚಿಂತನೆಗೆ ಕೆಣಕಾಯಿತು. 'ಬೆಂಗಳೂರು' ಎಂದು ಹೆಸರೇಕೆ ಬಂತು ಎಂಬತ್ತ ಹುಡುಕಾಡಿದೆ. ಶ್ರೀ ಗೀತಾಚಾರ್ಯರ ಸ್ಥಳನಾಮ ಕುರಿತ ಲೇಖನ ಲೋಚನದಲ್ಲಿ ಪ್ರಕಟವಾಗಿ (ಡಿಸೆಂಬರ್ 2002) ನನ್ನ ಗಮನ ಸೆಳೆಯಿತು. ಅದಕ್ಕೆ ಪೂರಕವಾಗಿ ಬೆಂಗಳೂರಿಗೆ ಸಮೀಪ ಬೇಗೂರು ಎಂಬಲ್ಲಿನ ಒಂದು ಶಾಸನ ಕುರಿತು ದಿ॥ತಿ.ತಾ. ಶರ್ಮರು "ಕನ್ನಡನುಡಿ" ಪತ್ರಿಕೆಯಲ್ಲಿ ಜೂನ್ 1, 1973 ರಲ್ಲಿ ಬರೆದಿರುವ ಲೇಖನ ಇಲ್ಲಿ ಪ್ರಸ್ತುತ:-

ಒಂಬತ್ತನೆಯ ಶತಮಾನದಲ್ಲಿ ಬೆಂಗಳೂರು

ಬೆಂಗಳೂರು ತಾಲ್ಲೂಕು ಬೇಗೂರು ಸಾಕಷ್ಟು ಪ್ರಾಚೀನ ಕ್ಷೇತ್ರ. ಸುಮಾರು 9 – 10 ನೇ ಶತಮಾನಕ್ಕೆ ಸಂಬಂಧಪಟ್ಟವೆಂದು ಹೇಳಬಹುದಾದ ಹಲವು ವೀರಗಲ್ಲುಗಳಿವೆ. ಅವುಗಳಲ್ಲಿ ನಾಗೇಶ್ವರ ದೇವಾಲಯದೊಳಗಿನ ಕಮಠೇಶ್ವರ ದೇವಸ್ಥಾನದ ಮುಂಭಾಗದ ನೆಲದಲ್ಲೊಂದು ವೀರಗಲ್ಲಿತ್ತು. ಭಕ್ತಾದಿಗಳು ಅದನ್ನು ತುಳಿದು ತುಳಿದು , ಕಂಡುಬರುವ ಹಲವು ಅಕ್ಷರಗಳೂ ನಾಶವಾದಾವೆಂದು ನಾನೊಮ್ಮೆ ಅಲ್ಲಿಗೆ ಹೋಗಿ , ಗ್ರಾಮಪಂಚಾಯಿತಿ ಮುಖ್ಯರಿಗೆ ಹೇಳಿ ಆ ವೀರಗಲ್ಲು ಹಲಗೆಯನ್ನು ತೆಗೆಸಿ ಸುರಕ್ಷಿತವಾದ ಸ್ಥಳದಲ್ಲಿ ಇರಿಸಿದೆ. ಈ ಶಾಸನವನ್ನು ಕೀರ್ತಿಶೇಷ ಅರಕೆರೆ ನರಸಿಂಹಾಚಾರ್ಯರು ಓದಿ, ಪಾಠವನ್ನು ಕೊಟ್ಟಿದ್ದಾರೆ; ಅದರ ಚಿತ್ರವನ್ನೂ ಕೊಟ್ಟಿದ್ದಾರೆ.

" the inscription is of considerable interest as it testifies incidentally to the antiquity of Benguluru- the modern Bangalore, which must have existed under this name in about AD 900. We may now discard the story of Vira- Ballala (1173-1220) having gone to the hut of an old woman and eaten Bengalu(Boiled beans) offered by her".

(ಶಾಸನವು 'ಬೆಂಗುಳೂರು' – ಇಂದಿನ ಬೆಂಗಳೂರಿನ ಪ್ರಾಚೀನತೆಯನ್ನು ಖಚಿತಪಡಿಸುವುದರಿಂದ ಕುತೂಹಲಕಾರಿಯಾದದ್ದಾಗಿದೆ. ಬೆಂಗಳೂರು ಆ ಹೆಸರಿನಲ್ಲಿ ಕ್ರಿ.ಶ. 900 ರ ಕಾಲದಲ್ಲೇ ಇದ್ದಿರಬೇಕು. ವೀರಬಲ್ಲಾಳ (1173 – 1220)ಬೇಟೆಗೆ ಹೋದಾಗ ಮುದುಕಿಯ ಗುಡಿಸಿಲಿನಲ್ಲಿ ಬೆಂದಕಾಳು ತಿಂದನೆಂಬ ಕತೆಯನ್ನು ಈಗ ತಿರಸ್ಕರಿಸಬಹುದು).

ಶಾಸನಪಾಠ ಹೀಗಿದೆ:

1. ಶ್ರೀಮತ್ ನಾಗತ
2. ರನ ಮನೆ ವಗ
3. ತಿ ಪೆರ್ವ್ವೊಣ ಶೆಟ್ಟಿ
4. ಬೆಂಗೂಳೂರ ಕಾಳೆ
5. ಗದೊಳ್ ನಾಗ
6. ತನನ ಮಗಂ ಬುಟ್ಟಣ
7. ಪತಿ ಸತ್ತಂ

ಈ ಶಾಸನದ 'ನಾಗತರ' ಅದೇ ಬೇಗೂರಿನಲ್ಲಿ ದೊರೆತ ಇನ್ನೊಂದು ವೀರಗಲ್ಲಿನ ಶಾಸನದಲ್ಲಿ ತುಂಬೆಪಾಡಿ ರಣರಂಗದಲ್ಲಿ ಜೀರ ಮಹೇಂದ್ರನೊಂದಿಗೆ ಹೊಡೆದಾಡಿ ಸತ್ತು ಸ್ವರ್ಗಾಲಯಕ್ಕೆ ಸೇರಿದನೆಂಬ ವಿಚಾರವಿದೆ. ಈ ಶಾಸನಕಲ್ಲು ಈಗ ಬೆಂಗಳೂರು ವಸ್ತುಸಂಗ್ರಹಾಲಯ (ಮ್ಯೂಸಿಯಂ) ದಲ್ಲಿದೆ. ಎ.ಸಿ. ಕರ್ನಾಟಕ ಬೆಂಗಳೂರು . Vol. IX. ಈ ಶಾಸನದಲ್ಲಿ 'ಶ್ರೀಮದೆಟೆಯಪ್ಪರಸರ್' ಎಂದು ಹೆಸರಿಸಿರುವುದು ಗಂಗವಂಶದ ದೊರೆ 'ಎರೆಗಂಗ'. ಇವನಿಗೆ ಇಮ್ಮಡಿ ನೀತಿಮಾರ್ಗ ಎಂದೂ ಹೆಸರು. ಇವನು ಕ್ರಿ.ಶ. 886 ರಿಂದ 920 ರವರೆಗೂ ಆಳಿದ. ಇದರಿಂದ ಯಾವ ಸಂಶಯವೂ ಇಲ್ಲದೆ ಕಮಠೇಶ್ವರ ದೇವಸ್ಥಾನದಲ್ಲಿದ್ದ ವೀರಗಲ್ಲಿನ ನಾಗತರನೇ ತುಂಬೆಪಾಡಿಯ ಕಾಳಗದಲ್ಲಿ ವೀರಮರಣ ಹೊಂದಿದವನು - ಈ ಎರಡೂ ಶಾಸನಗಳೂ ಒಂದೇ ಕಾಲದವು - ಗಂಗರ ಕಾಲದವು ಎಂಬುದರಲ್ಲಿ ಸಂದೇಹವೇ ಇಲ್ಲ.

ಬೆಂದಕಾಳೂರು ಬೆಂಗಳೂರು ಆಯಿತೆಂಬ ವೀರಬಲ್ಲಾಳನ ಕತೆ ಆಧಾರವಿಲ್ಲದ ಕಟ್ಟುಕತೆ - ಅಡುಗೂಲಜ್ಜಿಯ ಕತೆ ಅಷ್ಟೇ. ಶಾಸನದಲ್ಲಿ ಗುರುತಿಸಿರುವ '' ಬೆಂಗುಳೂರು'' ಈಗಿನ ಬೆಂಗಳೂರೇ ಎಂಬುದರಲ್ಲಿ ಸಂದೇಹವಿಲ್ಲ.

ಬೆಂಗುಳೂರು ಬೆಂಗಳೂರು ಹೇಗಾಗಿದ್ದಾತು? ಉತ್ತರ ಇಷ್ಟೆ, ಉಚ್ಚಾರದ ಸುಲಭತೆಯ ಕಾರಣ ಗ ಕಾರದ ಉ ಕಾರವನ್ನು ಜನ ಬಿಟ್ಟಿರಬೇಕು. ಇದು '' ಬೆಂಗುಳೂರು'' ಎಂಬ ಮಾತಿನ - ರೂಪದ ನಿಷ್ಪತ್ತಿ ಕುರಿತು ಚಿಂತನೆ ಮಾಡಿದಾಗ ಸ್ಪಷ್ಟವಾಗುತ್ತದೆ. ಬೆಂಗುಳೂರು ಎಂಬುದನ್ನು ಹೀಗೆ ಬಿಡಿಸಬಹುದು:

ಬೆಂಗುಳ + ಊರು = ಬೆಂಗುಳೂರು.

ಬೆಂಗುಳ: 1. ಬೆಳ್ + ಕುಳ = ಬೆಂಗುಳ

2. ಬಿಳಿದು + ಕುಳ = ಬೆಂಗುಳ

3. ಬೆಸಂ + ಕುಳ = ಬೆಂಗುಳ

'' ಕುಳ'' ಎಂದರೆ ಆಳು , ವ್ಯಕ್ತಿ ಎಂಬರ್ಥವಿದೆ. (ನೇಗಿಲ ತುದಿಗೆ ಹಾಕುವ ಕಬ್ಬಿಣದ ಮೊನೆ ಸಹ)

1. ಪ್ರಸಿದ್ಧನಾದ , ವರ್ಚಸ್ವಿಯಾದ ಮನುಷ್ಯನ ಊರು;

2. ಸ್ವಚ್ಛ - ಪ್ರಾಮಾಣಿಕ ಮನುಷ್ಯನ ಊರು

3. ಆಜ್ಞಾವಿಧೇಯನಾದ ಮನುಷ್ಯನ ಊರು,

ಇರಬಹುದೇ ಎಂದು ತೋರಿಬಂತು. ನಮ್ಮ ಪಂಡಿತವರ್ಗ ಈ ಕುರಿತು ಹೆಚ್ಚಿನ ವಿವರಣೆ ಕೊಡುವುದು ಲೇಸು.

'ಬೆಂಗುಳೂರು ಉಚ್ಚಾರ ಸೌಲಭ್ಯಕ್ಕಾಗಿ 'ಬೆಂಗಳೂರು' ಆಗಿದ್ದನ್ನು ಸಹಜ ವೆನ್ನಬಹುದು. ಇಂಗ್ಲೀಷ್ ಕಲಿತ ಮೇಲೆ ಜನ ಅದನ್ನು '' BENGALOORU '' ಎಂದು ಬರೆಯಬಾದಿತ್ತೇ?

ಬೆಂಗಳೂರಿಗೆ ಸಾವಿರದ ನೂರು ವರ್ಷಗಳ ಇತಿಹಾಸವಿದೆ. ಆ ಪ್ರಾಚೀನವಾದ ಹೆಸರನ್ನು ರೂಪಗೆಡಿಸಿ ಆಗಬೇಕಾದ್ದೇನು? ಇನ್ನು ಮುಂದಾದರೂ ನಮ್ಮ ವಿದ್ಯಾವಂತ ಜನ "ಬ್ಯಾಂಗಲೂರ್" ಅನ್ನುವುದನ್ನು ಬಿಟ್ಟು "ಬೆಂಗಳೂರು" ಎಂದೇ ಹೇಳುವ ಎಚ್ಚರ ತಾಳಬೇಕು. ನಮ್ಮ ಸರಕಾರವೂ ಸಹ ಊರ ಹೆಸರನ್ನು, ನಮ್ಮ ರಾಜಧಾನಿಯ ಹೆಸರನ್ನು ಇಂಗ್ಲೀಷಿನಲ್ಲಿ ಇನ್ನು ಮುಂದೆ " BENGALOORU" ಎಂದೇ ಬರೆಯಬೇಕೆಂದು ಆಜ್ಞೆ ಮಾಡಬೇಕು. ಒಂದಕ್ಷರ ಹೆಚ್ಚು ಬರೆಯಲು ಏನೂ ಕಷ್ಟವಿಲ್ಲ. ಇಂಗ್ಲೀಷ್ ಬರಹವೇ; ಮೋಹವೇ ಈ ಉಚ್ಚಾರಗೇಡಿಗೆ ಮೂಲ ಕಾರಣ.

ರಾಜ್ಯದ ಅನೇಕ ಊರು - ಹಳ್ಳಿಗಳ ಹೆಸರುಗಳೂ ಸಹ ಇಂಗ್ಲೀಷ್ ಬರಹದ ಪ್ರಭಾವದಿಂದ ರೂಪಗೆಟ್ಟುಹೋಗಿವೆ. ಇವನ್ನೆಲ್ಲ ಈಗ ನಮ್ಮ ಸಂಸ್ಕೃತಿಯ ರಕ್ಷಣೆಯ ಹಿನ್ನೆಲೆಯಲ್ಲಿ ತಿದ್ದಲೇಬೇಕಾಗಿದೆ . ಇದರತ್ತ ನಮ್ಮ ಸಂಸ್ಕೃತಿ ಇಲಾಖೆ - ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳೂ, ಕನ್ನಡ ವಿಶ್ವವಿದ್ಯಾನಿಲಯಗಳೂ ಗಮನಹರಿಸುವುದೆ?

೩. ಬೆಂಗಳೂರು ಸ್ಥಳನಾಮ

-ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್ಯ

ಕರ್ನಾಟಕ ಲೋಚನದ ಹದಿನಾರನೆಯ ಸಂಪುಟದ ಎರಡನೆಯ ಸಂಚಿಕೆಯಲ್ಲಿರುವ ಲೇಖನ 'ಬೆಂಗಳೂರು ಸ್ಥಳನಾಮದ ಮೂಲ - 'ದೇವರಾಯ ಪಟ್ಟಣ' ವೆಂಬುದು ಅತ್ಯಂತ ಕುತೂಹಲ ಸಂಗತಿಗಳನ್ನು ಹೊರಗೆಡಹುತ್ತದೆ. ಈ ಲೇಖನದಂತೆ ಈ ಹಿಂದೆ ಬೆಂಗಳೂರು ಈಗಿರುವ ಪ್ರದೇಶವು ಬೆಂಗಾಡಾಗಿದ್ದು, ಗಿಡಮರಗಳು ಬೆಳೆಯದ ಬೆಟ್ಟಗುಡ್ಡಗಳಿಂದ ಕೂಡಿದ ಸಮತಟ್ಟಾಗಿಲ್ಲದ ಪ್ರದೇಶವಾಗಿತ್ತು. ಈ ನಿಷ್ಪತ್ತಿಯಿಂದ ಈ ಸ್ಥಳದಲ್ಲಿ ಕಟ್ಟಿದ ಊರು 'ಬೆಂಗಾಡೂರು' ಕಾಲಕ್ರಮೇಣ 'ಬೆಂಗಳೂರು' ಆಗಿದೆ.

ಈ ಹಿನ್ನೆಲೆಯನ್ನು ನಾವು ಒಪ್ಪುವುದಾದರೆ , ಈ ಹೊಸ ಊರನ್ನು ಕಟ್ಟಿದ ಕೆಂಪೇಗೌಡನು ಒಂದು ಬೆಂಗಾಡಿನಲ್ಲಿ ಊರೊಂದನ್ನು ನಿಸರ್ಗ ನಿಯಮಕ್ಕೆ ಹೊಂದಿಕೊಂಡು ಹೇಗೆ ಕಟ್ಟಬಹುದೆಂಬುದನ್ನು ಸ್ಪಷ್ಟವಾಗಿ ಮಾಡಿ ತೋರಿಸಿದ್ದಾನೆಂದಾಯಿತು. ಬೆಂಗಳೂರಿನ ಇತಿಹಾಸವನ್ನು ನೋಡಿದರೆ, ಬೆಂಗಳೂರಿನಲ್ಲಿ ಕೆರೆ-ಕುಂಟೆಗಳನ್ನು ಅವ್ಯಾಹತವಾಗಿ ಕಟ್ಟಲಾಗಿದೆ. ಈ ಜಲಾಶಯಗಳ ಬದಿಯಲ್ಲಿ ವನಗಳ ನಿರ್ಮಾಣ, ಉದ್ಯಾನವನಗಳ ನಿರ್ಮಾಣ, ಕೆರೆ ನೀರಿನ ಆಶ್ರಯದಲ್ಲಿ ವ್ಯವಸಾಯ ಹಾಗೂ ಸ್ಥಳೀಯವಾಗಿ, ಸುಲಭವಾಗಿ ಬೆಳೆಯಬಲ್ಲ ಗಿಡ-ಮರಗಳನ್ನು ಬೆಳೆಯುವುದು. ಸ್ಥಳೀಯ ಧಾನ್ಯ- ಕಾಳುಗಳನ್ನು ಬೆಳೆಯುವುದು, ದನ-ಕರುಗಳ ಪೋಷಣೆ, ಗ್ರಾಮೀಣ ಕೈಗಾರಿಕೆ ಇತ್ಯಾದಿ. ಇಂದು ಸರಕಾರಗಳು ತಾವೇ ಹಿಂದೆ ಹಾಳು ಮಾಡಿದ್ದ ಗ್ರಾಮೀಣ ವ್ಯವಸ್ಥೆಯನ್ನು ಪುನರೂಪಿಸಲು

ಯಾವುದೇ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಎಷ್ಟೋ ಹಣ ಖರ್ಚು ಮಾಡಿದರೂ ಸಹ, ಯಾವುದೇ ಸಫಲತೆಯನ್ನು ಕಾಣದಿರುವಾಗ, ಕೆಂಪೇಗೌಡನು ಬೆಂಗಾಡಿನಲ್ಲಿ ಈ ನವಪುರವನ್ನು ಹೇಗೆ ಕಟ್ಟಿಸಿದನೋ ಅದನ್ನು ನಾವಿಂದು ಊಹಿಸಲೂ ಆಗುವುದಿಲ್ಲ. ಇಂದಿಗೂ ಹಳೆಯ ಬೆಂಗಳೂರಿನ ಹಳೆಯ ಮನೆಗಳಲ್ಲಿ ಭಾವಿಗಳಲ್ಲಿ ಮೇಲು ಮಟ್ಟದಲ್ಲಿಯೇ ನೀರಿರುವುದು ಕಂಡುಬರುತ್ತದೆ. ಯಾವುದೇ ಬೆಂಗಾಡಿನಲ್ಲಿಯೂ ಸಹ ಮೊದಲು ನೀರಿನ ವ್ಯವಸ್ಥೆಯನ್ನು ನಿಸರ್ಗದ ಸೂತ್ರಗಳಿಗನುಗುಣವಾಗಿ ಹೇಗೆ ಮಾಡಬಹುದೆಂಬುದನ್ನು ಕೆಂಪೇಗೌಡನು ಬಹು ಹಿಂದೆಯೇ ಮಾಡಿ ತೋರಿಸಿರುವುದನ್ನು ನಾವು ಇಂದು ಅರಿಯಬೇಕಾಗಿದೆ. ಬೆಂಗಳೂರಿನ ಸಮೀಪ ಆತನೇ ಕಟ್ಟಿದ ಹೊಸಕೋಟೆಯು ಉತ್ತರ ಪಿನಾಕಿನಿ ನದಿಯ ತೀರದಲ್ಲಿದ್ದು, ಅಲ್ಲಿ ಕಟ್ಟಿರುವ ಅಮಾನಿ ಕೆರೆಯು ಮಳೆಯ ನೀರನ್ನು ಕೊಯ್ಲು ಮಾಡುವ ನಿದರ್ಶನವಾಗಿದೆ.

ಈ ಮಳೆಯ ನೀರಿನ ಕೊಯ್ಲನ್ನು ಅರಿಯದ ಹಿಂದಿನ ಸರಕಾರಗಳು ಕೆಂಪೇಗೌಡನ ಕೆರೆಗಳನ್ನು ಮುಳುಗಿಸಿಯೋ, ಕಬಳಿಸಿಯೋ, ಬೆಂಗಳೂರನ್ನು ವಾಸ್ತವವಾಗಿ 'ಬೆಂಗಾಡು' ಮಾಡುತ್ತಿದ್ದಾರೆಯೇ? ಮಳೆಯ ನೀರಿನ ಕೊಯ್ಲಿನ ಸಂಗ್ರಹಾಗಾರಗಳಾದ ಕೆರೆ-ಕುಂಟೆಗಳನ್ನು 'ಅಭಿವೃದ್ಧಿ' ಯ ಹೆಸರಿನಲ್ಲಿ ಹಾಳುಗೆಡವಿ , ಬೆಂಗಳೂರನ್ನು 'ಬೆಂಗಾಡೂರು' ಮಾಡುವಲ್ಲಿ ಯಾರೂ ಹಿಂದೆ ಬಿದ್ದಿಲ್ಲ. ಇನ್ನು ಈ ಕೆರೆ-ಕುಂಟೆಗಳಿಗಿದ್ದ ಜಲಾನಯನ ಪ್ರದೇಶಗಳ ಕಾಡು-ಉದ್ಯಾನ-ವನಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಲಾಗಿದೆ. ಕೆರೆ ಬದಿಯ ಮರಗಳು ಕಾಣೆಯಾಗಿವೆ. ಎಲ್ಲೆಲ್ಲೂ ಅಂಟುಬೂದಿ (ಸಿಮೆಂಟು)ಯಿಂದ ನಿರ್ಮಾಣವಾಗಿರುವ ಬಹುಮಹಡಿ ಕಟ್ಟಡಗಳು, ಎಷ್ಟು ಆಳಕ್ಕೆ ಕೊರೆದರೂ ನೀರು ದೊರೆಯದ ಕೊಳವೆಬಾವಿಗಳು, ದಿನಬಳಕೆಯ ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ಬಳಸಿಕೊಳ್ಳಲಾಗದ ಜೀವನ ಕ್ರಮಗಳಿಂದ ಕಸವಿಲೇವಾರಿಯು ಸಮಸ್ಯೆಯಾಗಿರುವುದು. ಪ್ರದೂಷಣಗೊಂಡಿರುವ ಗಾಳಿ , ಕೊಳಕಾಗಿರುವ ನೀರು, ರಾಸಾಯನಿಕಗಳ ಅಂಶಗಳಿಂದ ಕೂಡಿರುವ ಆಹಾರ ದ್ರವ್ಯಗಳು, ರೋಗ-ರುಜಿನಗಳನ್ನು ಉಂಟು ಮಾಡುವ ಜೀವನಕ್ರಮ, ಆಹಾರ ಪದ್ಧತಿ,ಇತ್ಯಾದಿಗಳಿಂದ ನಾವೀಗ 'ಬೆಂಗಳೂರ'ನ್ನು ಬೆಂಗಾಡಾಗಿ ಮಾಡುತ್ತಿದ್ದೇವೆಯೆ?

ಪ್ರತಿಯೊಂದು ಮನೆಯಲ್ಲಿಯೂ ಮಳೆ ನೀರಿನ ಸಂಗ್ರಹಣಾ ವ್ಯವಸ್ಥೆಯಿರಬೇಕೆಂದು ಕೂಗೇಳುತ್ತಿದೆ. ಆದರೆ, ಇಡೀ ಊರಿನಲ್ಲಿ ಮಳೆನೀರಿನ ಸಂಗ್ರಹಣಾ ವ್ಯವಸ್ಥೆ ಮಾಡಲು ಕೆರೆ-ಕುಂಟೆಗಳಿರಬೇಕು, ಅವನ್ನು ಸರಿಯಾಗಿ ನಿರ್ವಹಿಸಬೇಕೆಂಬ ಬಗ್ಗೆ ಯಾವ ಕಳಕಳಿಯೂ ಕೇಳಿ ಬರುತ್ತಿಲ್ಲ. ಈಗ ಬೆಂಗಳೂರಿನಲ್ಲಿ ತುಂಬಿ ಹೋಗಿರುವ ಅಸಾವಯವ ದ್ರವ್ಯಗಳನ್ನು ವಿಲೇವಾರಿ ಮಾಡುವುದು ಭವಿಷ್ಯದಲ್ಲಿ ಬೃಹತ್ ಸಮಸ್ಯೆಯಾಗುವುದರಲ್ಲಾವ ಸಂದೇಹವೂ ಇಲ್ಲ. ಇದೇ ರೀತಿ ಅಭಿವೃದ್ಧಿ ಹೊಂದಿದರೆ ಬೆಂಗಳೂರು, ನೀರೂ ದೊರೆಯದ 'ಬೆಂಗಾಡು' ಎಂದು ಹೆಸರು ಪಡೆಯುವುದರಲ್ಲಾವ ಸಂದೇಹವೂ ಇಲ್ಲವೇನೋ?

೪. ಅಜ್ಞಾತ ತತ್ವ ಪದಗಳು

ಶ್ರೀಮತಿ ಅರುಣಾ ರಮೇಶ್ ಕಾರಂತ

ಆಧ್ಯಾತ್ಮಿಕತೆ ಭಾರತದ ನೆಲದ ಜೀವಾಳ. ಇಲ್ಲಿನ ಜನತೆ ಪಾಮರರಿರಲಿ ಪಂಡಿತರಿರಲಿ ದೇವರು, ಭಕ್ತಿ, ಕರ್ಮಗಳ ಬಗೆಗೆ ಅಷ್ಟಿಷ್ಟಾದರೂ ಮಾತನಾಡಬಲ್ಲರು. ವೇದ , ಉಪನಿಷತ್ , ಪುರಾಣ ಕಾವ್ಯಗಳು ಋಷಿ ಮುನಿಗಳಿಂದ ವಿದ್ವಾಂಸರಿಂದ ರಚಿಸಲ್ಪಟ್ಟರೆ , ಅನುಭಾವಗೀತಗಳು , ದಾಸರ ಪದಗಳು, ತತ್ವ ಪದಗಳು ಶ್ರೀ ಸಾಮಾನ್ಯರಿಂದ ರಚಿಸಲ್ಪಟ್ಟಿವೆ. ಜೀವನಾನುಭವದಿಂದ ಪಕ್ವವಾದ ಮನಸ್ಸು ಭಗವಂತನೆಡೆಗೆ ಹೊರಳಿದಾಗ , ಸಹಜವಾಗಿ ಸತ್ಸಂಗದತ್ತ ಜೀವ ಸೆಳೆಯಲ್ಪಡುತ್ತದೆ. ತತ್ಪರಿಣಾಮವಾಗಿ ಪುರಾಣ ಪುಣ್ಯಕಥೆ , ಕೀರ್ತನೆಗಳ ಶ್ರವಣ ಮನನದ ಪವಿತ್ರ ಆಧ್ಯಾತ್ಮಿಕ ಬೆಳಕು ಆತನನ್ನರಳಿಸುತ್ತದೆ. ಭಗವಂತನಲ್ಲಿ ನೆಲೆಗೊಂಡ ಪಕ್ವವಾದ ಹೃದಯ ಆತನ ಸಾನ್ನಿಧ್ಯದಲ್ಲಿ ತನಗುಂಟಾದ ಆನಂದದ ಅನುಭೂತಿಯನ್ನು ಇತರರಿಗೂ ತಿಳಿಸಲು ಹಾತೊರೆಯುತ್ತದೆ. ತಾನು ಹೊಂದಿದ ಆನಂದವನ್ನು ಇತರರಿಗೂ ತಿಳಿಸಲು ಹಾತೊರೆಯುತ್ತದೆ. ತಾನು ಹೊಂದಿದ ಆನಂದವನ್ನು ಇತರರೂ ಹೊಂದಲಿ ಎಂಬ ಆಶಯದಿಂದ , ಆ ಆನಂದವು ಎದೆಯಾಳದಿಂದ ಹೇಗೆ ಹೊಮ್ಮಿತೊ ಹಾಗೆಯೇ ಹಾಡಲಾರಂಭಿಸುತ್ತಾನೆ. ಇವೇ ತತ್ವ ಪದಗಳು, ಈ ಹಾಡುಗಳನ್ನು ಹಾಡಿದಾತ ಯಾವುದೇ ವ್ಯಾಕರಣ ನಿಬಂಧನೆಯನ್ನು ಚಿಂತಿಸಿ ಅದಕ್ಕಾಗಿ ಛಂದದ ಬೆನ್ನುಹತ್ತಲಿಲ್ಲ. ಬದಲಿಗೆ ಬೇಂದ್ರೆಯವರಂದಂತೆ , ಪಾದ ಪದ್ಧತಿಯಿಂದ ಪದಕೂಡಿ ಬರುವಾಗ ಯಾರ್‍ಯಾರೆ ಗುರು-ಲಘು ಎಣಿಸುವರೆ? ಹೃದಯದಿಂದ ಓತಪ್ರೋತವಾಗಿ ಉಕ್ಕಿಬಂದ ಭಾವ ಹಾಡಾಗಿ ಹೊಮ್ಮಿತು ಅಷ್ಟೇ, ಅಲ್ಲಿ ಆತನಿಗರಿವಿಲ್ಲದಂತೆ , ಸಂಖ್ಯೆ, ಸಂಜ್ಞೆ, ಉಪಮೆ, ಅಲಂಕಾರ ತುಂಬಿಕೊಂಡಿತು ಅಷ್ಟೆ . ಕೆಲವೊಮ್ಮೆ ಆ ಗೀತಗಳು, ಪ್ರೌಢಶಬ್ದ ಜೋಡಣೆಯಿಂದ ಗೂಢಾರ್ಥಗಳಿಂದ ತುಂಬಿರಬಹುದು. ಇನ್ನು ಕೆಲವೊಮ್ಮೆ ಜನಪದರ ಆಡು ನುಡಿಗಳನ್ನೇ ಬಳಸಿ ದೇಸಿಗತಿ , ಗತ್ತುಗಳಲ್ಲಿ ಮೂಡಿಬಂದಿರಬಹುದು. ಆದರೆ ಇದಾವುದೂ ಪೂರ್ವಯೋಜಿತವಲ್ಲ. ಇಂತಹ ಅನುಭಾವಿ ಕವಿಗಳಲ್ಲಿ ಥಟ್ಟನೆ ನೆನಪಿಗೆ ಬರುವ ಹೆಸರು ಶಿಶುನಾಳದ ಷರೀಫ್ ಸಾಹೇಬರದು. ನಂತರದಲ್ಲಿ ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮುಂತಾದ ವೀರಶೈವ ಕವಿಗಳೂ, ಸರ್ವಜ್ಞನಂಥ ಗಂಡು ಕವಿಗಳೂ, ಕನಕ - ಪುರಂದರರಂತಹ ದಾಸವರೇಣ್ಯರೂ ಪ್ರಮುಖರು. ಇನ್ನೂ ಅದೆಷ್ಟೋ ಅಜ್ಞಾತ ರಾಗಿಯೆ ಉಳಿದ ಅನುಭಾವಿ ಕವಿಗಳ ಹಾಡುಗಳು ಜನರ ನಾಲಿಗೆಯಲ್ಲಿ ಬೆಳಕಿಗೆ ಬಾರದ ಗೆದ್ದಲು ತಿನ್ನುತ್ತಿರುವ ತಾಡವಾಲೆಗಳಲ್ಲಿ ಕಡತಗಳಲ್ಲಿ ಹುದುಗಿಕೊಂಡಿವೆ. ಅವುಗಳನ್ನು ಸಂಗ್ರಹಿಸಿದಲ್ಲಿ ಕನ್ನಡ ಸಾಹಿತ್ಯಕ್ಕೆ ಅದೊಂದು ಮಹತ್ತರ ಕೊಡುಗೆಯಾದೀತು.

ಶಿವಮೊಗ್ಗ ಜಿಲ್ಲೆಯ, ಸಾಗರ ಹಾಗೂ ಸೊರಬ ತಾಲ್ಲೂಕುಗಳಲ್ಲಿ ಸಂಗ್ರಹಿಸಿದ

ತಾಡವಾಲೆ ಗ್ರಂಥಗಳಲ್ಲಿ ದೊರೆತ ಇಂತಹ ಕೆಲವೊಂದು ತತ್ವ ಪದಗಳನ್ನು ಮತ್ತು ಪರಮಾತ್ಮನ ವಚನಗಳಿಂದ 15 ತ್ರಿಪದಿಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವುಗಳಲ್ಲಿ ಶಿವ ಹಾಗೂ ವಿಷ್ಣು ಪರವಾದ ಕೃತಿಗಳೂ ಇವೆ. ಲೋಕಾನುಭಾವ ತುಂಬಿದ ತ್ರಿಪದಿಗಳೂ ಇವೆ. ಇವು ಈ ತನಕ ಬೆಳಕಿಗೆ ಬಂದಿದೆಯೊ ಎಂಬುದು ತಿಳಿಯದು.

೧

ಹರಿಗನ ಹರಿಣನ ಭಾರದ್ವಾಜನಂ
ಮುಂಗಲಿ ನರಿ ನಾಯಂ ಕಂಡರೆ ಶುಭಂ
ಹಿಂಗಡೆ ಬಂದೆಡನಾಗಲು
ಬಂಗಾರದ ಮಳೆ ಬಪ್ಪುದು ಚಿಂತಾರತ್ನ ॥೧॥

ವಡಲೊಳಗೆ ವಿದ್ಯೆ ಉಳ್ಳದೆ
ಪೊಡವಿ ಪತಿ ಕೊಳಲರಿಯನು
ನಡವರೆ ತಾ ಭಾರವಲ್ಲ ತಸ್ಕರರೊಯ್ಯರು
ದಾಯಾದ್ಯರು ಪಾಲಬೇಡರು ಚಿಂತಾರತ್ನ ॥೨॥

ಶ್ವಾನದ ಬಾಲದ ಡೊಂಕಂ
ಕಾನನದಿ ಹರಿವ ಹಳ್ಳದ ಡೊಂಕಂ
ನಾರಿಯರ ಮನದ ಡೊಂಕಂ
ಭೂನಾಥ ತಿದ್ದಲರಿಯನು ಚಿಂತಾರತ್ನ ॥೩॥

ಎಲೆಯುದುರಿದ ಮರದ ನೆಳೆಂ
ಉರಿವ ಬಿಸಿಲೊಳ್ಪಯಣಂ
ಹೊಲತಿಯ ಲಾವಣ್ಯಂ ಕುಲಗೆಡುಕ
ಅರಸಿನ ವಾಲಿಂಗಂ ಅರಗಿನ ಪರಜಿನಂತೆ ಚಿಂತಾರತ್ನ ॥೪॥

ಇಲ್ಲದ ವಿದ್ಯದ ಗರ್ವಂ
ಬಲ್ಲಿದರೊಳು ಸೆಣಸಿ ನರಳುವ ಭಂಗಂ
ವಲ್ಲದ ನಾರಿಯ ಸಂಗಂ
ಕಲ್ಲೊಳು ರಸಬರಿಸಿದಂತೆ ವಿಶ್ವಪತೀ ॥೫॥

೨. ಪರಮಾತ್ಮನ ವಚನಗಳು

ಇಲ್ಲವೆಂದರೆ ಲೋಕ ಬಲ್ಲ ಠಾವಿಗೆ ಹೋಹ
ಇಲ್ಲೆನ್ನಲೊಲ್ಲ ಕೊಡಲೊಲ್ಲದಾ ಪಾಪಿ

ಕೊಲ್ಲದೇ ಕೊಂದ ಪರಮಾತ್ಮ ॥೧॥

ಆಗಬಾ ಈಗಬಾ ಹೋಗಿ ಬಾ ಯನ್ನದೇ
ಹಾಗದ ಮೇಲೆ ಹಣವನ್ನು ಕೊಡುವಾತ
ತ್ಯಾಗದಾಗುರುವು ಪರಮಾತ್ಮ ॥೨॥

ಇಕ್ಕುವನು ವಂದೂರಿಗೊಕ್ಕಲೆಂದೆನಬೇಡ
ಅಕ್ಷಯಾ ಪದವ ಪಡದು ಕೈಲಾಸದಿಂ
ದೊಕ್ಕಲು ಬಂದಂತೆ ಪರಮಾತ್ಮ ॥೩॥

ಹೊತ್ತಾರೆ ಬೈಗೆಗೆ ಮತ್ತೆ ಬಾರೆನ್ನುತಾ
ಹೊತ್ತನೆ ಕಳದು ಹುಸಿವವನು ಅವನಿಂದ
ಸತ್ತ ಹೆಣವೇ ಲೇಸು ಪರಮಾತ್ಮ ॥೪॥

ಕಟ್ಟಿರ್ದ ಕಠಾರಿ ಅಟ್ಟಿ ಬಂದಿರಿವುದೆ
ಕೊಟ್ಟೆನು ಎಂದು ಕೊಡಲಿಲ್ಲದಾ ಪಾಪಿ
ಅಟ್ಟಿ ಬಂದಿರಿದಂತೆ ಪರಮಾತ್ಮ ॥೫॥

ಇಚ್ಚೆಯನರಿದಿತ್ತ ನುಚ್ಚೊಂದು ಮಾಣಿಕವು
ಇಚ್ಚೆಯು ತೀರ್ದ ಬಳಿಕಿತ್ತ ಮಾಣಿಕವು
ನುಚ್ಚಿಗೂ ಬೇಡ ಪರಮಾತ್ಮ ॥೬॥

ಅಡುವುದವರಕ್ಕಿಯನು ಕೊಡುವುದರೆ
ಬಿಡಾರವನು ಕುಡಿವರೆ ನೀರನೆರಲುದು ಇವು ಮೂರು
ಬಡವರಾ ಧರ್ಮ ಪರಮಾತ್ಮ ॥೭॥

ಅಟ್ಟುಂಬ ಕಾಲದಲಿ ಕೊಟ್ಟುಂಬುದೊಬ್ಬರಿಗೆ
ಅಟ್ಟುಂಬಲೀಯದಂತವರಿಗೆ ಮುಂದಿನ್ನು
ಇಚ್ಚೆಗಳಕ್ಕು ಪರಮಾತ್ಮ ॥೮॥

ಬಲ್ಲಿದನು ನುಡಿದರೆ ಬೆಲ್ಲವ ಮೆದ್ದಂತೆ
ಇಲ್ಲದ ಬಡವನು ನುಡಿದರೆ ಬಾಯೊಳು
ಜಳ್ಳು ಬಿದ್ದಂತೆ ಪರಮಾತ್ಮ ॥೯॥

ಕಂಡದ್ದ ನುಡಿದರೆ ಭೂಮಂಡಲ ಮುನಿವದು
ಕೊಂಡಾಡುತಿಚ್ಚೆಯಲಿ ನುಡಿದರೆ ಜಗವೆಲ್ಲ
ಕೊಂಡಾಡುತಿಕ್ಕು ಪರಮಾತ್ಮ ॥೧೦॥

ವಾರಣಾಸಿಗೆ ಹೋಹ ಕಾರಣ ವೇತಕೆ
ಕಾರಣಾತ್ಮಕನು ಕರದೊಳು ಇರುತಿರೆ
ದೂರಹೊಗಲೇಕಯ್ಯ ಪರಮಾತ್ಮ ॥೧೧॥

ಕಾಲದಲಿ ಕಾಲ್‌ತೊಳೆದು ಏಳೆಂಟು ಮಾಡುವದು
ಕಾಲ ತಪ್ಪಿದ ಬಳಿಕ ನೂರೆಂಟು ಮಾಡಿದರೆ
ಹಾಳು ಕಂಡಯ್ಯ ಪರಮಾತ್ಮ ॥೧೨॥

ಹಿರಿದು ಪಾಪವ ಮಾಡಿ ಹರಿವಾರು ಗಂಗೆಗೆ
ಹರಿವ ನೀರಿನಲಿ ಕರಗುವುದೆ ಆ ಪಾಪ
ಎರೆಯ ಮಣ್ಣಲ್ಲ ಪರಮಾತ್ಮ ॥೧೩॥

ಯಣ್ಣೆ ಹೂರಿಗೆ ಲೇಸು ಯಮ್ಮೆಕರವಗೆ ಲೇಸು
ಅಮ್ಮ ಬಾ ಯೆಂದು ಕರೆವ ಮಗಲೇಸು ಊರಿಂಗೆ
ಕಮ್ಮಾರನೇಲೇಸು ಪರಮಾತ್ಮ ॥೧೪॥

ಬಂಧನವೆಂದೆಂಬ ನಂದನ ವನವುಂಟು
ಇಂದುಧರನೆಂಬ ಕೋಣ ಉಂಟು ಲೋಕದೊಳು
ಮಿಂದುಂಬರಿಲ್ಲ ಪರಮಾತ್ಮ ॥೧೫॥

ಬಿಡಿ ಪದ್ಯಗಳು

೩

ತುಪಾಕ, ಸಾಧಕವನ್ನು ತುರಿಯ ಬಿದ್ದು ಕೇಳುತ್ತಿದ್ದಿ
ಮೋನಾದೆಂದೆನಿಸುವ ಮುಸ್ಯದೆ ಸಹಿತಾಗಿ
ಶಾಬಾಸೊ ನೀನೇ ಶಿವನಣ್ಣ ॥ಪಲ್ಲ॥

ಸುಜ್ಞಾನದಾಭಾವ ಪಡಿದಳವ ಬಿಗಿಯಣ್ಣ
ಧ್ಯಾನಾವೆಂದೆನಿಸುವ ತಲೆಯಕಟ್ಟನೆ ಕಟ್ಟಿ ಆನಂದವನ್ನೆ ಆಡಣ್ಣಾ ॥೧॥

ಆರುಚಕ್ರವೆಂಬ ಆರುಕಟ್ಟಿನ ತುಪಾಕ
ಧೀರತನದಿಂದ ಪಿಡಿಯಣ್ಣಾ ॥೨॥

ಮೂರು ಅವಸ್ಥೆಯೆಂಬ ಮೂಬೆರಳ ಮದ್ದ ಹೈದು
ಪೂರಾಯವನೆ ಮಾಡಂಣಾ ॥೩॥

ಈಡಾ ಪಿಂಗಳೆಯಂಬಾ ಜೋಡ ಗುಂಡಾನೆ ಹಾಕಿ
ರೂಢೆಂಬ ಗಜವ ಜಡಿಯಣ್ಣಾ ॥೪॥

ಕೂಡೆ ಅವಸ್ಥೆಗಳೆಂಬ ಕುರಿಯ ರಂಜಕವ ವರದೂ
ಗೂಡು ಗುರ್ತಿಗೆ ಜಾವಿಗೆಯನೊತ್ತಣ್ಣಾ ॥೫॥

ಆಸವ ನಳಿನವೆಂಬ ಆಧಾರವನ್ನೆ
ಆರ್ತಾವ ಸರವಟ್ಟಿಸಿ ನಿಲ್ಲಣ್ಣಾ ॥೬॥

ನಾಸಿಕಾಗ್ರವೆಂಬಾ ನೊಣಣ ದೃಷ್ಟಿಯ ನೋಡಿ
ಸೂಸೊದೆಯೇರಿಸಿ ನಿಲ್ಲಣ್ಣಾ ॥೭॥

ಭರಿತ ಪ್ರಾಣವೆಂಬ ಬೆರಳ ಬೊಬ್ಬೆಯನಿಕ್ಕಿ
ಪರರ ಭೀತಿಯ ನಳಿಯಣ್ಣಾ ॥೮॥

ಗುರು ಚಿದಾನಂದನೆಂಬ ಗುರು ಭ್ರೂ ಮಧ್ಯದೊಳಿಹ
ಗುರಿಯ ತಾ ಈಡಾಡಣ್ಣಾ ತುಪಾಕು ಸಾಧಕವಣ್ಣಾ ॥ ॥೯॥

೪

ಬಿಡು ಬಿಡು ಹಮ್ಮಾ ಎಲೆ ನಿಂದ್ಯಾತೆ ತಾಡಿತಮ್ಮಾ ॥ಪ॥
ಸೋದರ ನಿಂದ್ಯವ ಮಾಡಿ।

ವಂದಿನ ಹಾಡಿ ಮಣ್ಣಲಿ ಕೂಡಿ ॥ ೧॥
ಭಾಗ್ಯದ ಮದದಲಿ ಸೊಕ್ಕಿ

ವಂದಿನ ಹಾಡಿ ಕುಣ್ಣೆಯನೆಕ್ಕಿ ॥೨॥
ಚಿದಾನಂದ ಚಿಂತೆಯ ನೀಗಿ
ವಂದಿನ ಹಾಡಿಯ ಮನಿಗಾಗಿ ॥೩॥

೫

ಆವಾಗ ಶಿವ ಮಂತ್ರ ನೆಲೆಯಾಗಿ
ಗುರುದೇವ ತೋರಿದ ಗೊತ್ತು ಗುರಿಯಾಗಿ ॥ಪ॥
ಆಸನ ಬಲಿದೂರ್ಧ್ವಮುಖವಾಗಿ

ತುದಿ ನಾಸಿಕದೊಳು ಅನಿಮಿಷನಾಗಿ
ಸೂಸುವ ಮನದ ನೊಬ್ಬುಳಿಯಾಗಿ
ಗುರು ಘೋಷದೊಳಗೆ ಮನ ಲಯವಾಗಿ ॥ ಆವಾಗ॥ ॥೧॥

ಚಂದ್ರಸೂರ್ಯರು ವಂದು ಮುಖವಾಗಿ
ನಾಗೇಂದ್ರನ ಹೆಡೆ ಎತ್ತಿ ಮೇಲಾಗಿ
ಇಂದ್ರ ಮಾಣಿಕ ಮುತ್ತು ಬೆಲೆಯಾಗಿ
ದೇವೇಂದ್ರನ ಸಭೆಗೆಲ್ಲ ಬೆಳಕಾಗಿ ॥ ಆವಾಗ॥ ॥೨॥

ಬ್ರಹ್ಮನೊಳಗೆ ಮನಲಯವಾಗಿ
ಪರಬ್ರಹ್ಮ ಜ್ಯೋತಿರ್ಮಯ ಅಂಗವಾಗಿ
ನಿರ್ಮಳ ನಿಜ ಸುಖ ಘನವಾಗಿ
ಪರಬ್ರಹ್ಮಾಂಡ ಬೆರಟೂರೀಶ್ವರವಾಗಿ ॥ ಆವಾಗ॥ ॥೩॥

೬

ಪ್ರಾಣಲಿಂಗಕ್ಕೆ ಯಣೆ ಮಾಡಿಹ ವಸ್ತುವ ಕಾಣೆನು ಮೂಜಗದಿ
ಜಾಣನೆನಿಪ ಶರಣನೆ ಬಲ್ಲನಿದನು ತ್ರಾಣೆಯ ಕಲೆ ನೆಲೆಯಾ ॥ಪ॥

ಸೂತ (ಕ) ಪಾತಕ ಮೋಹಕೆ ನಿಲುಕದ ಚೇತನ ಲಿಂಗವಿದೂ
ಜಾತಿ ವಿಜಾತಿ ಯೆಂದೆನಿಸುತ ತೊಳಲುವ ನೀತಿಯ ಲಿಂಗವಿದೂ ॥೧॥

ನೂತನವಾಗಿಹ ನವರಸಭರಿತದ ರೂಪಿನ ಲಿಂಗವಿದೂ
ಜ್ಯೋತಿರ್ಮಯವಾಗಿ ಝಗಝಗಿಸುವ ಸಟೆ ಪ್ರೀತಿಯ ಲಿಂಗವಿದೂ ॥ ೨॥

ಶಾಸ್ತ್ರಕ್ಕೆ ನಿಲುಕದ ಶಸ್ತ್ರಕ್ಕೆ ತಟ್ಟದ ಚಿತ್ರದ ಲಿಂಗವಿದೂ
ಗೋತ್ರ ಸೂತ್ರಕೆ ತಟ್ಟದ ಗಗನದ ಗಾತ್ರದ ಲಿಂಗವಿದೂ ॥೩॥

ಮಾತಾ ಪಿತೃವೆಂದೆನಿಸುವ ಶರಣರ ಸ್ತೋತ್ರದ ಲಿಂಗವಿದೂ
ಅಷ್ಟವಿಧದಲಿ ಪರಿಶೋಭಿಸುತ್ತಿಹ ಪರಮಾತ್ಮ ಲಿಂಗವಿದೂ ॥೪॥

ಧರೆಯೊಳು ಕೈಕಾಲು ಕಿವಿ ಮೂಗುಗಳು ಮುಖವುಳ್ಳ ಲಿಂಗವಿದೂ
ಪರಿಪರಿ ಪಕ್ವಾನ್ನಂಗಳ ಭುಂಜಿಸುತಿಹ ಪರತರ ಲಿಂಗವಿದೂ ॥೫॥

ತರತರ ವಸ್ತ್ರಾಭರಣ ಪುಷ್ಪಂಗಳಲಂಕೃತ ಲಿಂಗವಿದೂ
ಗುರು ವಿಮಲಾನಂದ ಪರಿಪೂರ್ಣಭರಿತ್ವದ ಶ್ರೀ ಪರಶಿವ ಲಿಂಗವಿದೂ ॥೬॥

ಇದಲ್ಲದೆ 'ಗರಳ ಪುರೀಶನ ಸ್ತುತಿ' ಯೆಂಬ 'ಲಿಂಗಂ' ಎಂದು ಅಂತ್ಯವಾಗುವ ನಂಜುಂಡೇಶ್ವರ ಸ್ತುತಿ, 'ಪದರದಿರು ಪದರದಿರು ಪದರಿ ಪಿಮೆಟ್ಟದಿರು ಮದನಾರಿ ಬರದ ಬರಪದ ಮೀರಲರಿದು ' ಎಂಬ 'ಗುರು ಶಂಕರೇಶ' ಎಂಬ ಅಂಕಿತದಲ್ಲಿ ಬರೆದ ಹಾಡು, ಶ್ರೀರಾಮ ನಾಮ ಕಲ್ಪತರುವಲ್ಲವೆ ' ಎಂಬ 'ಚೆಲುವ ಮಾಧವರಾಮ ಗುರುದೈವಾ ' ಎಂಬ ಅಂಕಿತ ಹಾಡು, ' ಗುಪ್ತರಾಮ ಗುರುಪಿ ಜಪ್ತಿ ಉಳ್ಳ ಶರಣರು' ಎಂಬ ತತ್ವ ಪದ ಇನ್ನೂ ಮುಂತಾದ ತಾಡವಾಲೆಯಲ್ಲಿ ಬರೆದ ಕೃತಿಗಳೂ ದೊರಕಿವೆ. ಈ ತಾಡ ಓಲೆಗಳಲ್ಲಿದ್ದ ಹಾಡುಗಳು ಪ್ರತಿ ತೆಗೆದುವುಗಳಾಗಿರಬೇಕು. ಇವುಗಳ ಜತೆ ಇರುವ ಮಿಕ್ಕ ತಾಡ ಓಲೆಗ್ರಂಥಗಳ ಕಾಲದೊಡನೆ ತುಲನೆ ಮಾಡುವುದಾದರೆ, ಇವು ಸುಮಾರು ಕ್ರಿ.ಶ. 1600 ರಿಂದ 1800 ರ ನಡುವೆ ಪ್ರತಿ ತೆಗೆದಿರಬೇಕೆಂದೆನಿಸುತ್ತದೆ. ವಿದ್ವಜ್ಜನರು ಈ ಕೃತಿಗಳನ್ನು ಪರಾಮರ್ಶಿಸಿದಲ್ಲಿ ಕನ್ನಡ ಸಾಹಿತ್ಯ ಲೋಕಕ್ಕೆ ಉಪಯೋಗವಾದೀತು.

೫. ಬೆಂಗೋಲು - ಒಂದು ಟಿಪ್ಪಣಿ

ಡಾ. ಸುಮತೀಂದ್ರ ನಾಡಿಗ

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನ ೭ನೇ ಸಂಪುಟದ ೬೫೫೭ನೆ ಪುಟದಲ್ಲಿ ಬೆಂಗೋಲು (ನಾ)ಬೆನ್ನಿಗೆ ಹೊಡೆಯಲು ಎತ್ತಿರುವ ಕೋಲು:ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ (ಮಹಾದೇ.ಬ.೧೭-೨೬)

[ಬೆಂ.(<ಬೆನ್)+ (<ಕೋಲು>] ಎನ್ನುವ 'ಪ್ರವೇಶವಿದೆ (ENTRY)

'ಬೆಂಗೋಲು' ಶಬ್ದದ ಪ್ರಯೋಗ ಅಕ್ಕನ ಒಂದು ವಚನವಲ್ಲಿ ಮಾತ್ರ ಕಂಡುಬರುತ್ತದೆಯೆಂದು ಈ ವಚನವನ್ನು ಉದಾಹರಿಸುತ್ತಾರೆ:

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ!
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ!
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ!
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ!
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ!
ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರೂ ಗೆಲ್ಲಬಾರದು!

ಈ ವಚನದ ರಚನೆಯನ್ನು ಗಮನಿಸಿದಾಗ, ಕಾಯ-ನೆಳಲು, ಪ್ರಾಣ-ಮನ, ಮನ-ನೆನಹು, ನೆನಹು-ಅರಿವು ಎನ್ನುವ ಪ್ರತಿಮೆಗಳ ಸಮಾನಾಂತರ ಜೋಡಣೆ ಮತ್ತು ಕಾಡಿತ್ತು ಮಾಯೆ ಎನ್ನುವ ಪುನರಾವರ್ತನೆ ಉದ್ದೇಶಪೂರ್ವಕವಾದದ್ದು ಅನಿಸುತ್ತದೆ. ಅದು ಕಾಯ-ನೆಳಲು,ಪ್ರಾಣ-ಮನ,ಮನ-ನೆನಹು, ನೆನಹು-ಅರಿವು ಎನ್ನುವ ಜೋಡಿಗಳ ಸಂಬಂಧ ಒಂದೇ ರೀತಿಯದು ಎಂದು ಹೇಳುತ್ತದೆ. ಅವು ಒಂದನ್ನೊಂದು ಬಿಟ್ಟಿರಲಾರದ

ಅನಿವಾರ್ಯತೆಯ ಮಾಯೆ ಪ್ರಕಟವಾಗುವ ರೀತಿಯೆನ್ನುವುದು ಸ್ಪಷ್ಟವಾಗುತ್ತದೆ. ಈ ಜೋಡಿಗಳ ಅವಿನಾಭಾವವೇ ಮಾಯಾಪ್ರಪಂಚವನ್ನು 'ಸತ್'ಆಗಿ ಭಾವಿಸುವಂತೆ ಮಾಡುತ್ತದೆ. ಮೊದಲ ನಾಲ್ಕು ಸಾಲುಗಳು ಒಂದೊಂದೂ ತೆಗೆದುಕೊಳ್ಳುವ ಉಸಿರಿನ ಸಮಯ ಒಂದೇ ಆಗಿರುವುದು. ಈ ಜೋಡಿಗಳ ಸಂಬಂಧದ ಸ್ವರೂಪದ ಸೂಕ್ಷ್ಮವನ್ನು ಧ್ವನಿಸುತ್ತದೆ. ಹೀಗೆ ಧ್ವನಿಸುವುದಕ್ಕೆ ಶಬ್ದಗಳ ಆಯ್ಕೆ ಎಷ್ಟು ಮುಖ್ಯವಾಗಿದೆ ಎನ್ನವುದನ್ನು ಗಮನಿಸಬೇಕು. ಈಗಿರುವ ನಾದ ಪೂರ್ಣ ಶಬ್ದಗಳ ಆಯ್ಕೆ, ಒಂದೊಂದು ನುಡಿಯ ಲಯ,ಆ ಲಯಗಳ ಸಮಾನಾಂತರ ಸರದಿ, ಶಬ್ದಗಳನ್ನು ಮೀರಿದ, ಅವುಗಳ ಅರ್ಥವನ್ನು ಮೀರಿದ ಸೂಕ್ಷ್ಮಸಂವೇದನೆಯನ್ನು ಕೇಳುವವರಿಗೆ ಮುಟ್ಟಿಸಲು ಸಮರ್ಥವಾಗುತ್ತದೆ.

ಒಂದು ವೇಳೆ ಈ ವಚನವನ್ನು ಹೀಗೆ ಬರೆದಿದ್ದರೆ ಏನಾಗುತ್ತಿತ್ತು ಎಂದು ನೋಡೋಣ.

ದೇಹಕ್ಕೆ ನೆಳಲಾಗಿ ಮಾಯೆ ಕಾಡುತ್ತದೆ
ಪ್ರಾಣಕ್ಕೆ ಮನಸ್ಸಾಗಿ ಮಾಯೆ ಕಾಡುತ್ತದೆ
ಮನಸ್ಸಿಗೆ ನೆನಪಾಗಿ ಮಾಯೆ ಕಾಡುತ್ತದೆ
ನೆನಪಿಗೆ ಅರಿವಾಗಿ ಮಾಯೆ ಕಾಡುತ್ತದೆ.

ಹೀಗೆ ಬರೆದಾಗ 'ಅರ್ಥ'ದಲ್ಲಿಯೂ ಭಾರೀ ಬದಲಾವಣೆಯಾಗುತ್ತದೆ. ಇಲ್ಲಿ ಅಕ್ಕನ ದನಿ ಕೇಳಿಸುವುದಿಲ್ಲ. ಅಕ್ಕನ ಆಧ್ಯಾತ್ಮಿಕ ತೊಳಲಾಟ ಕಾಣುವುದಿಲ್ಲ. ಚೆನ್ನಮಲ್ಲಿಕಾರ್ಜುನನ ಜೊತೆ ಅಕ್ಕ ಮಾತಾಡುತ್ತಿದ್ದಾಳೆ ಅನ್ನಿಸುವುದಿಲ್ಲ. ಈ ಮಾತು ನೀರಸವಾಗುತ್ತದೆ. ಇದರಲ್ಲಿ ಆರ್ದ್ರತೆಯ ಅನುಭವವಾಗುವುದಿಲ್ಲ. ಆದ್ದರಿಂದಲೇ ಅಕ್ಕನ ಮಾತಿನ ಕ್ರಮಕ್ಕೆ, ವಚನದ ರಾಚನಿಕ ಸ್ವರೂಪಕ್ಕೆ, ಗಮನಕೊಡದಿದ್ದರೆ, ಅಕ್ಕನ ಮಾತಿನ ಗುರಿಯನ್ನು ನಾವು ಮುಟ್ಟುವುದಿಲ್ಲ. ಅಕ್ಕನ ಮಾತು ನಮ್ಮಲ್ಲಿ ಅನುರಣನಗೊಳ್ಳುವುದಿಲ್ಲ.

ಆದ್ದರಿಂದ ಮೊದಲ ನಾಲ್ಕುಸಾಲುಗಳ 'ರಚನೆ'ಗೆ ಗಮನಕೊಡುತ್ತ ಹೋಗೋಣ.ಮೊದಲ ನಾಲ್ಕುಸಾಲುಗಳು ತೆಗೆದುಕೊಳ್ಳುವ ಉಸಿರಿನ ಸಮಯ ಒಂದೇ ಸಮನಾದ್ದು. ಆದರೆ ಐದನೆಯ ಸಾಲಿನ ಉಸಿರಿನ ಸಮಯ ಸ್ವಲ್ಪ ಹೆಚ್ಚಾಗಿದೆ. ಹೀಗೆ ಉಸಿರಿನ ಸಮಯ ಹೆಚ್ಚಾಗುವುದರಿಂದ ಇಲ್ಲೊಂದು ಉಕ್ತಿ ವಿಶೇಷವಿದೆ ಎನ್ನುವುದು ನಮ್ಮ ಗಮನಕ್ಕೆ ಬರುತ್ತದೆ. ಇಲ್ಲಿಯವರೆಗೂ ಒಬ್ಬ ವ್ಯಕ್ತಿಯನ್ನು ಮಾಯೆ ಕಾಡುತ್ತಿದ್ದುದನ್ನು ಹೇಳುತ್ತಿದ್ದ ಅಕ್ಕ ಇಲ್ಲಿ ಇಡೀ ಜಗತ್ತನ್ನು ಮಾಯೆ ಹೇಗೆ ಕಾಡುತ್ತಿದೆ ಎಂದು ಹೇಳುತ್ತಿದ್ದಾಳೆ. ವ್ಯಷ್ಟಿಯಿಂದ ಸಮಷ್ಟಿಗೆ ನಮ್ಮ ಗಮನವನ್ನು ತಿರುಗಿಸುವ ಉದ್ದೇಶದಿಂದಲೇ ಐದನೆಯ ಸಾಲಿನ ಲಯದಲ್ಲಿ ವ್ಯತ್ಯಾಸವಿದೆ.

ಈ ಐದನೆ ಸಾಲಿನ ಗಹನವಾದ ವಿಚಾರವನ್ನು ತಿಳಿದು ಕೊಳ್ಳುವುದಕ್ಕೆ 'ಬೆಂಗೋಲು' ಶಬ್ದದ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗುತ್ತದೆ.ಅದನ್ನು ತಿಳಿದು ಕೊಳ್ಳುವುದಕ್ಕೆ ಕನ್ನಡಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಯಾವ ಸಹಾಯವನ್ನು

ಕೊಡುವು ದಿಲ್ಲ. ಅಲ್ಲಿ 'ಬೆನ್ನಿಗೆ ಹೊಡೆಯಲು ಎತ್ತಿದ ಕೋಲು' ಎನ್ನುವ ಅರ್ಥವನ್ನು ಕೊಟ್ಟು ಆ ಶಬ್ದದ ಪ್ರಯೋಗಕ್ಕೆ ಅಕ್ಕನ ವಚನವನ್ನು ಉದಾಹರಿಸಿದ್ದಾರೆ. ಡಾ.ಎಲ್.ಬಸವರಾಜು ಅವರು ಕನ್ನಡ ನಿಘಂಟು ಕೊಟ್ಟಿರುವ ಅರ್ಥಕ್ಕೆ ಸಮಾನವಾದ ''ಚಾವಟಿ''ಎನ್ನುವ ಅರ್ಥವನ್ನು ಕೊಟ್ಟಿದ್ದಾರೆ.

'ಬೆನ್ನೆಲುಬು' ಅಂದರೆ 'ಬೆನ್ನನ್ನು ಹೊಡೆಯಲು ಎತ್ತಿದ ಎಲುಬು' ಎಂದು ಅರ್ಥ ಮಾಡಿದರೆ ಎಷ್ಟು ಹಾಸ್ಯಾಸ್ಪದವಾಗುತ್ತದೋ, 'ಬೆಂಗೋಲು' ಅಂದರೆ 'ಬೆನ್ನನ್ನು ಹೊಡೆಯಲು ಎತ್ತಿದ ಕೋಲು' ಎನ್ನುವ ಅರ್ಥ ಅಷ್ಟೇ ಹಾಸ್ಯಾಸ್ಪದವಾಗುತ್ತದೆ. ಈ ಹಾಸ್ಯಾಸ್ಪದವಾದ ಅರ್ಥವನ್ನೇ ಇಟ್ಟುಕೊಂಡು, ಎ.ಕೆ.ರಾಮಾನುಜನ್ ಅವರು ಅಕ್ಕನ ಈ ವಚನವನ್ನು ಅನುವಾದಿಸುವಾಗ ''ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತು ಮಾಯೆ'' ಎನ್ನುವ ಸಾಲನಲ್ಲಿ "with stick raised high,illusion herd, the worlds" ಎಂದು ಅನುವಾದಿಸಿದ್ದಾರೆ! ರಾಮಾನುಜನ್ ಅವರ speaking of shiva ಎನ್ನುವ ಪದ್ಯವನ್ನು ಬೆಂಗಳೂರು ವಿಶ್ವವಿದ್ಯಾಲಯದ ಎಂ.ಎ. ತೌಲನಿಕ ಅಧ್ಯಯನದ ವಿದ್ಯಾರ್ಥಿಗಳಿಗೆ ನಾನು ಪಾಠ ಹೇಳಬೇಕಾಗಿ ಬಂದಾಗ, ನಾನು 'ಬೆಂಗೋಲು'ಶಬ್ದದ ಬೆನ್ನುಹತ್ತಬೇಕಾಗಿ ಬಂತು.

ಕಾಯ-ನೆಳಲು, ಪ್ರಾಣ-ಮನ, ಮನ-ನೆನಹು, ನೆನಹು-ಅರಿವುಗಳ ಸಂಬಂಧದ ಹಾಗೆಯೇ ಜಗದಜಂಗುಳಿ ಮತ್ತು ಬೆಂಗೋಲಿನ ಸಂಬಂಧವಿದೆಯೆಂದು ಈ ವಚನದ ರಾಚನಿಕ ಸ್ವರೂಪ ತಿಳಿಸುತ್ತದೆ. ಈ ರಾಚನಿಕ ಸ್ವರೂಪ ತರ್ಕಶಾಸ್ತ್ರದಲ್ಲಿ ಹೇಳುವ 'ಅನುಮಾನ' ಎನ್ನುವ ಪ್ರಮಾಣವನ್ನು ಉಪಯೋಗಿಸುತ್ತದೆ. ಪ್ರತ್ಯಕ್ಷ ವಸ್ತುವಿನಲ್ಲಿ ಒಂದು ಸೂಚಕಾಂಶವು ಅಪ್ರತ್ಯಕ್ಷವಾದ ಬೇರೊಂದರೊಡನೆ ನಿಯತ ಸಂಬಂಧವನ್ನು ಹೊಂದಿದೆ ಎಂಬ ಅರಿವಿನ ಮೂಲಕವೆ ಆ ಪ್ರತ್ಯಕ್ಷವಸ್ತುವಿನಲ್ಲಿ ಅಪ್ರತ್ಯಕ್ಷವಾದ ಬೇರೊಂದನ್ನು ಸಾಧಿಸುವ ರೀತಿಯೇ 'ಅನುಮಾನ'. ಈ ವಚನದಲ್ಲಿ 'ಕಾಯ' ಮತ್ತು 'ನೆಳಲು' ಪ್ರತ್ಯಕ್ಷವಾದ ವಸ್ತುಗಳು. ಕಾಯಕ್ಕೆ ನೆಳಲು ಎನ್ನುವಲ್ಲಿ ಸೂಚಿತವಾದ ಅಂಶ ಅವುಗಳ ಸಂಬಂಧ. ಈ ಸಂಬಂಧ ಬೇರ್ಪಡಿಸಲಾಗದ್ದು ಅನ್ನಿಸುವುದು ಚೆನ್ನಮಲ್ಲಿಕಾರ್ಜುನ ಒಡ್ಡಿರುವ ಮಾಯೆ. ಕಾಯ ಮತ್ತು ನೆಳಲಿನ ಸಂಬಂಧದ ಹಾಗೆಯೇ ಜಗದ ಜಂಗುಳಿ ಮತ್ತು ಬೆಂಗೋಲಿನ ಸಂಬಂಧವಿದೆಯೆನ್ನುವುದರ ಕಡೆ ನಮ್ಮ ಅರಿವನ್ನು ವಿಸ್ತರಿಸುವುದು ಈ ವಚನದ ಆಶಯವಾಗಿದೆ. ಕಾಯದ ಜೊತೆ ನೆಳಲು, ಪ್ರಾಣದ ಜೊತೆ ಮನಸ್ಸು, ಮನಸ್ಸಿನ ಜೊತೆ ನೆನಹು, ನೆನಹಿನ ಜೊತೆ ಇರುವ ಹಾಗೆ, ಜಗದ ಜಂಗುಳಿಗೆ 'ಬೆಂಗೋಲನೆತ್ತಿ' ಅಂದರೆ ಬೆನ್ನೆಲುಬನ್ನು ನೆಟ್ಟಗೆ ಇರಿಸಿ ಮಾಯೆ ಕಾಡುವುದಾದ್ದರಿಂದ, ಆ ಮಾಯೆಯನ್ನು ಯಾರೂ ಗೆಲ್ಲಲು ಸಾಧ್ಯವಿಲ್ಲವೆಂದು ಚೆನ್ನಮಲ್ಲಿಕಾರ್ಜುನನಿಗೆ ಶರಣಾಗುವ ಶರಣಭಾವವೇ ಈ ವಚನ ಪ್ರಾಣವಾಗಿದೆ. ಮಾಯೆ ಚಾವಟಿಯನ್ನು ಹಿಡಿದು ಜನಸ್ತೋಮವನ್ನು ಅಟ್ಟಿಸಿಕೊಂಡು ಹೋಗುತ್ತಿದೆ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ ಇಡೀ ಮಾನವತೆಯ ಬೆನ್ನೆಲುಬಾಗಿ ಮಾಯೆ ಕಾಡುತ್ತಿದೆ ಎನ್ನುವ ವಿಶಿಷ್ಟ ಕಾಣ್ಕೆಗೆ ಧಕ್ಕೆ ಬರುತ್ತದೆ.

ಮಾಯೆಜಗದ ಜಂಗುಳಿಯ ಬೆಂಗೋಲೆ ಆಗಿ ಕಾಡುವ ಸಂಕೇತ ಅದ್ಭುತವಾಗಿದೆ, ಪ್ರಮಾಣಗಳನ್ನು ಇಟ್ಟುಕೊಂಡು ಮಾತಾಡುವ ಅಕ್ಕನ ಪ್ರಾಮಾಣಿಕತೆಯನ್ನು ಎತ್ತಿ ತೋರಿಸುತ್ತದೆ.

ನಾನು ಈ ವಚನದ ಬಗ್ಗೆ ಚರ್ಚಿಸುತ್ತಿದ್ದಾಗ ಪ್ರೊಫೆಸರ್ ವಿವೇಕ ರೈ ಅವರು ''ತುಳುವಿನಲ್ಲಿ 'ಬೆರಿಸೋಲ್' ಎನ್ನುವ ಶಬ್ದವೊಂದಿದೆ. ಮನೆಯ ಇಡೀ ಛಾವಣಿಯನ್ನು ಎತ್ತಿ ಹಿಡಿಯುವ ಆಧಾರಸ್ತಂಭವನ್ನು 'ಬೆರಿಸೋಲ್' ಎಂದು ಕರೆಯುತ್ತಾರೆ. ಅದರ ಅರ್ಥ ಬೆನ್ನೆಲುಬು, ಬೆಂಗೋಲು ಎಂದಾಗುತ್ತದೆ. 'ಬೆರಿ' ಅಂದರೆ ಬೆನ್ನು, 'ಸೋಲ್' ಎಂದರೆ ಕೋಲು ಎನ್ನುವ ಅರ್ಥವಿದೆ'' ಎಂದು ಹೇಳಿದರು. ಬೆರಿಸೋಲ್ ಶಬ್ದದ ನಿಷ್ಪತ್ತಿ ಬೆಂಗೋಲ್ ಶಬ್ದದ ನಿಷ್ಪತ್ತಿಗೆ ಸದೃಶವಾಗಿದೆ.ಆದ್ದರಿಂದ ಬೆಂಗೋಲ್ ಎನ್ನುವ ಶಬ್ದದ ಅರ್ಥ ಬೆನ್ನೆಲುಬು ಎಂದೇ ಆಗಬೇಕಾಗುತ್ತದೆ.

ಪ್ರತಿಕ್ರಿಯೆ

ಪ್ರತಿಷ್ಠಾನದ ದತ್ತಿ ಉಪನ್ಯಾಸಗಳ ಮಾಲಿಕೆಯಲ್ಲಿ ಬಹಳ ಅಧ್ಯಯನ ಪೂರ್ಣವಾದ ಉಪನ್ಯಾಸಗಳ ಪ್ರಕಟವಾಗಿದೆ. ಈ ಮಾಲಿಕೆಯ 1983-88 ನೆಯ ವರ್ಷದ ಸಂಪುಟದಲ್ಲಿ ''ಸಂಗೀತದ ಮೇಲೆ ಸಾಮವೇದದ ಪ್ರಭಾವ'' ಎಂಬ ಡಾ|| ಸಂಪತ್ಕುಮಾರಾಚಾರ್ಯರ ಉಪನ್ಯಾಸ ಓದಿ ಸಂಗೀತ ಶಾಸ್ತ್ರ ಕುರಿತ ಹೊಸ ವಿಷಯಗಳನ್ನು ಮನನ ಮಾಡಿಕೊಂಡೆ.

ಮಾನ್ಯ ಉಪನ್ಯಾಸಕರು ಸ್ವರ ಮಂಡಲದ ಸಂಖ್ಯಾ ಕ್ರಮವನ್ನು (ಪುಟ 60) ಹೇಳುವಾಗ ಏಕೋನ ಪಂಚಾಶತ್ ಎಂಬ ನಾರದೀಯ ಶಿಕ್ಷೆಯ ತಾನಗಳ ಗಣನೆಯ ಅಂಕೆಯನ್ನು ಐವತ್ತೊಂದು ಎಂದು ತಪ್ಪಾಗಿ ಅನುವಾದಿಸಿದಂತಿದೆ.

ಪಂಚಾಶತ್(ಪಂಚಾಶತಿ) ಎಂದರೆ ಐವತ್ತು, ಏಕೋನ (ಏಕ+ಊನ) ಎಂದರೆ ಒಂದು ಕಡಿಮೆ ಎಂದರೆ ನಾಲ್ವತ್ತೊಂಭತ್ತು (49).

ತಾವು ಇದನ್ನು ಗಮನಿಸಿ ಮರುಮುದ್ರಣದಲ್ಲಿ ಸರಿಪಡಿಸಿಕೊಳ್ಳಬೇಕಾಗಿ ಕೋರಿಕೆ.

ಇತಿ ನಮನಗಳೊಂದಿಗೆ,

ವಿಶ್ವಾಸಿ,
ಗೌ.ಮ.ಉಮಾಪತಿ ಶಾಸ್ತ್ರಿ
ಧರ್ಮಸ್ಥಳ

ಗ್ರಂಥ ವಿಮರ್ಶೆ

೧. ಶ್ರೀ ವಾಸವಾಂಬಾ ಪುರಾಣ - ಒಂದು ಅವಲೋಕನ

(ಪ್ರ : ಬಿ.ಎಂ.ಶ್ರೀ. ಪ್ರತಿಷ್ಠಾನ, ಸಂ.: ಸಾವಿತ್ರಮ್ಮ ರಾಮಸ್ವಾಮಿ; ಅಷ್ಟದಳ ಡೆಮಿ - ಪುಟ 174 2003. ರೂ.150/-)

ನಮ್ಮ ಪುರಾಣ, ಪುಣ್ಯಕಥೆಗಳಲ್ಲಿ ಚತುರ್ವರ್ಣಗಳ ಪ್ರಸ್ತಾಪ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತದೆ. ಅವುಗಳಲ್ಲಿ ಬ್ರಾಹ್ಮಣ,ಕ್ಷತ್ರಿಯ,ವೈಶ್ಯ , ಶೂದ್ರ ಎಂದು ಪ್ರಮುಖವಾಗಿ ಗುರುತಿಸಲಾಗಿದೆ. ಈ ಪ್ರಮುಖ ಜಾತಿಗಳಲ್ಲಿ ಒಂದಾದ ವೈಶ್ಯ ಜನಾಂಗ ವ್ಯಾಪಾರ, ಕೃಷಿ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು,ಆರ್ಥಿಕವಾಗಿ ಬಲಿಷ್ಠವಾಗುತ್ತ ರಾಜ ಮನ್ನಣೆ, ಸಾಮಾಜಿಕ ಮನ್ನಣೆಯನ್ನು ಪಡೆಯುತ್ತ ಬಂದಿದೆ.ಮೊದಲಿಗೆ ವರ್ಣವ್ಯವಸ್ಥೆಯಲ್ಲಿ ಹೆಚ್ಚಿನ ಕಟ್ಟು ಪಾಡುಗಳಿಲ್ಲದೆ, ಈ ನಾಲ್ಕುಜಾತಿಗಳ ನಡುವೆ ಕೋಡು, ಕೊಡುವಿಕೆಗಳು ನಿರಾತಂಕವಾಗಿ ನಡೆಯುತ್ತ ಬಂದಿದ್ದರೂ ನಂತರದಲ್ಲಿ ಕ್ರಮೇಣ ಜಾತಿಗಳ ನಡುವೆ ಅಡ್ಡಗೋಡೆಗಳೆದ್ದು ಸಮಾಜದಲ್ಲಿ ಶ್ರೇಷ್ಠ ಕನಿಷ್ಠ ಎಂಬ ತಾರತಮ್ಯ ಪ್ರಾರಂಭವಾಯಿತು. ಆದರೆ ಎಲ್ಲ ಜಾತಿಯವರೂಬ್ರಾಹ್ಮಣ ಸಂಸ್ಕೃತಿಯನ್ನು ಅನುಸರಿಸುವ ಪ್ರಕ್ರಿಯೆಯಲ್ಲಿ ಧಾರ್ಮಿಕ ಚಿಂತನೆ,ದೇವರುಗಳ ಪರಿಕಲ್ಪನೆ, ಆಚಾರ,ವಿಚಾರ, ವಿಧಿ,ನೇಮ,ವ್ರತ,ಪೂಜೆ -ಎಲ್ಲದರಲ್ಲೂ ಅವರನ್ನೇ ಅನುಸರಿಸ ತೊಡಗಿದರು. ಪ್ರತಿಯೊಂದು ಜಾತಿ, ವರ್ಗಕ್ಕೆ ಒಬ್ಬೊಬ್ಬ ದೇವರು ಅನಿವಾರ್ಯವಾಯಿತು. ಬ್ರಾಹ್ಮಣರುಪೂಜೆ, ವ್ರತ, ಹೋಮಾದಿ ಗಳನ್ನು ಮಾಡುತ್ತಾ, ಮಾಡಿಸುತ್ತ ಜೀವನೋಪಾಯಕ್ಕೆ ದಾರಿಯನ್ನು ಕಂಡುಕೊಂಡರು. ಅವರಿಗೆ ಸಮಾಜದಲ್ಲಿ ಹೆಚ್ಚಿನ ಮರ್ಯಾದೆ ಸಲ್ಲುತ್ತಿತ್ತು. ಒಂದು ಹಂತದಲ್ಲಿ ಅವರು ಅಪರ ದೇವತೆಗಳಾದರು. ಸಮಾಜದ ಎಲ್ಲ ಜಾತಿ ವರ್ಗಗಳಿಗೆ ಒಬ್ಬೊಬ್ಬ ದೇವರನ್ನು ನಿಗದಿತವಾಗಿ ಸೃಷ್ಟಿಸಿಕೊಡುವ ಪ್ರಯತ್ನದಲ್ಲಿ ಜಾತಿ ಸಂಬಂಧ ದೇವರ ಪುರಾಣಗಳು ಹುಟ್ಟಿಕೊಂಡವು. ಪುರಾಣಗಳಿಗೆ ಐತಿಹಾಸಿಕ ನಿಖರತೆಯ ಅಗತ್ಯವಿಲ್ಲ. ಹಾಗಾಗಿ ಆರ್ಯ ವೈಶ್ಯ ಜನಾಂಗಕ್ಕೂ ಒಬ್ಬ ದೇವತೆಯಸೃಷ್ಟಿ ಅನಿವಾರ್ಯ ವಾಗಿರಬೇಕು. 'ವಾಸವಾಂಬಾ' ಕಥಾ ಪರಂಪರೆಗೆ ಹೆಚ್ಚಿನ ಪ್ರಾಚೀನತೆ ಇದ್ದಂತಿಲ್ಲ. ತೀರಾ ಪ್ರಾಚೀನವೆಂದು ಭಾವಿಸ ಲಾಗಿರುವ, ಸಂಸ್ಕೃತ ಭಾಷೆಯಲ್ಲಿರುವ 'ವೈಶ್ಯವಂಶ ಸುಧಾಕರಂ' ಎಂಬುದನ್ನು ಬಿಟ್ಟರೆ, ವೈಶ್ಯ ಗುರುವೆಂದು ಭಾವಿಸಲಾಗಿರುವ ಭಾಸ್ಕರಾಚಾರ್ಯರು ರಚಿಸಿರುವ 'ವೈಶ್ಯ ಪುರಾಣಮು' (1932) ಕಾವ್ಯಗ್ರಂಥ, 'ಶ್ರೀಮತ್ ಕನ್ಯಕಾ ಪುರಾಣಮು'(1951), 'ಶ್ರೀ ವಾಸವಿ ಕನ್ಯಕಾ ಪುರಾಣಮು' ಎಂಬ ಗ್ರಂಥಗಳ ಹೊರತು ಮತ್ಯಾವ ಪುರಾಣಗಳು 'ವಾಸವಾಂಬಾ'ಗೆ ಸಂಬಂಧಿಸಿದಂತೆ ಲಭ್ಯವಿಲ್ಲ.

ಇಂತಹ ಸಂದರ್ಭದಲ್ಲಿ, 1932ಕ್ಕೂ ಮುಂಚೆ 1928ರಲ್ಲಿ ಬೇಟೆರಾಯ ದೀಕ್ಷಿತರು ರಚಿಸಿರುವ 'ಶ್ರೀವಾಸವಾಂಬಾ ಪುರಾಣಂ' ಎಂಬುದು ಪ್ರಾಚೀನತೆಯ ದೃಷ್ಟಿ

ಯಿಂದ ಮಹತ್ವದ್ದೆನಿಸಿದರೂ ಅದರ ಸಾಹಿತ್ಯಿಕಮೌಲ್ಯ ಐತಿಹಾಸಿಕತೆಗಳ ಬಗ್ಗೆ ಚರ್ಚೆಯಾಗ ಬೇಕೆನಿಸುತ್ತದೆ. ವೈಶ್ಯಕುಲದೇವತೆಯಾದ 'ವಾಸವಾಂಬಾ' ಈ ಕೃತಿಕಾರರು ಚಿತ್ರಿಸಿರುವಂತೆ 'ದೈವಾಂಶ ಸಂಭೂತಳು' ಪಾರ್ವತಿಯೇ ವಾಸವಾಂಬಾ ಆಗಿ ಜನಿಸುತ್ತಾಳೆ. ಈ ಪುರಾಣ ಮತ್ತು ಇನ್ನೂ ಪ್ರಚಲಿತ ಪುರಾಣಗಳಲ್ಲಿನ 'ವಾಸವಾಂಬಾ' ಕತೆ ಸ್ವಲ್ಪ ಮಟ್ಟಿಗೆ 'ಅಕ್ಕಮಹಾ ದೇವಿ' ಕಥೆಯನ್ನು ಹೋಲುತ್ತದೆ. ಶಿವಭಕ್ತರ ಮಗಳಾದ ಅಕ್ಕಮಹಾದೇವಿ ಹುಟ್ಟಾ ಶಿವಭಕ್ತೆ. ಕೌಶಿಕನು ಅವಳ ಅನುಪಮ ಸೌಂದರ್ಯಕ್ಕೆ ಮೆಚ್ಚಿ ಮದುವೆಯಾಗಲು ಒತ್ತಾಯ ತಂದರೆ, ಆಕೆಯ ತಂದೆ ತಾಯಿಗಳು ಆತ 'ಭವಿ' ಯಾದ ಕಾರಣ ಮಗಳನ್ನು ಕೊಡಲು ಹಿಂಜರಿದರೆ, ಇಲ್ಲಿ ವಾಸವಾಂಬಾ ತಂದೆತಾಯಿಗಳು ಕುಲಭ್ರಷ್ಟತೆಯ ಕಾರಣದಿಂದಾಗಿ ನಿರಾಕರಿಸುತ್ತಾರೆ. ಆದರೆ ಎರಡೂ ಕಥೆಗಳಲ್ಲಿ ಕಡೆಗೆ ಮದುವೆ ಅನಿವಾರ್ಯ ವಾಗುತ್ತದೆ. ಅಕ್ಕ ಮಹಾದೇವಿ ಷರತ್ತುಗಳೊಂದಿಗೆ ಮದುವೆಯಾಗಿ, ಷರತ್ತುಗಳನ್ನು ಅತಿಕ್ರಮಿಸಿದನೆಂಬ ಕಾರಣಕ್ಕೆ ರಾಜನನ್ನು,ರಾಜ್ಯವನ್ನು, ತಂದೆ ತಾಯಿ ಎಲ್ಲರನ್ನೂ ತೊರೆದು ವಿರಾಗಿಯಾಗಿ ,ತನ್ನ ಅಲೌಕಿಕ ಪತಿಯಾದ ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತಾ ಹೋಗಿ ಅವನಲ್ಲಿ ಕಡೆಗೆ ಐಕ್ಯವಾಗುತ್ತಾಳೆ. ಆದರೆ ಇಲ್ಲಿ ರಾಜನ ಬೆದರಿಕೆಯಿಂದ ಕುಲಾತಿಕ್ರಮಣ ಮಾಡಿ ಮದುವೆಗೆ ಒಪ್ಪಿದರೂ, ಮದುವೆಯ ಸಮಯದಲ್ಲಿಯೇ ಕುಲಭ್ರಷ್ಟತೆ, ಧರ್ಮ ಹಾನಿಗಳನ್ನು ತಪ್ಪಿಸಲು ಮದುಮಗಳ ಸಹಿತವಾಗಿ ಒಂದು ಜಾತಿ ಸಮುದಾಯವೇ ಅಗ್ನಿ ಪ್ರವೇಶ ಮಾಡುತ್ತದೆ.

ದಕ್ಷಯಜ್ಞದಲ್ಲಿ, ತಂದೆಯಾದ ದಕ್ಷನ, ತನ್ನ ಪತಿ ಕುರಿತಾದ ಕಠೋರ ಮಾತು ಗಳನ್ನು ಸಹಿಸಲಾಗದೆ ಬೆಂಕಿಯಲ್ಲಿ ಆತ್ಮಾಹುತಿ ಮಾಡಿಕೊಂಡ ಪಾರ್ವತಿಗೆ, 'ವಾಸವಾಂಬಾ' ಅವತಾರದಲ್ಲಿಯೂ ಅಗ್ನಿಪ್ರವೇಶ ಸಮಸ್ಯೆಯಾಗುವುದಿಲ್ಲ.

ಈ ಕೃತಿಯ ಕರ್ತೃಗಳಾದ ಬೇಟೆರಾಯ ದೀಕ್ಷಿತರು ವಿದ್ವಾಂಸರು, ಕಾವ್ಯ ಪುರಾಣ ಗಳ ವಿಚಾರವನ್ನು ಆಳವಾಗಿ ಅಭ್ಯಸಿಸಿ ತಿಳಿದವರು – ವೃತ್ತಿಯಲ್ಲಿ ಉಪಾಧ್ಯಾಯರಾದರೂ ಪ್ರವೃತ್ತಿಯಲ್ಲಿ ಸೃಜನಶೀಲ ಬರಹಗಾರರು. ಜೊತೆಗೆ ರಾಮಾಯಣ,ಮಹಾಭಾರತಾದಿಗಳ ಪ್ರವಚನಕಾರರೂ ಆಗಿದ್ದವರು, ದೈವ ಪ್ರೇರಣೆಯಿಂದ ನಗರೇಶ್ವರ ದೇವಾಲಯದಲ್ಲಿ ದೇವರ ಸಮ್ಮುಖದಲ್ಲಿ ಈ ಕೃತಿಯನ್ನು ಹುಬ್ಬಳ್ಳಿಯ ವೈಶ್ಯೋತ್ತಮರ ಕೋರಿಕೆಯಂತೆ ರಚಿಸಿದ್ದೆಂದು ಹೇಳಿಕೊಂಡಿದ್ದಾರೆ.

ಇದು 'ಪುರಾಣ ಕೃತಿ'ಯಾಗಿರುವುದರಿಂದ , ಕಥಾ ನಿರೂಪಣೆಯ ಕ್ರಮ ಪುರಾಣಗಳಲ್ಲಿರುವಂತೆಯೇ ಇದ್ದು, ಪರಿಸರವೂ ಕೂಡಾ ಅರಣ್ಯ, ಋಷಿ ಮುನಿಗಳು, ತಪಸ್ವಿಗಳು,ಜಾತಿವೈರವನ್ನು ಮರೆತು ವಾಸಿಸುವ ಪ್ರಾಣಿಗಳು ಮೊದಲಾದ ವಿವರಗಳೊಂದಿಗೆ ಕೂಡಿದೆ. ಕಥಾನಾಯಕಿಯೂ ಕಾರಣ ಸ್ತ್ರೀಯಾಗಿರುತ್ತಾಳೆ. ವೈಶ್ಯಕುಲ ತಪಸ್ವಿಗಳು ಎಲ್ಲಾ ಪುರಾಣಗಳನ್ನು ಕೇಳಿದ್ದರೂ ವೈಶ್ಯಪುರಾಣವನ್ನು ಕೇಳಿಲ್ಲದ ಕಾರಣ, ಅದನ್ನು ಕೇಳ ಬಯಸಿ

ದುದರ ಪರಿಣಾಮವಾಗಿ ಸಾಲಂಕಾಯನ ಮುನಿ ಈ ಪುರಾಣವನ್ನು ಹೇಳಿದಂತೆಯೇ ಕಾವ್ಯದಲ್ಲಿ ಪುನರುಕ್ತವಾಗಿದೆ.

ಬ್ರಹ್ಮನ ತೊಡೆಯಿಂದ ಹುಟ್ಟಿದ ವೈಶ್ಯರು ಕೃಷಿ, ವ್ಯಾಪಾರ, ಯಾಗ,ಯಜ್ಞ ದಾನಧರ್ಮಾದಿಗಳಲ್ಲಿ ತೊಡಗಿಸಿಕೊಂಡರು, ಜನೋಪಕಾರಿ ಕೆಲಸಕಾರ್ಯಗಳಲ್ಲಿ ನಿರತರಾದರು,ಕೇವಲ ಲೌಕಿಕ ಸುಖಗಳಲ್ಲಿಯೇ ಇರಲು ಇಚ್ಚಿಸದೆ ಶಿವನ ಸಾನ್ನಿಧ್ಯ ಬಯಸಿ ತಪೋನಿರತರಾದರು. ತಮ್ಮ ಪುಣ್ಯಫಲದಿಂದ ಕೈಲಾಸ ಸೇರಿದರೂ ಮತ್ತೆಭೂಮಿಗೆ ಬರುವ ಸನ್ನಿವೇಶ ಏರ್ಪಡುತ್ತದೆ. ಹರಿಹರನ ಕಾವ್ಯಗಳಲ್ಲಿ ಕಾಣುವಂತೆಯೇ ಕೈಲಾಸದಲ್ಲಿ ಶಿವಗಣಗಳಿಂದ ಆಗುವ ಅಚಾತುರ್ಯದ ಪರಿಣಾಮವಾಗಿ ಭೂಲೋಕದಲ್ಲಿ ಹುಟ್ಟುವ ಶಿಕ್ಷೆ ಜಾರಿಯಾಗುವಂತೆ ಇಲ್ಲಿಯೂ ವೈಶ್ಯಶ್ರೇಷ್ಠ ಸೋಮಕಾಂತನ ಮಗಳನ್ನು ಚಿತ್ರಕಂಠನೆಂಬ ಗಂಧರ್ವ ಬಯಸಿದ ಕಾರಣ, ಪರಸ್ಪರ ಶಾಪ,ವಿಶಾಪಗಳ ಮುಖಾಮುಖಿಯಾಗಿ, ಭೂಲೋಕದಲ್ಲಿ ಜನಿಸುವ ಅನಿವಾರ್ಯತೆ ಉಂಟಾಗುತ್ತದೆ. ಸೋಮಕಾಂತನ ದುಃಖ ,ಮಗಳ ದುಃಖ, ಪಾರ್ವತಿಯೇ ಭೂಲೋಕದಲ್ಲಿ ಮಗಳ ರೂಪದಲ್ಲಿ ಜನಿಸಿ ಬರುವೆನೆಂಬ ಭರವಸೆಗೆ ಪ್ರಚೋದನೆಯಾಗುತ್ತದೆ.

ಸೋಮಕಾಂತನೇ ಭೂಲೋಕದಲ್ಲಿ ಕುಸುಮಶ್ರೇಷ್ಠಿಯಾಗಿ, ಕುಸುಮಾಂಬೆಯೇ ಹೆಂಡತಿಯಾಗಿ, ಸಂತಾನಕ್ಕಾಗಿ ವ್ರತ,ಪೂಜೆ ಹೋಮಗಳನ್ನು ಮಾಡಿ ಪಾರ್ವತಿಯನ್ನೇ ಮಗಳಾಗಿ ಪಡೆಯುತ್ತಾರೆ. ಗಂಧರ್ವ ಚಿತ್ರಕಂಠ, ವಿಷ್ಣುವರ್ಧನ ದೊರೆಯಾಗಿ ಮತ್ತೆ ಭೂ ಲೋಕದಲ್ಲಿ ಎದುರಾಗುತ್ತಾರೆ. ಪೂರ್ವ ಜನ್ಮ ಸ್ಮರಣೆ ಇಲ್ಲವಾದರೂ ಅನಭಿಜ್ಞತೆಯ ಜೊತೆಗೇ ಹಿಂದಿನ ಶತ್ರುತ್ವ ಹೆಣ್ಣಿನ ವಿಚಾರವಾಗಿ ಮುಂದುವರಿಯುತ್ತದೆ. ಅದೇ ಅಲೌಕಿಕ ಸೌಂದರ್ಯದೊಂದಿಗೆ ಅವತರಿಸಿದ ಪಾರ್ವತಿ,ವಾಸವಾಂಬೆಯಾಗಿ,ವಿಷ್ಣುವರ್ಧನನ ಕಣ್ಣಿಗೆ ಬಿದ್ದು ಸಮಸ್ಯೆಹುಟ್ಟಿಕೊಳ್ಳುತ್ತದೆ. ಅವಳನ್ನು ಜಾತಿಯಿಂದ ಕ್ಷತ್ರಿಯನಾದರೂ ರಾಜ ನಾದ ಕಾರಣ, ಮದುವೆ ಮಾಡಿಕೊಡಲು ಒತ್ತಾಯಿಸುತ್ತಾನೆ. ವರ್ಣಸಂಕರ, ಕುಲ ಧರ್ಮಾ ತಿಕ್ರಮಣ ಭೀತಿಯಿಂದ ಕುಸುಮಶ್ರೇಷ್ಠಿಯ ನಿರಾಕರಣೆ ರಾಜನ ಆಗ್ರಹಕ್ಕೆ ದಾರಿ ಮಾಡು ತ್ತದೆ. ಕುಲವನ್ನೇ ನಾಶಮಾಡಲು ಹೊರಟ ವಿಷ್ಣುವರ್ಧನನನ್ನು ಎದುರಿಸಲು, ಕುಲನಾಶವನ್ನು ತಪ್ಪಿಸಲುಹೋಮಾಗ್ನಿಗೆ ತಾವೆಲ್ಲರೂ ಆಹುತಿಯಾಗಲು ನಿಶ್ಚಯಿಸುತ್ತಾರೆ. ಆ ವಿಚಾರದಲ್ಲಿ ಕುಲದ ಪ್ರತಿನಿಧಿಗಳೊಂದಿಗೆ ಚರ್ಚೆಯಾಗಲು ಒಂದು ಗುಂಪಿನವರು ಮಾತ್ರವೇ ಪರವಾಗಿ ನಿಂತು ಕುಸುಮ ಶ್ರೇಷ್ಠಿಯ ಕುಟುಂಬದವರೊಡನೆ ಅಗ್ನಿಗೆ ಆಹುತಿ ಯಾಗುತ್ತಾರೆ. ಹೀಗೆ ಆಹುತಿಯಾದ ಕುಲದವರು ಶ್ರೇಷ್ಠರೆನಿಸಿಕೊಂಡು ಅವರದೇ ಒಂದು ಕವಲಾಗುತ್ತದೆ. ಮತ್ತೆ ಮಾಮೂಲಿಯಂತೆ ಆಹುತಿಯಾದವರು, ಪಾರ್ವತಿಯಾದ ಕನ್ನಿಕಾ ಪರಮೇಶ್ವರಿ ಅಥವಾ ವಾಸವಾಂಬೆ ತನ್ನನ್ನು ಹಿಂಬಾಲಿಸಿ ಬಂದವರೊಂದಿಗೆ ಕೈಲಾಸ ಸೇರುತ್ತಾಳೆ. ಇದಿಷ್ಟೂ ಈ ಪುರಾಣ ಕಾವ್ಯದ ಕಥಾ ಹೂರಣ.

ವಾಸವಾಂಬೆಯ ಪ್ರಸಂಗ ಐತಿಹಾಸಿಕವೆನ್ನುವವರೂ ಇದ್ದಾರೆ. ಆದರೆ ತತ್ಸಂಬಂಧಿ ಇತಿಹಾಸವನ್ನು ಅಗೆದು ತೆಗೆಯಬೇಕಿದೆ. ಅಲ್ಲಿಯವರೆಗೆ ದೇವತೆಯಾಗಿ ಪೂಜೆ ಗೊಳ್ಳುತ್ತಿರುವ ಕನ್ಯಕಾ ಪರಮೇಶ್ವರಿ ಪುರಾಣ ಪರಿವೇಶದೊಂದಿಗೆ ಇರುವುದನ್ನೇ ಭಕ್ತ ಸಮುದಾಯ ಒಪ್ಪಿಕೊಳ್ಳುತ್ತದೆ. ಭಕ್ತಿ ಪೂಜೆಗಳು ವೇದ ಪುರಾಣೋಕ್ತ ದೇವತೆಗಳಿಗೆ ಸಲ್ಲುವಂತೆ ಐತಿಹಾಸಿಕ ವ್ಯಕ್ತಿಗಳಿಗೆ ಸಲ್ಲುವುದಿಲ್ಲ. ಆದರೆ ಬುದ್ಧ,ಏಸು,ಬಸವ ಮೊದ ಲಾದವರು ಇರುವವರಾದರೂ ಪೂಜಾ ವಿಧಾನಗಳೇ ಬೇರೆಯಾಗುತ್ತವೆ. ಅವರ ಐತಿಹಾಸಿಕತೆಯನ್ನು ಒಪ್ಪಿಕೊಳ್ಳುತ್ತಲೇ ಅವರಿಗೆ ಶ್ರದ್ಧಾಭಕ್ತಿಗಳನ್ನು ಸಲ್ಲಿಸುತ್ತೇವೆ.

ವಾಸವಾಂಬಾ ಅಥವಾ ಕನ್ಯಕಾ ಪುರಾಣದಲ್ಲಿನ ದೇವತೆ ಪಾರ್ವತಿಯೆಂದೇ ನಂಬಿಕೆಯೊಂದಿಗೆ ಪ್ರಚಲಿತವಾಗಿದೆ. ಆದ್ದರಿಂದ ಇಲ್ಲಿ ಕರ್ತೃ ಈ ಕೃತಿಯನ್ನು ಭಕ್ತಿಯ ತೀವ್ರತೆಯೊಂದಿಗೆ ಮತ್ತು ಸಾಕ್ಷಾತ್‌ವಾಸವಾಂಬೆಯ ಮುಖೇನ ಕೇಳಿದ್ದನ್ನು ಬರಹಕ್ಕಿಳಿಸಿದೆ ನೆಂಬ ವಿನಯವಂತಿಕೆಯೊಂದಿಗೆ ಬರೆದಿರುವುದರಿಂದ, ಶಿವ-ಪಾರ್ವತಿ ಸ್ತುತಿ ಮುಖ್ಯ ವಾಗುತ್ತದೆ. ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾಗಿ ದೀಕ್ಷಿತರು 'ಸ್ತೋತ್ರಧಾರೆ'ಯಲ್ಲಿ ತಮ್ಮ ಪಾಂಡಿತ್ಯ, ಭಕ್ತಿ ವಿನಯಗಳನ್ನು ಅಭಿವ್ಯಕ್ತಿಸಿದ್ದಾರೆ. ಕಥೆಯ ಎಳೆ ತೆಳುವಾದ್ದು. ಆದರೆ ವರ್ಣನೆ,ಸ್ತೋತ್ರಗಳು ಪ್ರಧಾನವಾಗಿ ಕಾವ್ಯಕ್ಕೆ ಒಂದು ಅಲೌಕಿಕತೆಯ ಸೊಗಡು ಏರ್ಪಟ್ಟಿದೆ.

ಶ್ರೀವಾಸವಾಂಬಾ ನವರತ್ನ ಮಾಲಿಕಾ ಸ್ತೋತ್ರ, ಶಿವ-ಸ್ತೋತ್ರ, ಶ್ರೀನಗರೇಶ್ವರ ಸ್ತೋತ್ರ (ಪಂಚರತ್ನ ಶಿವಸ್ತೋತ್ರ) ದೇವೀ ಪಂಚರತ್ನ ಸ್ತೋತ್ರ ಇತ್ಯಾದಿ ಸ್ತೋತ್ರ ಭಾಗವಲ್ಲದೆ ಹನ್ನೆರಡು ಅಧ್ಯಾಯಗಳಲ್ಲಿ ಕಾಲವರ್ಣನೆ, ತಪೋವರ್ಣನೆ, ಕೈಲಾಸಗಮನಂ ಇತ್ಯಾದಿಯಾಗಿ ಹಂತ ಹಂತವಾಗಿ ಕಥಾ ನಿರೂಪಣೆ ಬರುತ್ತದೆ. ವಿದ್ವಾಂಸರೂ ಕೃತಿಕಾರರೂ ಆಗಿರುವ ದೀಕ್ಷಿತರು ನಮ್ಮ ಪ್ರಾಚೀನ ಕಾಲದ ಪುರಾಣ ಪರಂಪರೆಯನ್ನು ಬಲ್ಲವರು. ಆದ್ದರಿಂದ ತಮ್ಮ ಈ ಕನ್ಯಕಾಪರಮೇಶ್ವರಿ ಅಥವಾ ವಾಸವಾಂಬಾ ಪುರಾಣವನ್ನೂ ಅದೇ ಜಾಡಿನಲ್ಲಿ ರಚಿಸಿದ್ದಾರೆ. ಇಲ್ಲಿ ಕಾವ್ಯದ ಸೂಕ್ಷ್ಮತೆಗಳು, ಪ್ರತಿಮಾ ಪ್ರತೀಕಗಳು ಮುಖ್ಯ ವಾಗುವುದಿಲ್ಲ. ಭಕ್ತಿ ಪರಿವೇಶದೊಂದಿಗೆ ಎಲ್ಲೆಲ್ಲಿ ಧ್ಯಾನ ,ತಪಸ್ಸು, ದೇವಿ,ದೇವತೆಗಳ ಮಹಿಮೆ ಬರುವುದೋ ಅಲ್ಲಿ ಕೃತಿಕಾರರ ಪ್ರತಿಭೆ ಗರಿ ಬಿಚ್ಚಿಕೊಳ್ಳುತ್ತದೆ. ಆದ್ದರಿಂದ ಅನ್ಯ ಸಾಹಿತ್ಯ ಕೃತಿಗಳ, ಕಾವ್ಯಗಳ ನಿಷ್ಠುರ ವಿಮರ್ಶೆ, ವಸ್ತುನಿಷ್ಠವಿಮರ್ಶೆ ಇಲ್ಲಿ ಅಪ್ರಸ್ತುತ ವೆನಿಸುತ್ತದೆ. ನೇರ ಕಥಾನಿರೂಪಣೆಯ ಸಂದರ್ಭದಲ್ಲಿ ಒಮ್ಮೊಮ್ಮೆ ಶಬ್ದಾಲಂಕಾರಗಳು, ಅಪರೂಪಕ್ಕೆ ಅರ್ಥಾಲಂಕಾರ, ಶ್ಲೇಷೆಗಳು ಕಾಣಿಸಿಕೊಳ್ಳುತ್ತವೆ. ತೀರಾ ಅಪರೂಪವೆನ್ನುವಂತೆ ಒಂದೊಂದೆಡೆ ಅದ್ಭುತವಾದ ರೂಪಕಗಳು ಕಾಣಿಸಿಕೊಂಡಿವೆ. ಇಲ್ಲಿಶಿವನೇ ಸರ್ವಶಕ್ತ, ಸರ್ವವ್ಯಾಪಿ, ಕಾಲರೂಪನೂ ಎಲ್ಲಕ್ಕೂ ಆಧಾರವಾಗಿರುವವನೂ, ಸರ್ವಜ್ಞನೂ, ಸರ್ವ ಭಾವನೆಗಳುಳ್ಳವನೂ ಚಿಂತನೆಗೆ ಸಿಲುಕದ ರೂಪ ಹೊಂದಿರುವವನೂ ಆದ ಭಗವಾನ್ ಶಿವನು ಅಹಂಕಾರಿಗಳಾದ ಅಸುರರನ್ನು ಅದರಲ್ಲೂ ತ್ರಿಪುರಾಸುರನನ್ನು ಕೊಲ್ಲಲು ಹೊರಟ

ಶಿವನ ವಿರಾಟ ರೂಪದ ವರ್ಣನೆ ರೋಮಾಂಚನಕಾರಿಯೆನಿಸುತ್ತದೆ. ಇಲ್ಲಿ ಶಿವನ ಒಂದು ಸಮಗ್ರ ವಿರಾಟ್‌ರೂಪವೊಂದು ದರ್ಶನವಾಗುತ್ತದೆ. ಅವನು ಸಮರಕ್ಕೆ ಹೊರಟದ್ದು ಹೀಗೆ: - ಚಂದ್ರ,ಸೂರ್ಯರನ್ನು ಕಣ್ಣುಗಳಾಗಿ ಹೊಂದಿ,ಭೂಮಿಯನ್ನು ರಥವಾಗಿಸಿ ಕೊಂಡು,ಮೇರುಪರ್ವತವನ್ನು ಬಿಲ್ಲಾಗಿಸಿ ಶೇಷನನ್ನು ಹೆದೆಯಾಗಿಸಿ ಸರ್ವವ್ಯಾಪಿಯಾದ ನಾರಾಯಣನನ್ನು ಬಾಣವಾಗಿಸಿ, ನಾಲ್ಕು ವೇದಗಳನ್ನು ರಥಾಶ್ವಗಳಾಗಿಸಿ ಬ್ರಹ್ಮನನ್ನೇ ಸಾರಥಿ ಮಾಡಿಕೊಂಡ. ಸೂರ್ಯ,ಚಂದ್ರರನ್ನು ಚಕ್ರಗಳಾಗಿಸಿದ; ಅಗ್ನಿಯಿಂದ ಬಾಣಹೂಡಿದ, ಇಂದ್ರಾದಿಗಳು ಸೈನಿಕರಾದರು. ನಾಗಗಳು ಹಗ್ಗವಾದವು. ಈ ನೆಲೆಯಲ್ಲಿ ಹೊರಟು ತ್ರಿಪುರಗಳನ್ನು ಅಸುರರನ್ನು ಧ್ವಂಸಮಾಡಿದ - ಎಂದು ಶಿವನ ವಿರಾಟ್‌ಶಕ್ತಿ,ಸ್ವರೂಪಗಳನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

'ವಾಸವಾಂಬಾ' ಪುರಾಣಕ್ಕೆ ದಕ್ಷಯಜ್ಞ ಧ್ವಂಸ, ಗಿರಿಜಾಕಲ್ಯಾಣ ಪ್ರಸಂಗಗಳು ನೇರ ಸಂಬಂಧವಿಲ್ಲವೆಂದೆನಿಸಿದರೂ ವಾಸವಾಂಬೆ ಬೇರೆ ಯಾರು ಅಲ್ಲದೆ ಪಾರ್ವತಿಯೇ ಆಗಿರುವುದರಿಂದ ಅವಳ ಪೂರ್ವ ವೃತ್ತಾಂತಗಳು ಅನಿವಾರ್ಯವೂ ಪೂರಕವೂ ಆಗಿದೆಯೆಂದು ಎನಿಸಿರ ಬೇಕು. ಆದ್ದರಿಂದಲೇ ಆ ಎರಡೂ ಪ್ರಸಂಗಗಳು ಪಾರ್ವತಿ ಸಂದರ್ಭದಲ್ಲಿ ಔಚಿತ್ಯಪೂರ್ಣವೇ ಆಗಿವೆ.

ಈ ಪುರಾಣ ಕೃತಿಯ ರಚನೆಯ ಹಿನ್ನೆಲೆಗೆ ಒಂದು ನಿರ್ದಿಷ್ಟವಾದ ಆಶಯವಿದೆ. ದೈವೀ ಶಕ್ತಿಯ ಹಿರಿಮೆ ಭಕ್ತಿಯ ಅನಿವಾರ್ಯತೆಗಳನ್ನು ಎತ್ತಿಹಿಡಿಯುವುದು ಮತ್ತು ಆದಿಶಕ್ತಿ, ಪಾರ್ವತಿ ಅಂತಹವರಿಗೂ ಭಕ್ತರ ಮುಂದೆ ಅವರ ಭಕ್ತಿಗೆ ಒಲಿದುಸೋತು, ಅಭೀಷ್ಟಗಳನ್ನು ನೆರವೇರಿಸಲು ಸ್ವತಃ ಅವತಾರಗಳನ್ನು ಎತ್ತಿ ಭೂಲೋಕಕ್ಕೆ ಬರಲೇಬೇಕಾದ ವಿವಶತೆಯನ್ನು ತೋರಿಸುವುದು ಮುಖ್ಯ ಉದ್ದೇಶವಾಗಿದೆ. ಸ್ವತಃ ಭಕ್ತಿ ಮನೋಧರ್ಮದ ಕವಿಯಾಗಿರುವ ದೀಕ್ಷಿತರು ಈ ಕೃತಿ ರಚನೆಯನ್ನು ಭಕ್ತಿ ತಾದಾತ್ಮ್ಯತೆಯೊಂದಿಗೆ ಮಾಡಿದ್ದಾರೆ. ಆದ್ದರಿಂದಲೇ ಈ ಕೃತಿಯಲ್ಲಿ ಬರುವ ಸ್ತೋತ್ರಗಳ ಸರಣಿ ಭಕ್ತಿರಸ ಸ್ನಿಗ್ಧವಾಗಿದೆ. ಶ್ಲೇಷೆಯಿಲ್ಲದ ಭಾಷೆ, ಸರಳ ನಿರೂಪಣೆಯಿಂದ ಸುಲಭ ಗ್ರಾಹ್ಯವಾಗಿದೆ.

ಪುರಾಣ ಪರಿವೇಶಗಳಿಂದ ಮುಕ್ತಗೊಳಿಸಿ, ಪ್ರಾಚೀನ ಕಥಾನಕಗಳನ್ನು,ಪುರಾಣ ಸಂದರ್ಭಗಳನ್ನು ಬಿಡಿಸಿ ಸಮಕಾಲೀನಗೊಳಿಸುವ ಪ್ರಯತ್ನಗಳು ನಡೆಯುತ್ತಿರುವಾಗ 20ನೇ ಶತಮಾನದಲ್ಲಿ ಮತ್ತೊಂದು ಪುರಾಣದ ಪ್ರಸ್ತುತತೆಯ ಬಗ್ಗೆ ಯೋಚನೆ ಮಾಡು ವಂತಾದರೂ ಒಂದು ಕುಲ ಅಥವಾ ಜಾತಿ ಸಮುದಾಯ ಹಿಂದಿನಿಂದ ನಂಬಿ ಆರಾಧಿಸುತ್ತಾ ಬಂದಿರುವ ಕುಲದೇವತೆಯೊಬ್ಬಳನ್ನು ಕುರಿತು ಅಷ್ಟಾಗಿ ಚರಿತ್ರೆ, ಪುರಾಣಗಳು ಇಲ್ಲದಿರು ವಾಗ, ಈ ಪುರಾಣ ಕೃತಿ 1928ರಲ್ಲಿ ರಚಿತವಾಗಿ, ಐತಿಹಾಸಿಕ ದೃಷ್ಟಿಯಿಂದ,ಕಾಲದ ದೃಷ್ಟಿಯಿಂದ ಪ್ರಾಚೀನವೆನಿಸುವುದರ ಮೂಲಕ ಮಹತ್ವವನ್ನು ಪಡೆದಿದೆ.

ಈ ಹಿನ್ನೆಲೆಯಲ್ಲಿ ಇದರ ಐತಿಹಾಸಿಕ ಸಂಗತಿಗಳತ್ತ ಬೆಳಕು ಚೆಲ್ಲುತ್ತಿರುವ ಪ್ರೊ||

ನಾ. ಗೀತಾಚಾರ್ಯರ ' ಕನ್ನಡದಲ್ಲಿ ವಾಸವಾಂಬಾ ಪುರಾಣ ಗ್ರಂಥಗಳು' ಎಂಬ ಅನುಬಂಧದ ಲೇಖನ ಉಪಯುಕ್ತವಾಗಿದೆ. ಈ ದೃಷ್ಟಿಯಲ್ಲಿ ಅಧ್ಯಯನ, ಸಂಶೋಧನೆಗಳು ನಡೆದಲ್ಲಿ ಕುತೂಹಲಕರ ಸಂಗತಿಗಳು ಹೊರಬೀಳುವ ಸಾಧ್ಯತೆಯಿದೆ.

ಸಂಸ್ಕೃತದ ಈ ಮೂಲ ಕೃತಿಯನ್ನು ಶ್ರೀಮತಿ ಎಸ್.ಕೆ. ಲಕ್ಷ್ಮಿ ಅವರು ಮೂಲಕ್ಕೆ ನಿಷ್ಠರಾಗಿಯೂ ಸಮರ್ಥವಾಗಿ ಅನುವಾದಿಸಿ, ಪುರಾಣ ಪರಂಪರೆಗೆ ಕನ್ನಡ ಭಾಷೆಯಲ್ಲಿ ಒಂದು ಪುರಾಣಕಾವ್ಯವನ್ನು ಸೇರಿಸಿ ಉಪಕರಿಸಿದ್ದಾರೆ.

ಗ್ರಂಥವನ್ನು ಬೇಟೆರಾಯದೀಕ್ಷಿತರ ಸೊಸೆಯೂ (ಪುತ್ರ ಪ್ರೊ॥. ಬಿ. ರಾಮಸ್ವಾಮಿಯವರ ಪತ್ನಿ) ಕನ್ನಡ ಲೇಖಕಿಯೂ-ನಿವೃತಿ ಅಧ್ಯಾಪಕಿಯೂ ಆದ ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ ಅವರು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಬಿ.ಎಂ. ಶ್ರೀ. ಪ್ರತಿಷ್ಠಾನ ಅಂದವಾಗಿ ಮುದ್ರಿಸಿದೆ. ಪೀಠಿಕೆ, ಪರಿಶಿಷ್ಟ , ಅನುಬಂಧಗಳಲ್ಲಿ ಅಗತ್ಯವಾದ ಕವಿ-ಕಾವ್ಯ ವಿಚಾರಗಳನ್ನೂ ಪ್ರವಚನ -ಪಾರಾಯಣಕಾರರಿಗೆ ಅಗತ್ಯವಾದ ಕಥಾಸಾರ, ಸ್ತೋತ್ರಗೀತೆಗಳನ್ನೂ ಅಧ್ಯಯನಾಸಕ್ತರಿಗೆ ಹೊಸ ಐತಿಹಾಸಿಕ ಸಂಗತಿಗಳನ್ನೂ ಕೊಡುವ ಮೂಲಕ ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಲಾಗಿದೆ. ಇಂಥದೊಂದು ಗ್ರಂಥದ ಪ್ರಕಟನೆಯ ಮೂಲಕ ಬಿ.ಎಂ.ಶ್ರೀ. ಪ್ರತಿಷ್ಠಾನ ತನ್ನ ವಿದ್ವತ್ತೆಯ ನಿಷ್ಠೆಯನ್ನು ಸಾದರಪಡಿಸಿದೆ.

– ಡಾ॥ ವಿಜಯ ಸುಬ್ಬರಾಜ್

೨.'ಪಂಚತಂತ್ರದ ಕಥನಕವನಗಳು'

ಬೇಡರೆಡ್ಡಿಹಳ್ಳಿ ಪಂಪಣ್ಣನವರು 'ದುರ್ಗಸಿಂಹ ಕವಿಯ ಕರ್ನಾಟಕ ಪಂಚತಂತ್ರ ಕೃತಿ ಆಧಾರಿತ ಕಥನ ಕವನಗಳು , 4ನೇ ಭಾಗವನ್ನು ರೂಪಾಂತರ ಮಾಡಿದ್ದಾರೆ. (ಕಥನ ಕವನಗಳು, ಭಾಗ - 4, ಬೇಡರೆಡ್ಡಿಹಳ್ಳಿ ಪಂಪಣ್ಣ ,ಹೇಮಂತ ಸಾಹಿತ್ಯ, ಬೆಂಗಳೂರು 2003, 126 ಪುಟ -, ಬೆಲೆ. - 60 ರೂ.) ಇದಕ್ಕೂ ಮೊದಲು ಇದೇ ಮಾದರಿಯ ಇನ್ನೂ ಮೂರು ಭಾಗಗಳನ್ನು ಪ್ರಕಟಿಸಿದ್ದು ದುರ್ಗಸಿಂಹನ 4 ಕಥೆಗಳನ್ನು,ಅಷ್ಟೇ ಕಥನ ಕವನಗಳಲ್ಲಿ ಹಿಡಿದಿಟ್ಟಿರುವ ಸಾಹಸ ನಿಜಕ್ಕೂ ಅಭಿನಂದನೀಯ.

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲೇ ಇದೊಂದು ಹೊಸ ಬಗೆಯ ಪ್ರಯತ್ನ . ಈ ಕಥೆಗಳೆಲ್ಲ ಗದ್ಯದಲ್ಲಿ ಸಾಕಷ್ಟು ಬಂದಿವೆ. ಪದ್ಯಮಾದರಿಯಲ್ಲಿ ಇದೇ ಮೊದಲು ಎಂದು ನನ್ನ ತಿಳುವಳಿಕೆ. ಅಲ್ಲೊಂದು ಇಲ್ಲೊಂದು ಪ್ರಸಿದ್ಧ ಕಥೆಗಳ ಪದ್ಯರೂಪದ ಬಿಡಿ ಬಿಡಿ ಪ್ರಯತ್ನ ಆಗಿರಲೂಬಹುದು. ಆದರೆ ಪಂಪಣ್ಣನವರ ಈ ಪ್ರಯತ್ನಕ್ಕಂತೂ ಅವರೇ ಮೊದಲು, ದುರ್ಗಸಿಂಹನ ಇಡೀ ಕೃತಿಯನ್ನು ಮಕ್ಕಳಿಗಾಗಿ ಪದ್ಯರೂಪದಲ್ಲಿ ಅನುವಾದ

ಮಾಡಿರುವುದು ಸ್ತುತ್ಯರ್ಹವಾಗಿದೆ.

ಅನುವಾದ ಎಂದರೆ ಪದಶಃ ಅನುವಾದವಲ್ಲ. ಭಾವಾನುವಾದ ಅಥವಾ ಪುನಃಸೃಷ್ಟಿ. ಹೊಸದೇನನ್ನೂ ಇಲ್ಲಿ ಅಷ್ಟಾಗಿ ಸೇರಿಸದಿದ್ದರೂ ಬದಲಾವಣೆಗಳನ್ನೂ ಮಾಡಿಕೊಳ್ಳದೆ ಕಥೆಗಳ ಸ್ವಾರಸ್ಯ ಕೆಡದಂತೆ ಪದ್ಯದ ಭಾವಕ್ಕೆ ಅಳವಡಿಸಿ ಹೇಳುವ ಕಲೆ ಪಂಪಣ್ಣನವರಿಗೆ ಕರಗತವಾಗಿದೆ. ಒಂದು ಕಥೆಗೆ ಒಂದು ಪದ್ಯದಂತೆ ಒಟ್ಟು 54 ಪದ್ಯಗಳಿವೆ. ಇವುಕಥಾ ಪ್ರಧಾನವಾಗಿರುವುದರಿಂದ ಇದನ್ನು ಕಥನ ಕವನಗಳು ಎಂದೇ ಕರೆದಿದ್ದಾರೆ ಮತ್ತು ಪದ್ಯಗಳಿಗೂ ಉದ್ದನೆಯ ಸಾಲುಗಳ ವಿವರಣಾತ್ಮಕ ಹೆಸರುಗಳನ್ನೇ ಕೊಟ್ಟಿದ್ದಾರೆ. (ಉದಾ: ಕಾಗೆಗಳ ಮೇಲೆ ವೈರಸಾಧಿಸಿ ವಂಶ ನಿರ್ಮೂಲನ ಮಾಡಿಕೊಂಡ ಗೂಬೆಗಳ 'ಆಪ್ತರ ಚಾಡಿ ಮಾತುಕೇಳಿ ಗೆಳೆಯ ವೃಷಭನನ್ನು ಕೊಂದ ಸಿಂಹ ' (ಇದು 'ಕರಟಕ-ದಮನಕರ ಕಥೆ' ಎಂದೇ ಪ್ರಸಿದ್ಧವಾಗಿದೆ. ಇದನ್ನೂ ಕಂಸದಲ್ಲಿ ಸೂಚಿಸಿದ್ದಾರೆ)

ಪದ್ಯದಲ್ಲಿ ಮಕ್ಕಳ ಮನಸ್ಸಿಗೆ ಸೊಗಸಾಗಿಯೇ ಮಿಡಿದಿರುವ ಪಂಪಣ್ಣನವರು ಶೀರ್ಷಿಕೆಗಳತ್ತ ಏಕೋ ಗಮನಹರಿಸಿದಂತಿಲ್ಲ. ಮಕ್ಕಳಿಗೆ ಹಿಡಿಸುವಂತೆ ಚಿಕ್ಕ ಚಿಕ್ಕ ಶೀರ್ಷಿಕೆಗಳನ್ನು ಕೊಟ್ಟಿದ್ದರೆ ಇನ್ನೂ ಹೆಚ್ಚು ಆಕರ್ಷಣೀಯವಾಗುತ್ತಿತ್ತು ಎನಿಸದಿರದು. ಇದೇ ರೀತಿ ಪುಸ್ತಕದ ಶೀರ್ಷಿಕೆಯೂ ಕೂಡ. ಪಂಪಣ್ಣನವರ ಸ್ವಂತಿಕೆ ಅಡಗಿರುವುದು ಪ್ರತಿ ಕಥೆಗಳ ಕೊನೆಯಲ್ಲಿರುವ ಸಾರರೂಪದ ಪದ್ಯಗಳಲ್ಲಿ. ಇಡೀ ಕಥೆಯ ಸಾರವನ್ನು ನಾಲ್ಕು ಸಾಲುಗಳಲ್ಲಿ ಧ್ವನಿಸಿ ತಮ್ಮ ಕವಿಪ್ರತಿಭೆಯನ್ನು ಮೆರೆದಿದ್ದಾರೆ. ಇವು ನಿಜಕ್ಕೂಚೆನ್ನಾಗಿವೆ.

ತಮ್ಮಯ ಸ್ವಾರ್ಥಕ್ಕೆ ಅನ್ಯರು ಅಳಿದರು
ಗಣಿಸದ ಕಲ್ಲೆದೆ ಪಾಪಿಗಳು
ಎಲ್ಲೆಡೆ ಇರುವರು ಇವರಿಂ
ಸುಜನರ ಬಾಳಿಗೆ ಬರುವುವು ಕುತ್ತುಗಳು

ಇದು 'ಕರಟಕ ದಮನಕರ ಕಥೆ'ಗೆ ಕೊಟ್ಟಿರುವ ಸಾರಲೇಖ;ಇಂದಿನ ಸಮಾಜಕ್ಕೂ ಅನ್ವಯಿಸುವ ಚಿಕಿತ್ಸಕ ಗುಣ ಇದರಲ್ಲಡಗಿದೆ. ಕಥೆಯ ಕೊನೆಯಲ್ಲಿ ಬರುವ ಇಂತಹ ಪದ್ಯಗಳು ಇಡೀ ಕಥೆಗಳಿಗೆ ಸಮಕಾಲೀನತೆಯನ್ನು ತಂದುಕೊಡುವ ಮೂಲಕ ಈ ಕೃತಿ ಪ್ರಸ್ತುತವಾಗುತ್ತದೆ. ಈ ಅನುವಾದದ ಹಿಂದೆ ಕೆಲಸ ಮಾಡಿರುವ ಕವಿಮನದ ಉದ್ದೇಶಕ್ಕೆ ಇದು ಸಮರ್ಥ ಉತ್ತರವಾಗಿಯೂ ಶೋಭಿಸುತ್ತದೆ.

ಪದ್ಯಗಳನ್ನು ಕಟ್ಟಿಕೊಡುವಲ್ಲಿಯೂ ಪಂಪಣ್ಣನವರ ಕವಿತಾಶಕ್ತಿ ಸೊಗಸಾಗಿ ಕೆಲಸ ಮಾಡಿದೆ. ಮಕ್ಕಳ ಕವಿತೆಗಳ ಮುಖ್ಯಲಕ್ಷಣಗಳಾದ ನಿಯತವಾದ ಲಯ, ಪ್ರಾಸಾನುಪ್ರಾಸಗಳ ಜೋಡಣೆ, ಛಂದೋಬದ್ಧನಡೆ, ಮಕ್ಕಳ ಬಳಕೆಯ ಪದಗಳಲ್ಲೇ ಕಥೆ ಹೇಳುವ ಜಾಣ್ಮೆ ಇವೆಲ್ಲವನ್ನೂ ಪಂಪಣ್ಣನವರು ಸಾಧಿಸಿದ್ದಾರೆ.

ಮಕ್ಕಳ ಸಾಹಿತ್ಯದ ಹೆಸರಿನಲ್ಲಿ ಬರೀ ಗದ್ಯಸಾಹಿತ್ಯವೇ ವಿಜೃಂಭಿಸುತ್ತಿರುವ ಇತ್ತೀಚಿನ ದಿನಗಳಲ್ಲಿ ಅಪರೂಪಕ್ಕೆಂಬಂತೆ ಪಂಪಣ್ಣನವರ ಪದ್ಯಕೃತಿ ಗಮನ ಸೆಳೆಯುತ್ತದೆ.

ಮುದ್ರಣ ವಿನ್ಯಾಸದಿಂದಲೂ ಆಕರ್ಷಣೀಯವಾಗಿದೆ. ಅಲ್ಲಲ್ಲೆ ಬಳಸಿರುವ ರೇಖಾಚಿತ್ರಗಳು ಮಕ್ಕಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ದೀರ್ಘವಾದ ಪದ್ಯಗಳಿಗೆ ಇನ್ನೂ ಒಂದೆರಡು ಚಿತ್ರಗಳನ್ನು ಬಳಸಬಹುದಿತ್ತು ಎನಿಸುವಷ್ಟು ಸುಂದರವಾಗಿವೆ. ಇವರ ಪ್ರಯತ್ನಕ್ಕೆ ತಕ್ಕ ಬೆಲೆ ದೊರಕುವಂತಾಗಲಿ ಎಂದು ಆಶಿಸುತ್ತೇನೆ.

ನಾ. ಗೀತಾಚಾರ್ಯ

೩.ಮಧುರಸ್ಮೃತಿ – ಅಪರೂಪದ ಸಂಸ್ಮರಣ ಸಂಪುಟ

'ಮಧುರಸ್ಮೃತಿ' ಪ್ರೊ। ಬಿ. ರಾಮಸ್ವಾಮಿ ಸಂಸ್ಮರಣ ಸಂಪುಟ. ಪ್ರಧಾನ ಸಂಪಾದಕರು ಡಾ। ಟಿ.ವಿ. ವೆಂಕಟಾಚಲಶಾಸ್ತ್ರೀ, ಸಂ. ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ ಮತ್ತು ಪ್ರೊ॥ ನಾ. ಗೀತಾಚಾರ್ಯ. ಪ್ರ: ಪ್ರೊ॥ ಬಿ. ರಾಮಾಸ್ವಾಮಿ ಸಂಸ್ಮರಣ ಸಮಿತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಪುಟ, ೪೮೬. ಬೆಲೆ ೩೦೦=೦೦, ವರ್ಷ ೨೦೦೩ ಡೆಮ್ಮಿ ಅಷ್ಟದಳ.

ಈ ಗ್ರಂಥಕ್ಕೆ 'ಮಧುರಸ್ಮೃತಿ' ಎನ್ನುವ ಹೆಸರನ್ನು ಸೂಚಿಸಿದ್ದಕ್ಕೆ ಮತ್ತು ಈ ಗ್ರಂಥವನ್ನು ಸರ್ವಾಂಗ ಸುಂದರವಾಗಿ ಹೊರಬರಲು ಶ್ರಮಿಸಿರುವುದಕ್ಕೆ ನನ್ನ ಸ್ನೇಹಿತರೂ ಮುಖ್ಯ ಸಂಪಾದಕರೂ ಆದ ಪ್ರೊ। ಟಿ.ವಿ. ವೆಂಕಟಾಚಲಶಾಸ್ತ್ರಿಗಳನ್ನು ಅಭಿನಂದಿಸುತ್ತೇನೆ. ಪ್ರೊ। ರಾಮಸ್ವಾಮಿಗಳ ಸಂಬಂಧ ಬಂದವರೆಲ್ಲರಿಗೂ ಅವರ ಬಗೆಗಿನ ಸ್ಮೃತಿ "ಮಧುರಸ್ಮೃತಿ" ಎನ್ನುವುದರಲ್ಲಿ ಸಂದೇಹವಿಲ್ಲ.

ಇದರಲ್ಲಿಯ ಮೊದಲನೇ ಲೇಖನ ಶ್ರೀಮತಿ ಸಾವಿತ್ರಮ್ಮನವರದು. ಅದರ ಶೀರ್ಷಿಕೆ 'ಪ್ರವೇಶಿಕೆ', ಈ ಲೇಖನದ ಶೀರ್ಷಿಕೆ, ಲೇಖನದ ವಿಷಯ ಮತ್ತು ಈ ಲೇಖನವನ್ನು ಮೊದಲನೆಯದನ್ನಾಗಿ ಮಾಡಿರುವುದು. ಇವೆಲ್ಲಾ ಲೇಖಕರಿಗೂ ಮತ್ತು ಸಂಪಾದಕರಿಗೂ ಮೆಚ್ಚಿಗೆಯನ್ನು ತರತಕ್ಕಂಥ ವಿಷಯಗಳು; ಇದರಲ್ಲಿ ಪ್ರೊ। ರಾಮಸ್ವಾಮಿಯವರ ಜೀವನ ಚರಿತ್ರೆ. ಅವರ ವ್ಯಕ್ತಿತ್ವ, ಸ್ವಭಾವ, ಸಂಶೋಧನ ರೀತಿ, ಇತ್ಯಾದಿಗಳಿವೆ. ಇವೆಲ್ಲವುಗಳನ್ನು ಎಲ್ಲರಿಗಿಂತ ಸಹಜವಾಗಿ ಚೆನ್ನಾಗಿ ಬಲ್ಲ ಶ್ರೀಮತಿ ಸಾವಿತ್ರಮ್ಮನವರ ಬರಹ ಈ ಗ್ರಂಥಕ್ಕೆ ಒಂದು ವಿಧದಲ್ಲಿ ತಳಹದಿ. ಇನ್ನೊಂದು ವಿಧದಲ್ಲಿ ಕಿರೀಟಪ್ರಾಯವಾಗಿದೆ. ಶ್ರೀಮತಿ ಸಾವಿತ್ರಮ್ಮನವರು ಪ್ರೊ। ರಾಮಸ್ವಾಮಿಯವರ ಬಗೆಗೆ ಹೇಳಿದ್ದಕ್ಕೆ ಪೂರಕವಾಗಿ ಪ್ರೊ। ರಾಮಸ್ವಾಮಿಯವರು ಶ್ರೀಮತಿ ಸಾವಿತ್ರಮ್ಮನವರ ಕುರಿತು ಏನು ಹೇಳುತ್ತಿದ್ದರು ಎನ್ನುವ ವಿಷಯದಲ್ಲಿ ನನಗೆ ಗೊತ್ತಿರುವುದನ್ನು ಹೇಳುತ್ತೇನೆ. ಬೆಂಗಳೂರು ಆಕಾಶವಾಣಿಯಲ್ಲಿ "ಬಾಳುಬೆಳಕು" ಎನ್ನುವ "ವೃದ್ಧರಿಂದ ವೃದ್ಧರಿಗಾಗಿ ಭಾಷಣಗಳನ್ನು, ಡಾ। ಶ್ರೀಮತಿ ಜ್ಯೋತ್ಸ್ನಾ ಕಾಮತರು ನಿರ್ದೇಶಕರಾಗಿದ್ದಾಗ ಏರ್ಪಡಿಸಿದ್ದರು. ಈ ನಿರ್ದೇಶಕರಿಗೆ ರಾಮಸ್ವಾಮಿ ದಂಪತಿಗಳ ಪರಿಚಯ

---

*ಮಧುರಸ್ಮೃತಿ। ಪ್ರೊ॥ ಬಿ. ರಾಮಸ್ವಾಮಿ ಸಂಸ್ಮರಣ ಸಂಪುಟವನ್ನು ಬಿಡುಗಡೆ ಮಾಡಬೇಕಾಗಿದ್ದ ಡಾ॥ ಜಿ.ಎಸ್.ದೀಕ್ಷಿತ್ ಅವರು ಅನಾರೋಗ್ಯ ಕಾರಣದಿಂದ ಬರಲಾಗದುದಕ್ಕಾಗಿ ಬರೆದು ಕಳುಹಿಸಿದ ಭಾಷಣ.

ಚೆನ್ನಾಗಿದ್ದುದರಿಂದ ಈ ದಂಪತಿಗಳ ಸಂವಾದವನ್ನು ಈ ಮಾಲಿಕೆಯಲ್ಲಿ ಏರ್ಪಡಿಸಿದ್ದರು. ಇದೊಂದು ಅಪೂರ್ವ ಸಂವಾದವಾಗಿತ್ತು.

ಈ ಸಂವಾದದ ಧ್ವನಿ ಮುದ್ರಣದ ಪ್ರತಿ ಆಕಾಶವಾಣಿಯಿಂದ ಸಿಗುವದಾಗಿದ್ದರೆ ಈ ದಂಪತಿಗಳ ಧ್ವನಿಯನ್ನು ಅವರ ಅಭಿಮಾನಿಗಳು ಯಾವಾಗಲೂ ಕೇಳಬಹುದು. ಈ ಕಾರ್ಯಕ್ರಮವಾದ ಮೇಲೆ ಅದರಲ್ಲಿ ತಮಗಿಂತ ತಮ್ಮ ಶ್ರೀಮತಿಯವರು ಚೆನ್ನಾಗಿ ಮಾತನಾಡಿದರೆಂದು ಪ್ರೊ। ರಾಮಸ್ವಾಮಿಯವರು ಹೆಮ್ಮೆಯಿಂದ ನನಗೆ ಹೇಳಿದರು.

ಶ್ರೀಮತಿ ಸಾವಿತ್ರಮ್ಮನವರ ಲೇಖನವಲ್ಲದೆ, ಅವರ ಮಕ್ಕಳು, ಬಂಧುಗಳು, ಮತ್ತು ಪ್ರೊ। ರಾಮಸ್ವಾಮಿಯವರ ಸ್ನೇಹಿತರು, ಅಭಿಮಾನಿಗಳು, ವಿದ್ಯಾರ್ಥಿಗಳು, ಪ್ರೊಫೆಸರರ ಸರಳ ಸ್ವಭಾವ, ಸಜ್ಜನಿಕೆ, 'ಪಾಲಿಗೆ ಬಂದದ್ದು ಪಂಚಾಮೃತ'ವೆನ್ನುವ ಅವರ ಸಮಾಧಾನಸ್ವಭಾವ – ಇವುಗಳನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಈ ಪ್ರಶಂಸೆಯಲ್ಲಿ ಒಂದು ಸ್ವಾರಸ್ಯವೆಂದರೆ, ಅದೇ ಭಾವ, ಅದೇ ಭಾಷೆಗಳ ಪುನರುಕ್ತಿ ನೋಡಿದರೆ ಒಬ್ಬರು ಬರೆದದ್ದನ್ನು ಇನ್ನೊಬ್ಬರು ನೋಡಿ ಬರೆದಿದ್ದಾರೊ ಎನ್ನುವ ಹಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ ಅವರ ಸ್ನೇಹ, ಸರ್ವಜ್ಞ ಹೇಳಿದ ಹಾಗೆ "ಸಜ್ಜನರ ಸಂಗವದು ಹೆಜ್ಜೇನು ಮೆದ್ದಂತೆ" ಎನ್ನುವ ಹಾಗಿತ್ತು. ಅವರ ನೆಂಟರಿಗೆಲ್ಲಾ ಅವರ 'ರಾಮಣ್ಣ' ಸ್ಫೂರ್ತಿಯ ಸೆಲೆಯಾಗಿದ್ದರು.

ಈ ಸಂಸ್ಮರಣ ಗ್ರಂಥದ ಇನ್ನೊಂದು ಮುಖ್ಯ ಭಾಗ, ಅವರ ಸಂಶೋಧನೆಗಳು. ಅವರು ಸಂಶೋಧನೆ ಮಾಡುತ್ತಿದ್ದ ಬಗ್ಗೆ ಮತ್ತು ಅದನ್ನು ಪ್ರಾರಂಭಿಸಿದ ಬಗ್ಗೆ ಅವರೇ ಬರೆದ ಒಂದು ಲೇಖನವನ್ನು ಮೊದಲು ಓದಬೇಕು. ಅವರು ಒಂದು ಭಾಷಣವನ್ನು ಮಾಡಬೇಕಾದಾಗ ಆಗಲಿ ಅಥವಾ ಒಂದು ಲೇಖನ ಬರೆಯುವಾಗಲಾಗಲಿ ಒಂದೇ ವಿಷಯದ ಬಗ್ಗೆ ಮೂರು ನಾಲ್ಕು ತರಹ ಬರೆದಿಟ್ಟುಕೊಳ್ಳುತ್ತಿದ್ದರು. ಶ್ರೀಮತಿ ಸಾವಿತ್ರಮ್ಮ ಅವುಗಳನ್ನು ಸಂಗ್ರಹಿಸಿ ಕೊಟ್ಟದ್ದನ್ನು ಶ್ರೀ ಗೀತಾಚಾರ್ಯರು ಓದಿ ಒಂದು ಸುಸಂಬದ್ಧವಾದ ಲೇಖನವನ್ನಾಗಿ ಮಾಡುವಲ್ಲಿ ತಮ್ಮ ಕೌಶಲ್ಯವನ್ನು ಈ ಗ್ರಂಥದಲ್ಲಿ ತೋರಿಸಿದ್ದಾರೆ.

೧೯೮೫ರಲ್ಲಿ ನಾನೂ ಅವರೂ ಮೊದಲನೇ ಸಲ ಬೆಂಗಳೂರಿನಲ್ಲಿ ಸೇರಿದಾಗ ನಾನು ಅವರಿಗೆ ಹೇಳಿದ್ದೆ. 'ನಾನು ವಿಜಯನಗರದ ಕೃಷ್ಣದೇವರಾಯನ ಮೇಲೆ ಒಂದು ಪುಸ್ತಕವನ್ನು ಬರೆಯಬೇಕೆಂದಿದ್ದೇನೆ. ಈ ಕೆಲಸವನ್ನು ನಾವಿಬ್ಬರೂ ಸೇರಿ ಮಾಡಿದರೆ ಒಳ್ಳೆಯದು' ಎಂದು. ಅದಕ್ಕೆ ಅವರು ತಕ್ಷಣ ಒಪ್ಪಿಕೊಂಡರು. ಉದ್ದೇಶಿತ ಪುಸ್ತಕದಲ್ಲಿ ಎರಡು ಭಾಗಗಳಿದ್ದವು. ಒಂದು ರಾಜಕೀಯ ಇತಿಹಾಸ. ಇನ್ನೊಂದು ಸಾಂಸ್ಕೃತಿಕ ಇತಿಹಾಸ. ಮೊದಲನೆಯದನ್ನು ನಾನು ಬರೆಯಬೇಕು. ಎರಡನೆಯದನ್ನು ರಾಮಸ್ವಾಮಿಗಳು ಬರೆಯಬೇಕೆನ್ನುವುದು ನಮ್ಮ ಸೂಚನೆ. ಕೃಷ್ಣದೇವರಾಯನ ಕಾಲದ ಸಾಂಸ್ಕೃತಿಕ ಇತಿಹಾಸಕ್ಕೆ ಆಧಾರಗಳು, ಕನ್ನಡ, ತೆಲುಗು ಮತ್ತು ಸಂಸ್ಕೃತಗಳಲ್ಲಿವೆ. ಕನ್ನಡದಲ್ಲಿಯ ರಾಮಸ್ವಾಮಿಗಳ ಪಾಂಡಿತ್ಯಕ್ಕೆ ಈ ಗ್ರಂಥದಲ್ಲಿಯ ಅವರ ಲೇಖನಗಳು ಸಾಕ್ಷಿ. ಅವರು ಹೈದರಾಬಾದಿನಲ್ಲಿ ನೆಲೆಸಿದ್ದರಿಂದ ತೆಲುಗು ಸಾಹಿತ್ಯವನ್ನು ಬಲ್ಲವರಾಗಿದ್ದರು.

ಅವರ ತಂದೆ ವೇದಮೂರ್ತಿ ಬೇಟೆರಾಯ ದೀಕ್ಷಿತರ ಸಂಸ್ಕೃತ ಪಾಂಡಿತ್ಯದ ಬಗ್ಗೆ ರಾಮಸ್ವಾಮಿಗಳು ಈ ಗ್ರಂಥದಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಅಂತಹ ವಿದ್ವಾಂಸರಿಂದ ಇವರು ಸಂಸ್ಕೃತದಲ್ಲಿಯ ಜ್ಞಾನವನ್ನು ಬಳುವಳಿಯಾಗಿ ಪಡೆದಿದ್ದರು. ಹೀಗೆ ಕೃಷ್ಣದೇವರಾಯನ ಕಾಲದ ಸಾಂಸ್ಕೃತಿಕ ಜೀವನದ ಬಗ್ಗೆ ಬರೆಯಲು ರಾಮಸ್ವಾಮಿಗಳು ಹೇಳಿಮಾಡಿಸಿದ ವ್ಯಕ್ತಿಯಾಗಿದ್ದರು. ಅವರು ಮೊದಲು ಕೃಷ್ಣದೇವರಾಯನ ಜಾಂಬವತೀ ಕಲ್ಯಾಣವೆಂಬ ಸಂಸ್ಕೃತ ನಾಟಕವನ್ನು ಅಭ್ಯಾಸ ಮಾಡಿದರು. ಅದರ ಸ್ವಾರಸ್ಯವನ್ನು ನನಗೆ ಹೇಳಿದರು. ಅವರ ಪದ್ಧತಿ ಪ್ರಕಾರ ಆ ನಾಟಕದಿಂದ ಆಗಿನ ಕಾಲದ ಜನಜೀವನದ ಬಗ್ಗೆ ವಿಸ್ತಾರವಾದ ಟಿಪ್ಪಣಿಗಳನ್ನು ಬರೆದಿಟ್ಟುಕೊಂಡಿರಬೇಕು ಇವು ಸಿಕ್ಕರೆ, ಒಂದು ಲೇಖನವಾಗಬಹುದು. ಅದರಲ್ಲಿಯ ಸ್ವಲ್ಪ ಭಾಗವನ್ನು 'ಮಧುರಸ್ಮೃತಿ'ಯಲ್ಲಿ ಉಪಯೋಗಿಸಿದ್ದಾರೆ. ನಂತರ ಅವರು ಕೃಷ್ಣದೇವರಾಯನ ತೆಲುಗು ಪ್ರಬಂಧ ಆಮುಕ್ತಮಾಲ್ಯದ ಆಳವಾದ ಅಭ್ಯಾಸವನ್ನು ಮಾಡಿದರು. ಆ ಗ್ರಂಥದಲ್ಲಿರುವ 'ರಾಜನೀತಿ'ಯ ಬಗ್ಗೆ ಕರ್ನಾಟಕ ಇತಿಹಾಸ ಅಕಾಡೆಮಿಯ ಚಿತ್ರದುರ್ಗದ ಸಮ್ಮೇಳನದಲ್ಲಿ ಒಂದು ಪ್ರಬಂಧವನ್ನು ಓದಿದರು. ಅದು ಪ್ರಸ್ತುತ ಪುಸ್ತಕದಲ್ಲಿದೆ.

ನಮ್ಮ ದೇಶದಲ್ಲಿ ಕೌಟಿಲ್ಯನ ಕಾಲದಿಂದ ವಿಜಯನಗರದ ಅಂತ್ಯದವರೆಗೂ ರಾಜನೀತಿ ಶಾಸ್ತ್ರವನ್ನು ವಿದ್ವಾಂಸರು ಅಭ್ಯಾಸ ಮಾಡುತ್ತಿದ್ದಾರೆ. ಆ ಎಲ್ಲಾ ಬರೆಹಗಳಿಗಿಂತಲೂ ಕೃಷ್ಣದೇವರಾಯನ ಬರೆಹ ಭಿನ್ನವಾದದ್ದು ಮತ್ತು ವೈಶಿಷ್ಟ್ಯ ಪೂರ್ಣವಾದದ್ದು. ಹೇಗೆಂದರೆ ಹಿಂದಿನ ವಿದ್ವಾಂಸರೆಲ್ಲರೂ ರಾಜನೀತಿಶಾಸ್ತ್ರದ ತತ್ವಗಳಲ್ಲಿ ಮಾತ್ರ ವಿದ್ವಾಂಸರಾಗಿದ್ದರು. ಕೃಷ್ಣದೇವರಾಯನು ಅಂತಹ ವಿದ್ವಾಂಸನಾಗಿದ್ದನಲ್ಲದೆ, ಆ ತತ್ವಗಳನ್ನು ಆಚರಣೆಯಲ್ಲಿ ತಂದದ್ದರಿಂದ ಅವನ ಬರೆಹ ಇತರ ಎಲ್ಲಾ ಬರೆಹಗಳಿಗಿಂತಲೂ ಹೆಚ್ಚು ಉಪಯುಕ್ತ. ಆಮುಕ್ತಮಾಲ್ಯದದಲ್ಲಿ ಆಗಿನ ಕಾಲದ ಜನಜೀವನ ಸೊಗಸಾಗಿ ಮೂಡಿಬಂದಿದೆ. ಈ ಸೊಗಸನ್ನು ಪ್ರಸ್ತುತ ಪುಸ್ತಕದಲ್ಲಿ ನೋಡಬಹುದು. ಕೃಷ್ಣದೇವರಾಯನ ಬಗ್ಗೆ ರಾಮಸ್ವಾಮಿಗಳು ಬರೆದ ಇನ್ನೊಂದು ಮಹತ್ವದ ಬರವಣಿಗೆ 'ಕೃಷ್ಣದೇವರಾಯನ ದಿನಚರಿ' ಎನ್ನುವ ಪುಸ್ತಕವನ್ನು ಕುರಿತದ್ದು. ಇದೊಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಹೆಮ್ಮೆಯ ಪ್ರಕಟಣೆ. ತೆಲುಗಿನಲ್ಲಿ 'ರಾಯ ವಾಚಕಮು' ಎನ್ನುವ ಗ್ರಂಥ ಕನ್ನಡದ 'ದಿನಚರಿ'ಯನ್ನು ಹೋಲುತ್ತದೆ. ಇವೆರಡೂ ಗ್ರಂಥಗಳ ತೌಲನಿಕ ಅಭ್ಯಾಸವನ್ನು ರಾಮಸ್ವಾಮಿಗಳು ಮಾಡಿದ್ದಾರೆ. ಅವರು ರಾಯವಾಚಕವನ್ನು ತಮ್ಮ ಅನುಕೂಲಕ್ಕಾಗಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಈ ಎರಡೂ ಗ್ರಂಥಗಳು ಮೇಲ್ನೋಟಕ್ಕೆ ಹೋಲುತ್ತಿದ್ದರೂ ರಾಮಸ್ವಾಮಿಗಳು ಅವುಗಳ ಸೂಕ್ಷ್ಮವಾದ ಅಭ್ಯಾಸದಿಂದ ಅವುಗಳಲ್ಲಿಯ ವೈಷಮ್ಯವನ್ನು ತೋರಿಸಿದ್ದಾರೆ. ಹೀಗೆ ಕೃಷ್ಣದೇವರಾಯನ ಕಾಲದ ಸಾಂಸ್ಕೃತಿಕ ಇತಿಹಾಸಕ್ಕೆ ರಾಮಸ್ವಾಮಿಗಳ ಅನನ್ಯ ಕೊಡುಗೆಯನ್ನು ಪ್ರಸ್ತುತ ಪುಸ್ತಕದಲ್ಲಿ ನೋಡಬಹುದು.

ಸೋಮದೇವನ ನೀತಿ ವಾಕ್ಯಾಮೃತದ ನೇಮಿನಾಥನ ಕನ್ನಡ ಟೀಕೆಯನ್ನು ಪ್ರೊ। ರಾಮಸ್ವಾಮಿ, ಪ್ರೊ। ರಿತ್ತಿ ಮತ್ತು ನಾನು ಸೇರಿ ಸಂಪಾದಿಸಿದ್ದೇವೆ. ಪ್ರೊ। ರಾಮಸ್ವಾಮಿಯವರು ಈ ಕನ್ನಡ ಟೀಕೆಯನ್ನು ಕುರಿತು ಮಾಡಿದ ಒಂದು ಭಾಷಣ ಈ ಲೇಖನ ಸಂಗ್ರಹದಲ್ಲಿದೆ. ನಾವು ಮೂರು ಜನರು ಸೇರಿ ಈ ಟೀಕೆಯನ್ನು ಸಂಪಾದಿಸಿದ್ದರಿಂದ ಅದರಲ್ಲಿ ಯಾವ ಭಾಗ ಯಾರದು ಎಂದು ಹೇಳಲು ಬರುವುದಿಲ್ಲ. ಆದರೂ ಗ್ರಂಥಸಂಪಾದನ ಕಲೆಯನ್ನು ರಾಮಸ್ವಾಮಿಗಳು, ಪ್ರೊಫೆಸರುಗಳಾದ ವೆಂಕಣ್ಣಯ್ಯನವರು ಮತ್ತು ಡಿ.ಎಲ್.ನರಸಿಂಹಾಚಾರ್ಯರಿಂದ ಕಲಿತಿದ್ದರಿಂದ ನಮ್ಮ ನೀತಿ ವಾಕ್ಯಾಮೃತ ಮತ್ತು ಟೀಕೆಯ ಪಾಠವನ್ನು ಗುರುತಿಸುವಲ್ಲಿ ರಾಮಸ್ವಾಮಿಗಳ ಪಾತ್ರ ಹಿರಿದು ಎಂದು ಹೇಳಬಹುದು.

ಪ್ರಸ್ತುತ ಗ್ರಂಥದಲ್ಲಿ ವೀರಶೈವ ಸಾಹಿತ್ಯ ಮತ್ತು ಇತಿಹಾಸಗಳನ್ನು ಕುರಿತು ಅನೇಕ ಲೇಖನಗಳಿವೆ. ಇವೇ ಒಂದು ಪ್ರತ್ಯೇಕ ಗ್ರಂಥವೂ ಆಗಬಹುದು. ಈ ಭಾಗದಲ್ಲಿರುವ ಹೆಚ್ಚಿನ ಲೇಖನಗಳು ನಾನು ಅವರು ಸೇರಿ ಬಸವ-ಬಿಜ್ಜಳರ ಸಂಬಂಧ ಕುರಿತು ಬರೆಯಬೇಕೆಂದಿದ್ದ ಒಂದು ಪುಸ್ತಕದ ಸಲುವಾಗಿ ಅವರು ಮಾಡಿದ ಸಂಶೋಧನೆಯ ಫಲಗಳು: ಇನ್ನು ಕೆಲವು, ಅವರು ಪ್ರೊ। ಟಿ.ಎಸ್. ವೆಂಕಣ್ಣಯ್ಯ ಮತ್ತು ಪ್ರೊ। ಡಿ.ಎಲ್. ನರಸಿಂಹಚಾರ್ಯರು ವೀರಶೈವ ಸಾಹಿತ್ಯದಲ್ಲಿ ಮಾಡಿದ ಸಂಶೋಧನೆಯಿಂದ ಸ್ಫೂರ್ತಿಯನ್ನು ಪಡೆದು ಬರೆದ ಲೇಖನಗಳು. 'ವೀರಶೈವ ಪುರಾಣಗಳು' ಮತ್ತು 'ಸಿದ್ಧರಾಮ ಕೆಲವು ವಿಚಾರಗಳು' ಇವಕ್ಕೆ ಉದಾಹರಣೆಗಳು. ಬಾಡಾಲ ರಾಮಯ್ಯನವರ "ಬಸವೇಶ್ವರ ವಚನಾಲು – ಸಮಗ್ರ ಸಮೀಕ್ಷ "– ಎಂಬ ತೆಲುಗು ಗ್ರಂಥದ ಕೆಲವು ಭಾಗಗಳ ಕನ್ನಡ ಅನುವಾದ ಈ ಪುಸ್ತಕದಲ್ಲಿದೆ. ಅದೇರೀತಿ ಇನ್ನೊಂದು ತೆಲುಗು ಗ್ರಂಥ 'ನವನಾಥ ಚರಿತೆ'ಯ ಕೆಲವು ಭಾಗಗಳ ಅನುವಾದವು ಇಲ್ಲಿ ಇದೆ. ಇವೆಲ್ಲಾ ಬಸವ-ಬಿಜ್ಜಳರ ಸಂಬಂಧಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತವೆ. ಇದೇ ಉದ್ದೇಶದಿಂದ ರಾಮಸ್ವಾಮಿಗಳು ಅಣ್ಣಿಗೆರೆ, ತಾಳಿಕೋಟೆ, ಅಬ್ಬಲೂರು, ಎಮಟಿಗೆ ಮತ್ತು ಹಳೇಬೀಡುಗಳಲ್ಲಿರುವ ಕೆಲವು ಶಾಸನಗಳ ಕಾಲನಿರ್ಣಯ ಮಾಡುವಲ್ಲಿ ಮತ್ತು ಅರ್ಥೈಸುವುದರಲ್ಲಿ ಹಿಂದಿನ ವಿದ್ವಾಂಸರಿಂದ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಎಮಟಿಗೆ ಶಾಸನವನ್ನು ಅವರಿಗೆ ಅವರ ವಿದ್ಯಾರ್ಥಿ ಮತ್ತು ಅಭಿಮಾನಿಗಳಾದ ಪ್ರೊ। ಭೀಮಪ್ಪ ಸುರಪುರ ಇವರು ಪರಿಚಯಿಸಿದರು. ಅನೇಕ ವಿದ್ವಾಂಸರಿಗೆ ಈ ಶಾಸನ ಗೊತ್ತಿಲ್ಲ.

ಇಂತಹ ಅನೇಕ ಅಮೂಲ್ಯ ಲೇಖನಗಳು ಈ ಗ್ರಂಥದ ಮೂಲಕ ಕನ್ನಡ ಸಾಹಿತ್ಯ – ಸಂಶೋಧನೆ ವಲಯಕ್ಕೆ ತೆರೆದುಕೊಳ್ಳುತ್ತವೆ. ಹಾಗೆಯೇ ಪ್ರೊ॥ ಬಿ.ರಾಮಸ್ವಾಮಿಯಂತಹ ಘನ ವಿದ್ವಾಂಸರ ವಿದ್ವತ್ ನಿಷ್ಠೆಯೂ ದಾಖಲೆಯಾಗುತ್ತದೆ. ಈ ಪುಸ್ತಕವೇನಾದರೂ ಬರದೇ ಹೋಗಿದ್ದಿದ್ದರೆ ಪ್ರೊ॥ ರಾಮಸ್ವಾಮಿಗಳಂತಹ ಶ್ರೇಷ್ಠ ವಿದ್ವಾಂಸರು ಇದ್ದರೆಂಬುದೇ ಗೊತ್ತಾಗುತ್ತಿರಲಿಲ್ಲ. ಈ ದೃಷ್ಟಿಯಲ್ಲಿಯೂ ಇಂತಹ

ಸಂಪುಟಗಳು ಅತ್ಯಗತ್ಯವಾಗಿವೆ.

ರಾಮಸ್ವಾಮಿಯವರ ವಂಶದ ದಾಖಲೆಗಳನ್ನು ಪತ್ತೆಮಾಡಿ ಅವರ ವಂಶದ ಪ್ರಾಚೀನತೆ ಮತ್ತು ಇತಿಹಾಸ ಕುರಿತಾದ ಲೇಖನ ಎಲ್ಲಾ ಇತಿಹಾಸಕಾರರು ಮೆಚ್ಚತಕ್ಕಂಥದ್ದು. ಮತ್ತು ಅನುಸರಿಸ ತಕ್ಕದಂಥದ್ದು. ಇದಕ್ಕಾಗಿ ಸಂಪಾದಕರನ್ನು ಅಭಿನಂದಿಸಲೇಬೇಕು.

ಪುಸ್ತಕದ ಮುದ್ರಣ ಆಕರ್ಷಕವಾಗಿ ಆಗಿದೆ. ಹಾಗೆ ಆಗುವುದಕ್ಕೆ ಎಂದಿನಂತೆ ಮುತವರ್ಜಿವಹಿಸಿದ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ನಿಸ್ಪೃಹ ಕಾರ್ಯಕರ್ತರೂ ವಿದ್ವಾಂಸರೂ ಆದ ಶ್ರೀ ಗೀತಾಚಾರ್ಯರು ಮತ್ತು ರೋಟಗ್ರಾಫಿಕ್ಸ ನ ಮಾಲಿಕರಾದ ಶ್ರೀ ಆರ್.ಜಿ. ಪ್ರಸಾದ್ ಇವರು ವಿಶೇಷ ಅಭಿನಂದನಾರ್ಹರು. ಇಂತಹ ಬೃಹದ್ ಗ್ರಂಥವನ್ನು ಕನ್ನಡಿಗರಿಗೆ ಕೊಡಮಾಡಿದ ಪ್ರೊ. ರಾಮಸ್ವಾಮಿಗಳ ಬಂಧು ಬಳಗದವರೂ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಾರ್ಯಕರ್ತರೂ ಮತ್ತು ಸಂಪಾದಕರೂ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಡಾ॥ ಜಿ.ಎಸ್. ದೀಕ್ಷಿತ್

೪.ಮುನಿವಾಹನ (ನಾಟಕ)

ತೆಲುಗು ಮೂಲ : ಆಚಾರ್ಯ ಕೊಟಕಮಾರಿ ಇನಾಕ್ ಕನ್ನಡಕ್ಕೆ : ಡಾ॥ಆರ್.ಶೇಷಶಾಸ್ತ್ರಿ ಪ್ರಕಟಣೆ: ಜ್ಯೋತಿ ಗ್ರಂಥಮಾಲೆ, 129, ತಪೋವನ ನಗರ, ಅನಂತಪುರಂ - 515004.

ತೆಲುಗು ಮೂಲದ ''ಮುನಿವಾಹನಡು'' ಎಂಬುವ ನಾಟಕವನ್ನು ''ಮುನಿವಾಹನ'' ಎಂಬುದಾಗಿ ಡಾ॥ ಆರ್.ಶೇಷಶಾಸ್ತ್ರೀ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ನಾಟಕದ ವಸ್ತು, ಶ್ರೀವೈಷ್ಣವ ಆಳ್ವಾರರಲ್ಲಿ ಒಬ್ಬರಾದ ''ತಿರುಪಾಣಿ'' ಅವರ ಬದುಕಿನ ಪ್ರಸಂಗದಿಂದ ಆಯ್ದುದಾಗಿದ್ದು, ರಂಗದಲ್ಲಿ ಅಭಿನಯಕ್ಕೂ ಯಶಸ್ವಿ ಆಗಬಲ್ಲದೆನಿಸುತ್ತದೆ.

ತಿರುಪಾಣಿಯೆಂದು ಕನ್ನಡದಲ್ಲಿ ಬಹಳ ವರ್ಷಗಳ ಹಿಂದೆಯೆ ದಿ॥ಮಾಸ್ತಿ ಅವರು ಇದೇ ವಸ್ತುವಿನ ನಾಟಕ ರಚಿಸಿದ್ದು, ಅದೂ ರಂಗಭೂಮಿಯ ನಾಟಕವೇ ಆಗಿತ್ತು.

ಆಚಾರ್ಯ ರಾಮಾನುಜರಿಗೂ (ಕ್ರಿ.ಶ. 1017 - 1137) ಮೊದಲು ಶ್ರೀವೈಷ್ಣವ ಧರ್ಮ ಪ್ರಸಾರ ಆಗಿದ್ದುದು, ''ವೀರವೈಷ್ಣವರು'', ''ಶ್ರೀವೈಷ್ಣವ ನಿಷ್ಠರಾದ 'ಆಳ್ವಾರ' ಮಹನೀಯರಿಂದ ಹಾಗೂ ಅವರು ಹಾಡಿರುವ ''ನಾಲಾಯಿರ ದಿವ್ಯ ಪ್ರಬಂಧ - 'ತಿರುವಾಯ್ಮೊಳಿ' - ಪಾಶುರಗಳಿಂದ - ಹನ್ನೆರಡು ಜನ ಆಳ್ವಾರರಲ್ಲಿ ತಿರುಪಾಣಿಯೂ ಒಬ್ಬ ಮಹನೀಯ ಭಕ್ತಕವಿ.''ಅಮಲನಾದಿ ಪಿರಾನ್'' ಈತ ಹಾಡಿರುವ ದಿವ್ಯಪ್ರಬಂಧ . ಇಂದೂ ಶ್ರೀವೈಷ್ಣವರಲ್ಲಿ, ವಿಷ್ಣು ಆಲಯಗಳಲ್ಲಿ, ಈ ಪ್ರಬಂಧದ ಹಾಡಿಕೆಯುಂಟು.

ಪಾಣಿ ಜನಿಸಿದ್ದು 'ಪಂಚಮ'ರೆಂದು ಮನುಷ್ಯ ನಿರ್ಮಿತ ಜಾತಿಯೆಂಬುದರಲ್ಲಿ

ಈತ ಶ್ರೀರಂಗದ ಪರಿಸರದಲ್ಲಿ ಇದ್ದದ್ದು. ಕವಿ,ಗಾಯಕ,ಹಾಗೂ ಭಕ್ತಿಯಲ್ಲಿ ನರ್ತಿಸುತ್ತಿದ್ದುದು ಉಂಟು. ಶ್ರೀರಂಗದ ರಂಗನಾಥಸ್ವಾಮಿಯ ಪರಮಭಕ್ತ 'ಅಸ್ಪೃಶ್ಯ' ನೆಂದೆನ್ನಿಸಿದ ಪ್ರಯುಕ್ತ ಈತ, ಕಾವೇರಿ ತೀರದಲ್ಲಿ ಶ್ರೀರಂಗನ ದೇವಾಲಯಕ್ಕೆ (ಮುಖ್ಯದ್ವಾರ ಸಮೀಪ) ಅಭಿಮುಖವಾಗಿ ನಿಂತು ಭಕ್ತಿಗೀತಗಳನ್ನು ಹಾಡುತ್ತಿದ್ದ ಜೊತೆಗೆ ತನ್ನ 'ಪಾಣ'ವಾದ್ಯವನ್ನು ನುಡಿಸುತ್ತಿದ್ದ.

ದೇವಾಲಯದ ಪ್ರಧಾನ ಅರ್ಚಕರು ಲೋಕಸಾರಂಗ ಮುನಿ, ಅವರ ಶಿಷ್ಯರು ದೇವದತ್ತ ಹಾಗೂ ವೇದವೇದ್ಯರು, ಅಭಿಷೇಕ ಜಲ ತೆಗೆದು ದೇವಾಲಯದೊಳಗೆ ಹೋಗಲು ಅರ್ಚಕರು ಹೋಗುವ ದಾರಿಯಲ್ಲಿ ಪಾಣಿ, ಭಕ್ತಿಯಿಂದ ತನ್ಮಯನಾಗಿ ಕುಳಿತು ಬಿಡುತ್ತಾನೆ. ಎಷ್ಟು ಕೂಗಿದರೂ ಏಳದ ಪಾಣಿಗೆ ಲೋಕಸಾರಂಗರು ಕಲ್ಲಿನಿಂದ ಹೊಡೆದರು. ಕಲ್ಲು ಪಾಣಿಯ ತಲೆಗೆ ಬಡಿದು ರಕ್ತ ಚೆಲ್ಲಿತು.

ಕಲ್ಲು ತಗುಲಿತು ರಕ್ತ ಸುರಿಯಿತು
ಏನು ಆದುದೋ ಇಷ್ಟರಲ್ಲಿ
ನನಗೇನು ಆಯಿತೋ ಇಷ್ಟರಲ್ಲಿ
ರಂಗನಿಗೇನು ಆಯಿತೋ ಇಷ್ಟರಲ್ಲಿ
ಸೂರ್ಯಚಂದ್ರರು ಎದ್ದು ಬಾರದೆ
ನಿದ್ದೆ ಮಾಡುತ ಮಾಡುವರೋ
ದೇವಾದಿದೇವರು ಕಣ್ಣ ತೆರೆಯದೇ
ಧರ್ಮದೃಷ್ಟಿಯ ಬಿಟ್ಟರೊ - - -

ಎಂದು ಹಾಡಿದ

ಸ್ವಾಮಿರಂಗನಾಥನನ್ನು ಪೂಜಿಸಬಂದ ಲೋಕಸಾರಂಗಮುನಿಗಳಿಗೆ ರಂಗನಾಥನೇ ನುಡಿದಂತಾಯಿತು: "ನೀವು ತಿರುಪಾಣನನ್ನು ಹೊಡೆಯಬಾರದಿತ್ತು, ಭಕ್ತಿಗೆಲ್ಲಿಯ ಜಾತಿಬಂಧ? ಭಕ್ತ - ಭಗವಂತ ಇವರಿಬ್ಬರ ನಡುವೆ ಸೇತುವೆ, ಭಕ್ತಿ. ಅವನನ್ನು ನಿಮ್ಮ ಹೆಗಲಲ್ಲೇರಿಸಿಕೊಂಡು, ಇಲ್ಲಿ ನನ್ನ ಸನ್ನಿಧಿಗೆ ಕರೆತನ್ನಿರಿ. ಇಲ್ಲದಿದ್ದರೆ, ನಾನು ಇಲ್ಲಿರಲಾರೆ".

ಮುನಿಗಳು ಹೊರಬಂದು, ಪಾಣಿಯನ್ನು ಸಮೀಪಿಸಿ, ಆತ ಇವರು ಬಂದದ್ದು ತಿಳಿದು, ತನ್ನನ್ನು ಮುಟ್ಟುವರಲ್ಲ ಎಂದು ಓಡಿದ. ಇವರು ಹಿಂದೆಯೇ ಓಡಿ ಅವನನ್ನು ಹಿಡಿದು, ತಮ್ಮ ಹೆಗಲಮೇಲೆ ಇರಿಸಿಕೊಂಡು ನೇರ ಶ್ರೀರಂಗನಾಥನ ಸನ್ನಿಧಿಗೆ ಬಂದರು.

ತಿರುಪಾಣಿಯಾದರೋ ಭಕ್ತಿಯಿಂದ ಮೈಮರೆತು, ಹಾಡಿದರು, "ನಿನ್ನನ್ನು ಕಾಣದ ಕಣ್ಣುಗಳು ಬೇರೇನನ್ನೂ ನೋಡವು,ನೋಡಲಾರವು ನನ್ನ ತಂದೆ!"ಅಷ್ಟೆ. ರಂಗನಾಥನಲ್ಲಿ ಲೀನವಾಗಿ ಹೋದರು.

ನೀತಿ ನಿಯಮಗಳ ಹೆಸರಿನಲಿ ಕುಲವಂದು
ಹರಿದು ಹಂಚಿಹೋಗಿ ದೀನತನವಲಿ ಸಿಕ್ಕಿಬಿತ್ತು

ಜನರೆಲ್ಲ ಒಂದಾಗಿ, ಹೊಂದಿಕೆಯ ಬಾಳು ನಡೆಸುವ
ಸುಖದ ದಿನಗಳಿಗಾಗಿ ಹೊಸ ಬದುಕಿಗಾಗಿ ಬಯಸುವುದು ಒಳಿತು,

''ಮುನಿವಾಹನ್' ತಿರುಪಾಣಿಯ ಇನ್ನೊಂದು ಹೆಸರು.

ನಾಟಕದ ಅನುವಾದದಲ್ಲಿ ಸಾಹಿತ್ಯವಿದೆ, ಹಾಡಲು ಅನುವು ಕೊಡುವ ಗೀತಗಳು ಇವೆ. ಸಾಂಪ್ರದಾಯಿಕ ನಾಟಕ ಆದರೂ, ವಸ್ತು ಇಂದಿಗೂ ಸುಸಂಗತ ಆಗಿ ಇರುವುದರಿಂದ ಅಭಿನಯಕ್ಕೂ ತಕ್ಕುದೆನಿಸಿಕೊಳ್ಳಬಲ್ಲುದು.

" ಇದು ಮಾಧವನಾಳಿದ ಭೂಮಿ
ನರಮಾನವ ಮುಟ್ಟಿದ ಭೂಮಿ''
''ಹೆಂಗಳೊಂದಿಗೆ ನಲಿದ ಶ್ರೀಹರಿ
ಪಿಳ್ಳಂಗೋವಿಗೆ ಜೀವ ತುಂಬುತ
ಎಲ್ಲರೆದೆಯಲಿ ನಿಂತ ಕಮಲ ನಯನಾ
ಗೋವುಗಳ ಕಾಯ್ದು ಗೊಲ್ಲ ಭೂಪತಿ -'

ಹೀಗೆ ಅನೇಕ ಗೀತಗಳು ನಾಟಕದಲ್ಲಿ ಹಾಸುಹೊಕ್ಕಾಗಿದ್ದು ಲಯ ಮಾಧುರ್ಯ ವನ್ನು ತರುತ್ತವೆ.

' ಮುನಿವಾಹನ್ ಎಲ್ಲ ರೀತಿಯಲ್ಲಿ ಯಶಸ್ವಿ ಕೃತಿ ಎನಿಸಿಕೊಳ್ಳಬಲ್ಲುದು. ಇಂಥ ಕೃತಿಯನ್ನು ಕನ್ನಡಕ್ಕೆ ಪರಿಚಯಿಸಿದುದರ ಹಿನ್ನೆಲೆಯಲ್ಲಿ ಅನುವಾದಕರನ್ನು ಪ್ರಶಂಸಿಸ ಬೇಕಾಗುತ್ತದೆ.

-ಎನ್.ಕೆ.ರಾಮಶೇಷನ್

೫. ಶ್ರೀ ಕೃಷ್ಣಲೀಲಾ ಗಾನಂ

ಲೇಖಕರು – ಜಿ.ವಿಠಲರಾವ್. ಪುಟಗಳು:– ಡೆಮ್ಮಿ 1/8 – ಪು 192. ಬೆಲೆ ರೂ. 100. ಪ್ರಕಾಶಕರು: ಬಿ.ಎಂ.ಶ್ರೀ.ಪ್ರತಿಷ್ಠಾನ, ಎನ್.ಆರ್.ಕಾಲೋನಿ, ಬೆಂಗಳೂರು – 560019

ಬಿ.ಎಂ.ಶ್ರೀ ಪ್ರತಿಷ್ಠಾನದ ರಜತೋತ್ಸವ ಗ್ರಂಥ ಮಾಲೆಯಲ್ಲಿ ಐದನೆಯದಾಗಿ ಈ ಪದ್ಯಕೃತಿ ಪ್ರಕಟವಾಗಿದೆ. ಪ್ರತಿಷ್ಠಾನದ ಪಾಂಡಿತ್ಯಪೂರ್ಣ ಕಾರ್ಯಗಳಲ್ಲಿ ಪ್ರಮುಖವಾದುದು – ಮೌಲಿಕ ಪ್ರಕಟಣೆಗಳು, ಸುಮಾರು 60ಕ್ಕೆ ಮಿಕ್ಕಿ ಅಂಥವು ಪ್ರಕಾಶಿತವಾಗಿವೆ. ಶ್ರೀ ಕೃಷ್ಣಲೀಲಾಗಾನಂ ಎಂಬುದು ಸರಳ ಸುಂದರ ಗೇಯ ಕೃತಿ. ಲೇಖಕರ ವಿನಯೋಕ್ತಿಗಳಿವು – "ನನಗೆ ತೋರಿದಂತೆ ನಾನು ತಿಳಿದಿರುವ ತೆಲುಗು ಹಾಡುಗಳ ಮಟ್ಟಿನ ನನ್ನ ಅಲ್ಪ ಸಂಗೀತ ಜ್ಞಾನದಿಂದ ಈ ಹಾಡುಗಳನ್ನು ರಚಿಸಿದ್ದೇನೆ. ಕೇವಲ ಭಕ್ತಿಯಿಂದ ಭಗವಂತನನ್ನು ಸ್ತುತಿಸುವ ಉದ್ದೇಶದಿಂದ ನನಗೆ ತಿಳಿದಂತೆ ಗಾನ ಮಾಡಿದ್ದೇನೆ.

ಭಾಗವತದಲ್ಲಿ ಬರುವ ಶ್ರೀ ಕೃಷ್ಣಲೀಲೆಗಳೇ ಇಲ್ಲಿ ಕಥಾವಸ್ತು. ಕವನಗಳು 35 ಶೀರ್ಷಿಕೆಗಳಿಂದ ಕೂಡಿವೆ. 522 ಪದ್ಯಗಳುಳ್ಳವಾಗಿವೆ. ಎಲ್ಲ ಪದ್ಯಗಳ ಛಂದೋಗತಿ

ಒಂದೇ ತೆರನಾದುದು. ಎಂಟು ಪಾದಗಳುಳ್ಳುದು. ಅಲ್ಲಲ್ಲಿ ಭಾವಾನುಗುಣವಾಗಿ ರಾಗ ಸೂಚನೆಗಳಿವೆ. ಪ್ರಾರಂಭದಲ್ಲಿ ಹರಿಗುರು ಸ್ಮರಣೆಯಾಗಿ ಆರು ಪ್ರಚಲಿತ ಸಂಸ್ಕೃತ ಶ್ಲೋಕಗಳಿವೆ. ಇವುಗಳಲ್ಲಿ ತಪ್ಪುಗಳಾಗಿವೆ. ಇನ್ನುಳಿದ ಇವರವೇ ಆದ ರಚನೆಗಳು ಕನ್ನಡದಲ್ಲಿದ್ದು ಪರಿಶುದ್ಧವಾಗಿ ಅಂಶಗಣಕ್ಕೆ ಒಗ್ಗಿರುತ್ತವೆ. ಅಷ್ಟತಾಳ – ರೂಪಕತಾಳಗಳಿಗೆ ಅಳವಡುತ್ತವೆ. ಎರಡು ಪದ್ಯಗಳ ಉದಾಹರಣೆಯಿದ್ದು. ಶ್ರೀ ಕೃಷ್ಣನ ಜನನ ವಿಚಾರ –

ತ್ರೇತಾಯುಗದಲಿ – ಅವತರಿಸುವಾಗ
ಶೇಷ ಲಕ್ಷ್ಮಣ – ಹರಿರಾಮನಾದರು
ತಮ್ಮ ಲಕ್ಷ್ಮಣನು – ಅಣ್ಣ ರಾಮನಿಗೆ
ಅಸಮಾನ ಸೇವೆಯ – ಸಲಿಸಿದನು
ಪಟ್ಟಾಭಿಷೇಕದ – ಸಮಯದಲ್ಲಿ
ಲಕ್ಷ್ಮಣ ಬೇಡಿದ – ಒಂದು ವರವನು
ರಾಮನು ತನಗೆ ತಮ್ಮನು ಆಗಿ
ತನ್ನ ಆಜ್ಞೆಗಳ ಪಾಲಿಸಬೇಕೆಂದು ॥
ಲಕ್ಷ್ಮಣನ ಬಿನ್ನಪ ಕೇಳಿದ ರಾಮನು
ತಥಾಸ್ತು ಎಂದು ವರ ನೀಡಿದನು
ಆ ವರವನು ತಾನು ದ್ವಾಪರದಲ್ಲಿ
ಪೂರೈಸುವೆನೆಂದು ಮಾತು ಕೊಟ್ಟನು
ದ್ವಾಪರ ಯುಗವು ಬಂದೇ ಬಂದಿತು
ಆಸನ್ನವಾಯಿತು ಹರಿಜನ್ಮ ಕಾಲವು
ಋಷಿಗಳು ಮುನಿಗಳು – ದೇವಗಂಧರ್ವರು
ಕೌತುಕದಿಂದಲಿ – ಕಾಯುತಲಿದ್ದರು ॥

ಹೀಗೆ ಕಥಾವಸ್ತು ಕುತೂಹಲಕರವಾಗಿದೆ. ಪ್ರತಿಯೊಂದು ಪದ್ಯವೂ ಗೇಯ ಗುಣವನ್ನು ತಾಳಿ ಸೊಗಸಾಗಿದೆ. ಇಂಥ ರಚನೆ ಇತರರಿಂದ ಆದಂತಿಲ್ಲವೆಂದು ತೋರುತ್ತದೆ. ಕನ್ನಡಿಗರು ಪ್ರತಿಯೊಬ್ಬರೂ ಕೊಂಡಿಟ್ಟು ಓದಿ ಆನಂದಿಸಬಹುದಾದ ಕೃತಿಯಿದು ಎನ್ನಲಡ್ಡಿಯಿಲ್ಲ. ಈ ಕವಿಯ ಮತ್ತು ಕೃತಿ ಪ್ರಕಾಶನವನ್ನು ಕುರಿತು ಪ್ರಧಾನ ಸಂಪಾದಕ ಡಾ। ಟಿ.ವಿ.ವೆಂಕಟಾಚಲಶಾಸ್ತ್ರಿಯವರು ಮತ್ತು ಗೌ। ಕಾರ್ಯದರ್ಶಿ ಪ್ರೊ। ನಾ. ಗೀತಾಚಾರ್ಯರು ಉತ್ತಮ ಪೋಷಕ ವಿವರವನ್ನು ನೀಡಿ ಕೃತಿಗೆ ಆಕರ್ಷಣವನ್ನಿತ್ತಿದ್ದಾರೆ.

೬. ಗ್ರಂಥಸಂಪಾದನ ಪರಿಭಾಷಾ ಕೋಶ

ಲೇಖಕರು: ಡಾ। ಟಿ.ವಿ.ವೆಂಕಟಾಚಲಶಾಸ್ತ್ರೀ. ಪ್ರಕಾಶಕರು: ಬಿ.ಎಂ.ಶ್ರೀ. ಪ್ರತಿಷ್ಠಾನ ಗ್ರಂಥಪುಟಗಳು - ಡೆಮ್ಮಿ 1/8 - 72. ಬೆಲೆ: ರೂ. 36=00.

ಬಿ.ಎಂ.ಶ್ರೀ.ಪ್ರತಿಷ್ಠಾನದ ರಜತೋತ್ಸವ ಗ್ರಂಥಮಾಲೆಯಲ್ಲಿ ಮೂರನೆಯದಾಗಿ ಇದು ಪ್ರಕಾಶಿತವಾಗಿದೆ. ಗ್ರಂಥ ಸಂಪಾದನೆಯೆಂದರೆ - ಯಾರಿಂದಲೋ ರಚಿತವಾದುದನ್ನು ಎಲ್ಲಿಂದಲೋ ಪಡೆದು ಕೊಂಡಲ್ಲಿಗೆ ಕೊನೆಗೊಳ್ಳುವುದಿಲ್ಲ, ಆ ಹಸ್ತಪ್ರತಿ ತಾಳೆಗರಿಯದು ಆಗಿರಬಹುದು. ಯಾವಾಗಲೋ ಯಾರೋ ಬರೆದಿಟ್ಟುದಿರಬಹುದು. ಅದರಲ್ಲಿ ಅಕ್ಷರತಪ್ಪುಗಳಿರಬಹುದು. ಅರ್ಥ ಕೆಟ್ಟಿರಬಹುದು. ಪದ್ಯಕೃತಿಯಾಗಿದ್ದರಂತೂ ಅದರ ನಿಜವಾದ ಛಂದೋರೂಪದಲ್ಲಿ ಪ್ರತಿಮಾಡಿ ಶುದ್ಧಪಾಠ ನಿರ್ಣಯಿಸುವುದು, ಪಾಠಾಂತರಗಳಿದ್ದರೆ ಇತರ ಪ್ರತಿಗಳ ಆಧಾರದಿಂದ ಮತ್ತು ಸ್ವಪ್ರಜ್ಞೆಯಿಂದ ತಿದ್ದುಪಡಿ ಮಾಡಿ ಪರಿಷ್ಕರಣೆಯ ಪ್ರತಿ ಮಾಡುವುದಿರುತ್ತದೆ. ಹೀಗೆ ಮಾಡಲು ಏನೇನು ದಿಗ್ದರ್ಶನಗಳು ಬೇಕೋ ಅದನ್ನೆಲ್ಲ ತಿಳಿಸುವುದೇ ಗ್ರಂಥ ಸಂಪಾದನ ಶಾಸ್ತ್ರ. ವ್ಯಾಕರಣ ಶಾಸ್ತ್ರವೂ ಇದಕ್ಕೆ ಸಹಕಾರಿ. ಅಂತಹ ಸಂಪಾದನ ಕಾರ್ಯದಲ್ಲಿ ತಿಳಿದಿರಬೇಕಾದ ವಿವಿಧ ವಿಷಯಗಳನ್ನು ಕುರಿತಾದ ಪರಿಭಾಷಾ ಕೋಶವು ಇದುವರೆಗೆ ಬೇರೆ ಕಡೆ ಹೊರಬಂದಿರುವುದು ಕಂಡುಬಂದಿಲ್ಲ. ಈ ದಿಶೆಯಲ್ಲಿ ಪರಿಪೂರ್ಣ ಅನುಭವ ಸಂಪನ್ನರಾದ ಲೇಖಕರು ಅಂತಹ ಇದೊಂದು ಕೋಶವನ್ನು ರಚಿಸಿ ಉಪಕಾರ ಮಾಡಿದ್ದಾರೆ. ಅವರ ಅಧ್ಯಕ್ಷತೆಯ ಬಿ.ಎಂ.ಶ್ರೀ. ಪ್ರತಿಷ್ಠಾನದ ಮೂಲಕ ಪ್ರಕಾಶಿತವಾದುದು ಕನ್ನಡಿಗರಿಗೆ ಅದರಲ್ಲಿಯೂ ಈ ದಿಶೆಯಲ್ಲಿ ಅಲ್ಪಸ್ವಲ್ಪ ಪರಿಣತಿ, ಅಭಿರುಚಿ ಇರತಕ್ಕವರಿಗೆ ಮಾರ್ಗದರ್ಶಕವಾಗಿರುವುದು ಭಾಗ್ಯವೇ ಸರಿ. ಈ ಕೋಶದ ಶಬ್ದಗಳಿಗೆಲ್ಲ ಇಂಗ್ಲಿಷಿನಲ್ಲಿಯೂ ಪ್ರಚಲಿತವಿರುವ ಶಬ್ದಗಳನ್ನು ಕೊಡಲಾಗಿದೆ.

ಈ ಕೋಶವನ್ನು ಸಿದ್ಧಪಡಿಸುವಲ್ಲಿ ಲೇಖಕರು ಈ ಮೊದಲೇ ಈ ದಿಶೆಯಲ್ಲಿ ಬೆಳಕು ಬೀರಿರುವವರ ಹಾಗೂ ಅವರ ಕೃತಿಗಳನ್ನು ಪರಿಶೀಲಿಸಿಕೊಂಡಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳು, ಸಂಸ್ಕೃತ ನಿಘಂಟುಗಳನ್ನು ಆಕರವಾಗಿ ಪರಿಗಣಿಸಿದ್ದಾರೆ.

ಪ್ರೊ॥ ಟಿ. ಕೇಶವ ಭಟ್ಟ

ಗ್ರಂಥ ಸ್ವೀಕಾರ

1. **ಆಷಾಢದ ಮಳೆ (ಕಥಾ ಸಂಕಲನ) :**

2. **ಕಾರ್ಖಾನೆಯು ಚಿತ್ರಗಳು(ಕಥನ ಪ್ರಬಂಧ ಸಂಕಲನ) : ಶ್ರೀ ಕೆ.ಎನ್.ಭಗವಾನ್**: ಧಾತ್ರಿ ಪ್ರಕಾಶನ 'ಚೈತ್ರ', ನಂ.1555 ಪೂರ್ವಾಂತ್ಯ ರಸ್ತೆ, 9ನೇ ಬ್ಲಾಕ್, ಜಯನಗರ, ಬೆಂಗಳೂರು-69. 2003, ರೂ.60-00

3. **ಕವಿ ಕಂಡ ಕವಿ: (ಕವನಸಂಕಲನ) :** ಹೊ.ರಾ.ಸತ್ಯನಾರಾಣರಾವ್, ವೈ.ಎನ್. ಗುಂಡೂರಾವ್ ವಿಜಯ ಪ್ರಕಾಶನ, ಗಿರಿನಗರ, ಬೆಂಗಳೂರು-560 085. 2003, ರೂ.120.00

4. **ಕನ್ನಡ ಕಾವ್ಯಗಳಲ್ಲಿ ಸಂಗೀತ-ನೃತ್ಯ ಕಲಾವೈಭವ** : 2003, 60.ಎಮ್.ಎಮ್.

5. **ಭಾರತೀಯ ಸಂಗೀತ ಕೆಲವು ಚಿಂತನೆಗಳು** : 2003, 95.ಎಮ್.ಎಮ್.

6. **ತ್ಯಾಗರಾಜರ ಜೀವನ ಸ್ಮೃತಿಗಳು** : 2003, 60.ಎಮ್.ಎಮ್.ಎಮ್.

7. **ಹಿಂದೂಸ್ಥಾನಿ ಸಂಗೀತ ಮುಕುಟಮಣಿಗಳು** : 2003, 60.ಎಮ್.ಎಮ್.ಎಮ್.

8. **ಭಾರತೀಯ ಸಂಗೀತ ಮುಕುಟ ಮಣಿಗಳು** : ಡಾ|| ಕೆ.ಶ್ರೀಕಂಠಯ್ಯ: ಈ ಎರಡು ಪುಸ್ತಕಗಳು, ಸಾಹಿತ್ಯ ಮಂದಿರ. ನಂ.18/3 ಅಡ್ಡರಸ್ತೆ ಎನ್.ಆರ್.ಕಾಲೋನಿ, ಬೆಂಗಳೂರು-19, 2003, ರೂ.250.00

9. **ಜಾನಪದ ಕಲೆಗಳು**: ಕೆ.ಶ್ರೀಕಂಠಯ್ಯ ಮೇಲಿನ ನಾಲ್ಕು ಪುಸ್ತಕಗಳು, ಅಳಿಲು ಸೇವಾಸಂಸ್ಥೆ ನಂ.133, ಮೊದಲನೇ ಮಹಡಿ, ಕೆ.ಆರ್.ರಸ್ತೆ, ಓಬಳಪ್ಪಗಾರ್ಡನ್. ಬೆಂಗಳೂರು-82, 2003, ರೂ.50.00

10. **ಶಿವಾಜಿ : (ವ್ಯಕ್ತಿ ಚಿತ್ರ)**: ಎಸ್.ಎಲ್.ಶ್ರೀನಿವಾಸಮೂರ್ತಿ, ಸಪ್ನ ಬುಕ್ ಸ್ಟಾಲ್: ತುಂಗಾ ಕಾಂಪ್ಲೆಕ್ಸ ಗಾಧೀನಗರ, ಬೆಂಗಳೂರು-9. 2001, ರೂ.16.00

11. **ಪ್ರದರ್ಶನ ಕಲೆಗಳು :**

12. **ಗಂಧವತಿ** : (ಕವನಸಂಕಲನ) : **ಪ್ರೊ|| ಡಿ.ಲಿಂಗಯ್ಯ**, ದಿನಕರ ಪ್ರಕಾಶನ. ಬೆಂಗಳೂರು-85, 2003, ರೂ 50.00

13. **ಸಂಕೇತಿ ಅಧ್ಯಯನ-2 (ಶತಮಾನದ ಪತ್ರಗಳು)** : ಡಾ|| ಪ್ರಣತಾರ್ತಿ ಹರನ್, ಸಮುದಾಯ ಅಧ್ಯಯನ ಕೇಂದ್ರ ಮೈಸೂರು, 2004. ರೂ 500.00

14. **ಆತ್ಮರತಿ (ಕವನಸಂಕಲನ)** : ನೂತನ ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು-18, 2004. ರೂ 20.00

15. **ನಮ್ಮೊಳಗಿನ ಪ್ರತಿಭೆಗಳು** : (ಲೇಖಕರ ಪರಿಚಯಗಳು) ಯ.ಮ. ಹೇಮಂತ್ ಕುಮಾರ್, ಅಂಬಾ ಪ್ರಕಾಶನ. ಕೆ.ಕೆ.ರಸ್ತೆ ಯಳಂದೂರು-571441 ಚಾಮರಾಜನಗರ ಜಿಲ್ಲೆ. 2003, ರೂ. 100.00

16. **ಚಿಂತನ : (ಮಾರ್ಕಸ್ ಅಲಿಲಿಯಸನ ಕೃತಿ ಕುರಿತು)** : ನಿಟ್ಟೂರು ಚಂದ್ರಶೇಖರ, ನಿಟ್ಟೂರು ಚಂದ್ರಶೇಖರ 49/. ಸೌತ್ ಕ್ರಾಸ್ ರೋಡ್. ಬಸವನಗುಡಿ ಬೆಂಗಳೂರು-560 004, 2002, ರೂ.100.00

17. **ಪರಮಾತ್ಮ ಇದ್ದಾನೆ : (ಆಧ್ಯಾತ್ಮ ಚಿಂತನೆ)** : ಗುಂಡೋ ರಾಮಚಂದ್ರ ಹರಿಹರ ಸುಂದರ ಪ್ರಕಾಶನ, ಚಿತ್ರಶ್ರೀ ಕಲಾಮಂದಿರ 5ನೇ ತಿರುವು. ಅ.ನ. ಸುಬ್ಬರಾವ್ ರಸ್ತೆ ಹನುಮಂತನಗರ, ಬೆಂಗಳೂರು-19 2004, ರೂ 40.00

18. **ಪುರಂದರದಾಸರು ಮತ್ತು ಶ್ರೀಮದ್ಭಾಗವತ** : ಡಾ॥ ವಾಸುದೇವ ಅಗ್ನಿಹೋತ್ರಿ ಸಂಸ್ಕೃತಿ ಪ್ರಕಾಶನ ಬಸವನಗರ ಸೇಡಮ್-585222. 2004, ರೂ.250.00

19. **ತಮಿಳುನಾಡಿನ ಕನ್ನಡ ಮಂತ್ರಿ**: ಗೋವಿಂದ ದೀಕ್ಷಿತ್ ಕೆಳದಿ ಗುಂಡಾಜೋಯಿಸ್, ಶ್ರೀ ಸರಸ್ವತಿ ಸೇವಾಸಮಿತಿ ಕೆಳದಿ ಸಾಗರ ತಾ॥ ಶಿವಮೊಗ್ಗ ಜಿಲ್ಲೆ 2003, ರೂ.150.00.

20. **ಡೊಳ್ಳಿನ ಹಾಡುಗಳ ಸಮೀಕ್ಷೆ** : ಪ್ರೊ॥ ಜ್ಯೋತಿ ಹೊಸೂರ, ಕಾಲಗತಿ ಪ್ರಕಾಶನ, ರಾಯಭಾಗ ಮತ್ತು ಬೆಳಗಾವಿ. 2003, ರೂ. 40.00

21. **ಹೊಂಗಿರಣ** : (ಕವನಸಂಕಲನ) ಎಂ.ಎಂ. ಮಲ್ಲಯ್ಯ, ಶ್ರೀ ವೀರಭದ್ರೇಶ್ವರ ಪ್ರಕಾಶನ, ಹೊಳಲು. 2003, ರೂ 65.00

22. **ಮರಾಠರು** : ಶ್ರೀ "ಮುಂಧಪಾರಾಜಾ" ಮುಂಡೋಡು ಶ್ರೀ ಮೂಕಾಂಬಿಕಾ ಪ್ರಕಾಶನ ಮುಂಡೋಡು 2004, ರೂ. 20.00

23. **ನಾಂದಿ ಮತ್ತು ಇತರ ಕತೆಗಳು** : ಪ್ರಮಿಳಾ ಮಾಧವ್, ಶಂ ಪಾ ಪ್ರಕಾಶನ 'ಶ್ರೀಧಾಮ' ವಿ.ಹೆಚ್.ಬಿ.ಎಸ್. ಲೇಔಟ್, ಬೆಂಗಳೂರು-560 078. 2004, ರೂ.60.00

24. **ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ** : ಸಿ.ಬಿ. ಹೊನ್ನಯ್ಯ. ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ನಂ.119, 3ನೆಯ ತಿರುವು 8ನೆಯ ಮುಖ್ಯರಸ್ತೆ, ಆರ್.ಪಿ.ಸಿ. ಬಡಾವಣೆ, ಬೆಂಗಳೂರು-40. 2004, ರೂ.150.00

25. **ಕೆಳದಿ ಸಂಸ್ಥಾನ** : ಡಾ॥ ಕೆಳದಿ ವೆಂಕಟೇಶ್ ಜೋಯಿಸ್, ಶ್ರೀ ಸರಸ್ವತಿ ಸೇವಾ ಸಮಿತಿ. ಕೆಳದಿ-577401, ಸಾಗರ ಶಿವಮೊಗ್ಗ ಜಿಲ್ಲೆ. 2000, ರೂ.15.00

26. **ದಿಕ್ಕು ತಪ್ಪಿದ ಕಾರಣ** : ಬಂಡ್ರಿ ಕರಣಂ ಸತ್ಯನಾರಾಯಣರಾವ್,ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು-40 2003, ರೂ. 120.00.

27. **ಬೃಹನ್ನಳೆ**: ಎಸ್.ಜಿ. ಮಾಲತಿಶೆಟ್ಟಿ: ಸಾಹಿತ್ಯ ಚಂದನ, ನಂ. 402/15, 4ನೇ ಮುಖ್ಯರಸ್ತೆ, 50 ಅಡಿರಸ್ತೆ, ಬನಶಂಕರಿ 1ನೇ ಹಂತ, 2ನೇ ಘಟ್ಟ, ಬೆಂಗಳೂರು-50.

28. **ಕಲ್ಲಚ್ಚಿನ ಕನ್ನಡ ಹೊತ್ತಗೆಗಳು** : ಗೌ.ಮ. ಉಮಾಪತಿ ಶಾಸ್ತ್ರೀ, ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ ಧರ್ಮಸ್ಥಳ-574216 ಉಜಿರೆ-2004 ರೂ. 50-00

29. ಮನವೆಂಬ ಮರ್ಕಟ: ಟಿ.ವಿ. ವೆಂಕಟಮಣಯ್ಯ ಅವರ ಸೂಕ್ತಿ ಸಂಕಲನಗಳು. 2004 ರೂ. 50.00

30. ಸೋಲು-ಗೆಲುವು: 2004, ರೂ. 20-00
31. ಸಮಾನಾರ್ಥಕ ಕನ್ನಡ - ಇಂಗ್ಲೀಷ್ ಗಾದೆಗಳು 2003, ರೂ. 30.00
32. ಆರೋಗ್ಯಕ್ಕೆ ಸ್ನಾನ (ಸೂಕ್ತಿ ಲೇಖನಮಾಲೆ) 2003, ಸದುಪಯೋಗ
33. ಲಂಚ: 2004, ಸದುಪಯೋಗ
34. ಸ್ವಾತಂತ್ರ್ಯ: 2004, ಬೆಲೆ-ಸದುಪಯೋಗ
35. ಹಿಂಸೆ-ಅಹಿಂಸೆ: ಟಿ.ವಿ. ವೆಂಕಟರಮಣಯ್ಯ 2004, ಬೆಲೆ-ಸದುಪಯೋಗ
36. ಅದೃಷ್ಟ-ದುರಾದೃಷ್ಟ: 2003, ರೂ. 15.00
37. ಶ್ರೀ ಕೃಷ್ಣ ಹಾಗೂ ಭಗವದ್ಗೀತೆ-2004, ರೂ. 20.00
38. ಅಹಂಕಾರ- 2002, ರೂ. 15.00
39. ಕನ್ನಡ ಕನ್ನಡಿಗ ಕರ್ನಾಟಕ-2003, ರೂ. 30.00
40. ಸಾಲ 2003, ರೂ. 8.00
41. ಅನುಭವ 2004, ಸದುಪಯೋಗ
42. ಯೋಗೇಶ್ವರ ಶ್ರೀ ಕೃಷ್ಣ: ಮೊದಲ ಮುದ್ರಣ-2003, ಬೆಲೆ: 30.00ರೂ.
43. ಇತಿಹಾಸ 2003, ಸದುಪಯೋಗ
44. ತುಟಿಯ ಮೇಲೆ ತುಂಟ ಕಿರುನಗೆ: (ಸಾಂದರ್ಭಿಕ ಜೋಕುಗಳು)
45. ನೈತಿಕತೆ 2004, ಬೆಲೆ-ಸದುಪಯೋಗ
46. ನಡತೆಶೀಲ: 2004, ಬೆಲೆ-ಸದುಪಯೋಗ
47. ಮನೆಯ ಮಾಣಿಕ್ಯ ಮಕ್ಕಳು: (ಸೂಕ್ತಿಸಂಗ್ರಹ) 2000, ಬೆಲೆ-35.00
48. (ರಸಪ್ರಸಂಗಗಳ ಸಂಗ್ರಹ) ಟಿ.ವಿ. ವೆಂಕಟರಮಣಯ್ಯ ಬೆಲೆ 80.00 ರೂ.
49. ಕೃತಜ್ಞತೆ: 2003, ಬೆಲೆ: ಸದುಪಯೋಗ
50. ಅಮೂಲ್ಯ ಆಸ್ತಿ ಸ್ನೇಹ: 2004 ರೂ. 40.00
51. ಸಂಸ್ಕೃತಿ: 2001, ರೂ. 25.00
52. ಪ್ರಾಮಾಣಿಕತೆ: 2004, ಬೆಲೆ- ಸದುಪಯೋಗ
53. ಅಧಿಕಾರ: 2004, ಬೆಲೆ. 30.00ರೂ
54. ಬೆಳಕಿನಹಬ್ಬ ದೀಪಾವಳಿ: 2003, ರೂ. 50.00
55. ಹೀಗಿದ್ದರು ಚಾಚಾ: (ಜವಹರಲಾಲ್ ನೆಹರೂ ಜೀವನ ಪ್ರಸಂಗಗಳು) 2003, ರೂ. 20.00
56. ಮದ್ಯಪಾನ: 2003, ರೂ. 20.00

ಈ ಮೇಲಿನ ಪುಸ್ತಕಗಳ ಲೇಖಕರು : ಟಿ.ವಿ. ವೆಂಕಟಮಣಯ್ಯ (ಸೂಕ್ತಿ ಸಂಕಲನಗಳು)

ಪ್ರತಿಷ್ಠಾನ ವಾರ್ತೆ

ರಜತಮಹೋತ್ಸವ ಸಮಾರಂಭ

ಉದ್ಘಾಟನೆ:

ಸೆಪ್ಟೆಂಬರ್ 10 ರಿಂದ 15 ರವರೆಗೆ ಅದ್ದೂರಿಯಾಗಿ ನಡೆದ ರಜತ ಮಹೋತ್ಸವ ಸಮಾರಂಭವು 10 ರಂದು ಬೆಳಗ್ಗೆ 10.30ಕ್ಕೆ ವಿದ್ಯುಕ್ತವಾಗಿಆರಂಭ ವಾಯಿತು. ಇತ್ತೀಚೆಗೆ ಅಗಲಿದ ಸಂಸ್ಥೆಯ ಸ್ಥಾಪಕ ಅಧ್ಯಕ್ಷರೂ ಗೌರವಾಧ್ಯಕ್ಷರೂ ಆಗಿದ್ದ ನಿಟ್ಟೂರು ಶ್ರೀನಿವಾಸರಾವ್ ಅವರನ್ನು ಸಂಸ್ಥಾಪಕರಾದ ಪ್ರೊ॥ ಎಂ.ವಿ. ಸೀತಾರಾಮಯ್ಯನವರನ್ನು ಸ್ಮರಿಸುತ್ತಾ (ಜ.) ಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮಿ ಯವರು ಹಸ್ತಪ್ರತಿ-ಪುಸ್ತಕ ವಸ್ತುಪ್ರದರ್ಶನವನ್ನು ಉದ್ಘಾಟಿಸಿದರು. ವಿಧಾನ ಪರಿಷತ್ತಿನ ಸಭಾಪತಿಗಳಾದ ಸನ್ಮಾನ್ಯ ಶ್ರೀ ವಿ.ಆರ್.ಸುದರ್ಶನ್ ಅವರು ಸಮಾರಂಭವನ್ನು ಉದ್ಘಾಟಿಸಿದರು.

ಎಂ.ವಿ.ಸೀ. ಪ್ರತಿಮೆ ಅನಾವರಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಪ್ರತಿಷ್ಠಾವದ 25 ವರ್ಷಗಳ ಸಾಧನೆಯ ಬಗ್ಗೆ ಪ್ರಸ್ತಾವಿಕ ಭಾಷಣ ಮಾಡುತ್ತಾ ಎಲ್ಲರನ್ನು ಸ್ವಾಗತಿಸಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ಎಂದರು ಎಂ.ವಿ.ಸೀ.ಅವರ ಮಕ್ಕಳ ಕೊಡುಗೆಯಿಂದ ಕಲಾವಿದ ವೆಂಕಟಾಚಲಪತಿ ಅವರಿಂದ ಮಾಡಿಸಿರುವ ಈ ಲೋಹದ ಪ್ರತಿಮೆಯನ್ನು ಎಂ.ವಿ.ಸೀ. ಸಭಾಂಗಣದಲಿ ಸ್ಥಾಪಿಸಲಾಗಿದೆ. ಅನಾವರಣ ಮಾಡಿದ ಮಹಾಪೌರರು ಈ ಸಮಾರಂಭದ ಸಹಭಾಗಿತ್ವಕ್ಕಾಗಿ ನೀಡಲು ಒಪ್ಪಿರುವ **ಒಂದು ಲಕ್ಷ ರೂಗಳ ಅನುದಾನವನ್ನು** ಆದಷ್ಟು ಬೇಗ ಬಿಡುಗಡೆ ಮಾಡಲಾಗುವುದು ಎನ್ನುತ್ತ ಪ್ರತಿಷ್ಠಾನದ ಸಾಧನೆಗಳನ್ನು ಮೆಚ್ಚಿದರು.

'ರಜತಸಿರಿ' – ಸ್ಮರಣ ಸಂಚಿಕೆ ಬಿಡುಗಡೆ

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ.ವೀರಪ್ಪಮೊಯಿಲಿಯವರು ಶ್ರೀ ಶ್ರೀನಿವಾಸರಾವ್ ಮತ್ತು ಶ್ರೀ ಗೀತಾಚಾರ್ಯರು ಸಂಪಾದಿಸಿರುವ 'ರಜತಸಿರಿ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುತ್ತ ತಾವು ಮುಖ್ಯಮಂತ್ರಿಯಾಗಿದ್ದಾಗ ಬಿಡುಗಡೆ ಮಾಡಿದ್ದ ನಿವೇಶನದಲ್ಲಿ ಇಂದು ಈ ಭವ್ಯ ಭವನವನ್ನು ನಿರ್ಮಿಸಿರುವ ಪ್ರತಿಷ್ಠಾನವನ್ನು ಶ್ಲಾಘಿಸುತ್ತ ತಾವು ಬಿಡುಗಡೆ ಮಾಡಿದ್ದ ಅನುದಾನ ನಿರಂತರವಾಗಿ ಬರುವಂತೆ ಮಾಡಲು ಪ್ರಯತ್ನಿಸುವುದಾಗಿ ತಿಳಿಸಿದರು.

ರಜತೋತ್ಸವ ಮಾಲೆಯ ಗ್ರಂಥಗಳ ಬಿಡುಗಡೆ

ಕನ್ನಡ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿಗಳೂ ಶ್ರೇಷ್ಠ ವಿದ್ವಾಂಸರೂ ಆದ ಡಾ। ಎಂ.ಎಂ.ಕಲಬುರ್ಗಿ ಅವರು 'ಸಾಹಿತ್ಯೋಪಾಸಕರು', ತಿಮ್ಮಪ್ಪದಾಸರ ಕೀರ್ತನೆಗಳು, 'ಗ್ರಂಥಸಂಪಾದನ ಪರಿಭಾಷಾಕೋಶ', 'ಶ್ರೀಕೃಷ್ಣಲೀಲಾಗಾನಂ', 'ಕನ್ನಡ ತಿರುಕ್ಕುರಳ್', 'ಕಾರಂತಕಿರಣ' ಪುಸ್ತಕಗಳನ್ನು ಬಿಡುಗಡೆ ಮಾಡುತ್ತ ಬಿ.ಎಂ.ಶ್ರೀ. ಪ್ರತಿಷ್ಠಾನದ

ಪ್ರಕಟಣೆಗಳು ಸಾಹಿತ್ಯ ಸಂಶೋಧನೆಗೆ ಪೂರಕವಾದ ಮೌಲಿಕ ಕೃತಿಗಳಾಗಿವೆಯೆಂದೂ ಇದರ ಸಾಧನೆ ಗುರುತಿಸುವಂತಹದೆಂದೂ, ಯಾವೊಂದು ವಿಶ್ವವಿದ್ಯಾನಿಲಯಕ್ಕೆ ಸರಿಸಮಾನವಾದುದೆಂದೂ ಹೇಳಿದರು. ಹಲವು ಸಂಸ್ಥೆಗಳು ಹುಟ್ಟಿದಾಗ ಇಟ್ಟುಕೊಂಡಿದ್ದ ಧ್ಯೇಯೋದ್ದೇಶಗಳಿಗೆ ತಿಲಾಂಜಲಿಯಿತ್ತು ದಾರಿ ತಪ್ಪುತ್ತವೆ. ಆದರೆ ಬಿ.ಎಂ.ಶ್ರೀ. ಪ್ರತಿಷ್ಠಾನ ತನ್ನ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ತನ್ನ ಚಟುವಟಿಕೆಯನ್ನು ವಿಸ್ತರಿಸಿಕೊಂಡಿರುವುದು ವಿಶೇಷವಾದ ಸಂಗತಿ ಎನ್ನುತ್ತ 'ಸಾಹಿತ್ಯೋಪಾಸಕರ' ಗ್ರಂಥದ ಮುಂದುವರಿದ ಭಾಗವಾಗಿ ಈಗಾಗಲೆ ಪ್ರತಿಷ್ಠಾನ ಯೋಜಿಸಿರುವ 19ನೇ ಶತಮಾನದ ಸಾಹಿತ್ಯ ಚರಿತ್ರೆಯ ನಿರ್ಮಾಣಕ್ಕೆ ಯೋಜನೆ ರೂಪಿಸಬೇಕೆಂದು ಕರೆಕೊಟ್ಟರು. ಸಂಸ್ಥಾಪಕ ಸೀತಾರಾಮಯ್ಯನವರ ಸಾಧನೆ – ಶ್ರಮ, ದೂರದೃಷ್ಟಿಗಳು ಇಂದು ಫಲ ನೀಡುತ್ತಿವೆ. ಇಡೀ ಕರ್ನಾಟಕವೇ ಹೆಮ್ಮೆ ಪಡುವಂತಹ ಸಂಶೋಧನ ಚಟುವಟಿಕೆಗೆ ಮೀಸಲಾದ ವಿಶಿಷ್ಟ ಸಂಸ್ಥೆಯಾಗಿ ಪ್ರತಿಷ್ಠಾನ ಹೊರಹೊಮ್ಮಿರುವುದಕ್ಕಾಗಿ ಶ್ರಮಿಸಿದ ಎಲ್ಲರನ್ನೂ ಮುಕ್ತಕಂಠದಿಂದ ಹೊಗಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಧರ್ಮದರ್ಶಿ ಶ್ರೀಹರಿಕೃಷ್ಣ ಪುನರೂರು ಅವರು ಸಾಂಸ್ಕೃತಿಕ ಚಟುವಟಿಕೆಗಳನ್ನು ಉದ್ಘಾಟಿಸುತ್ತ ಪರಿಷತ್ತಿಗಿಂತ ಉತ್ತಮವಾದ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಪ್ರತಿಷ್ಠಾನವನ್ನು ಅಭಿನಂದಿಸಿದರು. ರಜತೋತ್ಸವಕ್ಕಾಗಿ ವೈಯಕ್ತಿಕವಾಗಿ ಉದಾರವಾಗಿ ಸಹಕಾರ ನೀಡುವುದಾಗಿ ಘೋಷಿಸಿದರು.

ಮಾಜಿ ಸಂಸದರೂ, ಹಿರಿಯ ರಾಜಕೀಯ ಧುರೀಣರೂ ಆದ ಶ್ರೀ ವಿ.ಎಸ್. ಕೃಷ್ಣ ಅಯ್ಯರ್ ಅವರು ಬಿಎಂಶ್ರೀ ಬಂಧುಗಳೂ ಪ್ರಸಿದ್ಧ ಲೇಖಕಿಯವರೂ ಆದ ಮೈಸೂರಿನ ಶ್ರೀಮತಿ ಆರ್ಯಾಂಬಪಟ್ಟಾಭಿ ಅವರು ಮತ್ತು ನಗರ ಪಾಲಿಕೆ ಸದಸ್ಯರೂ ರಜತೋತ್ಸವ ಸಮಿತಿ ಉಪಾಧ್ಯಕ್ಷರೂ ಊಟ – ಉಪಚಾರದ ದಾನಿಗಳೂ ಆದ ಶ್ರೀ ಬಿ.ಎಸ್. ಸತ್ಯನಾರಾಯಣ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಬಿ.ಎಂ.ಶ್ರೀ. ಪೀಠ ಸ್ಥಾಪನೆಗೆ ಕರೆ

ಕನ್ನಡ ಸಾಹಿತ್ಯ ಲೋಕದ ಧೀಮಂತರೂ ಸಮಸ್ತ ಕನ್ನಡಿಗರ ಕರ್ನಾಟಕದ ಏಳ್ಗೆಯ ನಿರ್ಮಾತೃಗಳೂ ಆದ ಆಚಾರ್ಯ ಬಿ.ಎಂ.ಶ್ರೀ. ಕಂಠಯ್ಯನವರ ಹೆಸರಿನಲ್ಲಿ ಕರ್ನಾಟಕದ ಯಾವೊಂದು ವಿಶ್ವವಿದ್ಯಾಲಯದಲ್ಲಿಯೂ ಪ್ರಾಧ್ಯಾಪಕ ಪೀಠ 'ವಿಲ್ಲದಿರುವುದರಿಂದ ಅಭಿಮಾನಿಗಳು, ಬಂಧುಗಳ ವತಿಯಿಂದ – ಸರ್ಕಾರ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಬಿ.ಎಂ.ಶ್ರೀ. ಪೀಠವನ್ನು ಸ್ಥಾಪಿಸಲು ಮುಂದಾಗಬೇಕೆಂದು ಈ ಸಂದರ್ಭದಲ್ಲಿ ಕೋರಲಾಯಿತು. ಬಿ.ಎಂ.ಶ್ರೀ. ಪ್ರತಿಷ್ಠಾನ ಕನ್ನಡ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿ ಮಾನ್ಯತೆ ಪಡೆದಿರುವುದರಿಂದ ಈ ಪೀಠ ಸ್ಥಾಪನೆ ಅದಕ್ಕೊಂದು ಘನತೆಯನ್ನು ತಂದುಕೊಡುವುದಲ್ಲದೆ ಶ್ರೀಯವರ ಸ್ವಂತ ಊರಿನಲ್ಲಿ ಬಿ.ಎಂ.ಶ್ರೀ. ಅಧ್ಯಯನ ಕೇಂದ್ರ ರೂಪಿಸಲು, ಹಾಗೂ ಬಿ.ಎಂ.ಶ್ರೀ. ಸಾಹಿತ್ಯದ

ಅಧ್ಯಯನಕ್ಕೆ ಉತ್ತೇಜನ ನೀಡುವ ಆ ಮೂಲಕ ಬಿ.ಎಂ.ಶ್ರೀ.ಯವರ ಕರ್ನಾಟಕದ ಏಳಿಗೆಯ ಕನಸನ್ನು ಸಾಕಾರ ಗೊಳಿಸಲು ಸಾಧ್ಯವಾಗುತ್ತದೆ ಎಂದ ಗೌ॥ ಕಾರ್ಯದರ್ಶಿಗಳಾದ ಪ್ರೊ. ನಾ. ಗೀತಾಚಾರ್ಯರು ಅಧ್ಯಕ್ಷರಾದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಸೂಚನೆಯನ್ನು ಅನುಮೋದಿಸುತ್ತಾ ಕರೆ ಕೊಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಪ್ರೊ। ಎಲ್.ಎಸ್. ಶೇಷಗಿರಿರಾವ್ ಅವರು ಬಿ.ಎಂ.ಶ್ರೀ., ವಿ.ಸೀ. ಅವರ ಬಗ್ಗೆ ತಮ್ಮ ನೆನಪುಗಳನ್ನು ಮೆಲುಕು ಹಾಕುತ್ತಾ ಸೀತಾ ರಾಮಯ್ಯನವರು ಪ್ರತಿಷ್ಠಾನವನ್ನು ಕಟ್ಟಿದ ಬಗೆಯನ್ನು ಬಿಡಿಸಿಟ್ಟರು. ಅವರ ಸಂಕಲ್ಪಶಕ್ತಿಯಿಂದ ಸಂಸ್ಥೆ ಇಂದು ಈ ಸ್ಥಿತಿಯನ್ನು ತಲುಪುವಂತಾಗಿದೆಯೆಂದು ಶ್ಲಾಘಿಸಿದರು. ಇದಕ್ಕಾಗಿ ಶ್ರಮಿಸಿದ ಎಲ್ಲರನ್ನು ಸ್ಮರಿಸಿದರು. ಪ್ರತಿಷ್ಠಾನ ಮುಂದಿನ ದಿನ ಗಳಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಬೇಕಾದ ಬಗೆಯನ್ನು ವಿವರಿಸಿದರು.

ಆರಂಭದಲ್ಲಿ, ಅಧ್ಯಕ್ಷರಾದ ಡಾ। ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ ಪ್ರತಿಷ್ಠಾನದ ಸಾಧನೆಗಳತ್ತ ಪಕ್ಷಿನೋಟ ಬೀರಿದರು. ಸಂಸ್ಥಾಪಕ ಎಂ.ವಿ.ಸೀತಾರಾಮಯ್ಯನವರು, ಗೌರವಾಧ್ಯಕ್ಷ ನಿಟ್ಟೂರು ಶ್ರೀನಿವಾಸರಾಯರಿಂದ ಆರಂಭಿಸಿಕಾರ್ಯಕರ್ತರವರೆಗೆ ಎಲ್ಲರನ್ನು ಸ್ಮರಿಸುತ್ತ ವಿದ್ವತ್ ಸಂಸ್ಥೆಯ ಉದಾತ್ತಧ್ಯೇಯಗಳ ಈಡೇರಿಕೆಗೆ ಸಹಕರಿಸಿದ ದಾನಿಗಳನ್ನು ಕೃತಜ್ಞತೆಯಿಂದ ಸ್ಮರಿಸಿದರು. ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ, ಗ್ರಂಥಭಂಡಾರ, ದತ್ತಿ ಕಾರ್ಯಕ್ರಮಗಳು, ಸಹೃದಯ ಗೋಷ್ಠಿ ಚಟುವಟಿಕೆಗಳು, ಹಸ್ತಪ್ರತಿ ತರಗತಿ, ಸಿರಿಕಂಠ ವೇದಿಕೆಯ ಕಾರ್ಯವೈಖರಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ, ಹಸ್ತಪ್ರತಿಸೇವಾಕೇಂದ್ರ, ಮನೆ ಬಾಗಿಲಿಗೆ ಪ್ರಾಚೀನ ಹಸ್ತಪ್ರತಿದರ್ಶನಯೋಜನೆ, ಸಾಂಸ್ಕೃತಿಕ ಚಟುವಟಿಕೆಗಳನ್ನೆಲ್ಲ ಸಂಕ್ಷಿಪ್ತವಾಗಿ ಸಭಿಕರ ಗಮನಕ್ಕೆ ತಂದು ಪ್ರತಿಷ್ಠಾನದ ಮುಂದಿನ ಮಹತ್ತರ ಯೋಜನೆಗಳನ್ನು ತಿಳಿಸುತ್ತ, ಅವು ಗಳ ನಿರ್ವಹಣೆಗೆ ಅಗತ್ಯವಾಗಿರುವ ಹಣಕಾಸಿನ ನೆರವನ್ನು ಕೋರಿದರು.

ಕೋಶಾಧಿಕಾರಿಗಳಾದ ಪ್ರೊ। ಡಿ. ಲಿಂಗಯ್ಯನವರು ಸ್ವಾಗತ ಕೋರಿದರು. ರಜತೋತ್ಸವ ಸಂಚಾಲಕರಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ವಂದನಾರ್ಪಣೆ ಮಾಡಿದರು. ಗೌ॥ ಕಾರ್ಯದರ್ಶಿ ಪ್ರೊ॥ ನಾ. ಗೀತಾಚಾರ್ಯ ಕಾರ್ಯಕ್ರಮವನ್ನು ನಿರ್ವಹಿಸಿದರು. ಪ್ರತಿಷ್ಠಾನದ ಸುಗಮ ಸಂಗೀತ ತರಗತಿಯ ವಿದ್ಯಾರ್ಥಿಗಳು, ಮತ್ತು ಸಂಚಾಲಕರಾದ ಜಯಾಪಾರ್ಥಸಾರಥಿ, ರಮಾದೇವಿ, ವಿಶ್ವೇಶ್ವರಯ್ಯ, ಲಕ್ಷ್ಮೀಮೂರ್ತಿ, ಅನುಸೂಯ ಶ್ರೀನಿವಾಸರಾವ್ ಮುಂತಾದವರಿಂದ ಪ್ರಾರ್ಥನೆ, ನಾಡಗೀತೆ, ಬಿ.ಎಂ.ಶ್ರೀ. ಗೀತೆ ಕಾರ್ಯ ಕ್ರಮಗಳು ನಡೆದವು. ಶಂಕರಮಠದ ವೈದಿಕ ತಂಡದವರಿಂದ ನಡೆದ ವೇದಘೋಷವು ಸಮಾರಂಭಕ್ಕೆ ಕಳೆಕಟ್ಟಿತ್ತು.

'ಬಿ.ಎಂ.ಶ್ರೀ. ಮತ್ತು ಕನ್ನಡ ಚಿಂತನೆ ' ಗೋಷ್ಠಿ

ಮಧ್ಯಾಹ್ನ 2 ಗಂಟೆಗೆ ಶ್ರೀ ಎನ್. ಬಸವಾರಾಧ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಗೋಷ್ಠಿಯಲ್ಲಿ ಪ್ರೊ॥ ಎಂ.ಎಚ್.ಕೃಷ್ಣಯ್ಯ ಅವರು 'ಬಿ.ಎಂ.ಶ್ರೀ. ಮತ್ತು

ಕನ್ನಡ ಸಾಹಿತ್ಯ – ಒಂದು ಮುನ್ನೋಟ' ಎಂಬ ವಿಚಾರವಾಗಿಯೂ ಪ್ರೊ|| ಎಂ. ಚಿದಾನಂದಮೂರ್ತಿಯವರು 'ಶಾಸ್ತ್ರೀಯ ಭಾಷೆಯಾಗಿ ಕನ್ನಡ – ಒಂದು ಸಮರ್ಥನೆ' ವಿಚಾರವಾಗಿಯೂ ಮಾತನಾಡುತ್ತ ಕನ್ನಡ ಭಾಷೆಯ ಸ್ಥಾನಮಾನವನ್ನು ಎತ್ತಿ ಹಿಡಿಯಲು ಶ್ರಮಿಸಿದ ಶ್ರೀಯವರ ಸಾಧನೆಗಳನ್ನು ಶ್ಲಾಘಿಸುತ್ತಾ ಶಾಸ್ತ್ರೀಯ ಭಾಷೆಯನ್ನಾಗಿ ಕನ್ನಡವನ್ನು ಇಂದು ರಾಷ್ಟ್ರಮಟ್ಟದಲ್ಲಿ ಎತ್ತಿ ಹಿಡಿಯುವ ಮೂಲಕ ಕನ್ನಡಿಗರು ಬಿ.ಎಂ.ಶ್ರೀ. ಪರಂ ಪರೆಯನ್ನು ಮುಂದುವರಿಸಬೇಕಾಗಿದೆ ಎಂದು ಕರೆ ಕೊಟ್ಟರು. ಶ್ರೀಮತಿ ಸರಸ್ವತಿ ಅವರ ನಿರೂಪಣೆಯಲ್ಲಿ ನಡೆದ ಈ ಗೋಷ್ಠಿಯ ಪ್ರಾರಂಭದಲ್ಲಿ ಸ್ವಾಗತವನ್ನು ರಮಾದೇವಿ ವಿಶ್ವೇಶ್ವರಯ್ಯ ಮಾಡಿದರು.

ಮುಖ್ಯಮಂತ್ರಿಗಳಿಂದ ಬಿ.ಎಂ.ಶ್ರೀ. ಕಲಾಭವನದ ಲೋಕಾರ್ಪಣೆ ಮತ್ತು ಬಿ.ಎಂ. ಶ್ರೀ. ಪ್ರತಿಮೆಯ ಅನಾವರಣ

ದಿನಾಂಕ 11.10.2004 ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರು ಬಿ.ಎಂ.ಶ್ರೀ. ಕಲಾಭವನವನ್ನು ಲೋಕಾರ್ಪಣೆ ಮಾಡಿದರು. ಇದರ ಅಂಗವಾಗಿ ಬಿ.ಎಂ.ಶ್ರೀ. ಅವರ ಮರಿಮಗಳು ಪುಣೆಯಲ್ಲಿ ಶ್ರೀಮತಿ ರತ್ನ.ಎನ್.ರಾವ್ ಅವರ ಉದಾರ ಕೊಡುಗೆಯ ಸಹಾಯದಿಂದ ಪ್ರತಿಷ್ಠಾನ ಕಲಾವಿದ ಶ್ರೀ ವೆಂಕಟಾಚಲಪತಿ ಅವರಿಂದ ನಿರ್ಮಿಸಿ ಲೋಹದ **ಬಿ.ಎಂ.ಶ್ರೀ.** ಪ್ರತಿಮೆಯನ್ನು ಮುಖ್ಯಮಂತ್ರಿಗಳು ಅನಾವರಣ ಮಾಡುತ್ತ ಬಿ.ಎಂ.ಶ್ರೀ. ಪ್ರತಿಷ್ಠಾನವನ್ನು ಶ್ಲಾಘಿಸಿ ಇಲ್ಲಿ ನೆರದಿರುವ ಗಣ್ಯ ಸಾಹಿತಿಗಳ ಸಂಘದಲ್ಲಿ ಕಾಲ ಕಳೆಯಲು ಸಮಯದ ಅಭಾವವಿಲ್ಲ ಎನ್ನುತ್ತ ಸಮಾರಂಭದ ಕೊನೆಯವರೆಗೂ ಉಪ ಸ್ಥಿತರಿದ್ದರು. ಪ್ರತಿಷ್ಠಾನಕ್ಕೆ **5 ಲಕ್ಷ ರೂ.ಗಳ ಅನುದಾನ** ಬಿಡುಗಡೆ ಮಾಡ ಲಾಗುವುದೆಂದೂ, ಇನ್ನೊಂದು ವಾರದಲ್ಲೆ ಅದರ ಆದೇಶ ಹೊರಬೀಳುವುದೆಂದೂ ಘೋಷಿಸಿದರು. ಕನ್ನಡದ – ಕರ್ನಾಟಕದ ಕೆಲಸಗಳ ಬಗ್ಗೆ ರಾಜಕೀಯ ಶಕ್ತಿಯ ಮೂಲಕ ಬಲವರ್ಧನೆ ಮಾಡಲು ನಮ್ಮ ಸರ್ಕಾರ ಬದ್ಧವಿದೆ ಎಂದು ಹೇಳಿದರು.

ರಜತೋತ್ಸವ ಸಮಿತಿಯ ಗೌರವ ಸಲಹೆಗಾರರಾದ ಪ್ರಸಿದ್ಧ ಚಿಂತಕರಾದ ಶ್ರೀ ಜಿ. ನಾರಾಯಣ ಅವರು ಆರಂಭದಲ್ಲಿ ಪ್ರಾಸ್ತಾವಿಕ ಮತ್ತು ಸ್ವಾಗತಭಾಷಣ ಮಾಡುತ್ತ ಕನ್ನಡ ನಾಡು-ನುಡಿಯ ಬಗ್ಗೆ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ ಬಗ್ಗೆ ಸ್ಪಷ್ಟ ಚಿತ್ರಣವನ್ನು ನೀಡಿದರು. ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಾಸಕರೂ, ಮಾಜಿ ಮೇಯರ್ ಆದ ಶ್ರೀ ಕೆ. ಚಂದ್ರಶೇಖರ್ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಅವರು ಮಾತನಾಡುತ್ತ ಪ್ರತಿಷ್ಠಾನದ ಚಟುವಟಿಕೆಗಳನ್ನು ಶ್ಲಾಘಿಸಿದರು. ಸಂಸ್ಥಾಪಕರಾದ ಸೀತಾರಾಮಯ್ಯನವರೊಂದಿಗಿನ ತಮ್ಮ ಭೇಟಿಗಳನ್ನು ಸ್ಮರಿಸುತ್ತ ಬಸವನಗುಡಿಯ ಹೆಮ್ಮೆಯ ಸಾಹಿತಿಗಳಾಗಿದ್ದ ಅವರ ಮನೆಯ ರಸ್ತೆಗೆ ಎಂ.ವಿ.ಸೀತಾರಾಮಯ್ಯ ರಸ್ತೆ ಎಂದು ತಾವು ನಗರ ಪಾಲಿಕೆ ಸದಸ್ಯರಾಗಿದ್ದಾಗ ನಾಮಕರಣ ಮಾಡಿದ್ದುದನ್ನು ನೆನಪಿಸಿ ಕೊಳ್ಳುತ್ತ ಅವರ ಮನೆಯ ಒಂದು ಕೊಠಡಿ

ಯಲ್ಲಿದ್ದ ಪ್ರತಿಷ್ಠಾನ ಇಂದು ಒಂದು ಭವ್ಯ ಭವನವನ್ನು ಹೊಂದುವಂತಾದುದಕ್ಕೆ ಶ್ರಮಿಸಿದ ಎಲ್ಲರನ್ನು ಅಭಿನಂದಿಸುತ್ತ ತಮ್ಮ **'ನಿವಾರಣ' ಸಂಸ್ಥೆಯಿಂದ 50 ಸಾವಿರ ರೂ.ಗಳ ಸಹಾಯ ಧನವನ್ನು** ನೀಡುವುದಾಗಿ ಘೋಷಿಸಿದರು.

ಬಿ. ರಾಮಸ್ವಾಮಿ ಅಧ್ಯಯನ ಕೊಠಡಿಯ ಉದ್ಘಾಟನೆ

ಪ್ರೊ॥ ಬಿ. ರಾಮಸ್ವಾಮಿಗಳ ಸಂಸ್ಮರಣಾರ್ಥ ಅವರ ಮಕ್ಕಳುಗಳು ನೀಡಿದ್ದ 1,00,000 ರೂ.ಗಳ ಕೊಡುಗೆಯಿಂದ ಅವರ ಅಪೇಕ್ಷೆಯಂತೆ ಬಿ.ಎಂ.ಶ್ರೀ. ಕಲಾ ಭವನದಲ್ಲಿ 2ನೇ ಮಹಡಿಯಲ್ಲಿ ಒಂದು ಕೊಠಡಿಯನ್ನು ನಿರ್ಮಿಸಿದ್ದು ಅದನ್ನು "ಬಿ.ರಾಮಾಸ್ವಾಮಿ ಅಧ್ಯಯನ ಕೊಠಡಿ" ಎಂದು ನಾಮಕರಣ ಮಾಡಲಾಗಿತ್ತು. ಇದನ್ನು ಇದೇ ಸಂದರ್ಭದಲ್ಲಿ ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರೂ 'ರಜತಸಿರಿ' ಸಂಚಿಕೆ ಸಮಿತಿಯ ಅಧ್ಯಕ್ಷರೂ ಪ್ರತಿಷ್ಠಾನಕ್ಕೆ 50,000/ ರೂ.ಗಳ ಕೊಡುಗೈ ದಾನಿಗಳು ಆದ ಪ್ರೊ॥ ಎಂ.ಆರ್. ದೊರೆಸ್ವಾಮಿ ಅವರು ಈ ಕೊಠಡಿಯನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು. ದಾನಿಗಳಾದ ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ, ಶ್ರೀಮತಿ ಚಂದ್ರಾವತಿ, ಶ್ರೀ ರಾಮಚಂದ್ರ, ಶ್ರೀಜಯ ರಾಮ್ ಮುಂತಾಗಿ ಬಿ.ರಾಮ ಸ್ವಾಮಿಯವರ ಬಂಧುಗಳು ಉಪಸ್ಥಿತರಿದ್ದರು.

ಶ್ರೀಮತಿ ಸಾವಿತ್ರಮ್ಮರಾಮಸ್ವಾಮಿ ಮತ್ತು ಮಕ್ಕಳು ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರೂ, ಸಂಸ್ಥಾಪಕ ಎಂ.ವಿ.ಸೀತಾರಾಮಯ್ಯನವರ ಸಹಪಾಠಿಗಳೂ, ಬಿ.ಎಂ.ಶ್ರೀ.ಯವರ ಶಿಷ್ಯರೂ, ಶ್ರೇಷ್ಠ ವಿದ್ವಾಂಸರೂ ಆಗಿದ್ದ ಪ್ರೊ॥ ಬಿ. ರಾಮಸ್ವಾಮಿ ಅವರ ಹೆಸರಿನಲ್ಲಿ ಪ್ರತಿಷ್ಠಾನದಲ್ಲಿ ಒಂದು ದತ್ತಿನಿಧಿಗಳನ್ನು ಸ್ಥಾಪಿಸಿದ್ದಾರೆ. ಬಿ. ರಾಮಸ್ವಾಮಿ ಸಂಸ್ಮರಣ ಸಂಪುಟ 'ಮಧುರಸ್ಮೃತಿ'ಯನ್ನು ಮತ್ತು ರಾಮಸ್ವಾಮಿಗಳ ತಂದೆಯವರೂ, ಪ್ರಸಿದ್ಧ ಕೀರ್ತನ ಕಾರರೂ ಆಗಿದ್ದ ಬೇಟೆರಾಯ ದೀಕ್ಷಿತರ ಕೃತಿ 'ವಾಸವಾಂಬಪುರಾಣ'ದ ಪ್ರಕಟಣೆಯನ್ನು ಪ್ರಾಯೋಜಿಸಿದ್ದಾರೆನ್ನುತ್ತ, ಇವರ ಉದಾರ ಕೊಡುಗೆಯನ್ನು ಮುಕ್ತಕಂಠದಿಂದ ಸ್ಮರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀಗಳೂ ಮುಖ್ಯಮಂತ್ರಿಗಳ ಮತ್ತು ಶಾಸಕರ ಉದಾರ ಕೊಡುಗೆಗೆ ಕೃತಜ್ಞತೆ ಸಲ್ಲಿಸುತ್ತ ಬಿ.ಎಂ.ಶ್ರೀ. ಸಾಹಿತ್ಯ ಪುರ್ನಮುದ್ರಣ, 19ನೇ ಶತಮಾನದ ಸಾಹಿತ್ಯ ಚರಿತ್ರೆಯ ನಿರ್ಮಾಣದಂತಹ ಪ್ರತಿಷ್ಠಾನದ ಮೌಲಿಕ ಯೋಜನೆಗಳಿಗೂ ಧನಸಹಾಯ ಒದಗಿಸಬೇಕೆಂದರು. ಗೌ॥ ಕಾರ್ಯದರ್ಶಿಗಳ ನಿರ್ವಹಣೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಎಸ್.ವಿ. ಶ್ರೀನಿವಾಸರಾವ್ ಅವರು ವಂದನಾರ್ಪಣೆಯನ್ನು ಮಾಡಿದರು. ಎಚ್.ಎಲ್.ಎನ್. ಸಿಂಹ ಅವರ ಪುತ್ರರಾದ ಶ್ರೀ ಶೇಷಚಂದ್ರ ಅವರ ನಿರ್ದೇಶನದಲ್ಲಿ ಬಿ.ಎಂ.ಶ್ರೀ. ಗೀತೆಯನ್ನು ಸಾಂಸ್ಕೃತಿಕ ಸಮಿತಿ ಸದಸ್ಯರು ಆರಂಭದಲ್ಲಿ ಸುಶ್ರಾವ್ಯವಾಗಿ ಹಾಡಿದರು.

ಮಹಿಳಾ ಸಾಹಿತ್ಯ ಗೋಷ್ಠಿ

ನಂತರ ನಡೆದ ಮಹಿಳಾ ಸಾಹಿತ್ಯ ಗೋಷ್ಠಿಯನ್ನು ಪ್ರಾಯೋಜಿಸಿದ್ದವರು ಕರ್ನಾಟಕ ಲೇಖಕಿಯರ ಸಂಘ. ಡಾ। ವಿಜಯಾ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಗೋಷ್ಠಿಯಲ್ಲಿ 'ಲೇಖಕಿಯರು ಮತ್ತು ಕನ್ನಡ ಸಂಶೋಧನೆ' ವಿಷಯ ಕುರಿತು ಡಾ। ಪಿ.ಎಸ್. ಗೀತಾ ಮತ್ತು 'ಲೇಖಕಿಯರು ಮತ್ತು ನಾಟಕ ಸಾಹಿತ್ಯ' ವಿಷಯ ಕುರಿತು ಶ್ರೀಮತಿ ಶಾಂತಾ ನಾಗರಾಜ್ ಅವರೂ ವಿಷಯ ಮಂಡಿಸಿದರು. ಕನ್ನಡ ಸಾಹಿತ್ಯದ ಸ್ತ್ರೀವಾದಿ ಸಂವೇದನೆಯು ಈ ಎರಡೂ ಕ್ಷೇತ್ರಗಳಲ್ಲಿ ಗಣನೀಯವಾಗಿ ಆಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಲೇಖಕಿಯರ ಸಂಘದ ಕಾರ್ಯದರ್ಶಿ ಸಂಧ್ಯಾರೆಡ್ಡಿ ಅವರು ಸ್ವಾಗತ ಮಾಡಿದರು. ಇನ್ನೊಬ್ಬ ಕಾರ್ಯದರ್ಶಿ ಅವರು ನಿರ್ವಹಣೆ ಮಾಡಿದರು.

'ಎಂ.ವಿ.ಸೀ. ಸಾಹಿತ್ಯ – ಸಾಧನೆಗಳು' ಗೋಷ್ಠಿ

ಭೋಜನಾನಂತರ ನಡೆದ 2ನೆ 'ಗೋಷ್ಠಿ'ಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಸಂಸ್ಥಾಪಕರಾದ ಎಂ.ವಿ.ಸೀತಾರಾಮಯ್ಯನವರ ಸಾಹಿತ್ಯ ಸಾಧನೆಗಳನ್ನು ಕುರಿತು ಪ್ರಸಿದ್ಧ ವಿಮರ್ಶಕರಾದ ಡಾ। ನರಹಳ್ಳಿ ಬಾಲಸುಬ್ರಹ್ಮಣ್ಯ ಅವರೂ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಎಂ.ವಿ.ಸೀ ಮಾಡಿದ ಸಾಧನೆಗಳನ್ನು ಕುರಿತು ಪ್ರಸಿದ್ಧ ಸಾಹಿತಿ ಡಾ। ಪಿ.ವಿ. ನಾರಾಯಣ ಅವರೂ ವಿಚಾರ ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಕನ್ನಡ ವಿ.ವಿ.ಪ್ರಾಧ್ಯಾಪಕರೂ, ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ್ ಎಂ.ವಿ.ಸೀ. ಅವರ ಅಪಾರ ಕೊಡುಗೆಗಳನ್ನು ಕನ್ನಡ ಜನತೆ ಶಾಶ್ವತ ವಾಗಿ ನೆನಪಿಸಿ ಕೊಳ್ಳುವವಂತಹದೆಂದೂ ಹೇಳಿದರು. ಪ್ರತಿಷ್ಠಾನ ಇಂದು ಕನ್ನಡ ವಿಶ್ವವಿದ್ಯಾನಿಲಯದ ಅಧಿಕೃತ ಸಂಶೋಧನ ಕೇಂದ್ರವಾಗಿ ಬೆಳೆದಿರುವುದರ ಹಿಂದೆ ಎಂ.ವಿ. ಸೀತಾರಾಮ ಯ್ಯನವರ ಮತ್ತು ಪ್ರೊ। ಗೀತಾಚಾರ್ಯರಂಥ ಶ್ರಮ ವಿರುವುದನ್ನು ಮರೆಯಲಾಗದು ದೆಂಬುದನ್ನು ಗೋಷ್ಠಿಯ ಮೂರೂ ಜನ ಗಣ್ಯರು ಗುರುತಿಸಿದರು.

ಕವಿಗೋಷ್ಠಿ

ಸಂಜೆ ನಡೆದ ಕವಿಗೋಷ್ಠಿ ಇತ್ತೀಚಿನ ವರ್ಷಗಳಲ್ಲಿ ಅಪರೂಪಕ್ಕೆಂಬಂತೆ ನಡೆದ ಪ್ರಮುಖ ಕವಿಗೋಷ್ಠಿಯಾಗಿತ್ತು. ಇದರಲ್ಲಿ ನಗರದ ಎಲ್ಲ ಮುಖ್ಯ ಕವಿಗಳೂ ಭಾಗವಹಿಸುವ ಮೂಲಕ ಈ ಕವಿಗೋಷ್ಠಿಗೆ ಘನತೆಯನ್ನು ತಂದುಕೊಟ್ಟಿದ್ದರು. ಪ್ರಸಿದ್ಧ ಕವಿಗಳಾದ ಡಾ। ಬಿ.ಸಿ ರಾಮಚಂದ್ರ ಶರ್ಮ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕವಿಗೋಷ್ಠಿಯಲ್ಲಿ ಪ್ರಸಿದ್ಧ ಕವಿಗಳಾದ ಪ್ರೊ। ಜಿ.ಎಸ್. ಸಿದ್ಧಲಿಂಗಯ್ಯ, ಪ್ರೊ। ಕೆ.ಎಸ್. ನಿಸಾರ್ ಅಹಮದ್, ಪ್ರೊ। ಚಂದ್ರಶೇಖರ ಪಾಟೀಲ, ಡಾ। ಸುಮತೀಂದ್ರ ನಾಡಿಗ, ಡಾ। ಸಿದ್ಧಲಿಂಗಯ್ಯ ಡಾ। ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಡಾ। ಕೆ.ಆರ್. ಸಂಧ್ಯಾರೆಡ್ಡಿ, ಡಾ। ಎಲ್. ಹನುಮಂತಯ್ಯ ಮತ್ತು ಶ್ರೀಮತಿ ಎಂ.ಆರ್. ಕಮಲ ಅವರುಗಳು ತಮ್ಮ ಕವನಗಳನ್ನು ವಾಚಿಸಿ ಸಭಿಕರನ್ನು ರಂಜಿಸಿದರು.

ಪ್ರೊ ಡಿ.ಲಿಂಗಯ್ಯ ಅವರು ಕವಿಗೋಷ್ಠಿಯನ್ನು ನಿರ್ವಹಿಸಿದರು.

ಸಮಾರೋಪ ಸಮಾರಂಭ

ಆಚಾರ್ಯ ಬಿ.ಎಂ.ಶ್ರೀ.ಯವರ ಮಾದರಿ ಸ್ಮಾರಕ

ಸಂಜೆ ನಡೆದ ಈ ಎರಡೂ ದಿನಗಳ ರಜತೋತ್ಸವ ಸಮಾರಂಭದ ಸಮಾರೋಪಭಾಷಣವನ್ನು ಪ್ರಸಿದ್ಧಕವಿ, ವಿಮರ್ಶಕರಾದ ಡಾ। ಜಿ.ಎಸ್. ಶಿವರುದ್ರಪ್ಪನವರು ಮಾಡುತ್ತ ಎಂ.ವಿ.ಸೀತಾರಾಮಯ್ಯನವರ ದೂರದೃಷ್ಟಿಯ ಫಲವಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನ ಯಾವುದೇ ಅಗ್ಗದ ಪ್ರಚಾರಕ್ಕೆ ಒಳಗಾಗದೆ ಸದ್ದಿಲ್ಲದಂತೆ ಶುದ್ಧ ಸಾಹಿತ್ಯದ ಕೈಂಕರ್ಯ ಮಾಡುತ್ತ ಕರ್ನಾಟಕ ಸಾಹಿತ್ಯ – ಸಂಸ್ಕೃತಿಯನ್ನು ಕಟ್ಟಿಕೊಡುವಆಚಾರ್ಯ ಬಿ.ಎಂ.ಶ್ರೀ.ಯವರ ಮಾದರಿ ಸ್ಮಾರಕವಾಗಿ ಕೆಲಸವನ್ನು ಮಾಡುತ್ತಿದೆ ಎಂದು ಶ್ಲಾಘಿಸಿದರು. ಡಾ। ಟಿ.ವಿ. ವೆಂಕಟಾಚಲಶಾಸ್ತ್ರೀಗಳಂತಹ ಘನತೆವೆತ್ತ ವಿದ್ವಾಂಸರ ಮಾರ್ಗದರ್ಶನ ಈ ಸಂಸ್ಥೆಗೆ ದೊರಕಿರುವುದು ಸೀತಾರಾಮಯ್ಯನವರ ಸಾಧನೆಯ ನಿದರ್ಶನ. ಅಳಿಸಿ ಹೋಗುತ್ತಿದ್ದ ಹಸ್ತಪ್ರತಿ ಕ್ಷೇತ್ರವನ್ನು ಪ್ರತಿಷ್ಠಾನ ವ್ರತವಾಗಿ ಸ್ವೀಕರಿಸಿದ್ದರ ಫಲವಾಗಿ ಇಂದು ಅದು ವಿಶ್ವವಿದ್ಯಾನಿಲಯಗಳಲ್ಲಿ ಉಳಿಯುವಂತಾಗಿದೆ ಹಾಗೂ ಹೊಸ ವಿಶ್ವ ವಿದ್ಯಾನಿಲಯಗಳು ಮತ್ತು ಮಠಮಾನ್ಯಗಳಲ್ಲಿ ಸಂಸ್ಥೆಯಾಗಿ ಬೆಳೆಯಲು ಮತ್ತು ಒಂದು ಪ್ರಮುಖ ಶಿಸ್ತಾಗಿ ರೂಪಗೊಳ್ಳಲು ಸಾಧ್ಯವಾಗಿದೆ. ಇಷ್ಟು ಅದ್ದೂರಿಯಾಗಿ ಈ ಸಮಾರಂಭ ನಡೆಯಲು ಸಾಧ್ಯವಾಗಿರುವುದೇ ಈ ಆಶಯಗಳನ್ನು ಮತ್ತು ಎಂ.ವಿ. ಸೀತಾರಾಮಯ್ಯನವರ ಕನಸುಗಳನ್ನು ಸಾಕಾರಗೊಳಿಸಲು; ವಿದ್ವಾಂಸರ ತಂಡವನ್ನು ಕಟ್ಟಿಕೊಡಲು ಬಿ.ಎಂ.ಶ್ರೀ. ಪ್ರತಿಷ್ಠಾನ ಒಂದು ಸಮರ್ಥ ವೇದಿಕೆಯಾಗಿದೆ ಎಂಬುದಕ್ಕೆ ನಿದರ್ಶನಾಗಿದೆ ಎಂದರು. ಮುಂದುವರಿದು ಕನ್ನಡ ವಿಶ್ವವಿದ್ಯಾನಿಲಯ ಇದಕ್ಕೆ ಸ್ನಾತಕೋತ್ತರ ಸಂಶೋಧನ ಸಂಸ್ಥೆಯ ಮಾನ್ಯತೆ ಕಲ್ಪಿಸುವ ಮೂಲಕ ಇದರ ಚಟುವಟಿಕೆಗಳಿಗೆ ಒತ್ತಾಸೆಯನ್ನಿತ್ತಿದೆ, ಮುಂದಿನ ದಿನಗಳಲ್ಲಿ ಇದು ಪ್ರಾಬಲ್ಯಮಾನಕ್ಕೆ ಬರುವಂತಾಗಲಿ ಎಂದರು.

ದಾನಿಗಳಿಗೆ ಧನ್ಯವಾದ

ಈ ಸಮಾರಂಭದ ಮುಖ್ಯ ಆಕರ್ಷಣೆಯಾಗಿ ಪ್ರತಿಷ್ಠಾನವನ್ನು ಈ ಮಟ್ಟಕ್ಕೆ ಕಟ್ಟಲು ಕಾರಣಕರ್ತರಾದ ದಾನಿಗಳಿಗೆ ಮತ್ತು ಹಿಂದಿನ ಪದಾಧಿಕಾರಿಗಳಿಗೆ ಗೌರವಾರ್ಪಣೆ ಕಾರ್ಯಕ್ರಮ ನಡೆಯಿತು. ಮೊದಲಿಗೆ ಕಲಾಭವನದ ನಿರ್ಮಾಣಕ್ಕೆ ಮತ್ತು ಪ್ರತಿಷ್ಠಾನದ ಚಟುವಟಿಕೆಗಳಿಗೆ ಉದಾರವಾಗಿ ದಾನ ಮಾಡಿದ ಪ್ರತಿಯೊಬ್ಬರನ್ನು ಗೌರವಾನ್ವಿತವಾಗಿ ಸ್ಮರಿಸಲಾಗುವುದೆಂದು ಸದ್ಯದ ಸ್ಥಿತಿಯಲ್ಲಿ ಇಪ್ಪತ್ತು ಸಾವಿರ ರೂ.ಗಳ ಮೇಲ್ಪಟ್ಟು ದಾನ ಮಾಡಿದ ದಾನಿಗಳನ್ನು ಸಾಂಕೇತಿಕವಾಗಿ ಈ ರಜತೋತ್ಸವ ಸಂದರ್ಭದಲ್ಲಿ ಸನ್ಮಾನಿಸಲಾಗುವುದೆಂದು ತಿಳಿಸುತ್ತ ಸಮಾರಂಭದಲ್ಲಿ ಉಪಸ್ಥಿತರಿದ್ದ ಶ್ರೀಮತಿ ಸಾಪಿತ್ರಮ್ಮ ರಾಮಸ್ವಾಮಿ (1,75,000/–) ಪ್ರೊ। ಎ.ಎಚ್. ರಾಮರಾವ್; ಶ್ರೀಮತಿ ಲಲಿತಮ್ಮ (25,000/–) ಶ್ರೀ ಎಸ್.ಟಿ. ರಾಧಾಕೃಷ್ಣ (1,00,000/–) ಪ್ರೊ ಎಂ.ಆರ್.

ದೊರೆಸ್ವಾಮಿ (50,000/–) ಅವರುಗಳಿಗೆ ಕೇಂದ್ರ ಸಚಿವರಾದ ಶ್ರೀ ಎಂ.ವಿ.ರಾಜ ಶೇಖರನ್ ಅವರ ಮೂಲಕ ಸ್ಮರಣಿಕೆ, ಫಲ ಪುಷ್ಪಗಳನ್ನು ನೀಡಿ ಸನ್ಮಾನಿಸಲಾಯಿತು. ಸಮಾರಂಭಕ್ಕೆ ಆಗಮಿಸಲಾಗದ ಸಂಸದರಾದ ಶ್ರೀ ಅನಂತಕುಮಾರ್(10,00,000/– ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ (1,00,000/–) ಬಿ.ಎಂ.ಶ್ರೀ. ಬಂಧುಗಳಾದ ಪುಣೆಯ ಶ್ರೀಮತಿ ರತ್ನ ಎನ್.ರಾವ್ (1,00,000/–) ಮಾಜಿ ಶಾಸಕರಾದ ಶ್ರೀ ಎಚ್.ಎನ್. ನಂಜೇಗೌಡ (20,000/–) ಅವರುಗಳಿಗೂ ನಿಧನರಾಗಿರುವ ದಾನಿಗಳಾದ ಸಂಸದ ಶ್ರೀ ರಾಮಕೃಷ್ಣ ಹೆಗಡೆ (2,00,000/–) ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತ ಶಿವರಾಮ ಕಾರಂತ (20,000/–) ಅವರುಗಳನ್ನು ಸ್ಮರಿಸಲಾಯಿತು. ಪ್ರತಿಷ್ಠಾನದ ಕಟ್ಟಡ ನಿರ್ಮಾಣದಿಂದ ಈ ಸಮಾರಂಭದ ವರೆಗೆ ಸಹಕರಿಸಿರುವನಗರ ಪಾಲಿಕೆ ಸದಸ್ಯರಾದ ಶ್ರೀ ಬಿ.ಎಸ್. ಸತ್ಯನಾರಾಯಣ ಅವರನ್ನೂ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಬಿ.ಎಂ.ಶ್ರೀ. ಕಲಾಭವನದ ನಿರ್ಮಾಣಕ್ಕೆ ಇಂಜಿನಿ ಯರಿಂಗ್ ಸಲಹೆ–ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಸೇವೆಯನ್ನು ಉಚಿತವಾಗಿ ಒದಗಿಸುವ ಮೂಲಕ ಸುಮಾರು 20 ಲಕ್ಷ ರೂ.ಗಳ ಕಾಮಗಾರಿಯನ್ನು ಸುಗಮವಾಗಿ ನಡೆಸಿಕೊಟ್ಟ ನಿವೃತ್ತಎಗ್ಸಿಕ್ಯೂಟೀವ್‌ಇಂಜಿನಿಯರ್‌ಆದಶ್ರೀಜಿ.ವಿ.ರಾವ್‌ಅವರನ್ನುಗೌರವಿಸಲಾಯಿತು.

ಹಿಂದಿನ ಪದಾಧಿಕಾರಿಗಳಿಗೆ ಕೃತಜ್ಞತೆ

ಪ್ರತಿಷ್ಠಾನವನ್ನು ಕಟ್ಟಡ ರೂಪದಲ್ಲಿ ಕಟ್ಟಲು ದಾನಿಗಳ ದೇಣಿಗೆ ನೆರವಾದರೆ ಸಾಹಿತ್ಯ–ಸಂಘಟನೆಯ ರೂಪದಲ್ಲಿ ಕಟ್ಟಲು ಹಿಂದಿನ ಪದಾಧಿಕಾರಿಗಳ ಸೇವೆ, ಶ್ರಮ ನೆರವಾಗಿದೆ. ಆದ್ದರಿಂದ ಅವರೆಲ್ಲರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದುನಮ್ಮ ಕರ್ತವ್ಯವೆನ್ನುತ್ತ ಎಲ್ಲ ಪದಾಧಿಕಾರಿಗಳು – ಕಾರ್ಯಸಮಿತಿ ಸದಸ್ಯರು, ಉಪಸಮಿತಿ ಗಳ ಸದಸ್ಯರು – ಸಂಚಾಲಕರು, ಕಾರ್ಯಕರ್ತರು ಎಲ್ಲರೂ ಪ್ರತಿಷ್ಠಾನವನ್ನು ಈ ಮಟ್ಟಕ್ಕೆ ತರಲು ಕಾರಣಕರ್ತರಾಗಿದ್ದು ಅವರೆಲ್ಲರನ್ನು ಗೌರವಿಸಬೇಕಾದುದು ಅತ್ಯಗತ್ಯ ವಾದರೂ ಸದ್ಯದ ಪರಿಸ್ಥಿತಿಯಲ್ಲಿ ಹಿಂದಿನ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ಮತ್ತು ಕೋಶಾಧಿಕಾರಿ ಗಳನ್ನು ಮಾತ್ರ ಸಾಂಕೇತಿಕವಾಗಿ ಗೌರವಿಸಲಾಗುತ್ತಿದೆಯೆಂದೂ ಉಳಿದವರನ್ನೂ ಗೌರವಿಸುವಂಥಹ ಶಕ್ತಿ ಮುಂದಿನ ದಿನಗಳಲ್ಲಿ ಪ್ರತಿಷ್ಠಾನಕ್ಕೆ ಬರು ವಂತಾಗಬೇಕೆಂದೂ ಸೂಚಿಸುತ್ತ ಹಿಂದಿನ ಅಧ್ಯಕ್ಷರೂಗಳಾದ ಪ್ರೊ। ಎಲ್.ಎಸ್.ಶೇಷ ಗಿರಿರಾವ್, ಶ್ರೀ ಎನ್. ಬಸವಾರಾಧ್ಯ ಹಾಗೂ ವಿವಿಧ ಅವಧಿಗಳಲ್ಲಿ ಗೌ॥ ಕಾರ್ಯದರ್ಶಿ ಗಳಾಗಿದ್ದ ಪ್ರೊ॥ ಕೆ.ಎಸ್. ಮಧುಸೂಧನ, ಪ್ರೊ ॥. ಎಂ.ವಿ.ಸತ್ಯ ನಾರಾಯಣ ಡಾ॥ ಇಕ್ಬಾಲ್ ಅಹಮದ್ ಅವರುಗಳನ್ನು ಸನ್ಮಾನಿಸಲಾಯಿತು ಕಾರಣಾಂತರದಿಂದ ಸಭೆಗೆ ಹಾಜರಾಗದಿದ್ದ ಡಾ। ಕೆ.ಆರ್. ಗಣೇಶ್, ಎನ್.ಎಸ್. ರಾಮಸ್ವಾಮಿ ಅಯ್ಯರ್, ಶ್ರೀ ದೊಡ್ಡ ರಂಗೇಗೌಡ, ಪ್ರೊ। ಗೋವಿಂದ ಅ. ಜಾಲಿಹಾಳ ಹಾಗೂ ಶ್ರೀ ಚನ್ನವೀರ ಸ್ವಾಮಿ ಹಾಗೂ ಕಟ್ಟಡ ಸಮಿತಿ ಸಂಚಾಲಕರಾಗಿದ್ದ ಪ್ರೊ॥ ಎಚ್.ಆರ್. ದಾಸೇಗೌಡ ಅವರುಗಳಸೇವೆ ಯನ್ನೂ, ಕೃತಜ್ಞತೆಯಿಂದ ಸ್ಮರಿಸಲಾಯಿತು. ನಿಧನರಾಗಿರುವ ಹಿಂದಿನ ಪದಾಧಿ

ಕಾರಿಗಳಾದ ಶ್ರೀ ಕೆ. ರಾಜಾರಾವ್, ಶ್ರೀ ಜಿ.ಎಸ್. ವೆಂಕಟರಾಜು ಅವರನ್ನು ಸ್ಮರಿಸಿಕೊಳ್ಳಲಾಯಿತು.

ಕಾರ್ಯಕರ್ತರಿಗೆ ಗೌರವ

ಇದೇ ಸಂದರ್ಭದಲ್ಲಿ ಪ್ರತಿಷ್ಠಾನದಲ್ಲಿ ಪದಾಧಿಕಾರಿಗಳಷ್ಟೇ ಮುಖ್ಯವಾಗಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿ ವೇದಿಕೆಯಿಂದ ಕಚೇರಿಯವರೆಗೆ ಎಲ್ಲ ರೀತಿಯ ಕಾರ್ಯಗಳಲ್ಲೂ ಸ್ವಯಂಸೇವಕರಾಗಿ ಇಂದಿಗೂ ಸಹಕರಿಸುತ್ತಿರುವ ಶ್ರೀ ಕುಮಾರ್ ಮತ್ತು ಶ್ರೀ ವರದರಾಜು ಅವರುಗಳನ್ನು ಗೌರವಿಸಲಾಯಿತು. ಆ ಸಮಯದಲ್ಲಿ ಉಪಸ್ಥಿತರಿಲ್ಲದ ಶ್ರೀ ಜಿ. ಶಂಭಣ್ಣ, ಶ್ರೀ ಶಶಿಧರ್, ಶ್ರೀ ಪರಮಶಿವಮೂರ್ತಿ, ಶ್ರೀ ಕೃಷ್ಣಯ್ಯ, ಡಾ। ಪಿ.ಇ.ಸೋಮಯ್ಯ ಅವರುಗಳಿಗೂ ಕೃತಜ್ಞತೆ ಸಲ್ಲಿಸಲಾಯಿತು.

ಕರ್ತವ್ಯ ಸಮರ್ಪಣೆ

ಈ ಸನ್ಮಾನ ಸಮಾರಂಭವನ್ನು ನಿರ್ವಹಿಸಿಕೊಟ್ಟ ಗೌ॥ ಕಾರ್ಯದರ್ಶಿಗಳಾದ ಪ್ರೊ॥ ನಾ. ಗೀತಾಚಾರ್ಯರು ಭಾವುಕರಾಗಿ ಮಾತುಗಳು ಹೊರಡದಂತೆ ಗದ್ಗದಿತರಾದದ್ದು ಅವರು ಸಂಸ್ಥೆಯೊಂದಿಗೆ ಹೊಂದಿದ್ದ ಭಾವನಾತ್ಮಕ ಸಂಬಂಧದ ದ್ಯೋತಕವಾಗಿತ್ತು. 'ಸಂಸ್ಥಾಪಕರೊಂದಿಗೆ ಆರಂಭದಿಂದ ಕಾರ್ಯಕರ್ತರಾಗಿದ್ದು ಅಂತ್ಯಕಾಲದಲ್ಲಿ ಅವರು ತಮಗೆ ಒಪ್ಪಿಸಿದ ಹತ್ತು ವರ್ಷದ ಈ ಕೂಸನ್ನು ಇದೀಗ 25 ವರ್ಷಗಳ ಯುವಕನನ್ನಾಗಿ, ಸದೃಢನನ್ನಾಗಿ ರೂಪಿಸಿ ನಿಮ್ಮ ಮುಂದೆ ನಿಲ್ಲಿಸಿದ್ದೇನೆ. ಅವರಿಗೆ ಕೊಟ್ಟ ಮಾತನ್ನು ಉಳಿಸುವ ಕರ್ತವ್ಯ ಇಂದಿಗೆ ಮುಗಿದ ಧನ್ಯತೆ ಬಂದಿದೆ. ಇನ್ನು ನನ್ನ ಆರೈಕೆಯ ಅಗತ್ಯ ಪ್ರತಿಷ್ಠಾನಕ್ಕೆ ಬರದು, ನಾನು ನಿರ್ಗಮಿಸುತ್ತೇನೆ' ಎಂದು ಅವರು ಭಾವುಕರಾಗಿ ನುಡಿದರೂ ಪ್ರತಿಷ್ಠಾನಕ್ಕೆ ಇನ್ನು ಮುಂದೆಯೇ ಅವರಂತಹ ನಿಷ್ಠಾವಂತ ಕಾರ್ಯಕರ್ತರ ಅವಶ್ಯಕತೆಯಿರುವುದು, ಅವರ ಸೇವೆ ನಿರಂತರವಾಗಿರಲಿ ಎಂದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಚ್.ಎಸ್. ದೊರೆಸ್ವಾಮಿ ಹಾಗೂ ಹಿರಿಯ ಸಾಹಿತಿಗಳಾದ ಪ್ರೊ॥ ಎಸ್.ಆರ್. ಮಳಗಿ ಅವರು ಬಿ.ಎಂ.ಶ್ರೀ., ಎಂ.ವಿ.ಸೀ. ಮತ್ತು ಪ್ರತಿಷ್ಠಾನದೊಂದಿಗಿನ ತಮ್ಮ ನೆನಪುಗಳನ್ನು ಹಂಚಿಕೊಂಡರು. ಈ ಸನ್ಮಾನ ಸಮಾರಂಭದ ನೆನೆಪಿನ ಕಾಣಿಕೆಗಳ ದಾನಿಗಳೂ, ಪ್ರತಿಷ್ಠಾನದ ಹಸ್ತಪ್ರತಿ ಭಂಡಾರವನ್ನು ಸುಸಜ್ಜಿತಗೊಳಿಸಲು ಮತ್ತು 'ಸಿರಿಸಂಗೀತ'ವನ್ನು ನಡೆಸಲು ಮುಂದೆ ಬಂದಿರುವ ಪ್ರಾಯೋಜಕರೂ, ಅತ್ತಿಮಬ್ಬೆ ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕರೂ ಆದ ಶ್ರೀಮತಿ ಮನೋಹರಿ ಪಾರ್ಥಸಾರಥಿ ಅವರೂ ಕೃತಜ್ಞತೆ ಸಲ್ಲಿಸಿದರು.

ಮಾನ್ಯ ಮಂತ್ರಿಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಈ ಸಮಾರಂಭಕ್ಕೆ ಹಾಜರಾಗಿ ಪ್ರತಿಷ್ಠಾನದಂತಹ ಪ್ರತಿಷ್ಠಿತ ಸಾಹಿತಿ-ಗಣ್ಯರನ್ನೊಳಗೊಂಡ ಸಂಸ್ಥೆಗೆ ಹೇಗಾದರೂ ಹೋಗಲೇಬೇಕೆಂಬ ತುಡಿತದಿಂದ ಪ್ರಯಾಣದ ಆಯಾಸವಿದ್ದರೂ ಬಂದಿರುವುದಾಗಿ ತಮ್ಮ ಅಭಿಮಾನ ವ್ಯಕ್ತಪಡಿಸಿ ಈ ಸಂಸ್ಥೆಯ ಪೋಷಣೆಗೆ ಅಗತ್ಯವಾದ

ಎಲ್ಲ ರೀತಿಯ ಸಹಕಾರವನ್ನು ಸರ್ಕಾರದ ಮೂಲಕ ಮತ್ತು ವೈಯಕ್ತಿಕವಾಗಿ ಒದಗಿಸುವ ಆಶ್ವಾಸನೆ ನೀಡಿದರು.

ಮಾನ್ಯ ಕೇಂದ್ರ ಸಚಿವರಾದ ಶ್ರೀ ಎಂ.ವಿ. ರಾಜಶೇಖರನ್ ಅವರು ಇಂತಹ ಪವಿತ್ರ ಸಮಾರಂಭದಲ್ಲಿ ಭಾಗವಹಿಸಿರುವ ಭಾಗ್ಯ ನನ್ನದಾಗಿದೆ ಎನ್ನುತ್ತ ಪ್ರಾಮಾಣಿಕತೆ-ಸೇವೆ-ನಿಷ್ಠೆಗಳು ಮನೆಮಾಡಿರುವ ಪ್ರತಿಷ್ಠಾನದ ಸಂಪರ್ಕ ಇರುವ ಪ್ರತಿಯೊಬ್ಬರೂ ಪುಣ್ಯಜೀವಿಗಳು, ಇಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪುಣ್ಯವನ್ನು ಸಂಪಾದಿಸುವ ಸಾರ್ಥಕ ಸೇವಾಕಾರ್ಯದಲ್ಲಿ ನಿರತವಾಗಿದ್ದಾರೆ ಎಂದು ಪ್ರಶಂಸಿಸುತ್ತ, ಬಿ.ಎಂ.ಶ್ರೀ. ಕಲಾಭವನದ ಉಳಿದ ಕಾಮಗಾರಿಗೆ ಅಗತ್ಯವಾದ ಹಣವನ್ನು ತಮ್ಮ ಸಂಸದರ ನಿಧಿಯಿಂದ ನೀಡಿ ತಾನೂ ಒಂದಿಷ್ಟು ಪುಣ್ಯ ಸಂಪಾದಿಸುತ್ತೇನೆ ಎಂದು ಸಭಿಕರ ಮನ ಗೆದ್ದರು.

ಕೃತಜ್ಞತಾ ಸಲ್ಲಿಕೆ

ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷರಾದ ಡಾ। ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಈ ಸಮಾರಂಭದ ಯಶಸ್ವಿಗೆ ಶ್ರಮಿಸಿದ ಪ್ರತಿಯೊಬ್ಬರನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿದರು. ತಮ್ಮ ಕೆಲಸವನ್ನು ಹಗುರ ಮಾಡಿದ ಸಮಿತಿ ಸದಸ್ಯರು ಗಳಿಗೆ, ಸಂಚಾಲಕರಾದ ಶ್ರೀ ಎಸ್.ವಿ. ಶ್ರೀನಿವಾಸರಾವ್, ಶ್ರೀ ಎನ್.ಎಸ್. ಕೃಷ್ಣಸ್ವಾಮಿ, ಕೋಶಾಧಿಕಾರಿಗಳಾದ ಪ್ರೊ। ಡಿ. ಲಿಂಗಯ್ಯ ಹಾಗೂ ಸಂಸ್ಥೆಯ ಚಾಲಕರಾಗಿರುವ ಗೌ। ಕಾರ್ಯದರ್ಶಿ ಶ್ರೀ ಗೀತಾಚಾರ್ಯ ಅವರುಗಳಿಗೆ ಹಾಗೂ ದಾನಿ ಗಳಿಗೆ ಕೃತಜ್ಞತೆ ಗಳನ್ನರ್ಪಿಸಿದರು. ಇಡೀ ಕಾರ್ಯಕ್ರಮ ಡಾ। ಎಂ.ಎಲ್.ಲಲಿತಮ್ಮ ಅವರ ನಿರ್ವಹಣೆಯಲ್ಲಿ ನಡೆಯಿತು. ಶ್ರೀ.ಎಸ್.ವಿ. ಶ್ರೀನಿವಾಸರಾವ್ ಅವರು ವಂದನಾರ್ಪಣೆ ಮಾಡಿದರು.

ರಜತೋತ್ಸವ ಸಮಾರಂಭದ ಎರಡೂ ದಿನ ಸಾಂಸ್ಕೃತಿಕ ಸಮಿತಿಯ ಕಾರ್ಯಕರ್ತರುಗಳಾದ ಶ್ರೀಮತಿ ಜಯಾ ಪಾರ್ಥಸಾರಥಿ, ರಮಾದೇವಿ ವಿಶ್ವೇಶ್ವರಯ್ಯ, ಲಕ್ಷ್ಮೀಮೂರ್ತಿ ಅವರುಗಳೊಂದಿಗೆ ಸುಗಮ ಸಂಗೀತ ಕಲಾವಿದರಾದ ನಾರಾಯಣ ರಾವ್‌ಮಾನೆ, ಪ್ರಸನ್ನ, ಮಂಜುಳಮೋಹನ್ ಮುಂತಾದವರು ಗೋಷ್ಠಿಗಳ ನಡುವೆ ನಡೆಸಿಕೊಟ್ಟ ಕನ್ನಡ ಭಾವಗೀತೆಗಳ ಸುಶ್ರಾವ್ಯ ಹಾಡುಗಾರಿಕೆ ಸಮಾರಂಭಕ್ಕೆ ಶೋಭೆಯನ್ನು ತಂದಿತ್ತು.

ಹಸ್ತಪ್ರತಿ - ಪುಸ್ತಕ - ವಸ್ತುಪ್ರದರ್ಶನ

ಸಮಾರಂಭದ ಆರೂ ದಿನ (10 ರಿಂದ 15 ರವರೆಗೆ) ಎಂ.ವಿ.ಸೀ. ಸಭಾಂಗಣದ ಮೇಲಿನ ರಜತೋತ್ಸವ ಮಹಡಿಯಲ್ಲಿ ಪ್ರತಿಷ್ಠಾನದ ಅಮೂಲ್ಯ ಸಂಗ್ರಹ ವಾದ ಪ್ರಾಚೀನ ಹಸ್ತಪ್ರತಿಗಳ ಮತ್ತು ಪ್ರತಿಷ್ಠಾನದ ಈವರೆಗಿನ ಹೆಮ್ಮೆಯ ಪ್ರಕಟನೆಗಳ ಹಾಗೂ ಇಪ್ಪತ್ತೈದು ವರ್ಷಗಳ ಸಾಧನೆಯನ್ನು ಗುರುತಿಸುವಂತಹ ಭಾವಚಿತ್ರಗಳು, ಪತ್ರಿಕಾ ವರದಿಗಳ ವಸ್ತು ಪ್ರದರ್ಶನವನ್ನು, ಶ್ರೀ ಮು.ಅ.ವೆಂಕಟೇಶ್‌ರವರ ಮೇಲ್ವಿಚಾರಣೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹಸ್ತಪ್ರತಿ ಪ್ರದರ್ಶನದ ವ್ಯವಸ್ಥೆಯನ್ನು

'ಸಿರಿಕಂಟ'ದ ಸಂಚಾಲಕರಾದ ಶ್ರೀ ಜಿ.ಎಸ್.ಎಸ್. ರಾವ್ ಅವರು ಕಾರ್ಯಕರ್ತರ ಸಹಕಾರದಿಂದ ಅಚ್ಚುಕಟ್ಟಾಗಿ ರೂಪಿಸಿದ್ದರು.

ಪುಸ್ತಕ ಪ್ರದರ್ಶನದಲ್ಲಿ ಪ್ರತಿಷ್ಠಾನದ ಈವರೆಗಿನ ಎಲ್ಲ ಪ್ರಕಟನೆಗಳನ್ನು ಪ್ರತಿಷ್ಠಾನದ ಪ್ರತಿಷ್ಠಿತ ಪತ್ರಿಕೆಯಾದ 'ಕರ್ನಾಟಕ ಲೋಚನ'ದ ಎಲ್ಲ ಸಂಚಿಕೆಗಳನ್ನು ಮತ್ತು ಬಿ.ಎಂ.ಶ್ರೀ. ಹಾಗೂ ಎಂ.ವಿ.ಸೀ. ಅವರ ಪುಸ್ತಕಗಳನ್ನು ಪ್ರದರ್ಶಿಸಲಾಗಿತ್ತು. ಇದರೊಂದಿಗೆ ರಜತೋತ್ಸವ ಸಂದರ್ಭದ ಪ್ರಕಟಣೆಗಳು ಸೇರಿದಂತೆ ಪುಸ್ತಕ ಮಾರಾಟವನ್ನು ಏರ್ಪಡಿಸಲಾಗಿತ್ತು. ಶ್ರೀ ರಾಮಮೂರ್ತಿ ಮತ್ತು ಶ್ರೀ ನರಸಿಂಹ ರೆಡ್ಡಿಯವರು ಇದರ ಜವಾಬ್ದಾರಿಯನ್ನು ನಿರ್ವಹಿಸಿದರು.

ವಸ್ತುಪ್ರದರ್ಶನದಲ್ಲಿ ಪ್ರತಿಷ್ಠಾನದ ಇಪ್ಪತ್ತೈದು ವರ್ಷಗಳ ಮುಖ್ಯ ಕಾರ್ಯಕ್ರಮಗಳ ಭಾವಚಿತ್ರಗಳು - ಪತ್ರಿಕಾ ವರದಿಗಳನ್ನು, ಅಂದವಾಗಿ ಜೋಡಿಸಿ ಪ್ರದರ್ಶಿಸಲಾಗಿತ್ತು. ಶ್ರೀ ಮು.ಅ. ವೆಂಕಟೇಶ್‌ರವರು ಶ್ರೀ ಭಗವಾನ್, ಶ್ರೀ ಪಾರ್ಥಸಾರಥಿ ಮುಂತಾದ ಕಾರ್ಯಕರ್ತರ ನೆರವಿನಿಂದ ಈ ಪ್ರದರ್ಶನವನ್ನು ರೂಪಿಸಿದ್ದರು. ಇದರಲ್ಲಿ ಶ್ರೀಮತಿ ಜಯಾ ಪಾರ್ಥಸಾರಥಿ ಮತ್ತು ಸ್ನೇಹಿತೆಯರು ಮಾಡಿದ್ದ ಭುವನೇಶ್ವರಿಯ ಬೊಂಬೆಯ ಕೈಗೆ ಪ್ರತಿಷ್ಠಾನದ ಹಸ್ತಪ್ರತಿಯನ್ನು ಇಟ್ಟು ಪ್ರದರ್ಶಿಸಿದ್ದುದು ಸಭಿಕರ ಮೆಚ್ಚುಗೆಗೆ ಪಾತ್ರವಾಗಿತ್ತು.

ಇಡೀ ಪ್ರದರ್ಶನ ಸಭಿಕರಿಂದ ಅಭಿನಂದನೆಗೆ ಒಳಗಾಗಿತ್ತು. ಇದು ಪ್ರತಿಷ್ಠಾನದ ಸಾಧನೆಗಳನ್ನು ದೃಶ್ಯಮಾಧ್ಯಮದಲ್ಲಿ ಸಮರ್ಥವಾಗಿ ಬಿಂಬಿಸಿತ್ತು.

ಸಾಂಸ್ಕೃತಿಕ ಕಾರ್ಯಕ್ರಮ

ಸಮಾರಂಭದ ಆರೂದಿನ ಸಂಜೆಯವೇಳೆ ವಿವಿಧಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಐದು ದಿನದ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಿಸಿತ್ತು. ನೃತ್ಯ ಕಾರ್ಯಕ್ರಮವನ್ನು ಅಜಂತ ಕಲಾಕೇಂದ್ರ ಪ್ರಾಯೋಜಿಸಿತ್ತು.

ಸಿರಿಸಂಗೀತ - ಪ್ರಾಯೋಗಿಕ ಕಾರ್ಯಕ್ರಮ

ಈ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಈ ರಜತೋತ್ಸವದ ವಿಶೇಷ ಕಾರ್ಯಕ್ರಮವಾಗಿ ಪ್ರತಿಷ್ಠಾನ ಆರಂಭಿಸುತ್ತಿರುವ ತಿಂಗಳ ಸಂಗೀತಕಾರ್ಯಕ್ರಮ ಮಾಲೆಯಾದ 'ಸಿರಿಸಂಗೀತ'ದ ಎಲ್ಲ ಮಾದರಿಗಳನ್ನು ಪ್ರಾಯೋಗಿಕವಾಗಿ ರೂಪಿಸಲಾಗಿತ್ತು. ಸಿರಿಸಂಗೀತದಲ್ಲಿ ಪ್ರತಿ ತಿಂಗಳು ಒಂದೊಂದು ಸಂಗೀತ ಕಾರ್ಯಕ್ರಮವಿದ್ದು ಇವುಗಳಲ್ಲಿ ಭಾವಗೀತೆ, ವಚನ, ಕೀರ್ತನೆ, ಜಾನಪದ ಮತ್ತು ತತ್ವಪದಗಳ ಹಾಗೂ ಗಮಕ ಸಂಗೀತ ಕಾರ್ಯಕ್ರಮವನ್ನು ಪರಿಚಯಿಸಲಾಗುವುದು: ಇದರಲ್ಲಿ ಹೊಸಸಾಹಿತ್ಯಗಳನ್ನೂ ಗಾಯಕರಿಂದ ಪ್ರಸ್ತುತ 'ಪಡಿಸುವುದು ಮೂಲ ಉದ್ದೇಶ. ಈ ಎಲ್ಲ ವೈವಿಧ್ಯತೆಗಳ ಮಾದರಿಗಳನ್ನು ಈ ಆರು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಳವಡಿಸಲಾಗಿತ್ತು.

ಸುಗಮ ಸಂಗೀತ

ಪ್ರಸಿದ್ಧ ಸುಗಮ ಸಂಗೀತ ಗಾಯಕರಾದ ಶ್ರೀ ಶಿವಮೊಗ್ಗಸುಬ್ಬಣ್ಣ ಮತ್ತು ತಂಡದವರು ಭಾವಗೀತೆ ಕಾರ್ಯಕ್ರಮವನ್ನು 10-9-04ರಂದು ನೀಡಿದರು. ಬಿ.ಎಂ.ಶ್ರೀ., ಎಂ.ವಿ.ಸೀ., ಕುವೆಂಪು ಮೊದಲಾದ ಕವಿಗಳ ಹಾಡುಗಳನ್ನು ಹಾಡಿ ರಂಜಿಸಿದರು.

ಶ್ರೀ ಕೃಷ್ಣಲೀಲಾಗಾನ-ಗಮಕ ಸಂಗೀತ

12.09.04ರಂದು ಪ್ರತಿಷ್ಠಾನದ ಕಟ್ಟಡದ ಗೌರವ ಸಲಹೆಗಾರರೂ, ನಿವೃತ್ತ ಕಾರ್ಯನಿರ್ವಾಹಕ ಇಂಜನಿಯರ್ ಆದ ಭಕ್ತ ಕವಿ ಜಿ. ವಿಠಲರಾವ್ ಅವರಿಂದ ಕೀರ್ತನೆಗಳ ಹಾಡುಗಾರಿಕೆ ನಡೆಯಿತು. ಇದರಲ್ಲಿ ಸ್ವತಃ ವಿಠಲರಾಯರು ರಚಿಸಿ ಪ್ರತಿಷ್ಠಾನದ ರಜತೋತ್ಸವ ಮಾಲೆಯಲ್ಲಿ ಬಿಡುಗಡೆಗೊಂಡ 'ಶ್ರೀಕೃಷ್ಣಲೀಲಾ ಗಾನಂ' ಕೃತಿಯ ಶ್ರೀಕೃಷ್ಣಗಾನಲೀಲೆಗಳ ಆಧರಿಸಿದ ಕೀರ್ತನೆಗಳ ಗಾಯನವಿತ್ತು. ತೆಲಗು ಸೀಸ ಪದ್ಯಗಳ ಧಾಟಿಯ ಈ ಗಮಕ ಗಾಯನ ವಿಶೇಷವಾಗಿತ್ತು.

ವಚನ ವೈವಿಧ್ಯ ಹಾಗೂ ಪ್ರತಿಷ್ಠಾನದ ಭಾವಗೀತೆ ತರಗತಿಯ ಸಮಾರೋಪ

13-9-04ರಂದು ಸೋಮವಾರ ಸಂಜೆ ಶ್ರೀ ಪ್ರಸನ್ನ ಮತ್ತು ತಂಡದವರಿಂದ ವಚನ ಗಾಯನ ಕಾರ್ಯಕ್ರಮದ ಜೊತೆಗೆ ಪ್ರತಿಷ್ಠಾನದಲ್ಲಿ ಕಳೆದ ಆರು ತಿಂಗಳಿಂದ ನಡೆಯುತ್ತಿದ್ದ ಭಾವಗೀತೆ ತರಗತಿಯ ಸಮಾರೋಪ ಸಮಾರಂಭ ಹಾಗೂ ತರಬೇತಿ ಪಡೆದ ವಿದ್ಯಾರ್ಥಿ ಗಾಯಕರಿಂದ ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಯಿತು.

ಶ್ರೀಮತಿ ಜಯಾಪಾರ್ಥಸಾರಥಿ ಹಾಗೂ ಶ್ರೀ ಪ್ರಸನ್ನ ಅವರಿಂದ ತರಬೇತುಗೊಂಡ ಯುವ ಗಾಯಕರು ಹಲವಾರು ಹಾಡುಗಳನ್ನು ಪ್ರಸ್ತುತಪಡಿಸಿದರು. ತರಬೇತಿ ಪಡೆದ ಎಲ್ಲ ಗಾಯಕರಿಗೂ ಪ್ರತಿಷ್ಠಾನದಿಂದ ಅರ್ಹತಾ ಪತ್ರವನ್ನು ಮತ್ತು ಪುಸ್ತಕ ಕಾಣಿಕೆಯನ್ನು ಶ್ರೀಮತಿ ಮನೋಹರಿ ಪಾರ್ಥಸಾರಥಿ ಅವರು ವಿತರಿಸಿದರು. ಪ್ರತಿಷ್ಠಾನದ ವೈವಿಧ್ಯಮಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತ ಕೊಡುಗೈ ದಾನಿಗಳೂ, ಕಲಾಪೋಷಕರು, ಸಾಹಿತ್ಯಭಿಮಾನಿಗಳೂ ಆದ ಮನೋಹರಿ ಅವರು ಪ್ರತಿಷ್ಠಾನ ನಡೆಸುವ ತಿಂಗಳ 'ಸಿರಿಸಂಗೀತ' ಕಾರ್ಯಕ್ರಮಮಾಲೆಯನ್ನು ಅತ್ತಿಮಬ್ಬೆ ಪ್ರತಿಷ್ಠಾನ ಪ್ರಾಯೋಜಿಸುತ್ತದೆ ಎಂದು ಘೋಷಿಸಿದರು. ಅತ್ತಿಮಬ್ಬೆ ಪ್ರತಿಷ್ಠಾನ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನಗಳ ಸಹಯೋಗದಲ್ಲಿ ಇನ್ನು ಮುಂದೆ ಈ 'ಸಿರಿಸಂಗೀತ' ಕಾರ್ಯಕ್ರಮ ಪ್ರತಿ ತಿಂಗಳು ಒಂದು ನಿರ್ದಿಷ್ಟ ದಿನದಂದು ನಡೆಯುತ್ತದೆ. ಎನ್ನುತ್ತಾ ಪ್ರೊ ಡಿ. ಲಿಂಗಯ್ಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಶ್ರೀಮತಿ ಮನೋಹರಿ ಅವರ ಕೊಡುಗೆಯನ್ನು ಸ್ವಾಗತಿಸುತ್ತ ಶ್ರೀಮತಿ ಜಯಾ ಪಾರ್ಥಸಾರಥಿ ಅವರ ಪರಿಶ್ರಮವನ್ನು ಮೆಚ್ಚುತ್ತ ಈ ಸಿರಿಸಂಗೀತ ಮತ್ತು ಭಾವಗೀತೆ ತರಗತಿಯನ್ನು ನಿರಂತರವಾಗಿ ಮುನ್ನಡೆಸಿಕೊಂಡು ಹೋಗಬೇಕೆಂದರು. ಪ್ರೊ ಗೀತಾಚಾರ್ಯ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜಯಾ ಪಾರ್ಥಸಾರಥಿ ಕಾರ್ಯಕ್ರಮ ನಡೆಸಿಕೊಟ್ಟರು.

ತರಗತಿಯನ್ನು ಸುಗಮವಾಗಿ ನಡೆಸಿಕೊಟ್ಟ ಶ್ರೀ ಪ್ರಸನ್ನ ಮತ್ತು ಜಯಾ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಜಾನಪದ - ತತ್ವಪದ ಸಂಪದ

14-9-04ರಂದು ಶಿವಮೊಗ್ಗದ ಪ್ರಸಿದ್ಧ ಕಲಾವಿದರಾದ ಶ್ರೀ ಗರ್ತಿಕೆರೆ ರಾಘಣ್ಣ ಮತ್ತು ತಂಡದವರು ಜಾನಪದ ಹಾಡುಗಳನ್ನು, ತತ್ವಪದಗಳನ್ನು ವೈವಿಧ್ಯಮಯವಾಗಿ ಹಾಡಿದರು. ಇದರೊಂದಿಗೆ ಕೆಲವು ದೇವರನಾಮಗಳನ್ನು ಹಾಡುವ ಮೂಲಕ ಕಾರ್ಯಕ್ರಮವನ್ನು ರಂಜಿಸಿದರು.

ಕೀರ್ತನ ಗಾಯನ

15-9-04ರಂದು ಯುವ ಸಂಗೀತಗಾರರಾದ ಶ್ರೀ ಕಮಲ್‌ಕುಮಾರ್ ಮತ್ತು ತಂಡದವರಿಂದ ದಾಸರ ಪದಗಳ ಸುಮಧುರ ಗಾಯನ ಕಾರ್ಯಕ್ರಮವಾಯಿತು. ವಿಶೇಷವಾಗಿ ಕನ್ನಡ ಹರಿದಾಸ ಸಾಹಿತ್ಯಕ್ಕೆ ನೂತನ ಪರಿಚಯವಾದ ವಿಶಿಷ್ಟಾದ್ವೈತ ಹರಿದಾಸರ ಹಾಡುಗಳಿಗೆ ನೂತನವಾಗಿ ರಾಗ ಸಂಯೋಜಿಸಿ ಹಾಡುವ ಮೂಲಕ ಕಾರ್ಯಕ್ರಮಕ್ಕೆ ವೈವಿಧ್ಯತೆಯನ್ನು ತಂದರು. ಕವಿ ಲಕ್ಷೀಶ, ನಾರಾಯಣಶರ್ಮರವರು ಮುಂತಾದ ನೂತನ ಹರಿದಾಸರ ಹಾಡುಗಳು ಸಭಿಕರನ್ನು ಮುದಗೊಳಿಸಿದವು.

ಅಜಂತ ಕಲಾ ಕೇಂದ್ರದಿಂದ ನೃತ್ಯ ಕಾರ್ಯಕ್ರಮ

ಮಲ್ಲೇಶ್ವರದ ಅಜಂತ ಕಲಾಕೇಂದ್ರದ ಸ್ಥಾಪಕರೂ, ಬಿ.ಎಂ.ಶ್ರೀ.ಯವರ ಬಂಧುಗಳೂ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಜತೋತ್ಸವ ಸಾಂಸ್ಕೃತಿಕ ಸಮಿತಿಯ ಸಂಚಾಲಕರೂ ಆದ ಶ್ರೀಮತಿ ಲಕ್ಷ್ಮೀಮೂರ್ತಿ ಅವರು 11.09.04ರಂದು ನೃತ್ಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಕ್ಕಳಿಂದ ವೈವಿಧ್ಯಮಯವಾದ ನೃತ್ಯಗಳನ್ನು ಸಂಯೋಜಿಸಿದ್ದರು. ಲಕ್ಷ್ಮೀಮೂರ್ತಿ ಅವರಿಗೆ, ಕೀಬೋರ್ಡ್ ವಾದ್ಯಕಾರರಿಗೆ ಮತ್ತು ನೃತ್ಯ ಕಲಾವಿದರುಗಳಿಗೆ ಪ್ರತಿಷ್ಠಾನದ ಪರವಾಗಿ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಲಾಯಿತು. ಶ್ರೀಮತಿ ಲಕ್ಷ್ಮೀಮೂರ್ತಿಯವರ ಪ್ರತಿಷ್ಠಾನದ ಮೇಲಿನ ಅಭಿಮಾನವನ್ನು ವಿಶೇಷವಾಗಿ ಸ್ಮರಿಸಲಾಯಿತು. ಕಳೆದ ಮೇ ತಿಂಗಳಲ್ಲಿ ಇವರ ಮಾರ್ಗದರ್ಶನದಲ್ಲೇ ನಡೆದಿದ್ದ 'ತೋರಣ' ಮಕ್ಕಳ ಬೇಸಿಗೆ ಶಿಬಿರದ ಸೇವೆಯನ್ನು ಸ್ಮರಿಸುತ್ತ ತಮ್ಮ ಕಲಾಕೇಂದ್ರದ ಚಟುವಟಿಕೆಗಳಿಗೆ ಪ್ರತಿಷ್ಠಾನವನ್ನು ಕೇಂದ್ರವಾಗಿ ಬಳಸಿಕೊಳ್ಳಲು ಆಹ್ವಾನಿಸಲಾಯಿತು.

ವಂದನಾ ಸಭೆ

ಯಶಸ್ವೀ ರಜತೋತ್ಸವ ಸಮಾರಂಭದ ನಂತರ ಸಮಾರಂಭಕ್ಕಾಗಿ ಸಹಕರಿಸಿದ ಕಾರ್ಯಕರ್ತರು ಸಮಿತಿ ಸದಸ್ಯರು - ಸಂಚಾಲಕರು ಮತ್ತು ಪದಾಧಿಕಾರಿಗಳಿಗೆ, ದಾನಿಗಳಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ದಿನಾಂಕ 19-09-04ರಂದು ಭಾನುವಾರ ಬೆಳಿಗ್ಗೆ 10.30ಕ್ಕೆ ವಂದನಾ ಸಭೆಯನ್ನು ಕರೆಯಲಾಗಿತ್ತು. ರಜತೋತ್ಸವ ಸಮಿತಿ

ಗೌರವ ಸಲಹೆಗಾರರಾದ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಜತೋತ್ಸವ ಸಮಿತಿ ಸಂಚಾಲಕರಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ಸಮಾರಂಭಕ್ಕಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಸಮಿತಿಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸಿದರು. ಗೌರವ ಕಾರ್ಯದರ್ಶಿ ಗೀತಾಚಾರ್ಯ ಅವರು ಪ್ರತಿಷ್ಠಾನದ ಮೂಲಕ ಅಧ್ಯಕ್ಷರ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಕಾರ್ಯಕರ್ತರು ತಮ್ಮ ಅನುಭವ ಅಭಿಪ್ರಾಯಗಳನ್ನು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಜಿ.ನಾರಾಯಣ ಅವರು ಇಂತಹ ಕನ್ನಡ ಕಾರ್ಯಗಳಿಗೆ ಇನ್ನು ಮುಂದೆಯೂ ಕಾರ್ಯಕರ್ತರೆಲ್ಲ ಒಟ್ಟಾಗಿ ಸೇರುವಂತಾಗಬೇಕೆಂದರು. ಶ್ರೀ ಎನ್.ಎಸ್. ಕೃಷ್ಣಸ್ವಾಮಿ ಅವರು ಮಾತನಾಡುತ್ತ 'ಪ್ರತಿಷ್ಠಾನದ ಸಿಬ್ಬಂದಿ ವಿಶೇಷವಾಗಿ ಶ್ರಮಿಸಿದ್ದಾರೆ. ಅವರ ತಾಳ್ಮೆ, ಸಹನೆ, ಸೌಹಾರ್ದತೆ ಮೆಚ್ಚುವಂತಹದು. ಗೀತಾಚಾರ್ಯರಂತೂ ಡೆಡಿಕೇಟಡ್ ವರ್ಕರ್. ಸೀತಾರಾಮಯ್ಯನವರ ಕಾಲದಿಂದಲೂ ಪ್ರತಿಷ್ಠಾನದ ಸಂಪರ್ಕದಲ್ಲಿದ್ದಾರೆ. ಕರ್ತವ್ಯದೋಪಾದಿಯಲ್ಲಿ ಪ್ರತಿಷ್ಠಾನವನ್ನು ಕಟ್ಟಿದ್ದಾರೆ. ಗೀತಾಚಾರ್ಯರು ಇಲ್ಲದಿದ್ದರೆ ಈ ಸಂಸ್ಥೆ ಈ ಮಟ್ಟಕ್ಕೆ ಬರುತ್ತಿತ್ತೆಂದು ಹೇಳಲಾಗುತ್ತಿರಲಿಲ್ಲ. ಅವರು ಪಟ್ಟು ಹಿಡಿದು ಕೊಟ್ಟಮಾತಿನಂತೆ ನಡೆದುಕೊಂಡು ಅನೇಕ ಮಹನೀಯರ ನೆರವಿನಿಂದ ಇಂದು ಈ ಸ್ಥಿತಿಗೆ ತಂದಿದ್ದಾರೆ. ಪ್ರತಿಷ್ಠಾನಕ್ಕೆ ಇನ್ನು ಮುಂದೆಯೇ ಅವರ ಅಗತ್ಯ ಹೆಚ್ಚಾಗಿರುತ್ತದೆ. ಆದ್ದರಿಂದ ಸಂಸ್ಥೆಯಲ್ಲಿ ಅವರು ಮುಂದುವರಿಯಬೇಕು, ಅವರು ಬಿಡದಂತೆ ನೋಡಿಕೊಳ್ಳಬೇಕು' ಎಂದು ಹೇಳಿದರು. ಶ್ರೀ. ಟಿ. ನಾಗರಾಜ, ಎಸ್.ಟಿ. ರಾಧಕೃಷ್ಣ, ರಮಾದೇವಿ ವಿಶ್ವೇಶ್ವರಯ್ಯ,ಇನ್ನೂ ಅನೇಕರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಶ್ರೀ ಜಿ. ನಾರಾಯಣ ಅವರು ನೀವು ಬಿಡುತ್ತೇನೆಂಬ ಮಾತೊಂದನ್ನು ಬಿಟ್ಟು ಏನನ್ನಾದರೂ ಹೇಳಿ ಆದರೆ ಬಿಡುವ ಮಾತನ್ನು ಆಡಬಾರದು ಎಂದು ಅವರಿಂದಮಾತು ಪಡೆಯುತ್ತ, ಗೀತಾಚಾರ್ಯರ ಶ್ರಮ, ಸೇವೆ ಅಪರೂಪದ್ದೆಂದರು. 'ಬಿ.ಎಂ.ಶ್ರೀ. ಶತಮಾನೋತ್ಸವ ಸಂದರ್ಭದಲ್ಲಿ ಮುಂಬಯಿಯಲ್ಲಿ ನಾವಿಬ್ಬರೂ ಒಂದು ಕೊಠಡಿಯಲ್ಲಿದ್ದಾಗ ನಾನು ಅವರಿಗೊಂದು ಮಾತು ಹೇಳಿದ್ದೆ. 'ನಿಮ್ಮಿಂದಲೇ ಪ್ರತಿಷ್ಠಾನ ಮುನ್ನಡೆಯಬೇಕು. ಬೇರೆಯವರು ಯಾರೇ ನೀವೇ ಮುಖ್ಯ. ನೀವು ಬಿಡದೆ ಸೀತಾರಾಮಯ್ಯನವರ ನಂತರ ಮುನ್ನಡೆಸಿ ಎಂದಿದ್ದೆ, ಅದರಂತೆ ಮತ್ತು ಸೀತಾರಾಮಯ್ಯನವರಿಗೆ ಕೊಟ್ಟಿದ್ದ ಮಾತಿನಂತೆ, ಬಂದ ಎಡರು ತೊಡರುಗಳನ್ನೆಲ್ಲ ನುಂಗಿಕೊಂಡು ಪ್ರತಿಷ್ಠಾನವನ್ನು ಬೆಳೆಸಿದ್ದಾರೆ. ಅವರು ಇದ್ದೇ ಇರಬೇಕು. ಅವರು ಬಿಡುವ ಪ್ರಶ್ನೆಯೇ ಇಲ್ಲ' ಎಂದರು.

ಗೌರವಾಧ್ಯಕ್ಷರಾಗಿ ಶ್ರೀ ಗಂಗಾಧರ್ ಅವರು ಪ್ರತಿಷ್ಠಾನಕ್ಕೆ ಗೀತಾಚಾರ್ಯರು ಇರುವಂತೆಯೇ ಇನ್ನು ಮುಂದೆ ಶ್ರೀ ಜಿ. ನಾರಾಯಣರೂ ಇರಬೇಕು. ಪ್ರತಿಷ್ಠಾನವನ್ನು ಇನ್ನೂ ಚೆನ್ನಾಗಿ ಕಟ್ಟಬೇಕೆನ್ನುತ್ತ ಎಲ್ಲರಿಗೂ ವಂದನೆ ಸಲ್ಲಿಸಿದರು.

ವರದಿ : ಎಸ್.ವಿ.ಶ್ರೀನಿವಾಸರಾವ್.

ಪ್ರತಿಷ್ಠಾನದ ಕಾರ್ಯಕ್ರಮಗಳ ಬಗ್ಗೆ ಪತ್ರಿಕಾವರದಿಗಳು

ಬಿ.ಎಂ.ಶ್ರೀ ಮತ್ತು ಪಿ. ಕಾಳಿಂಗರಾವ್‌ಸ್ಮಾರಕ ಸುಗಮ ಸಂಗೀತ ಸ್ಪರ್ಧೆ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನವು ಬಿ.ಎಂ.ಶ್ರೀ.ಜನ್ಮದಿನದ ಸಂದರ್ಭದಲ್ಲಿ ಕನ್ನಡ ಭಾವಗೀತೆಗೆ ನಾಂದಿ ಹಾಡಿದ, ಭಾವಗೀತೆ ಸ್ಪರ್ಧೆಯನ್ನು, ಜಾನಪದ ಗೀತೆಗಳನ್ನು ಮನೆಮನೆಗಳಿಗೆ ಮುಟ್ಟಿಸಿ ಜನಪ್ರಿಯಗೊಳಿಸಿದ ಪಿ.ಕಾಳಿಂಗರಾಯರ ಹೆಸರಿನಲ್ಲಿ ಜಾನಪದ ಗೀತೆ ಸ್ಪರ್ಧೆಯನ್ನು ಇತ್ತೀಚೆಗೆ ಬಿ.ಎಂ.ಶ್ರೀ.ಕಲಾಭವನದಲ್ಲಿ ಏರ್ಪಡಿಸಿತ್ತು.

ಜಾನಪದ ಕಲಾವಿದ ವೇಮಗಲ್ ನಾರಾಯಣಸ್ವಾಮಿ ಕಾರ್ಯಕ್ರಮವನ್ನು ಸ್ಪರ್ಧೆಯನ್ನು ಉದ್ಘಾಟಿಸಿದರು. ಪ್ರೊ.ಬಿ.ನಾರಾಯಣಮ್ಮ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಮಾತನಾಡಿ, ಆ ಹಿರಿಯರಿಬ್ಬರ ಸ್ಮರಣೆ ನಾಡಿನ ಮಕ್ಕಳಲ್ಲಿ ಜೀವಂತವಾಗಿರಬೇಕೆಂದು ಆಶಿಸಿದರು.

ನಂತರ ನಡೆದ ಸ್ಪರ್ಧೆಯಲ್ಲಿ 60 ಜನ ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಮಕ್ಕಳ ಮತ್ತು ಹಿರಿಯರ ವಿಭಾಗಗಳಲ್ಲಿ ಭಾವಗೀತೆ ಮತ್ತು ಜನಪದ ಗೀತೆಗಳಲ್ಲಿ ಒಟ್ಟು ಹದಿನಾರು ಬಹುಮಾನಗಳನ್ನು ನೀಡಲಾಯಿತು.

ಸಂಜೆ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಪಿ.ಕಾಳಿಂಗರಾವ್‌ರವರ ಜತೆಯಲ್ಲಿ ಸಹ ಗಾಯಕಿಯರಾಗಿ ಹಾಡುತ್ತಿದ್ದ ಮೋಹನಕುಮಾರಿ ಮತ್ತು ಸೋಹನ ಕುಮಾರಿ ಬಹುಮಾನ ವಿತರಣೆ ಮಾಡಿದರು. 'ಮೂಡಲ್ ಕುಣಿಗಲ್ ಕೆರೆ', 'ಏರಿಸಿ ಹಾರಿಸಿ ಕನ್ನಡದ ಬಾವುಟವುಂತಾದ ಹಾಡುಗಳನ್ನು ಹಾಡಿದರು. ಕಲಾವಿದರಾದ ಗಿರಿಜಾ ನಾರಾಯಣ್, ಸೋಮಸುಂದರಂ, ಪುರಂದರಭರಣಿ, ಹೆಚ್.ಎಲ್.ಶೇಷಚಂದ್ರ ಹಾಗೂ ಹರೀಶ್ ನರಸಿಂಹ ತೀರ್ಪುಗಾರರಾಗಿದ್ದರು.

ಕೃಪೆ: ಉದಯವಾಣಿ 17.1.2004

ಕ್ಯಾಸೆಟ್ ಸಂಸ್ಕೃತಿಯಿಂದ ಆಶಯಕ್ಕೆಭಂಗ

ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ರಜತ ಮಹೋತ್ಸವ ಕಾರ್ಯಕ್ರಮದಡಿ ಏರ್ಪಡಿಸಿದ್ದ 'ಕೆ.ಎಸ್.ನ. ನಮನ' ಕವಿಗೋಷ್ಠಿಯಲ್ಲಿ ಕವಿಗಳಾದ ಜರಗನಹಳ್ಳಿ ಶಿವಶಂಕರ್, ಡಾ.ಹೆಚ್.ಎಸ್.ವೆಂಕಟೇಶಮೂರ್ತಿ, ಡಾ.ಸುಮತೀಂದ್ರ ನಾಡಿಗ್, ಡಾ।ಕೆ. ಆರ್. ಸಂಧ್ಯಾರೆಡ್ಡಿ, ಡಾ.ಟಿ.ಸಿ.ಪೂರ್ಣಿಮಾ, ಡಾ.ವಿಜಯಾ ಸುಬ್ಬರಾಜ್. ಪ್ರೊ. ನಾ.ಗೀತಾಚಾರ್ಯ ಮತ್ತು ಪ್ರೊ. ಜಿ. ಅಬ್ದುಲ್ ಬಷೀರ್ ಭಾಗವಹಿಸಿದ್ದರು. ಶ್ರೀ ಕೆ.ಎಸ್.ನ ಅವರ ಕುರಿತು ಕವಿತೆ ಓದಿದರು. ಕವಿಯ ವ್ಯಕ್ತಿತ್ವ ಕೆಲವರಿಗೆ ಪ್ರಭಾವ ಬೀರಿದರೆ, ಅವರ ಕವಿತೆಗಳು ಮತ್ತಷ್ಟು ಕವಿಗಳಿಗೆ ಸ್ಫೂರ್ತಿಯಾಗಿದ್ದವು (4.01.04).

'ದೀಪಗಳನ್ನು ಸದಾ ಅಪಹರಿಸುವ ಗಾಳಿ ಯಾರ ಕಣ್ಣಿಗೆ ಬಿದ್ದಿದೆ?

ಯಾರ ಕೈಲಿದೆ ಮುಚ್ಚಿದ ಬಾಗಿಲ ಕೀಲಿ,ನಿಮಗೆ ತಿಳಿದಿದ್ದರೆ ಅದನ್ನು ದಯವಿಟ್ಟು ನನಗೂ ಹೇಳಿ'.

ಕೆ. ಎಸ್.ನರಸಿಂಹಸ್ವಾಮಿರವರ ನಮನ ಕವಿಗೋಷ್ಠಿಯಲ್ಲಿ ಕವಿ ಜರಗನಹಳ್ಳಿ ಶಿವಶಂಕರ ಅವರು ಕೇಳಿದ ಪ್ರಶ್ನೆ ಇದು. ಅವರು ಬರೆದ 'ಮುಚ್ಚಿದ ಬಾಗಿಲು' ಕವಿತೆಯಲ್ಲಿ ಕೆ.ಎಸ್.ನರಸಿಂಹಸ್ವಾಮಿ ಅವರ ಕವಿತೆಗಳ ಶಿರೋನಾಮೆಯೇ ಸ್ಪೂರ್ತಿ ನೀಡಿದ್ದವು. 'ಸಾವಿನ ಮನೆಗೆ ಬದುಕಿನ ಮನೆಯ ಎಂತಹ ಕಾಣಿಕೆ'ಎನ್ನುವಲ್ಲಿಗೆ ಕವಿಯ ಸಾವಿನ ನಷ್ಟ ತಿಳಿಸಿದರು.

'ಸಿರಿಗೆರೆಯ ನೀರಿನಲಿ ಅರಳಿದ ತಾವರೆಗೂ ಮಲ್ಲಿಗೆಯ ಕಂಪಿತ್ತು' ಕವಯಿತ್ರಿ ಟಿ.ಸಿ. ಪೂರ್ಣಿಮಾ ಅವರ ಕವನದ ಈ ಸಾಲು ಕೆ.ಎಸ್.ನ ಅವರ ಮಲ್ಲಿಗೆ ಪ್ರೀತಿಗೆ ಕನ್ನಡಿ ಹಿಡಿಯಿತು.

'ಕಡಲು ಎದ್ದೆದ್ದು ಬಿದ್ದಾಗಲೆಲ್ಲಾ ಹಡಗು ಅದರುತ್ತಿತ್ತು' ಎನ್ನುವ ಸಾಲಿನಲ್ಲಿ ಸಾಂಕೇತಿಕವಾಗಿ ಸಾವಿನ ಭಯ ಮತ್ತು ಆತಂಕವನ್ನು ತೆರೆದಿಟ್ಟರು.

ನಾಡಿಗರ ಹಾಡು-ಪಾಡು : ಹಾಡು ಕಾವ್ಯದ ಭಾವವನ್ನೂ ಹೊರ ಹೊಮ್ಮಿಸ ಬೇಕು. ಒಂದು ಕವಿತೆಯ ಯಶಸ್ಸಿರುವುದು ಅಲ್ಲಿಯೇ. ಗಾಯಕ ಕವಿತೆ ಅರ್ಥ ಮಾಡಿ ಕೊಂಡು ಹಾಡಿದಾಗ ಮಾತ್ರ ಇದು ಸಾಧ್ಯ. ಪಿ.ಕಾಳಿಂಗರಾವ್ ಆ ಮಟ್ಟಿಗೆ ಶುದ್ಧ ಗಾಯಕ ರಾಗಿದ್ದರು. ಅವರ ಹಾಡನ್ನು ಕೇಳುತ್ತಿದ್ದರೆ, ನಾವೇ ಓದಿದಂತೆ ಅನುಭವವಾಗುತ್ತಿತ್ತು ಎಂದು ಸಾಹಿತಿ ಸುಮತಿಂದ್ರ ನಾಡಿಗ್‌ಅಭಿಪ್ರಾಯಪಟ್ಟರು. ಕವಿಗೋಷ್ಠಿಯನ್ನು ಸಾಂಕೇತಿಕವಾಗಿ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಯಾಸೆಟ್ ಸಂಸ್ಕೃತಿಯಿಂದ ಕವಿತೆಯ ಮೂಲ ಆಶಯಕ್ಕೆ ಭಂಗ ಉಂಟಾಗಿದೆ. ಒಂಭತ್ತು ಚರಣಗಳ ಪದ್ಯವನ್ನು ಕ್ಯಾಸೆಟ್‌ಗೆ ಅಳವಡಿಸಲು ಅನುಕೂಲವಾಗಲೆಂದು ಮೂರು ಚರಣಕ್ಕೆ ಇಳಿಸಿದ ಅನೇಕ ಉದಾಹರಣೆಗಳಿವೆ ಎಂದು ಅಧ್ಯಕ್ಷತೆ ವಹಿಸಿದ್ದ ಎಚ್.ಎಸ್.ವಿ. ಹೇಳಿದರು.

ನರಸಿಂಹಸ್ವಾಮಿ ಅವರಿಗೆ ಇದು ಇಷ್ಟವಿರಲಿಲ್ಲ. ಹಾಡುವುದಿದ್ದರೆ ಪೂರ್ತಿ ಹಾಡನ್ನೇ ಹಾಡಬೇಕೆಂದು ಹೇಳುತ್ತಿದ್ದರು ಎಂದು ಅವರ ಮಾತುಗಳನ್ನು ಇಲ್ಲಿ ನೆನಪಿಸಿದರು.

ಕೃಪೆ: ವಿಜಯ ಕರ್ನಾಟಕ 29.2.2004

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಾಧನೆ ಬಹಿರಂಗಕ್ಕೆ ಆಗ್ರಹ

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ತನ್ನ ಕಾರ್ಯ ಚಟುವಟಿಕೆಯನ್ನು ಬಹಿ ರಂಗಪಡಿಸಬೇಕು ಎಂದು ಸಂಶೋಧಕ ಡಾ। ಎಂ.ಚಿದಾನಂದ ಮೂರ್ತಿ ಇಂದು ಇಲ್ಲಿ ಆಗ್ರಹಿಸಿದರು.

ಕನ್ನಡ ಗೆಳೆಯರ ಬಳಗವು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಹಯೋಗದಲ್ಲಿ ನಗರದಲ್ಲಿ ಏರ್ಪಡಿಸಿದ್ದ 'ಮನೆಯಂಗಳದಲ್ಲಿ ಕನ್ನಡ: ಚಿಂತೆ-ಚಿಂತನೆ, ಕುರಿತ ಉಪನ್ಯಾಸ ಮಾಲೆ ಉದ್ಘಾಟಿಸಿ ಅವರು ಮಾತನಾಡಿದರು.

ಈ ವರ್ಷವನ್ನು 'ಉದ್ಯೋಗ ವರ್ಷ' ಎಂದು ಘೋಷಿಸಿರುವುದಾಗಿ ಪ್ರಾಧಿಕಾರದ ಅಧ್ಯಕ್ಷರು ತಿಳಿಸಿದ್ದರು. ಆದರೆ ಈ ಪ್ರಕಾರ ಎಷ್ಟು ಜನ ಕನ್ನಡಿಗರಿಗೆ ಉದ್ಯೋಗಾವಕಾಶ ಲಭ್ಯವಾಗಿದೆ, ಈ ಯೋಜನೆಯ ಅಂಶಗಳು ಎಷ್ಟರಮಟ್ಟಿಗೆ ಕಾರ್ಯ ರೂಪಕ್ಕೆ ಬಂದಿವೆ ಎಂಬ ಬಗ್ಗೆ ಸಾರ್ವಜನಿಕ ಮಾಹಿತಿ ಲಭ್ಯವಾಗದೇ ಇರುವುದರಿಂದ, ಅದನ್ನು ಪ್ರಾಧಿಕಾರ ಜನರ ಮುಂದೆ ಇಡಬೇಕು ಎಂದು ಒತ್ತಾಯಿಸಿದರು.

ಪ್ರಾಧಿಕಾರದ ಕಾರ್ಯಚಟುವಟಿಕೆಗಳು ಸಾರ್ವಜನಿಕವಾಗಿ ತಿಳಿದಿರುವಂತೆ ಕೇವಲ ಪತ್ರ ವ್ಯವಹಾರಕ್ಕಷ್ಟೇ ಸೀಮಿತವಾಗಿದೆ. ಪತ್ರವನ್ನು ಯಾರು ಬೇಕಾದರೂ ಬರೆಯಬಹುದು, ಪ್ರಕಟಿಸಬಹುದು. ಆದರೆ ನಿಜವಾದ ಕಾರ್ಯಚಟುವಟಿಕೆ ಎಲ್ಲಿಯವರೆಗೆ ನಡೆದಿದೆ ಎಂಬ ಬಗ್ಗೆ ಅರಿವಾಗ ಬೇಡವೇ ಎಂದು ಪ್ರಶ್ನಿಸಿದರು.

'ಮನೆಯಂಗಳದಲ್ಲಿ ಕನ್ನಡ: 'ಚಿಂತೆ-ಚಿಂತನೆ' ಉಪನ್ಯಾಸ ಮಾಲೆ ಕಾರ್ಯ ಕ್ರಮದಲ್ಲಿ ಸಾಹಿತಿ ಪ್ರೊ। ಎಲ್. ಎಸ್. ಶೇಷಗಿರಿರಾವ್, ಸಂಶೋಧಕ ಡಾ।ಚಿದಾನಂದ ಮೂರ್ತಿ, ಉದಯವಾಣಿ ಸಂಪಾದಕಿ ಡಾ।ಆರ್.ಪೂರ್ಣಿಮಾ, ಹಾಗೂ ಇತರರು ಪಾಲ್ಗೊಂಡಿದ್ದರು.

ಲೇಖಕ ರಾ.ನಂ. ಚಂದ್ರಶೇಖರ್ ಅವರ ತಂದೆ ಆರ್.ನಂಜುಂಡ ಭಟ್ಟ ಜಯಂತಿ ಸ್ಮರಣಾರ್ಥ ಈ ಉಪನ್ಯಾಸ ಮಾಲೆ ಪ್ರಾರಂಭಿಸಲಾಗಿದ್ದು ಪ್ರತಿ ತಿಂಗಳು ನಗರದ ವಿವಿಧ ಕಡೆಗಳಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ರಾ.ನಂ.ಚಂದ್ರಶೇಖರ್ ಸೇರಿದಂತೆ ಅವರ ಕುಟುಂಬ ಸದಸ್ಯರು, ಲೇಖಕಿಯರಾದ ಡಾ। ಹೆಚ್.ಎಸ್.ಪಾರ್ವತಿ, ಡಾ।ವಿಜಯಾ ಮತ್ತಿತರರು ಉಪಸ್ಥಿತರಿದ್ದರು.

ಕೃಪೆ: ಉದಯವಾಣಿ 23.2.2004

ಪುರಾಣಕ್ಕೆ ಸಂಕುಚಿತ ಅರ್ಥ : ಹಂಪನಾ ವಿಷಾದ

ಪುರಾಣಗಳು ಜನರ ಬಾಯಲ್ಲಿ ನಿಕೃಷ್ಟ ಅರ್ಥವನ್ನು ಪಡೆದುಕೊಳ್ಳುತ್ತಿವೆ ಎಂದು ಹಿರಿಯ ಸಾಹಿತಿ ಡಾ.ಹಂಪ ನಾಗರಾಜಯ್ಯ ಇಂದು ಇಲ್ಲಿ ವಿಷಾದಿಸಿದರು.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾಗೂ ಅತ್ತಿಮಬ್ಬೆ ಪ್ರತಿಷ್ಠಾನ ಟ್ರಸ್ಟ್ ಆಯೋಜಿಸಿದ್ದ ಸಾವಿತ್ರಮ್ಮ ರಾಮಸ್ವಾಮಿ ಅವರು ಸಂಪಾದಿಸಿರುವ 'ಶ್ರೀ ವಾಸವಾಂಬಾ ಪುರಾಣ' ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪುರಾಣಕ್ಕೆ ಸಂಕುಚಿತ ಅರ್ಥ ಬರುತ್ತಿದೆ. ಪುರಾಣದ ಮೂಲ ಅರ್ಥಕ್ಕೆ ಬರಲು ವಿದ್ವಾಂಸರು ಪ್ರಯತ್ನ ನಡೆಸಬೇಕು. ವಾಸವಾಂಬಾ ಪುರಾಣವನ್ನು ನಾನಾ ದೃಷ್ಟಿಯಿಂದ

ಅಧ್ಯಯನ ಮಾಡಬೇಕಾಗಿದೆ. ವಿದ್ವತ್ತು ಇಂದಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಸಮಾಜ ಪ್ರಗತಿಯಾಗಲು ವಿದ್ವತ್ತು ಬೇಕಾಗಿದೆ ಎಂದರು. ವಾಸವಿ ವಿಶ್ವಗುರು ಪೀಠಾಧಿಪತಿ ಶ್ರೀಚಂದ್ರ ಶೇಖರಾನಂದಗಿರಿ ಸ್ವಾಮೀಜಿ ಪುಸ್ತಕ ಬಿಡುಗಡೆ ಮಾಡಿದರು. ಕಮಲಾ ಹಂಪನಾ ಹಾಗೂ ಸಾವಿತ್ರಮ್ಮ ರಾಮಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ನಿವೃತ್ತ ಮುಖ್ಯನ್ಯಾಯಮೂರ್ತಿ ಡಾ.ನಿಟ್ಟೂರು ಶ್ರೀನಿವಾಸರಾವ್ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ಶ್ರೀ ವಾಸವಿ ಪೆನುಗೊಂಡ ಟ್ರಸ್ಟ್ ಅಧ್ಯಕ್ಷ ಎಸ್.ರಾಮ ಮೂರ್ತಿ, ಬಿ.ಎಂ.ಶ್ರೀ. ಪ್ರತಿಷ್ಠಾನ ಅಧ್ಯಕ್ಷ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಅತ್ತಿಮಬ್ಬೆ ಪ್ರತಿಷ್ಠಾನದ ಸಂಸ್ಥಾಪಕಿ ಪಿ.ಮನೋಹರಿ ಪಾರ್ಥಸಾರಥಿ ಉಪಸ್ಥಿತರಿದ್ದರು.

ಕೃಪೆ: ಉದಯವಾಣಿ 10.5.2004

ನಗುವುದೇ ಜನನ, ಅಳುವುದೇ ಮರಣ, ಆದ್ದರಿಂದಲೇ
ಸಮಾನತೆಯ ತತ್ವಸಾಹಿತ್ಯ ಅವಶ್ಯ: ಚತುರ್ವೇದಿ

ಬೆಂಗಳೂರು ಜು.18– ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸಲು ಸಮಾನತೆ ತತ್ವ ಕುರಿತ ಸಾಹಿತ್ಯ ಅಭಿವೃದ್ಧಿಯಾಗುವ ಅವಶ್ಯಕತೆ ಇದೆ ಎಂದು ಶತಾಯುಷಿ ಪಂಡಿತ ಸುಧಾಕರ ಚತುರ್ವೇದಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಎನ್.ಆರ್.ಕಾಲೋನಿಯ ಬಿ.ಎಂ.ಶ್ರೀಕಂಠಯ್ಯ ಪ್ರತಿಷ್ಠಾನದ ಸಹ ಯೋಗದಲ್ಲಿ ಪುಸ್ತಕ ಶಕ್ತಿ ಪ್ರಕಾಶನ ಏರ್ಪಡಿಸಿದ್ದ 'ಹರಿದಾಸ ಸಾಹಿತ್ಯದ ಮೂರು ದಾರಿಗಳು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಮುಂದಿನ ಪೀಳಿಗೆಗೆ ಸಮಾನತೆ ಮಂತ್ರ ಕಲಿಸುವ ಸಾಹಿತ್ಯ ಇಂದಿನ ದಿನಗಳಲ್ಲಿ ಕಾಣುತ್ತಿಲ್ಲ. ಈ ಸಾಹಿತ್ಯ ಕೊರತೆ ಸಮಾಜಕ್ಕೆ ಕಂಟಕವಾಗಬಹುದು. ಗಾಂಧೀಜಿಯಂತೆ ಕುಲ, ಧರ್ಮಗಳನ್ನು ಮೀರಿನಿಂತ ಮನುಷ್ಯ ಮಾತ್ರ ಸುಖವಾಗಿರಲು ಸಾಧ್ಯ ಎಂದು ಹೇಳಿದರು.

'ನಗುವುದೇ ಜನನ ಅಳುವುದೇ ಮರಣ' ಆದ್ದರಿಂದ ಎಲ್ಲರೂ ನಗುತ್ತ ಬಾಳ ಬೇಕು. ನಗು ಮನುಷ್ಯನಿಗೆ ದೀರ್ಘಾಯುಷ್ಯ ನೀಡುವುದು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ 'ಕವಿ ನಮನ ಪ್ರವಾಸ ಕಥನ'ವನ್ನು ಐ.ಎ.ಎಸ್.ಅಧಿ ಕಾರಿ ಐ.ಎಂ.ವಿಠ್ಠಲಮೂರ್ತಿ ಬಿಡುಗಡೆ ಮಾಡಿ ಮಾತನಾಡುತ್ತ, ಕರ್ನಾಟಕದ ಸಂಪೂರ್ಣ ಸಾಹಿತ್ತಿಕ ಪ್ರವಾಸಿ ಸ್ಥಾನಗಳ ಕುರಿತು ವಿವರಗಳನ್ನೊಳಗೊಂಡಿರುವ ಈ ಪುಸ್ತಕ ಇತರ ಭಾಷೆ ಗಳಿಗೂ ಅನುವಾದಗೊಂಡರೆ ಉತ್ತಮವಾಗುತ್ತದೆಂದು ಸಲಹೆ ನೀಡಿದರು. ಖ್ಯಾತ ವಿಮರ್ಶಕ ಪ್ರೊ.ಎಲ್.ಎಸ್.ಶೇಷಗಿರಿರಾವ್ ಪುಸ್ತಕ ಪರಿಚಯ ಮಾಡುತ್ತಖಾಲಿ ಪ್ರವಾಸ ಕ್ಕಿಂತ ಇಂತಹ ಪುಸ್ತಕ ಪ್ರವಾಸಗಳು ಇಂದಿನ ದಿನಗಳಲ್ಲಿ ಹೆಚ್ಚಾದರೆ ನಾವು ಸಾಹಿತ್ಯವನ್ನು ಬೆಳೆಸಬಹುದು ಎಂದು ಹೇಳಿದರು.

ಸಾಹಿತಿ ಡಾ||ಸಾ.ಶಿ. ಮರುಳಯ್ಯ ಕನ್ನಡದಲ್ಲಿ ಪ್ರವಾಸ ಕಥನಗಳ

ಅವಶ್ಯಕತೆಯನ್ನು ಬಿಂಬಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಸಾಹಿತ್ಯ ಪ್ರವಾಸದ ಅನುಭವಗಳನ್ನು ಹಂಚಿಕೊಂಡರು. ತುಮಕೂರು ಲೋಕಸಭಾ ಸದಸ್ಯ ಎಸ್.ಮಲ್ಲಿಕಾರ್ಜುನಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ.ನರಹಳ್ಳಿ ಬಾಲ ಸುಬ್ರಮಣ್ಯ, ಅವರೂ ಮಾತನಾಡಿ ಈ ಎರಡೂ ಕೃತಿಗಳು ಮೌಲಿಕ ಪ್ರಕಟಣೆಗಳಾಗಿದ್ದು ಇವುಗಳ ಲೇಖಕರಾದ ನಾ. ಗೀತಾಚಾರ್ಯ ಇವುಗಳ ಮೂಲಕ ಹೊಸ ಪರಂಪರೆಯನ್ನು ಹುಟ್ಟು ಹಾಕಿದ್ದಾರೆಂದರು. ನಿವೃತ್ತ ಮುಖ್ಯ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯ ಹಾಗೂ ವ್ಯಾಸರಾಯ್ ಬಲ್ಲಾಳ್ ಮುಂತಾದ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕೃಪೆ: ಪ್ರಜಾವಾಣಿ

ಸುಮತೀಂದ್ರ ನಾಡಿಗ್‌ಗೆ 'ಎಂ.ವಿ.ಸೀ. ಪುರಸ್ಕಾರ'

ಬಿ .ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಕೊಡ ಮಾಡುವ 'ಎಂ.ವೀ.ಸೀ. ಪುರಸ್ಕಾರ'ವನ್ನು ಪ್ರಸಿದ್ಧ ಕವಿ ಡಾ।ಸುಮತೀಂದ್ರ ನಾಡಿಗ್ ಅವರಿಗೆ ಮತ್ತು 'ಸಾವಿತ್ರಮ್ಮ ದತ್ತಿ ಸಾಹಿತ್ಯ ಪ್ರಶಸ್ತಿ' ಯನ್ನು ಶಿಶು ಸಾಹಿತಿ ಡಾ। ಎ.ಕೆ.ರಾಮೇಶ್ವರ ಇವರಿಗೆ ಶನಿವಾರ ಪ್ರದಾನ ಮಾಡಲಾಯಿತು.

ನಗರದ ಬಿ. ಎಂ.ಶ್ರೀ ಕಲಾಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾಹಿತಿ ಪ್ರೊ।ಜಿ.ಎಸ್.ಸಿದ್ದಲಿಂಗಯ್ಯ ಅವರು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ನಂತರ ಮಾತನಾಡಿದ ಅವರು , ಕೆಲವು ದಶಕಗಳ ಹಿಂದೆ ಕವಿಗಳ ನಡುವಿನ ಪರಸ್ಪರ ಬಾಂಧವ್ಯ ಉತ್ತಮವಾಗಿತ್ತು. ಒಬ್ಬರ ಸಾಹಿತ್ಯವನ್ನು ಮ ಮುಕ್ತವಾಗಿ ಹೊಗಳುವಂತಹ ಮುಕ್ತ ವಾತಾ ವರಣ ಇತ್ತು. ಕುವೆಂಪು ಹಾಗೂ ಬಿ .ಎಂ.ಶ್ರೀಅವರ ಮಧ್ಯೆ ಇಂತಹ ಬಾಂಧವ್ಯ ಇತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಉತ್ತಮ ಬಾಂಧವ್ಯ ಎಂಬುದು ತೀವ್ರಪ್ರಮಾಣದಲ್ಲಿ ಕಡಿಮೆಯಾಗಿದೆ. ಆ ಮುಕ್ತತೆ ಕಾಣೆಯಾಗಿದೆ ಎಂದು ವಿಷಾದಿಸಿದರು.

ಎಂ.ವೀ.ಸಿ . ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಸುಮತೀಂದ್ರ ನಾಡಿಗ್, ಈ ಪುರಸ್ಕಾರ ದೊರಕಿರುವುದು ನನ್ನೊಳಗಿನ ಕವಿಗೆ ಗೌರವ ಸಂದಂತೆ ಆಗಿದೆ. ಇಂದಿನ ಯುವ ಪೀಳಿಗೆಯಲ್ಲಿ ಪುಸ್ತಕಗಳ ಓದುವಿಕೆ ತೀವ್ರವಾಗಿ ಕಡಿಮೆಯಾಗಿದೆ. ಎಂ.ವೀ.ಸಿ. ಅವರು ಆತ್ಮಶಾಂತಿಗಾಗಿ ಪುಸ್ತಕ ಓದುತ್ತಿದ್ದರು ಎಂದು ಹೇಳಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಖ್ಯಾತ ಕವಿ ಡಾ।ಹೆಚ್.ಎಸ್.ವೆಂಕಟೇಶ ಮೂರ್ತಿರವರು ಪಾಲ್ಗೊಂಡು ಮಾತನಾಡಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಡಾ। ಟಿ.ವಿ.ವೆಂಕಟಾಚಲಶಾಸ್ತ್ರೀ ಅಧ್ಯಕ್ಷತೆ ವಹಿಸಿದ್ದರು. ಪ್ರೊ।ನಾ. ಗೀತಾಚಾರ್ಯರು ನಿರೂಪಣೆ ಮಾಡಿದರು. ಪ್ರೊ।ಡಿ. ಲಿಂಗಯ್ಯ ಸ್ವಾಗತಿಸಿದರು.

(ಕೃಪೆ -ಕನ್ನಡ ಪ್ರಭ ಮೇ .9.2004)

ಸಿ.ಕೆ. ನಾಗರಾಜರಾವ್ ಆತ್ಮೀಯ ಸ್ಮರಣೆ

ಐತಿಹಾಸಿಕ ಕಾದಂಬರಿಗಳ ಮೂಲಕ ಕನ್ನಡಕ್ಕೆ ಬಹುರೂಪದ ಪುರಸ್ಕಾರ ತಂದುಕೊಟ್ಟವರು ಸಿ.ಕೆ.ನಾಗರಾಜರಾವ್ ಎಂದು ಖ್ಯಾತ ವಿಮರ್ಶಕ ಪ್ರೊ.ಎಂ. ಹೆಚ್. ಕೃಷ್ಣಯ್ಯ ಅವರು ಹೇಳಿದರು.

ಇಂದು ಇಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಆಯೋಜಿಸಿದ್ದ ' ಸಿ.ಕೆ.ನಾಗರಾಜ ರಾವ್ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ'ದಲ್ಲಿ ಅವರು ಮುಖ್ಯಭಾಷಣ ಮಾಡುತ್ತಿದ್ದರು.

ನಾಗರಾಜರಾವ್ ಅವರ ಐತಿಹಾಸಿಕ ಕಾದಂಬರಿಗಳು ಪ್ರತಿಕ್ರಿಯಾತ್ಮಕ ಸೃಷ್ಟಿಗಳೇ ಆಗಿವೆ. ಕನ್ನಡದ ಬಗ್ಗೆಕನ್ನಡ ಸಾಹಿತ್ಯ,ಸಂಸ್ಕೃತಿ,ಇತಿಹಾಸದ ಬಗ್ಗೆ ನೇತ್ಯಾತ್ಮಕ ನಿಲುವು ತಳೆದು, ಅಂದಿನ ಖ್ಯಾತ ವಿದ್ವಾಂಸ ಕೆ.ಎಂ. ಮುನ್ಷಿ ಅವರುಬರೆದ ಲೇಖನಗಳಿಗೆ ಅವು ಸೃಜನ ಶೀಲ ಪ್ರತಿಕ್ರಿಯೆ ವ್ಯಕ್ತಪಡಿಸಿವೆ.ನಾಗರಾಜರಾವ್ ಅವರ 'ಪೃಥ್ವಿವಲ್ಲಭ', 'ಪಟ್ಟಮಹಾದೇವಿ ಶಾಂತಲಾ' ಮುಂತಾದ ಕಾದಂಬರಿಗಳು ಕನ್ನಡಕ್ಕೆ ಆದ ಅವಮಾನಕ್ಕೆ ಚರಿತ್ರೆಯ ಹುಡುಕಾಟದ ಮೂಲಕ ಕಂಡುಕೊಂಡ ಉತ್ತರಗಳಾಗಿವೆ ಎಂದರು.

ಕಥೆ, ಕಾದಂಬರಿ, ನಾಟಕ, ರಂಗಭೂಮಿ, ಸಿನೆಮಾ....ಹೀಗೆ ಬಹುಮುಖ ಹರವು ಇದ್ದ ನಾಗರಾಜರಾವ್ ಅವರ ಪ್ರತಿಭೆ ಅನನ್ಯ.ಕಾರಂತ, ತರಾಸು ಅವರಂತೆ ಇವರು ಬರೆದು ಬದುಕಿದರು. ಶರಶ್ಚಂದ್ರ, ದಾಸ್ತೋವಸ್ಕಿಯನ್ನು ಅಂದಿನ ಕಾಲಕ್ಕೆ ಕನ್ನಡಕ್ಕೆ ಇಳಿಸಿದರು. ಐತಿಹಾಸಿಕ ಕಾದಂಬರಿಗಳ ಮೂಲಕ ಅಂದಿನ ಜನಸಮುದಾಯದ ಸಂಸ್ಕೃತಿಯ ಶೋಧಕ್ಕೆ ಇಳಿದರು. ಅವರಲ್ಲಿ ; ಇತಿಹಾಸ ಒಂದು ರೇಖಾಚಿತ್ರವಾದರೆ, ಕಾದಂಬರಿ ವರ್ಣಚಿತ್ರ' ಎಂದು ಕೃಷ್ಣಯ್ಯ ವ್ಯಾಖ್ಯಾನಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಪ್ರತಿಷ್ಠಾನದ ಕೋಶಾಧಿಕಾರಿ ಪ್ರೊ.ಡಿ. ಲಿಂಗಯ್ಯ, 'ಕಳೆದ ಶತಮಾನದ ಮೂವತ್ತರ ದಶಕದಲ್ಲಿ ಬರವಣಿಗೆಯಲ್ಲಿ ತೊಡಗಿದ ನಾಗರಾಜರಾವ್ ಮಧ್ಯಮವರ್ಗದವರ ಚಿತ್ರಣವನ್ನು ತಮ್ಮ ಕತೆಗಳಲ್ಲಿ ತೆರೆದಿಟ್ಟರು. ಇತಿಹಾಸವನ್ನು ತಮ್ಮ ಕಾದಂಬರಿಗಳಲ್ಲಿ ಶೋಧಿಸಿದರು. ಕ್ಲಿಷ್ಟ ನಾಟಕಗಳನ್ನು ರಂಗಭೂಮಿಯಲ್ಲಿ ಪ್ರದರ್ಶಿಸಿದರು. ಗಂಭೀರ ಹಾಗೂ ರಂಜಕ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರು'ಎಂದು ವಿವರಿಸಿದರು.

ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ. ನಿಟ್ಟೂರು ಶ್ರೀನಿವಾಸ ರಾವ್ ಕಾರ್ಯಕ್ರಮ ಉದ್ಘಾಟಿಸಿದರು. ರಾಜಾಮಣಿ ನಾಗರಾಜ ರಾವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರತಿಷ್ಠಾನ ಗೌರವ ಕಾರ್ಯದರ್ಶಿ ಪ್ರೊ.ನಾ. ಗೀತಾಚಾರ್ಯ ವಂದಿಸಿದರು.

(ಕೃಪೆ :ಪ್ರಜಾವಾಣಿ ಜೂನ್.13.2004)

ಪ್ರಾಚೀನ ಹಸ್ತಪ್ರತಿಗಳ ನಾಶ : ವಿಷಾದ

ಐತಿಹಾಸಿಕ ಮಹತ್ವವುಳ್ಳ ಪ್ರಾಚೀನ ಹಸ್ತಪ್ರತಿಗಳನ್ನು ಪೂಜಿಸುವ ಜನರು ಅವುಗಳ ಮಹತ್ವ ತಿಳಿಯದೆ ನಾಶ ಮಾಡುತ್ತಿದ್ದಾರೆ ಎಂದು ಗುಲ್ಬರ್ಗದ ಖ್ಯಾತ ಹಿರಿಯ ಸ್ವಾತಂತ್ಯ ಹೋರಾಟಗಾರ ವಾಮದೇವ ದೀಕ್ಷಿತ ವಿಷಾದಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ ಏರ್ಪಡಿಸಿದ 'ತೋರಣ' ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ 'ಮನೆ ಬಾಗಿಲಿಗೆ ಹಸ್ತಪ್ರತಿ ದರ್ಶನ' ಎಂಬ ವಿಶೇಷ ಯೋಜನೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. (06.05.04)

ಇಂದು ಕಂಪ್ಯೂಟರ್ ಮೂಲಕ ಹಸ್ತ ಪ್ರತಿಗಳನ್ನು ರಕ್ಷಿಸಲು ಸಾಧ್ಯವಾಗುವುದರಿಂದ ಜನರುಕೂಡ ಸಂಪ್ರದಾಯವನ್ನು ಕೆಲಕಾಲ ಬದಿಗಿಟ್ಟು ಅವುಗಳನ್ನು ಆಸಕ್ತರಿಗೆ ಕೊಡಲು ಮನಸ್ಸು ಮಾಡುತ್ತಿದ್ದಾರೆ ಎಂದು ಹರ್ಷಿಸಿದರು.

ಇದು ಕನ್ನಡ ಸಂಸಕೃತಿ ಮತ್ತು ಇತಿಹಾಸವನ್ನು ಉಳಿಸಲು ಸಹಕಾರಿಯಾಗಿದೆ. ಅನೇಕ ವಿದ್ವಾಂಸರು ಸಂಶೋಧನೆ ನಡೆಸಿ ರಚಿಸಿದ ಗ್ರಂಥಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಭವ್ಯವಾಗಿಸುವಲ್ಲಿ ಮಹತ್ವದ ಪಾತ್ರವಹಿಸಿವೆ ಎಂದು ತಿಳಿಸಿದರು.

ಬಿ.ಎಂ.ಶ್ರೀ. ಹಾಕಿಕೊಟ್ಟಿರುವ ಗಟ್ಟಿ ತಳಹದಿ ಮೇಲೆ ಇಂದು ಕನ್ನಡ ಸಾಹಿತ್ಯ ಮತ್ತು ಭಾಷೆ ಇಷ್ಟೊಂದು ವಿಶಾಲವಾಗಿ ಬೆಳೆಯಲು ಸಾಧ್ಯವಾಯಿತು ಎಂದು ಹೇಳಿದರು.

ಉರ್ದು,ಮರಾಠಿ ಮತ್ತು ಹಿಂದಿ ಭಾಷೆಗಳೇ ಪ್ರಧಾನವಾಗಿದ್ದ ಕಾಲದಲ್ಲಿ ಬಿ.ಎಂ.ಶ್ರೀ. ಅವರು ಕೇವಲ 500 ರೂ.ಗಳಿಂದ ಕಟ್ಟಿದ ನಮ್ಮ ಗುಲಬರ್ಗದ ಕನ್ನಡ ಸಂಘ ಅಲ್ಲಿ ಇಂದು ನಮ್ಮ ಭಾಷೆಯನ್ನು ಉಜ್ವಲಗೊಳಿಸಿದೆ ಎಂದು ಶ್ಲಾಘಿಸಿದರು.

ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಕುತ್ತು ಬಂದ ಸಮಯದಲ್ಲಿ ಅದನ್ನು ರಕ್ಷಿಸಲು ಮುಂದೆ ಬಂದು ನಾಡಿಗೆ ಸ್ಫೂರ್ತಿಯಾದ ಏಕೈಕ ವ್ಯಕ್ತಿ ಬಿ.ಎಂ.ಶ್ರೀ ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಸ್ಮರಿಸಿದರು.

ಮನೆಮನೆಗೆ ಹೋಗಿ ಜನರಿಂದ ದೇಣಿಗೆ ಪಡೆದು ಕನ್ನಡವನ್ನು ತಮ್ಮ ಮಗುವಿನಂತೆ ಕಾಪಾಡಿದ್ದರು. ಅವರು ಶ್ರಮಿಸದಿದ್ದರೆ ಇಂದು ಕನ್ನಡ ಶಬ್ದ ಕೇಳಲು ಸಿಗುತ್ತಿರಲಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ಕಿರುತೆರೆ ನಟ ಪ್ರೇಂಕುಮಾರ್ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಮಕ್ಕಳಿಂದ ನೃತ್ಯಪ್ರದರ್ಶನ, ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

(ಕೃಪೆ - ವಿಜಯ ಕರ್ನಾಟಕ ಮೇ .10.2004)

ಪ್ರತಿಷ್ಠಾನದ ಚಟುವಟಿಕೆಗಳು

ಅ. ಕಾರ್ಯಕ್ರಮಗಳು

1. 3.1.04 ರಂದು ಬಿ.ಎಂ.ಶ್ರೀ. ಜನ್ಮದಿನದ ಕಾರ್ಯಕ್ರಮದ ಅಂಗವಾಗಿ ನ್ಯಾಷನಲ್ ಕಾಲೇಜ್‌ವೃತ್ತದಲ್ಲಿರುವ ಬಿ.ಎಂ.ಶ್ರೀ.ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ ನಡೆಯಿತು. ಬಿ.ಎಂ.ಶ್ರೀಯವರ ಮರಿಮಗಳು ಶ್ರೀಮತಿ ವಿದ್ಯಾವಿಕ್ರಂ ಅವರಿಂದ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ ಜರುಗಿತು. ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಅಧ್ಯಕ್ಷತೆ ವಹಿಸಿದ್ದರು. ಲಕ್ಷ್ಮೀಮೂರ್ತಿ ಹಾಗೂ ಜಯಾ ಪಾರ್ಥಸಾರಥಿ ಅವರಿಂದ' ಬಿ.ಎಂ.ಶ್ರೀ. ಭಾವ ಗೀತೆ ಕಾರ್ಯಕ್ರಮ ನಡೆಯಿತು. ಡಾ||ಜಗದೀಶ್‌ರವರು 5,000/- ರೂಗಳ ಕೊಡುಗೆಯ ಚೆಕ್ಕನ್ನು ನೀಡಿದರು.

2. 3.2.04 ರಂದು ಕರ್ನಾಟಕ ಲೇಖಕರ ಸಂಘದ ಸಹಯೋಗದೊಂದಿಗೆ ಎಂ.ಜಿ. ನಾಗರಾಜರಾವ್ ಬರೆದಿರುವ 'ಕನ್ನಡ ಇನ್ ಮೈ ಪಾಕೆಟ್' (ಇಂಗ್ಲೀಷ್‌ಮೂಲಕ ಕನ್ನಡ ಕಲಿಕೆ) ಪುಸ್ತಕದ ಬಿಡುಗಡೆ ಕಾರ್ಯಕ್ರಮ ನಡೆಯಿತು. ಶ್ರೀ.ಬಿ.ರಘುನಾಥ್ ಪುಸ್ತಕ ಬಿಡುಗಡೆ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ.ಕೆ. ನಾರಾಯಣರಾವ್ ಭಾಗವಹಿಸಿದ್ದರು.

3. 14.2.04 ರಂದು ಪ್ರಥಮ ತಂಡದ ಸುಗಮ ಸಂಗೀತ ತರಗತಿ ಉದ್ಘಾಟನೆಯು ಶ್ರೀಮತಿ ಜಯಶ್ರೀ ಅರವಿಂದ್‌ರವರಿಂದ ನಡೆಯಿತು. ಮುಖ್ಯ ಅತಿಥಿಯಾಗಿ ಖ್ಯಾತ ಕವಿ ಎಂ.ಎನ್. ವ್ಯಾಸರಾವ್, ಡಾ||ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಭಾಗವಹಿಸಿದ್ದರು.

4. 19.02.04 ರಂದು ಬಿ.ಎಂ.ಶ್ರೀ. ಕಲಾಭವನದ ರಜತ ಮಹಡಿಯ ಉದ್ಘಾಟನೆಯ ಸಮಾರಂಭ ಯಶಸ್ವಿಯಾಗಿ ನಡೆಯಿತು. ತಮ್ಮ ಸಂಸದರ ನಿಧಿಯಿಂದ ನಿರ್ಮಾಣ ಮಾಡಿದ್ದ ಹತ್ತು ಲಕ್ಷ ರೂಗಳ ಕಲಾಭವನದ ಕಾಮಗಾರಿಗಳನ್ನು ಮತ್ತು ರಜತೋತ್ಸವ ಮಹಡಿಯನ್ನು ಸಂಸದರೂ ಕೇಂದ್ರ ಸಚಿವರೂ ಕಟ್ಟಡ ದಾನಿಗಳೂ ಆದ ಸನ್ಮಾನ್ಯ ಶ್ರೀ ಅನಂತಕುಮಾರ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ಕೆ.ಎನ್. ಸುಬ್ಬಾರೆಡ್ಡಿ, ಶ್ರೀ ಹೆಚ್. ಎಸ್. ದೊರೆಸ್ವಾಮಿ, ಆಗಮಿಸಿದ್ದರು. ಗೌರವಾಧ್ಯಕ್ಷರಾದ ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರಾದ ಡಾ|| ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಸ್ವಾಗತಿಸಿದರು.

೫. ನಿಟ್ಟೂರು ಶ್ರೀನಿವಾಸ ರಾವ್ ಶ್ರದ್ಧಾಂಜಲಿ: ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿದ್ದ ಶತಾಯುಷಿ ನಿಟ್ಟೂರು ಅವರು 12.08.04.ರಂದು ದೈವಾಧೀನರಾದರು ಅವರ ಶ್ರದ್ಧಾಂಜಲಿ ಸಭೆಯನ್ನು 20.08.04 ರಂದು ಪ್ರತಿಷ್ಠಾನದಲ್ಲಿ ನಡೆಸಲಾಯಿತು.ಪ್ರೊ| ಜಿ. ವೆಂಕಟ ಸುಬ್ಬಯ್ಯ, ಶ್ರೀ ಜಿ. ನಾರಾಯಣ, ಶ್ರೀ. ವಿ.ಎಸ್.ಕೃಷ್ಣಯ್ಯರ್, ಪ್ರೊ.ಎಲ್.ಎಸ್. ಶೇಷಗಿರಿರಾವ್, ಶ್ರೀ ಎನ್. ಬಸವರಾಧ್ಯ

ಭಾಗವಹಿಸಿದ್ದರು. ಮೃತರ ಸೇವೆ -ಸಾಧನೆಗಳನ್ನು ಸ್ಮರಿಸ್ಸಿದ ನಂತರ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಸಭೆ ಒಂದು ನಿಮಿಷ ಮೌನವನ್ನಾಚರಿಸಿತು.

6. 17.04.04 ಹೊಸಕೆರೆ ಚಿದಂಬರಯ್ಯನವರ 66ನೇ ವಾರ್ಷಿಕ ಪುಣ್ಯ ಸಂಸ್ಮರಣೆ ಕಾರ್ಯಕ್ರಮ ನಡೆಯಿತು. ಪ್ರೊ॥ಗೀತಾಚಾರ್ಯ ಉಪನ್ಯಾಸ ಮಾಡಿದರು. ಅಧ್ಯಕ್ಷತೆಯನ್ನು ಪ್ರೊ॥ಜಿ. ಅಶ್ವತ್ಥನಾರಾಯಣ ವಹಿಸಿದ್ದರು.

7. **ಹಸ್ತಪ್ರತಿಶಾಸ್ತ್ರ ತರಗತಿ ಉದ್ಘಾಟನೆ ಮತ್ತು ಅರ್ಹತಾ ಪತ್ರ ವಿತರಣೆ** ದಿ. 29.11.04 ರಂದು 14ನೇ ತಂಡದ ಹಸ್ತಪ್ರತಿಶಾಸ್ತ್ರ ತರಗತಿಯನ್ನು ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಉದ್ಘಾಟನೆ ಮಾಡಿದರು ಮತ್ತು 13ನೇ ತಂಡದ ವಿದ್ಯಾರ್ಥಿಗಳಿಗೆ ಅರ್ಹತಾಪತ್ರ ವಿತರಣೆ ಮಾಡಿದರು.

8. ಸ್ನಾತಕೋತ್ತರ ಸಂಶೋಧನ ಕೇಂದ್ರ ಉದ್ಘಾಟನೆ.

19.12.04 ರಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಡಾ॥ ಬಿ.ಎ.ವಿವೇಕ ರೈ ಅವರಿಂದ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ '**ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ**'ದ ಉದ್ಘಾಟನೆ ಕಾರ್ಯಕ್ರಮ ನಡೆಯಿತು, ಮುಖ್ಯ ಅತಿಥಿಗಳಾಗಿ ಪ್ರಸಿದ್ಧ ಸಾಹಿತಿಗಳಾದ ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ॥ ಸಿದ್ಧಲಿಂಗಯ್ಯ ಅವರು ಭಾಗವಹಿಸಿದ್ದರು. ಶ್ರೀ. ಜಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು ರಜತೋತ್ಸವ ಕಾಲದಲ್ಲಿ ಪ್ರತಿಷ್ಠಾನದ ಪ್ರಗತಿಯ ಹೆಗ್ಗುರುತಾಗಿತ್ತು

ಆ. ದತ್ತಿ ಉಪನ್ಯಾಸಗಳು

1. 27.02.04 ರಂದು ಡಾ॥ ಶಾಂತಾ ಪ್ರಭುಶಂಕರ ಸ್ಮಾರಕ ದತ್ತಿ ಉಪನ್ಯಾಸ ನಡೆಯಿತು. ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿ ವಹಿಸಿದ್ದರು, ಈ. ಅನಂತಕೃಷ್ಣ ಡಾ। ಪದ್ಮಿನಿ ಪ್ರಸಾದ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

2. 14.04.04 ರಂದು ಶಂಬಾ.ಜೋಶಿ ದತ್ತಿ ಕಾರ್ಯಕ್ರಮ ನಡೆಯಿತು ಡಾ॥ ಎಸ್.ಎಂ.ಗಂಗಾಧರಯ್ಯ ಭಾಗವಹಿಸಿದ್ದರು. ವಿಷಯ:ಸಂಸ್ಕೃತಿ ಗ್ರಹಿಕೆಯಲ್ಲಿ ಅನುಮಾನಿಕ ಸತ್ಯಗಳು.ಅಧ್ಯಕ್ಷತೆಯನ್ನು ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ವಹಿಸ್ಧಿರು.

3. 6.7.2004: ಚಂದ್ರಶೇಖರ ಶರ್ಮ ದತ್ತಿ ಕಾರ್ಯಕ್ರಮ : ಉದಯವಾಣಿ ಪತ್ರಿಕೆಯ ಸಂಪಾದಕರಾದ ಡಾ॥ಆರ್. ಪೂರ್ಣಿಮಾ ಅವರು ಕನ್ನಡ ಪತ್ರಿಕೋದ್ಯಮ

ಮತ್ತು ಮಹಿಳೆ ಕುರಿತು ಉಪನ್ಯಾಸ ಮಾಡಿದರು. ಖ್ಯಾತ ಲೇಖಕಿ ಶ್ರೀಮತಿ. ಹೆಚ್.ಎಸ್.ಪಾರ್ವತಿ ಅವರು ಅಧ್ಯಕ್ಷತೆ ವಹಿಸಿದ್ದರು.

4. 10.07.04 ಡಾ॥ ಆ.ನೇ ಉಪಾಧ್ಯೆ ದತ್ತಿ ಕಾರ್ಯಕ್ರಮ : ಹಿರಿಯ ಲೇಖಕರಾದ ಡಾ॥ ಎಂ.ಎ. ಜಯಚಂದ್ರ ಅವರು ಡಾ॥ಆ.ನೇ.ಉಪಾಧ್ಯೆ ಅವರ ಜೀವನ ಮತ್ತು ವ್ಯಕ್ತಿತ್ವದ ಕುರಿತು ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ನಿವೃತ್ತ ಸಂಸ್ಕೃತ ಪ್ರಾಧ್ಯಪಕರಾದ ಶ್ರೀ. ಎಸ್.ರಾಮಚಂದ್ರ ಶಾಸ್ತ್ರಿಗಳವರು ನಿರ್ವಹಿಸಿದರು.

5. 25.12.04ರಂದು ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರ ಸ್ಮಾರಕ ದತ್ತಿ ಉಪನ್ಯಾಸ ನಡೆಯಿತು 'ಎಂ. ಜಿ. ನಂಜುಂಡಾರಾಧ್ಯರ ಸಾಹಿತ್ಯ ಸೇವೆ' ವಿಷಯ ಕುರಿತು ಡಾ॥ ಬಿ.ನಂ. ಚಂದ್ರಯ್ಯ ಅವರು ಉಪನ್ಯಾಸ ನಡೆಸಿಕೊಟ್ಟರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ. ಎನ್. ಬಸವರಾಧ್ಯ ಅವರು ವಹಿಸಿದ್ದರು.

6. 26.12.04 ರಂದು ಟಿ. ಎನ್. ಮಹದೇವಯ್ಯ ಸ್ಮಾರಕ ದತ್ತಿ ಉಪನ್ಯಾಸ ನಡೆಯಿತು 'ಟಿ.ಎನ್.ಮಹದೇವಯ್ಯನವರು ಬದುಕು-ಬರಹ' ವಿಷಯ ಕುರಿತು ಉಪನ್ಯಾಸವನ್ನು ಪ್ರೊ॥ ಎಂ. ಪ್ರಸನ್ನಕುಮಾರ್ ಅವರು ನಡೆಸಿಕೊಟ್ಟರು. ಪ್ರೊ॥ ಎ. ಶ್ರೀಪಾದ್ ಅವರು ಅಧ್ಯಕ್ಷತೆ ವಹಿಸಿದ್ದರು.

ಇ. ಸಹೃದಯಗೋಷ್ಠಿ ಮತ್ತು ರಜತೋತ್ಸವ ಕಾರ್ಯಕ್ರಮಗಳು

1. 6.05.04 ರಂದು ಸಂಸ್ಥಾಪನಾ ದಿನಾಚರಣೆ. **ರಜತೋತ್ಸವ ಕಾರ್ಯಕ್ರಮಗಳು 'ಮನೆಬಾಗಿಲಿಗೆ ಪ್ರಾಚೀನ ಹಸ್ತಪ್ರತಿ ಪ್ರದರ್ಶನ'** ಮತ್ತು 'ತೋರಣ' ಮಕ್ಕಳ ಬೇಸಿಗೆ ಶಿಬಿರದ ಮುಕ್ತಾಯ ಕಾರ್ಯಕ್ರಮಗಳು ನಡೆದವು. 'ತೋರಣ' ಅರ್ಹತಾಪತ್ರ ವಿತರಣೆಯನ್ನು ಕಿರುತೆರೆ ಕಲಾವಿದರಾದ ಶ್ರೀ ಗದಾಧರ್ (ಪ್ರೇಂಕುಮಾರ್) ಮಾಡಿದರು ಅಧ್ಯಕ್ಷತೆಯನ್ನು ಹಿರಿಯ ಗಾಂಧೀವಾದಿಗಳಾದ ಶ್ರೀ ಎಚ್.ಎಸ್.ದೊರೆಸ್ವಾಮಿ ವಹಿಸಿದ್ದರು. ಗುಲ್ಬರ್ಗಾದ ಹಿರಿಯ ಗಾಂಧೀವಾದಿಗಳಾದ ಶ್ರೀ ವಾಮದೇವ ದೀಕ್ಷಿತ್ ಭಾಗವಹಿಸಿದ್ದರು.

2. 07.05.04 ರಂದು **ರಜತೋತ್ಸವ ಕವಿಗೋಷ್ಠಿ ನಡೆಯಿತು** ಒಟ್ಟು 25 ಕವಿಗಳು ಭಾಗವಹಿಸಿದ್ದರು. ಪ್ರೊ॥ ಚಂದ್ರಶೇಖರ ಪಾಟೀಲರವರು ಅಧ್ಯಕ್ಷತೆ ವಹಿಸಿದ್ದರು.

ಭಾಗವಹಿಸಿದ್ದ ಕವಿಗಳ ಹೆಸರುಗಳು .

೧.	ಮಹಾಬಲೇಶ್ವರ ಕಾಟ್ರಹಳ್ಳಿ	೨.	ಎಚ್. ಎಲ್. ಶೇಷಚಂದ್ರ
೩.	ಕೋ.ವೆಂ. ರಾಮಕೃಷ್ಣೇಗೌಡ	೪.	ನಾ. ಗೀತಾಚಾರ್ಯ
೫.	ಕಾ.ವೆಂ. ಶ್ರೀನಿವಾಸಮೂರ್ತಿ	೬.	ಶ್ರೀಮತಿ ಇಂದಿರಾ ಶಿವಣ್ಣ
೭.	ಶ್ರೀಮತಿ ಎಚ್. ಪ್ರಭಾಶರ್ಮ	೮.	ಶ್ರೀಮತಿ ಗುಣಸಾಗರಿ
೯.	ಟಿ. ನಾರಾಯಣ ಸ್ವಾಮಿ	೧೦.	ಜಿ. ಆರ್. ಸತ್ಯನಾರಾಯಣ

೧೧.	ಬಿ.ವಿ. ಪುಟ್ಟೇಗೌಡ	೧೨.	ಡಿ.ಲಿಂಗಯ್ಯ
೧೩.	ಟಿ.ಆರ್. ನರಸಿಂಹ ಮೂರ್ತಿ	೧೪.	ಮಾವಳ್ಳಿ ಜಿ. ರಾಮು
೧೫.	ಜಯದಂಡೇರ ಅಪ್ಪಣ್ಣ	೧೬.	ಎಂ. ಕೆ. ರಮಾದೇವಿ
೧೭.	ಮಧು ಪಿ. ಹಳ್ಳಿ	೧೮.	ನಾಗವೇಂದ್ರ ಸ್ವಾಮಿ
೧೯.	ಮಾ. ವೆಂ. ಶ್ರೀವಾಥ್	೨೦.	ಅಂಕುರ ಬೆಟಗೇರಿ
೨೧.	ಭಾಸ್ಕರ್ ಕಶ್ಯಪ್	೨೨.	ಶ್ರೀನಿವಾಸಾಚಾರ್. ಎಂ.
೨೩.	ಎಚ್.ವಿ. ನೂತನ್	೨೪.	ಬಿ. ಗಂಗಾಧರ್

೨೫. ಎಸ್.ವಿ. ಶಂಕರಪ್ಪ . ಶ್ರೀಮತಿ ಜಯಮ್ಮ ಕರಿಯಣ್ಣ , ರಾಮಮೂರ್ತಿ, ಮತ್ತು ಸಿ. ಎನ್. ರಮೇಶ್ ಅವರು ನಿರೂಪಣೆ ಮಾಡಿದರು.

2. ಕುವೆಂಪು ಶತಮಾನೋತ್ಸವ ಸ್ಮರಣೆ–ಕುವೆಂಪು ಕಾವ್ಯನಮನ–ವಿಶೇಷ ಕವಿಗೋಷ್ಠಿ

ದಿ. 31.12.04 ರಂದು ನಡೆದ ಕುವೆಂಪು ಶತಮಾನೊತ್ಸವ ಸಂದರ್ಭದ ಈ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಮುಖ ಕವಿಗಳೂ ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರೂ ಆದ ಶ್ರೀ ಮಾರ್ಕಂಡಪುರಂ. ಶ್ರೀನಿವಾಸ ರವರು ವಹಿಸಿದ್ದರು. ಪ್ರೊ॥. ಎಂ. ಶಿವರಾಮಯ್ಯ , ಎಲ್. ಎನ್. ಮುಕುಂದರಾಜ್, ಆರ್. ಜಿ. ಹಳ್ಳಿ ನಾಗರಾಜ್, ಪ್ರೊ॥ ಡಿ.ಲಿಂಗಯ್ಯ, ಪ್ರೊ॥ ನಾ. ಗೀತಾಚಾರ್ಯ ಮುಂತಾದ ಕವಿಗಳು ಕುವೆಂಪು ಅವರನ್ನು ಕುರಿತ ಕವನಗಳನ್ನು ವಾಚಿಸುವ ಮೂಲಕ ಕುವೆಂಪು ನೆನಪನ್ನು ವೈವಿಧ್ಯಮಯವಾಗಿ ನಿರೂಪಿಸಿದರು. ಇದೊಂದು ವಿಶಿಷ್ಠ ವಿನೂತನ ಕಾರ್ಯಕ್ರಮವಾಗಿತ್ತು.

ಈ. ದಾನಗಳು

1. ಗ್ರಂಥ ಮುದ್ರಣಕ್ಕೆ ದಾನ

9.1.04 ರಂದು The Editor, T.T.Devasthan's T.T.D.Press Building. Tirupati -517501 ಇವರು 'ತಿಮ್ಮಪ್ಪದಾಸರ ಕೀರ್ತನೆಗಳು' ಪುಸ್ತಕದ ಪ್ರಿಂಟಿಂಗ್ ಸಹಾಯಧನವಾಗಿ ಬಾಬ್ತು. 7.768–50 ರೂ.ಗಳನ್ನು ನೀಡಿದ್ದಾರೆ.

29.3.04 ರಂದು ಶ್ರೀ.ಆರ್.ಜಯರಾಮ್ ಅವರು 'ವಾಸವಾಂಬ' ಪುಸ್ತಕದ ಮುದ್ರಣಕ್ಕೆ 10,000 ರೂ.ಗಳನ್ನು ನೀಡಿದ್ದಾರೆ.

2. ಕಟ್ಟಡ ನಿಧಿಗೆ ದಾನ

1.	ಶಾರದಾ ಮಂದಿರ ವಿದ್ಯಾಸಂಸ್ಥೆ (ರಿ)ಬೆಳಗೆರೆ (ಕೃಷ್ಣಶಾಸ್ತ್ರೀಯವರ ಮೂಲಕ,)	50,000.00
2.	ಶ್ರೀ. ಮಜುಮದಾರ್, ದಾವಣಗೆರೆ (ಕೃಷ್ಣಶಾಸ್ತ್ರೀಯವರ ಮೂಲಕ,)	50,000.00
3.	ಶ್ರೀಮತಿ ರತ್ನ ಎನ್. ರಾವ್, ಪುಣೆ	25,000.00
4.	ಶ್ರೀಮತಿ ಪ್ರಭಾವತಿ ಶಿವಶಂಕರ	10,000.00

5.	ಶ್ರೀ.ಎ.ಹೆಚ್.ಪಾಂಡುರಂಗ	1,000.00
6.	ಶ್ರೀಮತಿ.ಸುಶೀಲಮ್ಮ	1,000.00
7.	ಶ್ರೀ.ಕೆ.ಎಂ.ಸೀತಾರಾಮಯ್ಯ	1,000.00
8.	ಶ್ರೀ ಎಸ್. ನಾಗರಾಜ್, ಮೈಸೂರು	1,000.00
9.	ಶ್ರೀ ಮುದ್ದು ಕೃಷ್ಣ , ಬೆಂಗಳೂರು	1,000.00
10.	ಶ್ರೀಮತಿ.ಎಸ್.ಪಾರ್ವತಮ್ಮ	500.00
11.	ಶ್ರೀಮತಿ ಅಖಿಲ ಗೊಂಡುರಾವ್, ಬೆಂಗಳೂರು	500.00
12.	ಶ್ರೀಮತಿ.ಎನ್.ಎಸ್.ತುಂಗಮ್ಮ	250.00
13.	ಶ್ರೀಜಾನ್ ಫ್ರೆಡರಿಕ್ಸ್	200.00
14.	ಶ್ರೀ.ಅಚ್ಚುತ ಶಿವರಾಮ	150.00
15.	ಶ್ರೀ. ಯೋಗೀಶ್ ಅಡಿಗ , ಬೆಂಗಳೂರು	50.00

3. ಪ್ರತಿಷ್ಠಾನಕ್ಕೆ ದಾನ

1.	ತುಂಗಭದ್ರ ಫ್ರೌಢಶಾಲೆ ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ	2,000.00
2.	ಶ್ರೀ. ಎಸ್. ಆರ್. ಕೇಶವ ಮೂರ್ತಿ, ಬೆಂ.	2,000.00
3.	ಪ್ರೊ॥ ನಾ. ಗೀತಾಚಾರ್ಯ. ಬೆಂ.	1,500.00
4.	ಡಾ॥ಕೆ.ಆರ್. ಗಣೇಶ್, ಬೆಂ.	1,350.00
5.	ಶ್ರೀ. ಜಿ.ಎಸ್. ಎಸ್. ರಾವ್, ಬೆಂ.	900.00
6.	ಶ್ರೀ.ಧೀರೇಂದ್ರ ವಿ.ಜಹಗೀರದಾರ್, ಬೆಂ.	500.00
7.	ಡಾ॥ ಎಂ.ಎಲ್.ಲಲಿತಮ್ಮ , ಬೆಂ.	300.00
8.	ಡಾ॥ ಟಿ.ವಿ.ವೆಂಕಟಾಚಲ ಶಾಸ್ತ್ರೀ , ಮೈಸೂರು	150.00
9.	ಶ್ರೀ. ಎನ್. ಎಸ್. ಕೃಷ್ಣ ಸ್ವಾಮಿ , ಬೆಂ.	100.00
10.	ಶ್ರೀ ರಾಧಾ ಕೃಷ್ಣ , ಬೆಂ.	50.00

4. ದತ್ತಿನಿಧಿ ದಾನ

ಪ್ರೊ॥ ಎನ್. ಅನಂತರಂಗಾಚಾರ್ ಸ್ಮಾರಕ ದತ್ತಿ ನಿದಿ 20,000.00

ಪ್ರೊ॥ ಎನ್. ಅನಂತರಂಗಾಚಾರ್ ಶತಮಾನೋತ್ಸವ ಸಮಿತಿ ಮೈಸೂರು ಇವರಿಂದ)

5. ರಜತೋತ್ಸವಕ್ಕೆ ದಾನ

1	ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು,	1,00,000.00 ರೂ.
2	ಶ್ರೀ ಕೆ. ಚಂದ್ರಶೇಖರ, ಮಾಜಿ ಮೇಯರ್ ವಿಧಾನ ಸಭಾ ಸದಸ್ಯರು, ಬೆಂ.	50,000.00 ರೂ.

3	ಡಾ॥ ಚನ್ನವೀರಕಣವಿ, ಧಾರವಾಡ	10,000.00 ರೂ.
4	ಶ್ರೀಶ್ರೀಶ್ರೀ, ಸುತ್ತೂರು ಸ್ವಾಮಿಗಳು ಸುತ್ತೂರುಮಠ, ಮೈಸೂರು	5,000.00 ರೂ.
5	ಶ್ರೀಶ್ರೀಶ್ರೀಗಳವರು ಸುತ್ತೂರು ಮಠ	5,000.00 ರೂ.
6	ಉದಯ ಹೊಳ್ಳ , ಬೆಂಗಳೂರು	3,000.00 ರೂ.
7	ಎಸ್. ಆರ್. ಆರ್. ಕೆ. ಶರ್ಮಾ, ಬೆಂಗಳೂರು	2,500.00 ರೂ.
8	ಶ್ರೀ ಮೂರ್ತಿ ಮತ್ತು ಸ್ನೇಹಿತರು , ಬೆಂಗಳೂರು	2,200.00 ರೂ.
9	ಪ್ರೊ॥ಎಂ.ವಿ. ಸತ್ಯನಾರಾಯಣ, ಬೆಂಗಳೂರು	2,001.00 ರೂ.
10	ಮೆ॥ಧವನಂ ಜ್ಯೂಯೆಲರ್ಸ್ , ಬೆಂಗಳೂರು	1,001.00 ರೂ.
11	ಎಚ್. ಎಸ್. ಎಲ್. ಮೂರ್ತಿ, ಬೆಂಗಳೂರು	1,000.00 ರೂ.
12	ಶ್ರೀ ಸುಜನ, ಮೈಸೂರು	1,000.00 ರೂ.
13	ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು	1,000.00 ರೂ.
14	ಡಾ॥ ಎ.ವಿ. ನರಸಿಂಹಮೂರ್ತಿ, ಮೈಸೂರು	1,000.00 ರೂ.
15	ಶ್ರೀ ಎಸ್.ಜಿ. ವಾಸುದೇವರಾವ್, ಬೆಂಗಳೂರು	1,000.00 ರೂ.
16	ಡಾ॥ ಸಿ.ಪಿ. ಕೃಷ್ಣಕುಮಾರ್, ಮೈಸೂರು	1,000.00 ರೂ.
17	ಶ್ರೀಮತಿ ಎ.ಆರ್. ಸುಂದರಮ್ಮ , ಮೈಸೂರು	1,000.00 ರೂ.
18	ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಬೆಂಗಳೂರು	1,000.00 ರೂ.
23.	ಪ್ರೊ॥ ಬಿ. ಚನ್ನಪ್ಪಗೌಡ, ಬೆಂಗಳೂರು	1,000.00 ರೂ.
19	ಎಸ್. ಕೃಷ್ಣಮೂರ್ತಿ, ಮಂಡ್ಯ	1,000.00 ರೂ.
20	ಶ್ರೀ ಸ.ರ.ಸುದರ್ಶನ, ಮೈಸೂರು	500.00 ರೂ.
21	ಶ್ರೀಕಾಂತ .ಬಿ.ಭಟ್ಟ, ಮಣಿಪಾಲ್	500.00 ರೂ.
22	ಶ್ರೀಕಾಂತ ಬಿ. ಭಟ್, ಮಣಿಪಾಲ್	500.00 ರೂ.
23	ಶ್ರೀಮತಿ ಪದ್ಮ ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು	500.00 ರೂ
24	ಪ್ರೊ॥ ಎಲ್.ಎಸ್. ಶೇಷಗಿರಿರಾವ್, ಬೆಂಗಳೂರು	300.00 ರೂ.
25	ಡಾ॥ ಎ.ವಿ.ನರಸಿಂಹಮೂರ್ತಿ, ಮೈಸೂರು	250.00 ರೂ.
26	ಸ.ರ. ಸುದರ್ಶನ, ಮೈಸೂರು	250.00 ರೂ.
27	ಶ್ರೀಮತಿ ಆರ್ಯಾಂಬ ಪಟ್ಟಾಂಭಿ, ಮೈಸೂರು	250.00 ರೂ.
28	ಕೆಳದಿ ಗುಂಡಾಜೋಯಿಸ್, ಕೆಳದಿ	101.00 ರೂ.
29	ಶ್ರೀ ನಾ. ರಾಮಚಂದ್ರಯ್ಯ, ಬೆಂಗಳೂರು	100.00 ರೂ.
30	ಶ್ರೀ ಮುನಿಯಪ್ಪ, ಬೆಂಗಳೂರು	100.00 ರೂ.

6. ಗ್ರಂಥದಾನ

1.	ಡಾ|| ಪಿ.ವಿ.ನಾರಾಯಣ	1,069 ಪುಸ್ತಕಗಳು
2.	ಶ್ರೀ ಚಿರಂಜೀವಿ, ಬೆಂಗಳೂರು	414 ಪುಸ್ತಕಗಳು
3.	ಶ್ರೀಮತಿ ಅಗರಂ ಕೃಷ್ಣಮೂರ್ತಿ, ಬೆಂಗಳೂರು	154 ಪುಸ್ತಕಗಳು
4.	ಶ್ರೀ ಸಿ.ಎಸ್.ಭಾಸ್ಕರ, ಬೆಂಗಳೂರು	67 ಪುಸ್ತಕಗಳು
5.	ಡಾ|| ಶ್ರೀನಿವಾಸ ಹಾವನೂರ, ಬೆಂಗಳೂರು	101 ಪುಸ್ತಕಗಳು
6.	ಡಾ.ಕೆ. ಶ್ರೀಕಂಠಯ್ಯ,ಬೆಂಗಳೂರು	29 ಪುಸ್ತಕಗಳು
7.	ಶ್ರೀಮತಿ ನಾಗರತ್ನ, ಬೆಂಗಳೂರು	6 ಪುಸ್ತಕಗಳು

7. ಹಸ್ತ ಪ್ರತಿದಾನ

1.	ಶ್ರೀ ನರಸಿಂಹ ಜಿ.ದೀಕ್ಷಿತ್,	2 ಓಲೆಗರಿ ಹಸ್ತ ಪ್ರತಿಗಳು
2.	ಶ್ರೀ ನಾರಾಯಣಪ್ಪ (ಡಾ|| ಕೆ.ಆರ್.ಗಣೇಶ್ ಅವರ ಮೂಲಕ)	1 ಓಲೆಗರಿ ಹಸ್ತಪ್ರತಿ
3.	ಶ್ರೀಮತಿ ಶಾಂತ ಕೃಷ್ಣಮೂರ್ತಿ,ಬೆಂಗಳೂರು (ಕಾರೇ ಪುರ ರಿ|| ಸ್ಕ್ಯೂ.ಮಾಸ್ಟರ್)	21 ಓಲೆಗರಿ ಹಸ್ತ ಪ್ರತಿಗಳು
4.	ಬುದ್ಧನಾರಾಯಣ ಸ್ವಾಮಿ, ಅವರ ಮೂಲಕ	2 ಓಲೆಗರಿ ಹಸ್ತ ಪ್ರತಿಗಳು

ವಸ್ತು ಸಂಗ್ರಹ

ಶತಮಾನೋತ್ಸವ ಸ್ಮರಣೆ :- 2004 ಕನ್ನಡ ಸಾಹಿತ್ಯ ಲೊಕದಲ್ಲಿ ಅನೇಕ ಪ್ರಮುಖ ಕವಿ-ಲೇಖಕ -ವಿದ್ವಾಂಸರ ಶತಮಾನೋತ್ಸವಗಳ ಸಂಶೋಧಕ ಪ್ರೊ॥ ಎನ್ ಅನಂತರಂಗಾಚಾರ್ (04-09-2004) ಗಾಂಧೀವಾದಿ ಸಿದ್ದವನಹಳ್ಳಿ ಕೃಷ್ಣ ಶರ್ಮ (04-02-2004) ಹಾಸ್ಯಲೇಖಕರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ (04-02-2004) ನಾಟಕ ಸಿನಿಮಾ ಕಲಾವಿದ ಎಚ್. ಎಲ್. ಎನ್. ಸಿಂಹ (23.02.2004)

ನಾಟಕ ರಂಗದ ಭೀಷ್ಮ ಶ್ರೀರಂಗ (29.09.2004)

ರಾಷ್ಟ್ರಕವಿ ಕುವೆಂಪು (29.12.2004)

ಪ್ರಸಿದ್ಧ ಕವಿ ಪು.ತೀ.ನ (20.12.2004)

ಜಡ ಭರತ ಜಿ.ಬಿ, ಜೋಷಿ (29.07.2004)

ಮಂತಾದ ಅನೇಕ ನಾಡು-ನುಡಿಯನ್ನು ಕಟ್ಟಿದ ಧೀಮಂತರ ಶತಮಾನೋತ್ಸವಗಳು ಒಂದೇ ವರ್ಷದಲ್ಲಿ ಲಗ್ಗೆಯಿಟ್ಟಿವೆ, ಆಯಾ ಕ್ಷೇತ್ರದ ಆಸಕ್ತರು-ಸಂಘ ಸಂಸ್ಥೆಗಳು ಅಲ್ಲಲ್ಲಿ ಇವರುಗಳ ಶತಮಾನೋತ್ಸವಗಳನ್ನು ಸೂಕ್ತರೀತಿಯಲ್ಲಿ ಆಚರಿಸಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ ಶತಮಾನೋತ್ಸವವನ್ನು ಸರ್ಕಾರವೇ ನೇರವಾಗಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಆಚರಿಸಿದೆ. ಇನ್ನೂ ಆಚರಿಸುತ್ತಿದೆ, 'ನಾಡಗೀತೆ'ಯ ಮೂಲಕ ವಿವಾದಕ್ಕೂ ಒಳಗಾಗಿದೆ, ಸಾಹಿತ್ಯ ಆಕಾಡೆಮಿ, ಕನ್ನಡ ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತುಗಳಂತಹ ರಾಜ್ಯಮಟ್ಟದ ಸಂಸ್ಥೆಗಳು ಎಲ್ಲರ ಶತಮಾನೋತ್ಸವಗಳನ್ನೂ ಸಮಾನವಾಗಿ ಮತ್ತು ಸೂಕ್ತರೀತಿಯಲ್ಲಿ ಆಚರಿಸುವ ಮೂಲಕ ನಾಡಿನ ಭವ್ಯ ಸಂಸ್ಕೃತಿಯನ್ನು ಎತ್ತಿಹಿಡಿಯ ಬೇಕಾಗಿದೆ. ಇದರಿಂದ ಆಯಾ ಕವಿ-ಲೇಖಕರನ್ನು ಇಂದಿನ ಪೀಳಿಗೆಗೆ ಪರಿಚಯಿಸುವುದರ ಜೊತೆಗೆ ಅವರ ಸಾಹಿತ್ಯ ಸಾಧನೆಗಳನ್ನು ಪುನ ಮೌಲ್ಯೀಕರಣಕ್ಕೊಳಪಡಿಸಿದಂತಾಗುತ್ತದೆ. ಪ್ರತಿಷ್ಠಾನ ತನ್ನಮಿತಿಯಲ್ಲಿ ಕೆಲವರ ಶತಮಾನೋತ್ಸವಗಳನ್ನು ಕೆಲವು ರೀತಿಯಲ್ಲಿ ಆಚರಿಸಿದೆ. ಈ ಸಂಪುಟದಲ್ಲಿ ಶತಮಾನೋತ್ಸವ ಸಾಹಿತಿಗಳನ್ನು ಕುರಿತ ಲೇಖನಗಳಿವೆ. ಇವುಗಳನ್ನು ಪ್ರತ್ಯೇಕ ಪುಸ್ತಕ ರೂಪದಲ್ಲಿ ಹೊರತರಲಾಗುವುದು.

ಅಭಿನಂದನೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ: ಕನ್ನಡ ಖ್ಯಾತ ಕಾದಂಬರಿಗಾರ್ತಿಯಾದ ಶ್ರೀಮತಿ ಗೀತಾ ನಾಗಭೂಷಣ್ ಅವರ 'ಬದುಕು' ಕಾದಂಬರಿಗೆ ೨೦೦೪ನೇ ವರ್ಷದ ಪ್ರಶಸ್ತಿ ಲಭಿಸಿದೆ.

ವಿಶ್ವಮಾನ್ಯರು – ೦೪: ಸಾಹಿತ್ಯ ಮತ್ತು ಸುಗಮ ಸಂಗೀತ ಕ್ಷೇತ್ರಗಳೆರಡರಲ್ಲೂ ಮಾಡುತ್ತಿರುವ ಸ್ತುತ್ಯರ್ಹ ಸೇವೆಯನ್ನು ಗುರುತಿಸಿ ಯು.ಎ.ಇಯ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದಲ್ಲಿ ಈ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಬಿ.ಎಚ್.ಎಸ್. ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ॥ ಅನಸೂಯದೇವಿಯವರಿಗೆ ನೀಡಲಾಗಿದೆ.

ಗೌರವ ಡಾಕ್ಟರೇಟ್: ಮೈಸೂರುವಿಶ್ವವಿದ್ಯಾಲಯವು ಹಿರಿಯ ವಿಜ್ಞಾನಿ ಡಾ॥ಆರ್.ಚಿದಂಬರಂ; ಛಾಯಾಗ್ರಾಹಕ ಶ್ರೀ ಟಿ.ಎಸ್.ಸತ್ಯನ್; ಅಂಕಣಕಾರ ಸಾಹಿತಿ ಎಚ್ಚೆಸ್ಕೆ ಅವರಿಗೆ ಗೌರವ ಡಾಕ್ಟರೇಟ್‌ನ್ನು ನೀಡಿ ಗೌರವಿಸಿದೆ.

ವಿಶ್ವಮಾನವ ಪ್ರಶಸ್ತಿ: ಮೈಸೂರಿನ ಕುವೆಂಪುವಿದ್ಯಾವರ್ಧಕಟ್ರಸ್ಟ್ ಈ ವರ್ಷದ ವಿಶ್ವಮಾನವ ಪ್ರಶಸ್ತಿಯನ್ನು ಕರ್ನಾಟಕದ ಖ್ಯಾತ ಲೇಖಕರಾದ ಡಾ॥ ಕೆ.ಪ್ರಭುಶಂಕರ್ ಅವರಿಗೆ ನೀಡಿ ಗೌರವಿಸಿದೆ.

ಶ್ರೀಮತಿ ಸಾವಿತ್ರಮ್ಮ ದೇಜಗೌ ಪ್ರಶಸ್ತಿ: ಇದೇ ಸಂಸ್ಥೆ ನೀಡುವ ಈ ಪ್ರಶಸ್ತಿಗೆ ಕವಯಿತ್ರಿ ಡಾ॥ ಟಿ.ಸಿ.ಪೂರ್ಣಿಮಾ ಭಾಜನರಾಗಿದ್ದಾರೆ. ಇವರಿಗೆ ಕರ್ನಾಟಕ ಲೇಖಕಿಯರ ಸಂಘದ ಗೀತಾ ದೇಸಾಯಿ ದತ್ತಿನಿಧಿ ಬಹುಮಾನ, ಐ.ಎಂ. ಇನಾಂದಾರ್ ಪ್ರಶಸ್ತಿಗಳೂ ಲಭಿಸಿವೆ.

ಎಚ್.ಕೆ.ವೀರಣ್ಣಗೌಡ ಪ್ರಶಸ್ತಿ: ಪತ್ರಿಕೋದ್ಯಮ ಸಾಧನೆಗೆ ನೀಡಲಾಗುವ ಈ ಪ್ರಶಸ್ತಿ ಹಿರಿಯ ಪತ್ರಕರ್ತ ಶ್ರೀ ವಿ.ಎನ್.ಸುಬ್ಬರಾವ್ ಅವರಿಗೆ ಲಭಿಸಿದೆ.

ನೀರ್ಪಾಜೆ ಪ್ರಶಸ್ತಿ: ನೀರ್ಪಾಜೆ ಭೀಮಭಟ್ಟ ಪ್ರತಿಷ್ಠಾನವು ನೀಡುವ ಈ ಪ್ರತಿಷ್ಠಿತ ಪ್ರಶಸ್ತಿ ಈ ಸಾರಿ ಕನ್ನಡದ ಖ್ಯಾತ ಕವಿ ಕಯ್ಯಾರ ಕಿಂಞಣ್ಣ ರೈ ಅವರಿಗೆಲಭಿಸಿದೆ.

ಡಾ.ಮನ್ಸೂರ ಪ್ರತಿಷ್ಠಾನ ಪ್ರಶಸ್ತಿ: ೨೦೦೩ – ೨೦೦೪ನೇ ಸಾಲಿನ ಈ ಪ್ರಶಸ್ತಿಗೆ ಕನ್ನಡದ ಖ್ಯಾತಕವಿ ಚೆನ್ನವೀರಕಣವಿಯವರು ಭಾಜನರಾಗಿದ್ದಾರೆ.

ಭೂಸನೂರ ಮಠ ಪ್ರಶಸ್ತಿ: ಭೂಸನೂರಮಠ ಪ್ರತಿಷ್ಠಾನ ನೀಡುವ ಈ ಪ್ರಶಸ್ತಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಮ.ನ.ಜವರಯ್ಯ ಅವರ ಮಹಾ ಕಾದಂಬರಿ 'ಸೂರಪ್ಪ'ಗೆ ಸಂದಿದೆ.

ಡಾ॥ ಸಾ.ಶಿ.ಮರುಳಯ್ಯ ಪ್ರಶಸ್ತಿ: ನಾಯಕನಹಟ್ಟಿ ತ.ರಾ.ಸು. ಕನ್ನಡಸಂಘ, ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷ್ಠಾನ ಮತ್ತು ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಂಟಿಯಾಗಿ ಸ್ಥಾಪಿಸಿರುವ ಈ ಪ್ರಶಸ್ತಿಗೆ ೨೦೦೧ನೇ ಸಾಲಿಗೆ ಪ್ರೊ॥ಜಿ.ಎಸ್.ಸಿದ್ಧಲಿಂಗಯ್ಯ; ೨೦೦೨ನೇ ಸಾಲಿಗೆ ಪ್ರೊ॥ಬರಗೂರು ರಾಮಚಂದ್ರಪ್ಪ; ೨೦೦೩ನೇ ಸಾಲಿಗೆ ಶ್ರೀಬಿ.ಎಲ್. ವೇಣು, ಹಾಗೂ ೨೦೦೪ನೇ ಸಾಲಿನ ಪ್ರಶಸ್ತಿ ಶ್ರೀಮತಿ ಸುಧಾ ನಾರಾಯಣಮೂರ್ತಿ ಅವರುಗಳಿಗೆ ಸಂದಿವೆ.

ಪದ್ಮಭೂಷಣ ಬಿ.ಸರೋಜಾದೇವಿ ಪ್ರಶಸ್ತಿ: ಕನ್ನಡಸಾಹಿತ್ಯಪರಿಷತ್ತಿನ ೨೦೦೪ನೇ ಸಾಲಿನ ಈ ಪ್ರಶಸ್ತಿಯು ಲೇಖಕಿ ಪ್ರೊ॥ಶಶಿಕಲಾ ವೀರಯ್ಯಸ್ವಾಮಿಯವರಿಗೆ ಲಭಿಸಿದೆ.

ಗೌರವ ಡಾಕ್ಟರೇಟ್: ಹಿರಿಯ ಗಮಕ ವಿದ್ವಾಂಸ ಮತ್ತು ಭಾರತೀಯ ವಿದ್ಯಾಭವನದ ಕಾರ್ಯಕಾರಿ ನಿರ್ದೇಶಕ ಶ್ರೀ ಮತ್ತೂರು ಕೃಷ್ಣಮೂರ್ತಿಯವರಿಗೆ ಕುವೆಂಪು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ವರ್ಧಮಾನ ಪ್ರಶಸ್ತಿ: ಮೂಡಬಿದಿರೆಯ ವರ್ಧಮಾನ ಪ್ರಶಸ್ತಿ ಪೀಠದ ೨೦೦೩ನೇ ಸಾಲಿನ ವರ್ಧಮಾನ ಪ್ರಶಸ್ತಿಗೆ ಕಥೆಗಾರ ರಾಘವೇಂದ್ರ ಪಾಟೀಲರ 'ಮಾಯಿಯ ಮೂರು ಮುಖಗಳು' ಕಥಾಸಂಕಲನ ಹಾಗೂ ಶ್ರೀಧರಬಳಗಾರಕುಮಟರವರ 'ಮುಖಾಂತರ' ಕಥಾಸಂಕಲನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಗೊಂಡಿವೆ.

ಆಲೂರು ಪ್ರಶಸ್ತಿ: ಆಲೂರು ವೆಂಕಟರಾಯ ಪ್ರತಿಷ್ಠಾನದ 'ಆಲೂರು ವೆಂಕಟರಾಯ ಪ್ರಶಸ್ತಿ' ಶ್ರೀ ಜಿ.ನಾರಾಯಣ ಅವರಿಗೆ ಸಂದಿದೆ. ಇವರಿಗೆ ೨೦೦೪ನೇ ಸಾಲಿನ ಬೀಚಿ ಪ್ರಶಸ್ತಿಯೂ ಬಂದಿದೆ.

ಚುಂಚಶ್ರೀ ಪ್ರಶಸ್ತಿ: ಆದಿಚುಂಚನಗಿರಿ ಸಂಸ್ಥಾನದ ವತಿಯಿಂದ ನೀಡಲಾಗುವ ಈ ಪ್ರಶಸ್ತಿ ಪ್ರೊ॥ಡಿ.ಲಿಂಗಯ್ಯ, (ಸಾಹಿತ್ಯ), ತಿಮ್ಮರಾಜು(ಸುಗಮ ಸಂಗೀತ), ಹೆಚ್.ಎಸ್.ದೊರೆಸ್ವಾಮಿ (ಸ್ವಾತಂತ್ರ್ಯ ಹೋರಾಟಗಾರರು), ಬೋರೇಗೌಡ (ರಂಗಭೂಮಿ) ಇವರಿಗೆ ಲಭಿಸಿದೆ.

ನಾಡೋಜ ಪ್ರಶಸ್ತಿ: ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ ನೀಡುವ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಶ್ರೀ ಜಿ.ನಾರಾಯಣ, ಶ್ರೀಮತಿ ಸುಭದ್ರಮ್ಮ ಮನ್ಸೂರ್, ಶ್ರೀಮತಿ ಗೀತಾ ನಾಗಭೂಷಣ, ಶ್ರೀ ಎಲ್.ನಾರಾಯಣ ರೆಡ್ಡಿ, ಡಾ॥ಚಂದ್ರಶೇಖರ ಕಂಬಾರ, ಪ್ರೊ॥ಕೆ.ಎಸ್.ನಿಸಾರ್ ಅಹಮದ್ ಅವರಿಗೆ ಲಭಿಸಿದೆ.

ಸೇಡಿಯಾಪು ಪ್ರಶಸ್ತಿ: ಪ್ರಸಿದ್ಧ ವಿದ್ವಾಂಸರೂ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳೂ ಆದ ಡಾ॥ ಎಂ.ಎಂ. ಕಲಬುರ್ಗಿ ಅವರಿಗೆ ಈ ಸಾಲಿನ ಪ್ರಸಿದ್ಧ ಸೇಡಿಯಾಪು ಪ್ರಶಸ್ತಿ ಲಭಿಸಿದೆ.

ಚಾವುಂಡರಾಯ ಪ್ರಶಸ್ತಿ: ಜೈನ ಸಾಹಿತ್ಯ ವಿದ್ವಾಂಸ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ॥ಬಸವರಾಜ ಕಲ್ಲಪ್ಪ ಖಡಬಡಿರಿಗೆ ೨೦೦೪ನೇ ಸಾಲಿನ ಚಾವುಂಡರಾಯ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ.

ಪಂಪ ಪ್ರಶಸ್ತಿ ಹಾಗೂ ವಿಧಾನ ಪರಿಷತ್ತಿನ ಸದಸ್ಯತ್ವ: ಕನ್ನಡ ಸಾಹಿತ್ಯಕ್ಷೇತ್ರದ ಖ್ಯಾತಕವಿ, ನಾಟಕಕಾರ, ಕಾದಂಬರಿಕಾರ, ಡಾ॥ಚಂದ್ರಶೇಖರ ಕಂಬಾರ ರವರಿಗೆ ಈ ವರ್ಷದ 'ಪಂಪಪ್ರಶಸ್ತಿ' ಲಭಿಸಿದೆ. ಹಾಗೇ ಇವರು ಕರ್ನಾಟಕ ಸರ್ಕಾರದ ವಿಧಾನ ಪರಿಷತ್ತಿಗೆ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ. ಇವರೊಂದಿಗೆ ಕನ್ನಡದ ಖ್ಯಾತಲೇಖಕ ಎಲ್. ಹನುಮಂತಯ್ಯ ಅವರೂ ನಾಮಕರಣಗೊಂಡಿದ್ದಾರೆ.

ಅ.ನ.ಕೃ. ಪ್ರಶಸ್ತಿ: ಅನಕೃ ಪ್ರತಿಷ್ಠಾನ ನೀಡುವ ಈ ಸಾಲಿನ ಪ್ರಸಿದ್ಧ ಅ.ನ.ಕೃ. ಪ್ರಶಸ್ತಿಯು ಪ್ರಸಿದ್ಧ ಲೇಖಕರಾದ ಶ್ರೀ ಶೇಷನಾರಾಯಣ ಅವರಿಗೆ ಲಭಿಸಿದೆ.

ಮಾಸ್ತಿ ಪ್ರಶಸ್ತಿ : ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಮಿತಿ ನೀಡುವ ಪ್ರತಿಷ್ಠಿತ ಮಾಸ್ತಿ ಪ್ರಶಸ್ತಿಯು ಖ್ಯಾತ ಕಾದಂಬರಿಕಾರ ವ್ಯಾಸರಾಯ ಬಲ್ಲಾಳ ಅವರಿಗೆ ಲಭಿಸಿದೆ.

ಸಾಹಿತ್ಯ ಅಕಾಡೆಮಿ ಫೆಲೋಶಿಪ್:ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಗೌರವ ಫೆಲೋಷಿಪ್ ಅನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಖ್ಯಾತ ಲೇಖಕ, ಡಾ॥ ಯು.ಆರ್.ಅನಂತಮೂರ್ತಿ ಅವರಿಗೆ ನೀಡಲಾಗಿದೆ.

ಮುದ್ದಣ ಕಾವ್ಯ ಪ್ರಶಸ್ತಿ: ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಮರ್ಕಂಡ ಪುರಂ ಶ್ರೀನಿವಾಸ್ ಅವರ 'ಸಮಯದಾಳದಲ್ಲಿ' ಕವನ ಸಂಗ್ರಹಕ್ಕೆ ೨೦೦೩ನೇ ಸಾಲಿನ ಪ್ರತಿಷ್ಠಿತ ಮುದ್ದಣ ಕಾವ್ಯ ಪ್ರಶಸ್ತಿ ಲಭಿಸಿದೆ.

ದೇರಾಜೆ ಪ್ರಶಸ್ತಿ: ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಎನ್. ರಂಗನಾಥ ಶರ್ಮಾ ಅವರಿಗೆ ಈ ಸಾಲಿನ ದೇವರಾಜ ಪ್ರಶಸ್ತಿ ಲಭಿಸಿದೆ.

ಮೇಲ್ಕಂಡ ಎಲ್ಲಾ ಪ್ರಶಸ್ತಿ ವಿಜೇತರುಗಳಿಗೆ ಬಿ.ಎಂ.ಶ್ರೀ ಪ್ರತಿಷ್ಠಾನದ ಹಾಗೂ ಕರ್ನಾಟಕ ಲೋಚನದ ಹಾರ್ದಿಕ ಅಭಿನಂದನೆ ಸಲ್ಲುತ್ತದೆ.

ಶ್ರದ್ಧಾಂಜಲಿ

<u>ಡಾ॥ ಶಂಕರಮೊಕಾಶಿ ಪುಣೇಕರ:</u> ಜನನ: (೮.೫.೧೯೨೮) ಕನ್ನಡ ಸಾಹಿತ್ಯ ಲೋಕದ ಖ್ಯಾತ ವಿಮರ್ಶಕರಾದ ಪುಣೇಕರರು ೧೧.೮.೦೪ರಂದು ಧಾರವಾಡದಲ್ಲಿ ನಿಧನ ಹೊಂದಿದರು. ಮುಂಬಯಿ ವಿಶ್ವವಿದ್ಯಾಲಯ ಹಾಗೂ ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀಯುತರು ಖ್ಯಾತ ಕಾದಂಬರಿಕಾರರಾಗಿ, ಸಂಶೋಧಕರಾಗಿ, ಅನುವಾದಕರಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಇವರ 'ನಟ ನಾರಾಯಣ' ಕಾದಂಬರಿ 'ಸುಧಾ' ಪತ್ರಿಕೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ (೧೯೮೨) ಪ್ರಥಮ ಬಹುಮಾನಕ್ಕೆ ಪಾತ್ರವಾಗಿತ್ತು. ಕುವೆಂಪುರವರ 'ರಾಮಾಯಣದರ್ಶನಂ' ಮಹಾಕಾವ್ಯವನ್ನು ಮತ್ತು ಕಾಳಿದಾಸನ 'ಋತು ಸಂಹಾರ'ವನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ.

ಇವರ ಇತರ ಪ್ರಮುಖ ಕೃತಿಗಳು: ಗಂಗವ್ವ ಗಂಗಾಮಾಯಿ, ದಿ ಕ್ಯಾಪ್ಟೀವ್; ಮಾಯಿಯ ಮೂರು ಮುಖಗಳು, ಅವಧೇಶ್ವರಿ (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ) ಪಾಶ್ಚಾತ್ಯ ವಿಮರ್ಶಾ ಇತಿಹಾಸ, ಶ್ರೀ ಬೇಂದ್ರೆಯವರ ಕಾವ್ಯ ಮೀಮಾಂಸೆ, ಸಾಹಿತ್ಯ ಮತ್ತು ಅಭಿರುಚಿ, ದಿ ಪ್ರಿಟೆಂಡರ್(ಇಂಗ್ಲಿಷ್ ಕೃತಿ). ಏಟ್ಸ್ ಕುರಿತು ಒಂದು ಸಂಶೋಧನಾ ಗ್ರಂಥ ಸಹ ರಚಿಸಿದ್ದಾರೆ.

ಎಚ್.ಎಂ.ಚೆನ್ನಯ್ಯ: ಕನ್ನಡದ ಖ್ಯಾತ ಕವಿ, ವಿಮರ್ಶಕರಾಗಿದ್ದ ಇವರು ತಮ್ಮ ೬೯ನೇ ವಯಸ್ಸಿನಲ್ಲಿ ದಿನಾಂಕ ೨೨.೯.೦೪ರಂದು ಮೈಸೂರಿನಲ್ಲಿ ನಿಧನರಾದರು.

ಬಿ.ಆರ್.ನಾರಾಯಣ: (ಜನನ ೧೯೨೮) ಖ್ಯಾತ ಅನುವಾದಕರಾಗಿದ್ದ ಶ್ರೀಯುತರು ದಿನಾಂಕ ೧.೧೨.೦೪ರಂದು ನಿಧನರಾದರು. ಇವರು ನ್ಯಾಷನಲ್ ಬುಕ್‌ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಕನ್ನಡದ ಹಲವು ಶ್ರೇಷ್ಠ ಕೃತಿಗಳನ್ನು ಹಿಂದಿಗೆ ಬಹು ಸಮರ್ಥ ರೀತಿಯಲ್ಲಿ ಅನುವಾದಿಸಿದ್ದಾರೆ. ೧೯೯೧ರಲ್ಲಿ ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಲಭಿಸಿತ್ತು.

ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ: ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯನವರು ಕನ್ನಡ ಸಾಹಿತ್ಯ ಕಂಡ ಅಪರೂಪದ ವಿದ್ವಾಂಸರಾಗಿದ್ದರು. ವೃತ್ತಿಯಿಂದ ಎಲ್.ಐ.ಸಿ.ಯಲ್ಲಿ ಹೆಸರಾಂತ ವಿಮಾಗಣಿತಜ್ಞರಾಗಿ (ಆಕ್ಚ್ಯುಯರಿ ಅಧಿಕಾರಿಗಳಾಗಿ) ರಾಷ್ಟ್ರದ ಕೆಲವೇ ಆಕ್ಚ್ಯೂಯರಿಗಳಲ್ಲಿ ಒಬ್ಬರಾಗಿದ್ದರೂ, ಪ್ರವೃತ್ತಿಯಿಂದ ಸಂಸ್ಕೃತ ವಿಚಾರ ಕನ್ನಡ ಸಾಹಿತ್ಯಗಳ ಘನವಿದ್ವಾಂಸರಾಗಿ ಗುರುತಿಸಿಕೊಂಡಿದ್ದರು. ಪ್ರಾಚೀನ ಸಾಹಿತ್ಯದ ಅರ್ಥನಿಷ್ಪತ್ತಿ, ಕವಿಗಳ ಕಾಲನಿರ್ಣಯುಗಳಂತಹ ಪಾಂಡಿತ್ಯಪೂರ್ಣಕ್ಷೇತ್ರದಲ್ಲಿ ನಿರ್ದಿಷ್ಟ ವಿಷಯ ಜ್ಞಾನವುಳ್ಳವರಾಗಿದ್ದರು.

೧೮-೯-೧೯೦೯ರಲ್ಲಿ ಗಣೇಶಚತುರ್ಥಿಯುಂದು ಹುಟ್ಟಿದ ಪ್ರೊ ॥ಗರ್ಗೇಶ್ವರಿಯವರು ೯೫ ವರ್ಷಗಳ ತುಂಬುಜೀವನ ನಡೆಸಿ ೨೯-೧೨-೦೪ ರಂದು

ನಮ್ಮನ್ನಗಲಿದರು. ಇಂತಹ ಘನವೆತ್ತ ಗೌರವಾನ್ವಿತ ವಿದ್ವಾಂಸರ ನಿಧನದಿಂದ ವಿದ್ವಾಂಸರ ನಡುವಿನ ಹಿರಿಯ ಕೊಂಡಿಯೊಂದು ಕಳಚಿದಂತಾಗಿದೆ. ಸದಾ ಜ್ಞಾನದಾಹಿಗಳಾಗಿದ್ದು ಕೊನೆಯವರೆಗೂ ನಿರಂತರ ಓದುಗರಾಗಿದ್ದ ದಿವಂಗತರು ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಪ್ರೌಢಿಮೆಯನ್ನುಗಳಿಸಿದ್ದರು. ಈ ಮೂರೂ ಭಾಷೆಗಳಲ್ಲಿ ಕೆಲವೇ ಪಾಂಡಿತ್ಯ ಕೃತಿಗಳನ್ನು ರಚಿಸಿದ್ದರೂ ಅವೆಲ್ಲ ಮೌಲಿಕ ಕೃತಿಗಳಾಗಿವೆ. ಮಾಸ್ತಿಯವರ ಕೆಲವು ಸಣ್ಣ ಕಥೆಗಳನ್ನು ಸಂಸ್ಕೃತಕ್ಕೂ ಭರ್ತೃಹರಿಯ ವಾಕ್ಯಪದೀಯವನ್ನು ಕನ್ನಡಕ್ಕೂ ಸಂಸ್ಕೃತದ ಮಹಿಷಶತಕವನ್ನು ಇಂಗ್ಲೀಷ್‌ಗೂ ಅನುವಾದಿಸಿದ್ದಾರೆ. ಶಂಕರಾಚಾರ್ಯರ ಶ್ರೀವಿಷ್ಣುಪಾದಾದಿಕೇಶಾಂತ ಸ್ತೋತ್ರ ಮತ್ತು ಚಾಮರಾಜನಗರ ರಾಮಾಶಾಸ್ತ್ರಿಗಳ ಲಘುಕೃತಿಗಳನ್ನು ಸಂಪಾದಿಸಿದ್ದಾರೆ.

ಕನ್ನಡ ಸಾಹಿತ್ಯ ಕುರಿತ ಹಲವು ಲೇಖನಗಳು ಪ್ರತಿಷ್ಠಾನದ ಲೋಚನಪತ್ರಿಕೆ ಮತ್ತು ಇನ್ನೂ ಕೆಲವು ಗಣ್ಯ ಗೌರವಗ್ರಂಥಗಳಲ್ಲಿ ಪ್ರಕಟವಾಗಿವೆ. ಬಿ.ಎಂ.ಶ್ರೀ. ಪ್ರತಿಷ್ಠಾನ ದೊಂದಿಗೆ ನಿಕಟವರ್ತಿಗಳಾಗಿದ್ದ ಪ್ರೊ ॥ ಗರ್ಗೇಶ್ವರಿಯವರು ಆರಂಭದಲ್ಲಿ ಕಾರ್ಯಸಮಿತಿ ಸದಸ್ಯರಾಗಿ ನಂತರ ಗೌರವ ಸದಸ್ಯರಾಗಿ ಸದಾ ಪ್ರತಿಷ್ಠಾನದ ಹಿತೈಷಿಗಳಾಗಿದ್ದರು. ಸಂಸ್ಥಾಪಕರಾದಿಯಾಗಿ ಎಲ್ಲ ಅಧ್ಯಕ್ಷರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಸಂಸ್ಥೆಯ ಬೆಳವಣಿಗೆಯಲ್ಲಿ ಸಕ್ರಿಯರಾಗಿದ್ದರಲ್ಲದೆ ಸೋಸಲೆ ಅಯ್ಯಾಶಾಸ್ತ್ರಿ ದತ್ತಿ ಸ್ಥಾಪಿಸಲು ಅವರ ಬಂಧುಗಳ ಮನೆಗಳಿಗೆ ಭೇಟಿಕೊಟ್ಟು ಸುಮಾರು ೫೦ ಸಾವಿರರೂಗಳನ್ನು ಸಂಗ್ರಹಿಸಿಕೊಟ್ಟಿದ್ದರು. ಅನೇಕ ಉಪನ್ಯಾಸಗಳನ್ನು ಸ್ವತಃ ತಾವೂ ನೀಡಿರುವುದಲ್ಲದೆ ಪ್ರತಿಷ್ಠಾನದ ಕಾರ್ಯಕ್ರಮ ಗಳಲ್ಲೂ ತಪ್ಪದೆ ಭಾಗವಹಿಸುತ್ತಿದ್ದರು.

ಪ್ರೊ: ಗರ್ಗೇಶ್ವರಿ ವೆಂಕಟಸುಬ್ಬಯ್ಯನವರಿಗೆ ಬಿ.ಎಂ.ಶ್ರೀ.ಪ್ರತಿಷ್ಠಾನದ ಎಂ.ವಿ.ಸಿ.ಪುರಸ್ಕಾರದ ಪ್ರಥಮ ಪ್ರಶಸ್ತಿಯನ್ನು ಕೊಡಮಾಡಿ ಗೌರವಿಸಿದ್ದಲ್ಲದೆ ಈಚೆಗೆ ನಡೆದ ರಜತೋತ್ಸವ ಸಂದರ್ಭದಲ್ಲೂ ಸನ್ಮಾನ ಮಾಡಲಾಗಿತ್ತು. ಅಖಿಲ ಕರ್ನಾಟಕ ಸಂಸ್ಕೃತ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಯೂ ಲಭಿಸಿತ್ತು.

ಇತ್ತೀಚೆಗೆ ಅವರ ಕೆಲವು ಲೇಖನಗಳ ಸಂಕಲನ "ಶಾಸ್ತ್ರ ಕುತೂಹಲ" ವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದೆ. ಇನ್ನೂ ಕೆಲವು ಲೇಖನಗಳೂ ಅಪ್ರಕಟಿತ ಗ್ರಂಥಗಳೂ ಅವರಲ್ಲಿದ್ದು ಪ್ರಕಟನೆಯ ಯೋಗವನ್ನು ಕಾಣಬೇಕಾಗಿದೆ.

ಮೇಲ್ಕಂಡ ಈ ಎಲ್ಲಾ ದಿವಂಗತರುಗಳಿಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು 'ಕರ್ನಾಟಕ ಲೋಚನ' ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿವೆ.

ಡಾ॥ ಜಿ.ಎಸ್. ದೀಕ್ಷಿತ್ : ಹಿರಿಯ ಇತಿಹಾಸ ತಜ್ಞರೂ, ಸಂಶೋಧಕರೂ ಆಗಿದ್ದ ಡಾ॥ ಜಿ.ಎಸ್. ದೀಕ್ಷಿತ್ ಅವರು ಜೂನ್ 2004 ರಂದು ಧಾರವಾಡದಲ್ಲಿ ದೈವಾಧೀನರಾದರು. ರಾಷ್ಟ್ರ-ಅಂತರರಾಷ್ಟ್ರ ಮಟ್ಟದಲ್ಲಿ ಖ್ಯಾತ ನಾಮರಾಗಿದ್ದ ಡಾ॥ ದೀಕ್ಷಿತರು ಹಲವು ಮೌಲಿಕ ಕೃತಿಗಳ ಮೂಲಕ ಕರ್ನಾಟಕದ ಇತಿಹಾಸವನ್ನು ಕಟ್ಟಿಕೊಟ್ಟ ಧೀಮಂತರು. ವಿಜಯನಗರ ಇತಿಹಾಸದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಡಾ॥

ದೀಕ್ಷಿತರು ಬಿ.ಎಂ.ಶ್ರೀ ಪ್ರತಿಷ್ಠಾನ ೧೯೮೬ರಲ್ಲಿ ನಡೆಸಿದ ಇತಿಹಾಸಜ್ಞ ಎಸ್.ಶ್ರೀಕಂಠಯ್ಯ ಶತಾಬ್ದಿ ನೆನಪಿನ ಗ್ರಂಥ 'ಸಂಗಮರ ಕಾಲದ ವಿಜಯನಗರ' (Early Vijayanagar Studies its History & Culture) ವನ್ನು ಸಂಕಲಿಸಿ ವಿಚಾರ ಗೋಷ್ಠಿಯನ್ನು ಸಮರ್ಥವಾಗಿ ನಡೆಸಿ ಕೊಟ್ಟಿದ್ದರು. ಸಂಸ್ಥಾಪಕರಾದ ಎಂ.ವಿ.ಸೀತಾರಾಮಯ್ಯನವರ ಸಹಪಾಠಿಗಳಾಗಿದ್ದ ಡಾ॥ ದೀಕ್ಷಿತರು ಇನ್ನೊಬ್ಬ ಸಹಪಾಠಿ ವಿದ್ವಾಂಸರಾಗಿದ್ದ ಪ್ರೊ॥ ಬಿ.ರಾಮಸ್ವಾಮಿ ಅವರೊಂದಿಗೆ ಸೇರಿ ಶ್ರೀ ಕೃಷ್ಣದೇವರಾಯ ಜೀವನ ಸಾಧನೆ ಕೃತಿಯನ್ನು ಸಂಪಾದಿಸಿದ್ದಾರೆ.

'ಮಧುರಸ್ಮೃತಿ'ಯ ಬಿಡುಗಡೆಗೆ ಅನಾರೋಗ್ಯದಿಂದ ಬರಲಾಗದಿದ್ದರೂ ಅವರು ಕಳುಹಿಸಿದ್ದ ಭಾಷಣವನ್ನು ಅವರ ನೆನಪಿಗಾಗಿ ಆ ಗ್ರಂಥದ ವಿಮರ್ಶೆಯಾಗಿ ಈ ಸಂಚಿಕೆಯಲ್ಲಿ ಪ್ರಕಟಿಸಿದೆ.

ಪ್ರೊ ॥ ಎಚ್.ಆರ್.ರಘುನಾಥಭಟ್: ಪ್ರಸಿದ್ಧ ಇತಿಹಾಸ ಸಂಶೋಧಕರೂ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದ ನಿರ್ದೇಶಕರೂ ಆಗಿದ್ದ ಡಾ॥ ಎಚ್.ಆರ್. ರಘುನಾಥ ಭಟ್ ಅವರು ಜನವರಿ ೯ರಂದು ಹೃದಯಾಘಾತದಿಂದ ನಿಧನರಾದರು. ಶಾಸನ, ಇತಿಹಾಸ, ಸಂಸ್ಕೃತಿ, ಕಲೆ ಇತ್ಯಾದಿ ವಿಚಾರಗಳ ಆಳವಾದ ಅಧ್ಯಯನ ಮಾಡುತ್ತಿದ್ದ ರಘುನಾಥ ಭಟ್ ಅವರು ಹತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಆರ್. ಎಂ. ಹಡಪದ : ನಗರದ ಪ್ರತಿಷ್ಠಿತ ಕಲಾಶಾಲೆಯಾದ ಕುವೆಂಪು ಕೆನ್ ಕಲಾ ಶಾಲೆಯ ಸಂಸ್ಥಾಪಕರೂ, ಲಲಿತ ಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಪ್ರಸಿದ್ಧ ಕಲಾವಿದರೂ ಆಗಿದ್ದ ಆರ್.ಎಂ. ಹಡಪದ್ ಅವರು ಈಚೆಗೆ ನಿಧನರಾದರು.

ಹಡಪದ್ ಅವರ ಶಿಷ್ಯರನೇಕರು ಪ್ರಸಿದ್ಧ ಕಲಾವಿದರಾಗಿ ಬೆಳೆದಿದ್ದಾರೆ. ಇವರ ಕಲಾಕೃತಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಖ್ಯಾತಿಗಳಿಸಿವೆ. ಸಾಹಿತ್ಯ ದಲ್ಲಿಯೂ ಆಸಕ್ತರಾಗಿದ್ದ ಹಡಪದ್ ಅವರು ತಮ್ಮ ಕಲಾಶಾಲೆಯಲ್ಲಿ ಪ್ರತಿ ತಿಂಗಳೂ ಸಾಹಿತ್ಯ ಕಾರ್ಯಕ್ರಮಗಳು ನಡೆಸಲು ಪ್ರೋತ್ಸಾಹ ನೀಡುತ್ತಾ ಒತ್ತಾಸೆಯಾಗಿಟ್ಟಿದ್ದರು. ದಿವಂಗತರು ಉತ್ತಮ ಕಲಾ ವಿಮರ್ಶಕರೂ ಆಗಿದ್ದರು.

ರಾಮಕೃಷ್ಣ ಹೆಗಡೆ:- ಕರ್ನಾಟಕದ ಮಾಜಿ ಮುಖ್ಯ ಮಂತ್ರಿ, ಕೇಂದ್ರ ಮಾಜಿ ಸಚಿವ, ಯೋಜನಾ ಆಯೋಗದ ಉಪಾಧ್ಯಕ್ಷ, ಸಂಸದ ರಾಮಕೃಷ್ಣ ಹೆಗಡೆಯವರು ೧೨.೦೧.೨೦೦೪ ರಂದು ದೈವಾಧೀನರಾದರು. ಇವರ ನಿಧನದಿಂದ ಕರ್ನಾಟಕ ರಾಜಕೀಯ ಕ್ಷೇತ್ರದ ಧ್ರುವತಾರೆಯೊಂದು ಅಸಂಗತವಾದಂತಾಯಿತು ರಾಜ್ಯ ರಾಷ್ಟ್ರ ರಾಜಕಾರಣದಲ್ಲಿ ವೈಶಿಷ್ಟ್ಯ ಪೂರ್ಣ ವ್ಯಕ್ತಿತ್ವ ಹೊಂದಿದ್ದ ಶ್ರೇಷ್ಠ ರಾಜಕೀಯ ಮುತ್ಸದ್ದಿ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ನಾಡು-ನುಡಿ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ಸಲ್ಲಿಸಿದ್ದರು. ಮೌಲ್ಯಾಧಾರಿತ ರಾಜಕೀಯ ತತ್ವದ ಪ್ರತಿಪಾದಕರಾಗಿ ಕರ್ನಾಟಕದ ಹಲವು ಯೋಜನೆಗಳಿಗೆ ತಮ್ಮ ಅಧಿಕಾರಾವಧಿಯಲ್ಲಿ ಚಾಲನೆ ನೀಡಿದ್ದರು. ಕನ್ನಡ

ಸಾಹಿತ್ಯ-ಸಂಸ್ಕೃತಿಯ ಪೋಷಕರಾಗಿದ್ದರು.

ಬಿ.ಎಂ. ಶ್ರೀ. ಪ್ರತಿಷ್ಠಾನಕ್ಕೆ ಇವರ ಉಪಕಾರ ದಾಖಲಿಸುವಂತಹದು. ಸಂಸ್ಥಾಪಕ ಸೀತಾರಾಮಯ್ಯನವರ ಕಾಲದಿಂದಲೂ ಸಂಸ್ಥೆಯ ಅಭಿಮಾನಿಗಳಾಗಿ ಹಲವು ಯೋಜನೆಗಳಿಗೆ ಸರ್ಕಾರದಿಂದ ಧನ ಸಹಾಯ ಒದಗಿಸಿದ್ದಾರೆ. ಈಚೆಗೆ ಸಂಸದರ ನಿಧಿಯಿಂದ ಬಿ.ಎಂ. ಶ್ರೀ. ಕಲಾಭವನದ ನಿರ್ಮಾಣಕ್ಕೆ 2,00,000/- (ಎರಡು ಲಕ್ಷ) ರೂಗಳ ಅನುದಾನ ಒದಗಿಸಿದ್ದರು.



ರಜತೋತ್ಸವ ಸಮಾರಂಭದ ಉದ್ಘಾಟನೆ




ಎಂ.ವಿ.ಸೀ. ಪ್ರತಿಮೆಯ ಅನಾವರಣ




ರಜತೋತ್ಸವ ಮಾಲೆಯ ಪುಸ್ತಕಗಳ ಬಿಡುಗಡೆ



'ರಜತಸಿರಿ' ಸವಿ ಸಂಚಿಕೆ ಬಿಡುಗಡೆ




ಬಿ.ಎಂ.ಶ್ರೀ
ಪ್ರತಿಮೆ
ಅನಾವರಣ



ಸಮಾರೋಪ
ಸಮಾರಂಭ - ಸನ್ಮಾನ



ಬಿ.ಎಂ.ಶ್ರೀ.
ಕಲಾಭವನ
ಲೋಕಾರ್ಪಣೆ



ಕವಿಗೋಷ್ಠಿ

ಪ್ರತಿಷ್ಠಾನದ ಗೌರವ ಸದಸ್ಯರು

೧. ವಿದ್ವಾನ್ ಎನ್. ರಂಗನಾಥಶರ್ಮ
೨. ಶ್ರೀಮತಿ ಶಾಂತಾದೇವಿ ಮಾಳವಾಡ
೩. ಪ್ರೊ|| ಜಿ. ವೆಂಕಟಸುಬ್ಬಯ್ಯ
೪. ಕಯ್ಯಾರ ಕಿಞ್ಞಣ್ಣ ರೈ
೫. ಡಾ|| ಎನ್.ಕೆ. ಕುಲಕರ್ಣಿ
೬. ಡಾ|| ದೇ. ಜವರೇಗೌಡ
೭. ಡಾ|| ಜಿ.ಎಸ್. ಶಿವರುದ್ರಪ್ಪ

ಕಾರ್ಯಸಮಿತಿ ಸದಸ್ಯರು

೧. ಜಿ. ನಾರಾಯಣ,(ಗೌರವ ಅಧ್ಯಕ್ಷರು),
೨. ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀ,(ಅಧ್ಯಕ್ಷರು),
೩. ಪ್ರೊ|| ನಾ. ಗೀತಾಚಾರ್ಯ,(ಗೌ|| ಕಾರ್ಯದರ್ಶಿ),
೪. ಪ್ರೊ|| ಡಿ.ಲಿಂಗಯ್ಯ,(ಕೋಶಾಧಿಕಾರಿ),
೫. ಪ್ರೊ|| ಎಲ್.ಎಸ್. ಶೇಷಗಿರಿರಾವ್,
೬. ಪ್ರೊ|| ಎನ್. ಬಸವಾರಾಧ್ಯ,
೭. ಡಾ|| ಎಂ. ಚಿದಾನಂದಮೂರ್ತಿ,
೮. ಪ್ರೊ|| ಅ.ರಾ.ಮಿತ್ರ,
೯. ಪ್ರೊ|| ಎಂ.ಎಚ್.ಕೃಷ್ಣಯ್ಯ,
೧೦. ಡಾ|| ಎಂ.ಎಲ್.ಲಲಿತಮ್ಮ,
೧೧. ಪ್ರೊ|| ಜಿ. ಅಶ್ವತ್ಥನಾರಾಯಣ,
೧೨. ಪ್ರೊ|| ವಾಮದೇವ ,ಕ್ಷಿತ್ ಗುಲ್ಬರ್ಗ
೧೩. ಡಾ|| ಕೆ.ಆರ್. ಗಣೇಶ್,
೧೪. ಪ್ರೊ|| ಟಿ.ಎಸ್. ನಾಗಭೂಷಣ,
೧೫. ಶ್ರೀ ಎಸ್.ಟಿ. ರಾಧಾಕೃಷ್ಣ,
೧೬. ಡಾ|| ನ. ಸುಬ್ರಹ್ಮಣ್ಯಂ,
೧೭. ಶ್ರೀ ಎಸ್.ವಿ. ಶ್ರೀನಿವಾಸರಾವ್

ವಿನಿಮಯ ಪತ್ರಿಕೆಗಳು

೧. ಪ್ರಬುದ್ಧ ಕರ್ಣಾಟಕ, ಮೈಸೂರು
೨. ಸಾಧನೆ
೩. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ
೪. ಮಿಥಿಕ್ ಸೊಸೈಟಿ ಜರ್ನಲ್
೫.. ಬಸವಪಥ
೬. ಶಂಕರ ಭಾಸ್ಕರ
೭. ಜಾನಪದ ಜಗತ್ತು
೮. ಅನ್ವೇಷಣೆ
೯. ಅಪರಂಜಿ
೧೦. ಸುಗುಣಮಾಲಾ, ಉಡುಪಿ
೧೧. ತರಳಬಾಳು, ಸಿರಿಗೆರೆ,
೧೨. ಸಂಚಯ
೧೩. ಹೊಸತು
೧೪. ಕರುಣ ಕಾವ್ಯ ಪತ್ರಿಕೆ
೧೫. ಭೂಮಿಕಾ
೧೬ ವಿನೋದ
೧೭. ಕನಕಸ್ಫೂರ್ತಿ
೧೮. ಆದಿಚುಂಚನ ಗಿರಿ

ಕರ್ನಾಟಕಲೋಚನ ಚಂದಾ ವಿವರ

ವಾರ್ಷಿಕ ಚಂದಾ : ವ್ಯಕ್ತಿಗಳಿಗೆ – ರೂ. ೪೦.೦೦
: ಗ್ರಂಥಾಲಯ, ಸಂಘ ಸಂಸ್ಥೆಗಳಿಗೆ – ರೂ.೧೦೦.೦೦
ಅಜೀವ ಚಂದಾ : ರೂ.೪೦.೦೦
ಬಿಡಿ ಪ್ರತಿ ರೂ. ೨೫.೦೦

ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ ಮತ್ತು ಪ್ರಕಟಣೆಗಳಿಗೆ ಶೇ| ೫೦. ರಿಯಾಯತಿ
ಪ್ರತಿಷ್ಠಾನದ ಸದಸ್ಯತ್ವ : ವಾರ್ಷಿಕ ರೂ. ೫೦.೦೦ ಜೀವ ರೂ. ೫೦೦.೦೦

KARNATAKA LOCHANA - Half Yearly Journal
Published by B.M. Sri. Smaraka Prathisthana,
N.R. Colony, Bangalore-560 019
Ph. 26615877 e-mail : bmsri/trust @ yahoo.com
website : http://in.members.tripodasia.com/bmsri/
Printed by : Prathibha Printers, Bangalore -560 019.
Ph.26916918, 26692113

ಆಚಾರ್ಯ ಬಿ. ಎಂ.ಶ್ರೀ. ಶತಮಾನೋತ್ಸವ ಭವನ
ಬೆಂಗಳೂರು

ರಜತೋತ್ಸವ ಗ್ರಂಥಮಾಲೆ

1	ಸಾಹಿತ್ಯೋಪಾಸಕರು (19ನೇ ಶತಮಾನದ ಸಾಹಿತಿ ವಿದ್ವಾಂಸರ ಸಾಧನೆಗಳು)	200-00
2.	ಗ್ರಂಥಸಂಪಾದನ ಪರಿಭಾಷಾಕೋಶ	36-00
3.	ಶ್ರೀಕೃಷ್ಣ ಲೀಲಾಗಾನಂ	100-00
4.	ಕನ್ನಡ ತಿರುಕ್ಕುರಳ್ (ಅನುವಾದ)	100-00
5.	ಕಾರಂತ ಕಿರಣ	30-00
6.	ತಿಮ್ಮಪ್ಪದಾಸರ ಕೀರ್ತನೆಗಳು	75-00
7.	ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು (ಮುದ್ರಣದಲ್ಲಿ)	
8.	ಬಿ.ಎಂ.ಶ್ರೀ. (ಕಿರು ಪರಿಚಯ) (ಮುದ್ರಣದಲ್ಲಿ)	
9.	ಎಂ.ವಿ.ಸೀ. (ಕಿರು ಪರಿಚಯ) (ಮುದ್ರಣದಲ್ಲಿ)	
10.	ಬಿ.ಎಂ.ಶ್ರೀ. ಪ್ರತಿಷ್ಠಾನ - 25 (ಮುದ್ರಣದಲ್ಲಿ)	

ಬಿ. ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ